
# ಗಾನಾಭಿನಯಚಂದ್ರ

ಗಾನಕಲಾಭೂಷಣ ಸಿ. ಹೊನ್ನಪ್ಪ ಭಾಗವತರ
ಜೀವನ ಚರಿತ್ರೆ

ಗಾನಕಲಾಭೂಷಣ
100
**ಸಿ. ಹೊನ್ನಪ್ಪ ಭಾಗವತರ್**
ಜನ್ಮ ಶತಮಾನೋತ್ಸವ







ಸಂಪಾದಕರು
**ಡಾ|| ಸಾ.ಶಿ. ಮರುಳಯ್ಯ**

# ಗಾನಾಭಿನಯಚಂದ್ರ

(ಸಿ. ಹೊನ್ನಪ್ಪ ಭಾಗವತರ ಜೀವನ ಚರಿತ್ರೆ)

ಸಂಪಾದಕರು

**ಡಾ. ಸಾ.ಶಿ. ಮರುಳಯ್ಯ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

**Ganabhinayachandra** - (Honnappa Bhagavather Life Hisotry), Edited by: Dr. Sa.shi. Marulaiah, Published by : K.A. Dayananda K.A.S., Director, Department of Kannada & Culture, Kannada Bhavana, J.C. Road, Bengaluru-560 002.

© ಈ ಆವೃತ್ತಿಯ ಹಕ್ಕು : ಕರ್ನಾಟಕ ಸರಕಾರ

ಮುದ್ರಿತ ವರ್ಷ : 2015

ಪ್ರತಿಗಳು : 1000

ಪುಟಗಳು : xvi + 128

ಬೆಲೆ : ರೂ. 65/-

ಮುಖಪುಟ ವಿನ್ಯಾಸ : ವಿ.ಎಸ್. ಪ್ರಸನ್ನಕುಮಾರ್

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೨, ೨೬೬೧ ೮೭೫೨

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಾಡಿನ ಹೆಸರಾಂತ ಸಾಹಿತಿ/ಕಲಾವಿದರ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿದ್ದು, ಪ್ರಸಕ್ತ ಸಂಗೀತ, ನಾಟಕ ಹಾಗೂ ಚಲನಚಿತ್ರರಂಗ ಈ ಮೂರೂ ಕ್ಷೇತ್ರಗಳಲ್ಲಿ ಹೆಸರು ಮಾಡಿ ತಮಿಳು/ಕನ್ನಡ ಚಿತ್ರರಂಗಗಳಲ್ಲಿ ಜನಪ್ರಿಯತೆ ಗಳಿಸಿ ಸರ್ಕಾರದಿಂದ ರಾಷ್ಟ್ರಪ್ರಶಸ್ತಿ ಗಳಿಸಿದ ಧೀಮಂತ ಕಲಾವಿದರಾದ ಸಿ. ಹೊನ್ನಪ್ಪ ಭಾಗವತರ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿದೆ. ಇದರ ಅಂಗವಾಗಿ ಅವರ ಜೀವನ ಚರಿತ್ರೆ ಮತ್ತು ಸ್ಮರಣ ಸಂಚಿಕೆಯನ್ನು ಹೊರತರಲಾಗುತ್ತಿದೆ.

ಶಾಸ್ತ್ರೀಯ ಸಂಗೀತವನ್ನು ಕಲಿತು, ಸಂಗೀತ ಕಛೇರಿ ನಡೆಸಿ ಪ್ರಸಿದ್ಧರಾಗಿ, ಕಾಲ ಕ್ರಮೇಣ ಬೆಳ್ಳಿತೆರೆಯಲ್ಲೂ ಖ್ಯಾತಿ ಪಡೆದ, ಚಿತ್ರರಂಗದಲ್ಲಿ ನಟನೆ, ಸಂಗೀತ, ನಿರ್ದೇಶನ, ಗಾಯನ ಮತ್ತು ಚಿತ್ರ ನಿರ್ಮಾಣ ಈ ಎಲ್ಲ ವಿಭಾಗಗಳಲ್ಲಿಯೂ ನೈಪುಣ್ಯತೆ ಸಾಧಿಸಿದ ಧೀಮಂತ ಕಲಾವಿದ ಸಿ. ಹೊನ್ನಪ್ಪ ಭಾಗವತರು.

ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಬಗ್ಗೆ ಅಪಾರ ಗೌರವ ಹೊಂದಿದ್ದ, ಸಮಾಜದ ಉತ್ತಮ ಅಭಿರುಚಿಯ ಬೆಳವಣಿಗೆಗೆ ಪ್ರಾಮಾಣಿಕ ಕಲಾತಪಸ್ವಿಯಾಗಿ ಕಲಾಪ್ರೇಮಿಗಳ ಅಪಾರ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರರಾಗಿದ್ದ ಇವರ ಬೆಳವಣಿಗೆಯನ್ನು ಸಹಿಸದ ರಂಗಭೂಮಿಯ ಘಟಾನುಘಟಿಗಳು ನೀಡಿದ ಹಿಂಸೆ (ತೊಂದರೆ)ಗಳನ್ನು ಸಹಿಸಿ ಚಲನಚಿತ್ರರಂಗದಲ್ಲಿ ಸಾಕಷ್ಟು ನೊಂದು, ಬೆಂದು ಅಜರಾಮರರಾಗಿದ್ದಾರೆ. ಭಾಗವತರು ಏರ್ಪಡಿಸುತ್ತಿದ್ದ ನಾಟಕಗಳ ಕ್ಯಾಂಪುಗಳು ಆರ್ಥಿಕ ಮುಗ್ಗಟ್ಟಿಗೆ ಒಳಗಾದಂಥ ಸಂದರ್ಭಗಳಲ್ಲಿ ಸ್ಥಳೀಯರು ಸಹಕರಿಸಿ, ನಾಟಕದ ಏರ್ಪಾಡಿಗೆ ಸುಗಮ ದಾರಿಯನ್ನು ಮಾಡಿಕೊಡುತ್ತಿದ್ದುದ್ದು ಹೊನ್ನಪ್ಪ ಭಾಗವತರ ಕಲಾ ಪ್ರೌಢಿಮೆ ಮತ್ತು ಅಭಿನಯ ಹೇಗೆ ಜನರ ಮನಸೂರೆಗೊಂಡಿತ್ತು ಎಂಬುದು ತಿಳಿಯುತ್ತದೆ. ಕೇವಲ ಅಭಿನಯ, ನಿರ್ದೇಶನಕ್ಕಿಂತ ಅವರ ಮುಖ್ಯ ಆಸಕ್ತಿಯ ಕ್ಷೇತ್ರ ಸಂಗೀತವೇ ಆಗಿತ್ತು. ಇವರ ಸಂಗೀತವನ್ನು ಆಲಿಸಿದ ಅಂದಿನ ಸಂಗೀತ ಕ್ಷೇತ್ರದ ವಿದ್ವಾಂಸರುಗಳಿಂದಲೇ ಶಹಬ್ಬಾಸ್‌ಗಿರಿಯನ್ನು ಪಡೆದಿರುವುದು ಗಮನಾರ್ಹವಾದುದು.

ಹೊನ್ನಪ್ಪ ಭಾಗವತರು ಸಲ್ಲಿಸಿರುವ ಸೇವೆಗೆ 1960ರಲ್ಲಿ ಶ್ರೀಶೈಲ ಮಠದಿಂದ ನಟಾಚಾರ್ಯ ಬಿರುದು, ಮಲ್ಲಾಡಿ ಹಳ್ಳಿಯ ಸೇವಾಶ್ರಮದಿಂದ 'ಗಾನಾಭಿನಯ

ಚಂದ್ರ' ಎಂಬ ಬಿರುದು, ಶೃಂಗೇರಿ ಮಠದಿಂದ 'ಗಾಯಕ ಶಿಖಾಮಣಿ', ಕರ್ನಾಟಕ ಗಾನ ಕಲಾ ಪರಿಷತ್ತಿನಿಂದ 'ಗಾನ ಕಲಾಭೂಷಣ' ಎಂಬ ಬಿರುದನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಕರ್ನಾಟಕ ಫಿಲಂ ಅಡ್ವೈಸರಿ ಬೋರ್ಡಿನ ಸದಸ್ಯರಾಗಿ, ಆದಾಶವಾಣಿಯ ಸುಗಮ ಸಂಗೀತ ಕಮಿಟಿಯ ಸದಸ್ಯರಾಗಿ, ಸಂಗೀತ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಅಭಿನಯಿಸಿರುವ ಮಹಾಕವಿ ಕಾಳಿದಾಸ ಮತ್ತು ಜಗಜ್ಯೋತಿ ಬಸವೇಶ್ವರ ಚಿತ್ರಗಳೆರಡೂ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿರುವುದು ಸ್ಮರಣೀಯ. ಅಲ್ಲದೆ, ಭಾರತ ಸರ್ಕಾರದಿಂದ 1990ರಲ್ಲಿ ಸಂಗೀತ ವಿಶೇಷ ಅಧ್ಯಯನಕ್ಕೆ ಸೀನಿಯರ್ ಫೆಲೋಶಿಪ್ ಮತ್ತು 1991ರಲ್ಲಿ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ರಂಗ ಸಂಗೀತ ಕ್ಷೇತ್ರದ ರಾಷ್ಟ್ರಪ್ರಶಸ್ತಿಯನ್ನೂ ಪಡೆದಿದ್ದಾರೆ.

ರಂಗಭೂಮಿ, ಚಲನಚಿತ್ರ ಮತ್ತು ಸುಗಮಸಂಗೀತ ಕ್ಷೇತ್ರದ ಕೆಲವೇ ಕೆಲವು ಅಪ್ರತಿಮ ಪ್ರತಿಭೆಗಳಲ್ಲಿ ಒಬ್ಬರಾದ ಗಾನ ಕಲಾಭೂಷಣ, ಸಂಗೀತ ವಿದ್ವಾನ್ ನಿರ್ಮಾಪಕ, ಗಾಯಕಿ, ಸಂಗೀತ ನಿರ್ದೇಶಕ ಸಿ. ಹೊನ್ನಪ್ಪ ಭಾಗವತರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಜೀವನ ಚರಿತ್ರೆಯನ್ನು ಇಲಾಖೆಯಿಂದ ಹೊರತರಲಾಗುತ್ತಿದೆ. ಜೀವನ ಚರಿತ್ರೆಯನ್ನು ಸಂಪಾದಿಸಿಕೊಟ್ಟ ಡಾ. ಸಾ.ಶಿ. ಮರುಳಯ್ಯ ಅವರಿಗೂ ಈ ಪುಸ್ತಕವನ್ನು ಹೊರತರುವಲ್ಲಿ ತಮ್ಮ ಸಹಕಾರವನ್ನು ನೀಡಿದ ಶ್ರೀ ಕುಮಾರ್ ಭಾಗವತರ್, ಕಾರ್ಯದರ್ಶಿ ಸಿ. ಹೊನ್ನಪ್ಪ ಭಾಗವತರ್ ಟ್ರಸ್ಟ್ ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಶ್ರೀ ಅಶೋಕ ಎನ್. ಚಲವಾದಿ, ಜಂಟಿ ನಿರ್ದೇಶಕರು (ಸಾ), ಶ್ರೀಮತಿ ಎನ್. ಶಾಂತಮ್ಮ, ಕಾರ್ಯಕ್ರಮ ಅಧಿಕಾರಿ ಹಾಗೂ ಅಧಿಕಾರಿ ಹಾಗೂ ಪ್ರಕಟಣಾ ಶಾಖೆಯ ಶ್ರೀ ಹರೀಶ್ ಅವರಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಪುಸ್ತಕವನ್ನು ಕಲಾಭಿಮಾನಿಗಳು, ಸಾಹಿತ್ಯಾಭಿಮಾನಿಗಳು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಇದರ ಉಪಯೋಗವನ್ನು ಕನ್ನಡ ಜನತೆ ಪಡೆದುಕೊಂಡರೆ ನಮ್ಮ ಶ್ರಮ ಸಾರ್ಥಕ.

14–03–2015

**ಕೆ.ಎ. ದಯಾನಂದ,** ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪ್ರಸ್ತಾವನೆ

ಪತಿತ ದೇವತೆ ಅಥವಾ ಉತ್ತಿಷ್ಠಿತ ಪ್ರಾಣಿ ಎಂಬ ಕೀರ್ತಿಗೆ ಭಾಜನನಾದ ಮಾನವ ಪಶು, ಪಕ್ಷಿ ಮತ್ತಿತರ ಪ್ರಾಣಿಗಳಂತೆ ಅನ್ನ, ನಿದ್ರೆ, ಮೈಥುನಗಳೆಂಬ ಮೈ ಹಸಿವೆಗಳನ್ನು ಇಂಗಿಸಿಕೊಳ್ಳುವಷ್ಟರಿಂದಲೇ ಸಂತೃಪ್ತನಾಗಲಾರ. ಅವನಿಗೆ ಮಾನಸಿಕ ಹಸಿವು ಇದೆ; ಮೋಕ್ಷಾಪೇಕ್ಷೆಯ ಆತ್ಮದ ತೀವ್ರತಮ ತುಡಿತವೂ ಇದೆ. ಇವುಗಳಲ್ಲಿ ಮೊದಲ ಮತ್ತು ಅಂತ್ಯದ ಹಸಿವುಗಳು ನಮಗೆ ಪ್ರಸ್ತುತ ಅಲ್ಲ. ಅವೆರಡನ್ನೂ ಅತ್ತ ಬದಿಗಿರಿಸಿ, ಮಾನವ ತನ್ನ ಜೀವಿತದ ಸಾರಭೂತವಾದ ನವ ಯೌವನದ ಬದುಕನ್ನು ಹಸನುಗೊಳಿಸಿ ಚಿತ್ತ ಚೇತೋಹಾರಿಯನ್ನಾಗಿಸುವ ಕಲ್ಪನಾ ಲೋಕದ ಕಾಲ್ಪನಿಕ ನಿರ್ಮಿತಿಗಳಾದ ಚಿತ್ರ, ಶಿಲ್ಪ, ನೃತ್ಯ, ಸಂಗೀತ ಮತ್ತು ಸಾಹಿತ್ಯ ಎಂಬ ಲಲಿತ ಕಲೆಗಳ (Fine Arts) ಮೂಲಕ ಆವಿರ್ಭವಿಸುವ ಆನಂದವನ್ನು ಅಭಿವ್ಯಕ್ತಗೊಳಿಸಿ ತನ್ನ ಅಂತರಾತ್ಮವನ್ನು ತೃಪ್ತಗೊಳಿಸುವ ಚಿತ್ತವೃತ್ತಿ ವಿಶೇಷಗಳನ್ನು ದುಡಿಸಿಕೊಳ್ಳುತ್ತಾನೆ. ಮೇಲೆ ಕಾಣಿಸಿದ ಕಲಾ ಪಂಚಕಗಳಲ್ಲಿ ಸಾಹಿತ್ಯಕ್ಕೆ ಅದರಲ್ಲೂ ದೃಶ್ಯ ಕಾವ್ಯವೆಂದು ಗುರುತಿಸಿಕೊಂಡಿರುವ ನಾಟಕದ ರಂಗಸ್ಥಳದಲ್ಲಿ 'ಚಿತ್ರ'ಕ್ಕೆ ಬಣ್ಣ ಮತ್ತು ರೇಖೆ, ಶಿಲ್ಪಕ್ಕೆ ಶಿಲೆ, ಮಣ್ಣು, ಮರ ಅಥವಾ ಪ್ಲಾಸ್ಟರ್ ಆಫ್ ಪ್ಯಾರಿಸ್, ನೃತ್ಯಕ್ಕೆ ರಾಗ, ತಾಳ, ಲಯ ಮಿಶ್ರಿತ ನರ್ತನ ಹಾಗೂ ಅಭಿನಯ, ಸಂಗೀತಕ್ಕೆ ನಾದ, ಸಾಹಿತ್ಯಕ್ಕೆ ಭಾಷೆ ಇವು ಅಭಿವ್ಯಕ್ತಿ ಮಾಧ್ಯಮಗಳಾಗಿ ರಂಗಕಲೆಯನ್ನು ಜೀವಂತಗೊಳಿಸಿರುತ್ತವೆ. ಆದರೆ ಇವುಗಳಲ್ಲಿ ಸಾಹಿತ್ಯವೊಂದನ್ನುಳಿದು, ಮಿಕ್ಕ ನಾಲ್ಕೂ ಕಲೆಗಳು ಮಾತಿಲ್ಲದವು. ಸಾಹಿತ್ಯಕ್ಕೆ ಮಾತ್ರ ಶ್ರೇಷ್ಠ ಅಭಿವ್ಯಕ್ತಿ ಮಾಧ್ಯಮವಾದ ಭಾಷೆಯ ನೆರವಿರುವುದರಿಂದ ಮಿಂಚಿ ಮಾಯವಾಗುವ ನಮ್ಮ ಮನಸ್ಸಿನಲ್ಲಿ ಉದ್ಬೋಧಗೊಂಡ ಭಾವ, ಭಾವನೆಗಳನ್ನು 'ಅಕ್ಷರ' ರೂಪದ ಮಾತಿನ ಮಾಧ್ಯಮದಲ್ಲಿ ಸೆರೆಹಿಡಿದು ಅರ್ಥಪೂರ್ಣ ಅಭಿವ್ಯಕ್ತಿಯನ್ನು ದಯಪಾಲಿಸುತ್ತದೆ. ಇಂತಹ ಭಾಷಾ ಮಾಧ್ಯಮದ ಸಾಹಿತ್ಯ ಪ್ರಕಾರಗಳಲ್ಲಿ 'ದೃಶ್ಯ ಕಲೆ' ಎಂದೆನಿಸಿಕೊಂಡಿರುವ 'ನಾಟಕ'ಕ್ಕೆ ಅಗ್ರಸ್ಥಾನ ಮೀಸಲಿದೆ. ಏಕೆಂದರೆ, ನಾಟಕದಲ್ಲಿ ಸಂಭಾಷಣಾ ಸ್ವರೂಪಿ ಮಾತು, ಮಾತಿಗೆ ತಕ್ಕ ಅಭಿನಯ ಇದ್ದಂತೆ, ಮಿಕ್ಕ ವರ್ಣಮಯ ಪರದೆ, ದೃಶ್ಯ ಚಿತ್ರಕ್ಕೆ ತಕ್ಕ ಸೆಟ್ಟಿಂಗ್ಸ್ ಅಗತ್ಯವಿದ್ದೆಡೆಯಲ್ಲಿ ನೃತ್ಯ ಮತ್ತು ಸಪ್ತಸ್ವರ ಸುಪ್ತ ರಾಗಸ್ವರೂಪ ಸುಶೋಭಿತ ಕಂಠಶ್ರೀಯಿಂದ ಮಧುರ ಮಂಜುಳ ನಾದದ ಮುದ ತುಂಬಿದ ಮನೋಲ್ಲಾಸ,

ಚಿತ್ತ ಚೇತೋಹಾರಿ ಸಂಗೀತವನ್ನು ಪ್ರತ್ಯಕ್ಷ ಪಾತ್ರಧಾರಿಗಳೇ ಹಾವಭಾವ ವಿನ್ಯಾಸದ ಅಭಿನಯದೊಡನೆ ಅನುವಾದಿಸುವ ನಾಟಕ, ವಿಶ್ವಕವಿ ಕಾಳಿದಾಸ ವ್ಯಾಖ್ಯಾನಿಸಿದಂತೆ 'ಸರ್ವೇರ್ರುಚಿ ಜನಸ್ಯ ಬಹುದಾಪ್ಯೇಕಂ ಸಮಾರಾಧನಂ' ಅಂದರೆ ದೃಶ್ಯಕಾವ್ಯವೆನಿಸಿಕೊಂಡಿರುವ ನಾಟಕ ಆಬಾಲ ವೃದ್ಧರಿಗೂ, ಪಂಡಿತ ಪಾಮರರಿಗೂ ಅವರವರ ವಯೋಮರ್ಮ, ಮನೋಧರ್ಮಗಳಿಗನುಗುಣವಾಗಿ ತೃಪ್ತಿ ದಾನಗೈಯುತ್ತದೆ ಎಂಬ ಕಾವ್ಯ ಸತ್ಯ, ಸರ್ವಮಾನ್ಯ.

ನಾಟಕ ಕಲೆಯ ಸವಿ ಶ್ರೀಮಂತಿಕೆಗೆ ಮಾತಿಲ್ಲದ 'ಧಾತು' ಅಂದರೆ 'ಸ ರಿ ಗ ಮ ಪ ದ ನಿ' ಮೊದಲಾದ ಸ್ವರ ಸಂಯೋಜಕವೂ ಪ್ರೇಕ್ಷಕರ ಚಿತ್ತಚೇತೋಹಾರಿಯನ್ನಾಗಿಸುವುದುಂಟು. ಕೇವಲ ಶ್ರವಣ ಮಾಧ್ಯಮವಾದ ಸಂಗೀತದ ವ್ಯಾಕರಣ ತಿಳಿಯದೆ, ಬಹುತೇಕ ಜನರಿಗೆ ಅದರ ಆಂತರಿಕ ಸೊಗಡು, ಸೌರಭಗಳು ವೇದ್ಯವಾಗುವುದು ಶ್ರಮಸಾಧ್ಯ. ಆದರೆ ಅದು ನಾಟಕದಲ್ಲಿ ಸಮೀಕರಣಗೊಂಡು, ಸನ್ನಿವೇಶಕ್ಕೆ ತಕ್ಕಂತೆ ಪ್ರಕಾಶಕ್ಕೆ ಬಂದರೆ ಅದು ಶ್ರವಣಕ್ಕೆ ಹಾಲು ಜೇನು ಬೆರೆತಷ್ಟು ಸವಿ. ಒಟ್ಟಾರೆ ಲಲಿತಕಲಾ ಪಂಚಕಗಳು ಏಕತ್ರ ಸಮಾವೇಶಗೊಂಡು ಮಾನಸೋಲ್ಲಾಸ ಸಂಪ್ರೀತ ಭರಿತ ನಾಟಕ ಸಕಲರಿಗೂ ಅಚ್ಚುಮೆಚ್ಚು.

ಆತ್ಮೀಯರೆ, ಇದುವರೆಗೂ ನಾಟಕ ಕಲೆಯ ಗಾನ ಗಗನದಲ್ಲಿ ವಿಹರಿಸುತ್ತಿದ್ದ ತಮ್ಮ ಭಾವನಾ ವಿಮಾನವನ್ನು ವಾಸ್ತವಿಕ ನೆಲಗಟ್ಟಿನ ಮೇಲೆ ಅಂದರೆ ನಮ್ಮ ಈ ಸತ್ಕೃತಿಯ ಕಥಾನಾಯಕರಾದ ಗಾನಗಂಧರ್ವ, ಸ್ಮಿತವದನ ಗಂಭೀರ, ಸುಂದರ ಸ್ಫುರದ್ರೂಪಿ' ಸಚ್ಚಾರಿತ್ರ್ಯ ಸುಶೋಭಿತ 'ಅಭಿನವ ಸಂಸ್ಥಾಪಕ ನಮ್ಮ ನಿಮ್ಮೆಲ್ಲರ ಅಭಿಮಾನದ ಮಹಾಮಾನವ ಶ್ರೀ ಹೊನ್ನಪ್ಪ ಭಾಗವತರ ಬದುಕಿನ ಏಳು–ಬೀಳುಗಳ ಸಿಂಹಾವಲೋಕನಗೈಯ್ಯೋಣ ಬನ್ನಿ'.

ಬಾಲ್ಯದಿಂದಲೂ ಹೊನ್ನಪ್ಪನವರಿಗೆ ಸಂಗೀತ ಕಲೆಯಲ್ಲಿ ವಿಶೇಷ ಆಸಕ್ತಿ. ಅದು ಫಲಪ್ರದವಾಗಬೇಕಾದರೆ ಹಣ ಬೇಕಲ್ಲವೆ? ಅದನ್ನು ಗಳಿಸಲು ತಿಂಗಳಿಗೆ ಎರಡು ರೂಪಾಯಿ ಸಂಬಳದಂತೆ ಒಬ್ಬರ ಮಗ್ಗದ ಮನೆಯಲ್ಲಿ ನೆಯ್ಗೆಗೆ ನೆರವಾಗಿ ಕೆಲಸಕ್ಕೆ ಸೇರಿಕೊಂಡರು. ನೆಯ್ಗೆಯ ಕಾಯಕ ಹೊನ್ನಪ್ಪನವರಿಗೆ ತಮ್ಮ ಕುಲಕಸುಬಾಗಿ ಬಂದಂತೆ ಸಂಗೀತ ಕಲೆ ಅವರ ವಂಶದಲ್ಲಿ ಯಾರೊ ಒಬ್ಬರಲ್ಲಿತ್ತೆಂದು ತೋರುತ್ತದೆ. ಅದು ವೈಜ್ಞಾನಿಕವಾಗಿ ವಂಶವಾಹಿಯಾಗಿ (GENES) ರೂಪದಲ್ಲಿ ರಕ್ತದ ಕಣಕಣದಲ್ಲೂ ಹರಿದುಬಂದು, ತುಂಬು ಸಂತೋಷದಿಂದ ಹೊನ್ನಪ್ಪನವರನ್ನು ಆಶ್ರಯಿಸಿ, ಸ್ವಪ್ರಕಾಶಕ್ಕೆ ತುಡಿಯುತ್ತಿತ್ತು. ಅಪ್ರತಿಮ ಪ್ರತಿಭಾ ಸಂಪನ್ನರಾದ ಹೊನ್ನಪ್ಪನವರಿಗೆ ನೆಯ್ಗೆ ಕಾಯಕ ವೃತ್ತಿ,

ಅವರ ವಂಶವಾಹಿಯಲ್ಲಿ ಪ್ರವಹಿಸಿ, ಪ್ರಬುದ್ಧತೆಗೇರಿದ ಸಂಗೀತ ಕಲೆ ದೈವದತ್ತ ಪ್ರವೃತ್ತಿಯಾಗಿ, ಅವರ ನಾದಲೋಲ ಪ್ರತಿಭೆಗೆ ನಾಂದಿಯಾಗಿ ಜನ್ಮಜಾತ ಸ್ವೋಪಜ್ಞ ಸಂಜೀವಿನಿಯಾಯಿತು. ಭಾಗವತರು ಸ್ವಪ್ರಯತ್ನ ಸಾಧನೆಯಿಂದ ಹಾಗೂ ಹಿರಿಯ ಗಾನವಿಶಾರದರ ನೆರವಿನಿಂದ ಸಿದ್ಧಿಸಿದ ಸಂಗೀತ ಕಲೆಯಲ್ಲಿ ಪರಿಣತರಾಗಿ 'ಗಾನ ಗಂಧರ್ವ' ಎಂಬ ಕೀರ್ತಿಗೆ ಪಾತ್ರರಾದರು.

ಹೊನ್ನಪ್ಪನವರ ಸಂಗೀತ ಸುಧೆಯ ಸವಿ ಕರ್ನಾಟಕದ ಹಲವು ನಾಟಕ ಮಂಡಲಿಗಳ ನಾಲಗೆಗಳು ಚಪ್ಪರಿಸುವಂತೆ ಮಾಡಿತು! ಅವುಗಳ ಅಯಸ್ಕಾಂತದ ಆಕರ್ಷಣೆಗೆ ಸಿಕ್ಕ ಹೊನ್ನಪ್ಪ, ತಮ್ಮ ಅಂತರಾತ್ಮ ಒಪ್ಪಿದ ಕಡೆಗೆ ಹೋಗಿ, ಕೊಟ್ಟ ಪಾತ್ರವನ್ನು ಯಶಸ್ವಿಯಾಗಿ ಅಭಿನಯ ಹಾಗೂ ತಮ್ಮ ಶ್ರೀಕಂಠದಿಂದ ಮಧುರ ಮಂಜುಳ ಗಾನಲಹರಿಯಿಂದ ಪ್ರೇಕ್ಷಕ ವೃಂದವನ್ನು ಮಂತ್ರಮುಗ್ಧವನ್ನಾಗಿಸಿ, ನವಯೌವನದ ವಸಂತದ ಹೊಸ್ತಲಿನಲ್ಲೇ ಹೊನ್ನಪ್ಪ 'ನಟಸಾರ್ವಭೌಮ' ರೆನಿಸಿಕೊಂಡರು. ಹೊನ್ನಪ್ಪನವರು ಹದಿನೇಳನೇ ವಯಸ್ಸಿನ ತೇಜಸ್ವೀ ತರುಣರಿದ್ದಾಗ, ಅವರ ಅಣ್ಣನವರ ಮದುವೆ ಒದಗಿಬಂತು. ಮದುವೆಗೆ ಮದ್ರಾಸಿನ ಸುಪ್ರಸಿದ್ಧ ಗಾಯಕರಾದ ಸಂಬಂಧಮೂರ್ತಿ ಭಾಗವತರು ಆಹ್ವಾನಿತರಾಗಿ ಆಗಮಿಸಿದ್ದರು. ಅವರ ಸಮ್ಮುಖದಲ್ಲಿ ಹೊನ್ನಪ್ಪ ಹಾಡಿ, ಪಾರ್ಥಸಾರಥಿ ಭಾಗವತರ್ ಮತ್ತು ಸಂಬಂಧಮೂರ್ತಿ ಭಾಗವತರ ತುಂಬು ಮೆಚ್ಚುಗೆಗೆ ಪಾತ್ರರಾಗಿ, 1937ರಲ್ಲಿ ಸೇಲಂನಲ್ಲಿ ನಡೆಯಲಿದ್ದ ತ್ಯಾಗರಾಜಸ್ವಾಮಿ ಉತ್ಸವದಲ್ಲಿ ಹೊನ್ನಪ್ಪನವರಿಗೆ ಪ್ರಪ್ರಥಮ ಸಂಗೀತ ಕಚೇರಿಗೆ ಆಹ್ವಾನ ದೊರೆಯಿತು. ಅಂದಿನ ಅವರ ಹಾಡುಗಾರಿಕೆ ಶ್ರೋತೃವೃಂದವನ್ನು ಹುಚ್ಚೆಬ್ಬಿಸಿತು. ಅವರ ಮಧುರ ಮಂಜುಳ ಗಾಯನ ಕೇಳಿ ಆನಂದ ತುಂದಿಲರಾದ 'ಸೇಲಂ'ನ 'ಶಂಕರ್‌ಫಿಲಂ' ನವರು ಹೊನ್ನಪ್ಪನವರ ಬಳಿ ಬಂದು, ತಮಿಳು ನಾಡಿನ ರಜತ ಪರದೆಯ ಮೇಲೆ ಖ್ಯಾತ ನಟ ಶ್ರೇಷ್ಠರೆಂದು ಪ್ರಸಿದ್ಧಿ ಪಡೆದಿದ್ದ ತಮಿಳಿನ ಚಿತ್ರನಟ ತ್ಯಾಗರಾಜ ಭಾಗವತರ್ ಜೊತೆ ಸಹ ನಟರಾಗಿ ಅಭಿನಯಿಸಲು ಹೊನ್ನಪ್ಪನವರನ್ನು ಒಪ್ಪಿಸಿ ಒಪ್ಪಂದ ಮಾಡಿಕೊಂಡು ಹೋದರು. ಫಿಲಂ ಷೂಟಿಂಗ್ ಕಾರ್ಯ ಚೆನ್ನಾಗಿ ಮುಗಿದು, ಸೆನ್ಸಾರ್ ಆಗಿ, ಮದ್ರಾಸಿನ (ಈಗಿನ ಚೆನ್ನೈ) ಥಿಯೇಟರುಗಳ ರಜತ ಫರದೆಯ ಮೇಲೆ ಪ್ರದರ್ಶನಗೊಂಡ ಮಾರನೆಯ ದಿನ ಪ್ರೇಕ್ಷಕರೆಲ್ಲ ಹೊನ್ನಪ್ಪನ ಅಭಿನಯಾದಿಗಳನ್ನು ಮೆಚ್ಚಿ ಮುಕ್ತ ಕಂಠದಿಂದ ಹೊಗಳುವವರೇ ಆದರು. ಇದು ಸೊಕ್ಕಿನ ಶಾರ್ದೂಲ ತ್ಯಾಗರಾಜನ ಹೊಟ್ಟೆ ಒಳಗೆ ಕತ್ತಿ ಇಟ್ಟು ತಿರುಚಿದಂತಾಯಿತು. ಇದು 'ಕವಿಗೆ ಕವಿ ಮುನಿವಂ' ಎಂದು ಒಬ್ಬ ಹಳಗನ್ನಡ ಕವಿ ಹೇಳಿದಂತೆ, ಕಲಾವಿದರಲ್ಲೂ ಸ್ವಾಭಾವಿಕವಾಗಿ ಇರುವ ರೋಗ; ಇರಲಿ 'ಅಂಬಿಕಾಪತಿ' ಚಿತ್ರದ ಷೂಟಿಂಗ್ ಮುಗಿದ ಮೇಲೆ ಹೊನ್ನಪ್ಪ ಭಾಗವತರು

ಬೆಂಗಳೂರಿಗೆ ಬಂದರು. ಬೆಂಗಳೂರಲ್ಲಿ ಹೊನ್ನಪ್ಪ ಭಾಗವತರ ಸಂಗೀತ ಕಚೇರಿಗೆ ಆಗಮಿಸಿದ್ದ ಗುಬ್ಬಿ ವೀರಣ್ಣನವರು ಭಾಗವತರ ಶರೀರದ ಆಯಕಟ್ಟು ಕಂಠಶ್ರೀಯ ಹಾಡುಗಾರಿಕೆ ಕೇಳಿ, ಆಕರ್ಷಿತರಾಗಿ ತಮ್ಮ ನಾಟಕ ಕಂಪನಿಗೆ ನಟರಾಗಿ ಬಂದು ಸೇರಲು ಆಹ್ವಾನಿಸಿದರು. ಭಾಗವತರಿಗೆ ಒಂದು ಕಡೆ ಸಿನಿಮಾಸೆಳೆತ ಮತ್ತೊಂದು ಕಡೆ ರಂಗಭೂಮಿ ಎಳೆತ. ಮನಸ್ಸಿನ ಈ ಹಗ್ಗಜಗ್ಗಾಟದಲ್ಲಿ ಸಿಕ್ಕ ಹೊನ್ನಪ್ಪ ಭಾಗವತರು, ಎರಡು ದಿವಸಗಳ ಮೇಲೆ ಹೇಳ್ತೀನೆ ಎಂದು ವೀರಣ್ಣನವರ ಮನಸ್ಸಿನಲ್ಲಿ ಆಸೆ ಹುಟ್ಟಿಸಿ, ತಮ್ಮ ಸಂಗೀತದ ಗುರುಗಳಾದ ಅರುಣಾಚಲಪ್ಪನವರ ಹತ್ತಿರ ಹೋಗಿ ವಿಷಯ ಪ್ರಸ್ತಾಪಿಸಿದರು. ಅರುಣಾಚಲಪ್ಪನವರು ತಮ್ಮ ಶಿಷ್ಯೋತ್ತಮನ ಭವ್ಯ ಭವಿಷ್ಯವನ್ನು ನೆನೆದು ತಮ್ಮ ಒಪ್ಪಿಗೆ ಕೊಟ್ಟರು. ಭಾಗವತರು ಅವರ ಸಮ್ಮತಿಯ ಮೇರೆಗೆ, ಗುಬ್ಬಿಕಂಪನಿ ಸೇರಿ, 'ನಟಸಾರ್ವಭೌಮ'ರಾದರು. ಆದರೆ ಹೊನ್ನಪ್ಪನವರಿಗೂ, ಗುಬ್ಬಿಕಂಪನಿಗೂ ಸಲುವಳಿ ಕೂಡಿ ಬರಲಿಲ್ಲ. ಕುಪನಿ ಬಿಟ್ಟು ಹೊರಬಂದ ಭಾಗವತರು, ಕೆಲವು ಕನ್ನಡ, ತಮಿಳು ಮೊದಲಾದ ಚಿತ್ರಗಳಲ್ಲಿ ಲಾಳಿಹಾಕಿ, ಅಂತಿಮವಾಗಿ ತಾವೇ ಒಂದು ಚಿತ್ರ ತೆಗೆಯಲು ಹೋಗಿ ಕೈಸುಟ್ಟುಕೊಂಡು, ತಮಿಳು ನಾಡಿನ ಖ್ಯಾತ ಚಲನಚಿತ್ರ ಸ್ಟುಡಿಯೋ ಮಾಲೀಕ, ದಯಾರ್ದಮೂರ್ತಿ ಶ್ರೀನಾಗಿರೆಡ್ಡಿಯವರ ನೆರವಿನಿಂದ ಬಂದ ಗಂಡಾಂತರ ದಾಟಿ, ಗುಬ್ಬಿವೀರಣ್ಣನವರಿಂದ ದೂರ ಸರಿದು, ಹೊನ್ನಪ್ಪನವರು ತಾವೇ ತಮ್ಮದೇ ಆದ 'ಶ್ರೀ ಉಮಾಮಹೇಶ್ವರಿ ಸಂಗೀತ ನಾಟಕ ಮಂಡಲಿ'ಯನ್ನು ಸಂಸ್ಥಾಪಿಸಿ, 'ಶ್ರೀನಿವಾಸ ಕಲ್ಯಾಣ' ನಾಟಕಕ್ಕೆ ಬೇಕಾದ ಸೆಟ್ಟಿಂಗ್ಸ್, ವೇಷ ಭೂಷಣಗಳನ್ನು ತಯಾರುಮಾಡಿಸಿ, ಕರ್ನಾಟಕದ ಅನೇಕ ಕಡೆ ಯಶಸ್ವೀ ಪ್ರಯೋಗ ನಡೆಸಿ, ಮುಂದೆ ಕಂಪನಿ ನಾನಾ ತೊಂದರೆಗಳಿಗೀಡಾಗಿ, ಕಡೆಗೆ ಶಿವಮೊಗ್ಗಕ್ಕೆ ಕ್ಯಾಂಪ್‌ಹಾಕಿತು. ಅಲ್ಲಿ ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಕಂಪನಿಯ ಯಜಮಾನರು ಸೋತುಸೊರಗುವಂತಾಯಿತು.

ಹೊನ್ನಪ್ಪ ಭಾಗವತರ 'ಶ್ರೀ ಉಮಾಮಹೇಶ್ವರಿ ಸಂಗೀತ ನಾಟಕ ಮಂಡಲಿ' ಶಿವಮೊಗ್ಗಗೆ ಬಂದಾಗ ನಾನು ಸಹ್ಯಾದ್ರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿದ್ದೆ. ಭಾಗವತರನ್ನು ಕಂಡು ನನ್ನನ್ನು ಪರಿಚಯಿಸಿಕೊಳ್ಳಲು ಕಂಪನಿ ಮನೆಗೆ ಹೋದೆ ಅವರನ್ನು ಕಂಡು, ನನ್ನ ಹಳೆಯ ನೆನಪುಗಳ ಗಂಟುಬಿಚ್ಚಿ ಒದರಿದೆ! ಅವರು ಅಭಿನಯಿಸಿದ 'ಹೇಮರೆಡ್ಡಿ ಮಲ್ಲಮ್ಮ' ಸಿನೇಮಾವನ್ನು ನಾನು ತಿಪಟೂರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಆ ಚಿತ್ರ ತೋರಿಸಲು ನನ್ನ ತಾಯಿಯನ್ನ ಶಿವರಾತ್ರಿಯ ದಿನ ಜಾಗರಣೆ ಮಾಡಿಸಲು ತಿಪಟೂರು ವಿನೋದ ಟಾಕೀಸಿಗೆ ಕರೆದುಕೊಂಡು ಹೋದೆ. ಆ ಚಿತ್ರದಲ್ಲಿ ಹೊನ್ನಪ್ಪ ಭಾಗವತರು ಪರಶಿವನ ಪಾತ್ರಧಾರಿಗಳಾಗಿದ್ದರೆಂದು ತೋರುತ್ತದೆ. ಗುಬ್ಬಿವೀರಣ್ಣನವರು ಬರಮಣ್ಣ ಗಂಡ, ಜಯಮ್ಮ ನವರು ಹೆಂಡತಿ

ಪಾತ್ರಧಾರಿ ಮಲ್ಲಮ್ಮ. ಈ ಮಲ್ಲಮ್ಮನಿಗೆ ಒಬ್ಬ ಮೈದುನ ಇದ್ದ. ಅವನು ಮಹಾಉಡಾಳ! ವೇಶ್ಯೆಯ ಮನೆಗೆ ಹೋಗಿ ತುಂಬಾ ಹಾಳಾಗಿದ್ದ. ಆದರೂ ಮೈದುನನನ್ನು ಮಗನಂತೆ ನೋಡಿಕೊಳ್ಳುತ್ತಿದ್ದ ಮಲ್ಲಮ್ಮ ಅವನ ಬೇಡಿಕೆ ಈಡೇರಿಸಲು, ತನ್ನ ಮೂಗಿನ ಮೂಗುತಿಯನ್ನೇ ತೆಗೆದುಕೊಡುತ್ತಾಳೆ. ಅದನ್ನು ಅರಿತ ಶಿವನ ಪಾತ್ರಧಾರಿಗಳಾದ ಭಾಗವತರು 'ಬಣ್ಣ ಬಣ್ಣದ ಬಟ್ಟೆಗಳಿಂದ ಮುಚ್ಚಿದ ಮಾಂಸದ ಮುದ್ದೆಯ ಮೇಲೆ ಮೋಹ!' ಎಂದು ನುಡಿದು, 'ಮೋಹಭರಿತವೀ ಮಾನವ ಜನ್ಮ ದೇಹಸುಖವನೆ ಸದಾ ಬಯಸುವುದು..' ಎಂದು ತಮ್ಮ ಮಧುರ ಕಂಠದಿಂದ ಹಾಡುತ್ತಾರೆ. ಆ ಹಾಡು ತೆರೆಯ ಮೇಲೆ ಬಂದು ಮುಗಿದ ಕೂಡಲೆ ಓರ್ವ ರಸಿಕ ಪ್ರೇಕ್ಷಕ 'Once more' ಅಂದ ಜೋರಾಗಿ, ಥಿಯೇಟರಿನಲ್ಲಿದ್ದ ಪ್ರೇಕ್ಷಕ ವೃಂದ ನಕ್ಕಿತು. ಆ ಗುಂಪಿನಲ್ಲಿದ್ದ ಒಬ್ಬ 'ನಾಳೆ ಬಂದು ಇನ್ನೊಂದು ಟಿಕೆಟ್ ಕೊಂಡು, ಹಾಡುಕೇಳು!' ಅಂದ.

ಇಂತಹ ವಿನೋದ ವಿಪರ್ಯಾಸ ನನ್ನ ಮನಸ್ಸಿನಲ್ಲಿದ್ದುದನ್ನು ಭಾಗವತರ ಮುಂದೆ ವಿವರಿಸಿದೆ. ಅವರು ಆಶ್ಚರ್ಯ ವ್ಯಕ್ತಪಡಿಸಿದರು. ಬೇಸಿಗೆ ರಜೆಯಲ್ಲಿ ನಮ್ಮ ದೊಡ್ಡಪ್ಪನವರ ಮನೆಗೆ ಬೆಂಗಳೂರಿಗೆ ಹೋಗಿದ್ದಾಗ ಭಾಗವತರು ಅಭಿನಯಿಸಿದ 'ಗುಣಸಾಗರಿ' ಇಲ್ಲವೇ 'ಮಹಾಕವಿ ಕಾಳಿದಾಸ' ನೋಡಿದ ನೆನಪನ್ನು ಅವರ ಮುಂದಿಟ್ಟು ನಮ್ಮ ಮನೆಗೆ ಬಂದೆವು. ಅಂದಿನಿಂದ ನನ್ನ ಮತ್ತು ಅವರ ಸ್ನೇಹ ಬಾಂಧವ್ಯ ಸುಭದ್ರವಾಯಿತು. ಅವರೊಬ್ಬರೇ ಆಗಾಗ ನಮ್ಮ ಮನೆಗೆ ಬಂದು ಕಷ್ಟಸುಖದ ಅನೇಕ ವಿಷಯಗಳನ್ನು ಹೇಳುತ್ತಿದ್ದರು. ಅವೆಲ್ಲವೂ ಮರೆತುಹೋಗಿವೆ. ದಿನೇ ದಿನೇ ನಾಟಕ ಕಷ್ಟ ನಷ್ಟಗಳಿಗೀಡಾಗಿ, ಅದರ ರಥ ಮುಂದೆ ಸಾಗುವುದು ಸಾಧ್ಯವಿಲ್ಲ ಎಂಬ ಘಟ್ಟಕ್ಕೆ ಬಂದು ಮುಟ್ಟಿತು. ಒಂದು ದಿನ ಅವರಿಗೆ ಏನನ್ನಿಸಿತೊ ಗೊತ್ತಾಗಲಿಲ್ಲ, ನಮ್ಮ ಮನೆಗೆ ಬಂದು ವ್ಯಾನ್ ಆದಿಯಾಗಿ, ಕಂಪನಿಯ ಸೆಟ್ಟಿಂಗ್ಸ್, ಪರದೆ, ವೇಷ ಭೂಷಣಗಳೆಲ್ಲವನ್ನೂ ಮಾರುವುದಾಗಿ ತಿಳಿಸಿದರು. ಅದನ್ನು ನಾನು ನಮ್ಮ ಕಾಲೇಜ್ ಪ್ರಿನ್ಸಿಪಾಲ್ ಪ್ರೊ॥ ಆನಂದರಾವ್, ಶಿವಮೊಗ್ಗ ಮ್ಯುನಿಸಿಪಲ್ ಕಾರ್ಪೊರೇಷನ್ ಅಧ್ಯಕ್ಷರಾಗಿದ್ದ ಗಿರಿಮಾಜಿಯವರು ಮತ್ತು ನನಗೆ ತುಂಬ ಬೇಕಾದ ಜವಳಿ ಅಂಗಡಿ ಮಾಲೀಕರೊಬ್ಬರನ್ನು ಆಹ್ವಾನಿಸಿ, ಭಾಗವತರನ್ನು ನಾನೇ ಕರೆದುಕೊಂಡು ಹೋಗಿ ಮಾರಾಟದ ಪ್ರಸ್ತಾಪ ತೆಗೆದು ಅದಕ್ಕೆ ನಮ್ಮ ಒಪ್ಪಿಗೆ ತಿಳಿಸಿದೆವು. ಆ ಕ್ಷಣವೆ ಭಾಗವತರು, 'ನೋಡಿ, ನಮ್ಮ ವ್ಯಾನ್ ಸಮೇತ ನಾಟಕ ಕಂಪನಿಯ ಸಕಲವನ್ನೂ ಶ್ರೀಮತಿ ಬಳ್ಳಾರಿ ಲಲಿತಮ್ಮನವರು ತಮಗೇ ಬೇಕೆಂದು ಕೇಳಿದ್ದುದಾಗಿ ತಿಳಿಸಿದರು. ಲಲಿತಾರವರ ಕಂಪನಿ ಅಜ್ಜಂಪುರ ದಲ್ಲಿದ್ದುದರಿಂದ ಮಾರನೆಯ ದಿನ ರಾತ್ರಿ ಕಾರಿನಲ್ಲಿ ನಾವು ನಾಲ್ಕು ಜನ ಅಜ್ಜಂಪುರಕ್ಕೆ ಹೋಗಿ, ನಾಟಕ ಮುಗಿದ ಮೇಲೆ, ಲಲಿತಾರವರ ಬಿಡಾರದಲ್ಲಿ

ಕುಳಿತು, ವಿಷಯ ತಿಳಿಸಿದೆವು. ಕೂಡಲೆ ಅವರು ಒಪ್ಪಿದರು. ಆದರೆ ಭಾಗವತರು ಕೇಳಿದ ಬೆಲೆ ಕೊಡಲಾಗುವುದಿಲ್ಲ. ಎಂಬತ್ತು ಸಾವಿರ ಮಾತ್ರ ಕೊಡಬಲ್ಲೆ' ಅಂದರು. ವಿಧಿಯಿಲ್ಲದೆ, ತುಸು ಹೊತ್ತು ಸುಮ್ಮನೆ ಕುಳಿತಿದ್ದ ಭಾಗವತರು, 'ಆಗಲಿ' ಅಂದರು. ಒಪ್ಪಂದದ ಪತ್ರ ಬರೆಯುವ ವೇಳೆಯಲ್ಲಿ ಲಲಿತಾರವರು ಒಂದು ಒಗ್ಗರಣೆ ಹಾಕಿದರು; ನಮ್ಮ ಕಂಪನಿ ಎಲ್ಲೇ ಇರಲಿ ನಾವು ಶ್ರೀನಿವಾಸ ಕಲ್ಯಾಣ ನಾಟಕ ಆಡುವ ದಿವಸಗಳಲ್ಲಿ ಮಾನ್ಯ ಹೊನ್ನಪ್ಪ ಭಾಗವತರು ಬಂದು ಶ್ರೀನಿವಾಸನ ಪಾತ್ರ ಮಾಡಬೇಕು. ಹಾಗಾದರೆ ಮಾತ್ರ ನಾವು ಕೊಳ್ಳುವುದಾಗಿ ಹೇಳಿದರು. ಕೇಳಿದ ಕೂಡಲೆ ಭಾಗವತರು ನೊಂದು ಹೇಳಿದರು, 'ಅಮ್ಮ, ಸಂಗೀತ ಕಚೇರಿ, ರಜತರಂಗಗಳಲ್ಲಿ ಖ್ಯಾತಿವೆತ್ತ ನಾನು, ಒಂದು ಬೃಹತ್ ಪ್ರಮಾಣದ ನಾಟಕ ಕಂಪನಿಯ ಮಾಲೀಕನಾಗಿ ಈಗ ಎಲ್ಲವನ್ನೂ ಕೊಟ್ಟು, ಕೈತೊಳೆದುಕೊಂಡು, ಬೇರೊಬ್ಬರ ಕಂಪನಿಯಲ್ಲಿ ಎರಡು ಕಾಸಿಗೆ ಸಾಮಾನ್ಯ ನಟನಾಗಿ ಬಣ್ಣಹಚ್ಚಲು ನನ್ನ ಸ್ವಾಭಿಮಾನೀ ಮನ ಒಪ್ಪುವುದಿಲ್ಲ! ಎಂದು ಎದ್ದೇಬಿಟ್ಟರು.

ಅಲ್ಲಿಗೆ ನಮ್ಮ ರಾಯಭಾರ ಕುಸಿದು ಬಿದ್ದು, ಬಂದ ದಾರಿಗೆ ಸುಂಕ ಇಲ್ಲ ಎಂದು ಅಂದುಕೊಂಡು ಶಿವಮೊಗ್ಗಗೆ ವಾಪಸಾದೆವು. ಬಂದ ಒಂದೆರಡು ದಿವಸಗಳಲ್ಲಿ ಭಾಗವತರ ಸಂಗೀತ ಕಚೇರಿ ಏರ್ಪಡಿಸಿ, ಹಣ ಸಂಗ್ರಹಿಸಿ, ನಟ ನಟಿಯರೆಲ್ಲರ ಬಾಕಿ ಚುಕ್ತಾಮಾಡಿ, ಭಾಗವತರ ಕಂಪನಿ ವಸ್ತುಗಳೆಲ್ಲವನ್ನೂ ಶಿವಮೊಗ್ಗೆಯ ತುಂಗಾನದಿಯ ದಡದಲ್ಲಿದ್ದ ಕೆಳದಿಯನ್ನಾಳಿದ ಶಿಸ್ತುಗಾರ ಶಿವಪ್ಪ ನಾಯಕನ ಅರಮನೆಯಲ್ಲಿರಿಸಿ, ಮಾರನೆಯ ದಿನ ಭಾಗವತರಿಗೆ ಬಂದು ಔತಣ ಕೂಟವನ್ನೇರ್ಪಡಿಸಿ, ಪ್ರೀತಿಯ ಉಡುಗೊರೆ ಇತ್ತು, ಅವರ ವ್ಯಾನಿನಲ್ಲಿ ಅವರನ್ನು ಬೆಂಗಳೂರಿಗೆ ಬೀಳ್ಕೊಟ್ಟೆವು.

## ಸಮಾರೋಪ

ಆತ್ಮೀಯರೆ,

ಓರ್ವ ಶ್ರೀಸಾಮಾನ್ಯ ಒಂದು ಹಿಡಿಗಲ್ಲನ್ನು ಆಕಾಶದೆಡೆಗೆ ಬೀಸಿ ಎಸೆದರೆ ಮೇಲೇರುವ ಅದರ ವೇಗ ತುಂಬಾ ವಿಳಂಬ. ಆದರೆ ಅದು ನಮ್ಮ ಊರ್ಧ್ವಗಾಮಿತ್ವದ ಗತಿ ಕೆಳಗೆ ಬೀಳುವಾಗ, ಮೇಲೇರುವಾಗಿನ ವೇಗಕ್ಕಿಂತ 10ರಷ್ಟು 100ರಷ್ಟು ವೇಗದಲ್ಲಿ ಬೀಳುತ್ತದೆ. (ಇದಕ್ಕೆ ಭೂಮಿಯ ಗುರುತ್ವಾಕರ್ಷಣೆ ಇರಬಹುದು.)

ಅದೇ ರೀತಿ ವ್ಯಕ್ತಿ ತನ್ನ ಜೀವಿತ ಕಾಲದಲ್ಲಿ ಉನ್ನತಿಗೇರುವಾಗಿನ ವೇಗ ಬೀಳುವಾಗ ನೂರುಪಟ್ಟು ಹೆಚ್ಚಾಗುತ್ತದೆ. ಮೇಲೇರಿದವನು ಕೇಳಗಿಳಿಯಲೇಬೇಕು. ಇದು ನಿಯತಿ! ಆದರೆ ಏರುವಾಗಿನ ಹಿಗ್ಗು ಕೆಳಗಿಳಿಯುವಾಗ ಇಲ್ಲದಿದ್ದರೂ ವ್ಯಕ್ತಿ ಧೃತಿಗೆಡಬಾರದು. ಈ ಸಿದ್ಧಾಂತದ ಪ್ರತ್ಯಕ್ಷ ಶ್ರೀ ಪುರುಷರಾಗಿದ್ದವರು ಮಾನ್ಯ ಶ್ರೀ ಹೊನ್ನಪ್ಪ ಭಾಗವತರು. ಶ್ರೀಯುತರು  ಕಷ್ಟ ಬಂದಾಗ ತಮ್ಮ ಆತ್ಮ ಸಾಂತ್ವನಗೊಳಿಸಿ, ಎದೆಗುಂದದೆ ತಮ್ಮ ನಿಜದ ನಿಲವನ್ನು ಉಳಿಸಿಕೊಂಡು ಆದರ್ಶ 'ಸ್ಥಿತಪ್ರಜ್ಞ'ರೆನಿಸಿಕೊಂಡು, 'ಅಭಿಮಾನಧನ'ರೂ ಆಗಿದ್ದವರು. ಅಂತೆಯೇ ತಮ್ಮ ಕೀರ್ತಿ ಪತಾಕೆಯನ್ನು ಕನ್ನಡ ನಾಡಿನ ಕಲಾಲೋಕದ ಉತ್ತುಂಗ ಶೃಂಗದಲ್ಲಿ ಅಜರಾಮರವಾಗಿ ಅನಾವರಣಗೊಳಿಸಿದ್ದಾರೆ.

ಕಡೆಯದಾಗಿ,


ಸಾಹಿತ್ಯಾದಿ ಲಲಿತಕಲಾಯಜ್ಞದ ಅಧ್ವರ್ಯುವಾದ ಶ್ರೀ ಹೊನ್ನಪ್ಪ ಭಾಗವತರ ಜ್ಯೇಷ್ಠಪುತ್ರರಾದ ಕುಮಾರ ಭಾಗವತರ್ ಹಾಗೂ ಅವರ ಬಂಧು ಬಳಗದವರು ಎಲ್ಲಕ್ಕೂ ಮಿಗಿಲಾಗಿ ಭಾಗವತರಂತಹ ಮಹಾನ್ ಚೇತನದ ಪುಣ್ಯಸ್ಮರಣೆಯನ್ನು ಅಜರಾಮರಗೊಳಿಸಲು ಮುಂದೆ ಬಂದ ನಮ್ಮ ಕರ್ನಾಟಕ ಸರ್ಕಾರಕ್ಕೂ, 'ಗಾನಾಭಿನಯ ಚಂದ್ರ' ಹೊನ್ನಪ್ಪ ಭಾಗವತರಂತಹ ಶ್ರೇಷ್ಠ ಕಲಾವಿದರ ಸೇವೆಗೈಯಲು ನನಗೆ ಅವಕಾಶವಿತ್ತ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ದಯಾನಂದರವರಿಗೂ ನನ್ನ ಅನಂತ ನಮನಗಳನ್ನರ್ಪಿಸಿ ವಿರಮಿಸುತ್ತೇನೆ.

'ರಾಗಿಣಿ' — ಡಾ|| ಸಾ.ಶಿ. ಮರುಳಯ್ಯ

15–2–2015 ಭಾನುವಾರ

# ಪರಿವಿಡಿ


| | |
|---|---|
| ಪ್ರಕಾಶಕರ ಮಾತು | v |
| ಪ್ರಸ್ತಾವನೆ | vii |
| ಸಿ. ಹೊನ್ನಪ್ಪ ಭಾಗವತರ್ ಅವರ ಜೀವನ ಚರಿತ್ರೆ | 1 |
| ಹೊನ್ನಪ್ಪ ಭಾಗವತರ್ ಎಂಬ ಕಲಾ ಗಾರುಡಿಗ | 107 |
| ಹೊನ್ನಪ್ಪ ಭಾಗವತರ್ ಕಲಾಜೀವನಕ್ಕೆ ಓನಾಮ ಹಾಡಿದ ಬೆಂಗಳೂರು | 110 |
| ಹೊನ್ನಪ್ಪ ಭಾಗವತರ ವಿಶೇಷ ಸಂದರ್ಶನ | 115 |



ಶ್ರೀಮತಿ ಹೆಚ್. ಶಾರದಮ್ಮ ಮತ್ತು ಶ್ರೀ ಸಿ. ಹೊನ್ನಪ್ಪ ಭಾಗವತರ್

# ಗಾನಕಲಾ ಭೂಷಣ ಶ್ರೀ ಹೊನ್ನಪ್ಪ ಭಾಗವತರ್‌ರವರ ವ್ಯಕ್ತಿ ಚಿತ್ರ

## ರಂಗಭೂಮಿ ನಟ, ಸಂಗೀತ ವಿದ್ವಾನ್, ಚಲನಚಿತ್ರ ನಟ, ನಿರ್ಮಾಪಕ, ಗಾಯಕ, ಸಂಗೀತ ನಿರ್ದೇಶಕ

| | | |
|---|---|---|
| ಹೆಸರು | : | ಶ್ರೀ ಸಿ. ಹೊನ್ನಪ್ಪ ಭಾಗವತರ್ |
| ಜನ್ಮ ದಿನಾಂಕ | : | 14–01–1915 |
| ಜನ್ಮಸ್ಥಳ | : | ಚೌಡಸಂದ್ರ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಮತ | : | ಹಿಂದು (ದೇವಾಂಗ) ನೇಕಾರ ಹಿಂದುಳಿದ ವರ್ಗ |
| ತಂದೆಯ ಹೆಸರು | : | ಶ್ರೀ ಚಿಕ್ಕಲಿಂಗಪ್ಪ (ಗಮಕಿ) |
| ತಾಯಿಯ ಹೆಸರು | : | ಶ್ರೀಮತಿ ಕಲ್ಲಮ್ಮ |

# ಸಿ. ಹೊನ್ನಪ್ಪ ಭಾಗವತರ್ ಅವರ ಜೀವನ ಚರಿತ್ರೆ

## ಎರಡು ರೂಪಾಯಿ ಸಂಬಳ !

ಸಂಗೀತಗಾರ, ವಾಗ್ಗೇಯಕಾರ, ನಾಟಕಕಾರ, ಚಿತ್ರನಟ, ನಿರ್ಮಾಪಕ ಎಂದೆಲ್ಲಾ ಹೆಸರಾಗಿರುವ ಸಿ. ಹೊನ್ನಪ್ಪ ಭಾಗವತರು ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕು ಚೌಡಸಂದ್ರ ಗ್ರಾಮದವರು. ಇವರು ಹುಟ್ಟಿದ ದಿನಾಂಕ 14–1–1915ರಂದು. ಸುಮಾರು ಇಪ್ಪತ್ತೈದು ಮನೆಗಳಿರುವ ಒಂದು ಚಿಕ್ಕ ಹಳ್ಳಿ ಅದು. ಇವತ್ತಿಗೂ ಏನೇನೂ ಬದಲಾವಣೆಯಾಗಿರದ ಕುಗ್ರಾಮ. ಇಂಥ ಒಂದು ಹಳ್ಳಿ ಇವತ್ತು ಕರ್ನಾಟಕ ಮತ್ತು ತಮಿಳುನಾಡು – ಈ ಎರಡೂ ರಾಜ್ಯಗಳ ಕಲಾಕ್ಷೇತ್ರದಲ್ಲಿ ಮಿಂಚಿದ ಒಂದು ಕಲಾಪ್ರತಿಭೆಯನ್ನು ಕೊಟ್ಟಿದೆ ಎಂದರೆ ಅನೇಕರಿಗೆ ಆಶ್ಚರ್ಯವೆನಿಸುತ್ತದೆ. ಇಂಥ ಆಶ್ಚರ್ಯದ ಹಿಂದೆ ಕುತೂಹಲವಿದೆ, ಅಪಾರವಾದ ಸಂತೋಷವೂ ಇದೆ.

ಹಿಂದುಳಿದ ವರ್ಗದಿಂದ (ದೇವಾಂಗ) ಬಂದ ಹೊನ್ನಪ್ಪ ಭಾಗವತರ ತಂದೆ ಚಿಕ್ಕಲಿಂಗಪ್ಪ ಮತ್ತು ತಾಯಿ ಕಲ್ಲಮ್ಮ. ಹೊನ್ನಪ್ಪನವರು ಜಗತ್ತಿನತ್ತ ಕಣ್ಣರಳಿಸುವ ಮುನ್ನವೇ ಅಂದರೆ ಸುಮಾರು ಐದು ವರ್ಷದ ಬಾಲಕನಿರುವಾಗಲೇ ಊರಾದ ಚಿಕ್ಕಹಳ್ಳಿಗೆ ಪ್ಲೇಗು ರೋಗ ಆವರಿಸಿತು. ದಟ್ಟವಾಗಿ ಹಬ್ಬಿದ ಪ್ಲೇಗು ತಂದೆ ಚಿಕ್ಕಲಿಂಗಪ್ಪನವರನ್ನು ಬಲಿ ತೆಗೆದುಕೊಂಡಿತು. ಊರ ಜನ ಭಯಂಕರ ಕಾಯಿಲೆಗೆ ಹೆದರಿ ಊರು ಬಿಟ್ಟು ಹೊಲಗಳಲ್ಲಿ ವಾಸ ಮಾಡಲು ತೊಡಗಿದರು. ಇಂಥ ಕಾಯಿಲೆಗಳು ಬಂದಾಗ ದೈವ ಸೃಷ್ಟಿ ಎಂದು ಭಾವಿಸಿ ಅದಕ್ಕೆ ಶಾಂತಿ ಮಾಡುವುದು, ಈ ಪರಿಸರದಿಂದ ಕೆಲವು ಕಾಲ ದೂರವಿರುವುದು ಹಿಂದಿನಿಂದಲು ನಡೆದುಬಂದ ರೂಢಿಯಾಗಿತ್ತು. ಅಂಥ ಪರಿಸ್ಥಿತಿಗೆ ಹಳ್ಳಿಯ ಜನರೂ ಹೊರತಾಗಿರಲಿಲ್ಲ. ತಂದೆಯನ್ನು ಅಗಲಿದ ಹೊನ್ನಪ್ಪ ವಿಧಿಯಿಲ್ಲದೆ ತಾಯಿಯ ತವರೂರು ಮೋಟಗಾನಹಳ್ಳಿಗೆ (ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ) ಬಂದು ಸೇರಿದರು. ಹೊನ್ನಪ್ಪನ ಹುಟ್ಟಿದ ಊರಿಗಿಂತ ತಾಯಿಯ ತವರೂರು ಸುಸಂಸ್ಕೃತವಾಗಿತ್ತು. ಅಲ್ಲಿ ಬುದ್ಧಿವಂತ ವಿದ್ವಾಂಸರೂ ಇದ್ದರು. ಶಂಕರಶಾಸ್ತ್ರಿ, ಸುಬ್ರಮಣ್ಯಶಾಸ್ತ್ರಿ ಅಂಥವರಲ್ಲಿ ಪ್ರಮುಖರು ಆಗಲೇ ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಹೆಸರಾಗಿದ್ದವರು.

ಸುಬ್ರಮಣ್ಯ ಶಾಸ್ತ್ರಿಗಳು ನಾಟಕ ಕ್ಷೇತ್ರದಲ್ಲೂ ಹೆಸರಾಗಿದ್ದರು. ಇವರಿಬ್ಬರ ಬಗೆಗೆ ಆ ಹಳ್ಳಿಯ ಜನತೆಗೆ ಅಪಾರ ಗೌರವವಿತ್ತು.

ರಂಗಭೂಮಿಯಲ್ಲಿ ಹೆಸರು ಮಾಡಿದ್ದ ಬಳ್ಳಾರಿ ರಾಘವ ಅವರು ಆಗ ಅಮೆಚೂರ್ ನಾಟಕ ಕಂಪನಿ ನಾಟಕಗಳಲ್ಲಿ ಸುಬ್ರಮಣ್ಯ ಶಾಸ್ತ್ರಿಗಳು ಪಾತ್ರ ಮಾಡುತ್ತಿದ್ದರು. ಹೀಗಾಗಿ ಮೋಟಗಾನಹಳ್ಳಿ ವಿವಿಧ ಅಭಿರುಚಿಯುಳ್ಳ, ಕಲಾವಿದರು ಇರುವ ಕೇಂದ್ರವಾಗಿತ್ತು. ದೊಡ್ಡ ದೊಡ್ಡ ವಿದ್ವಾಂಸರು ವಾಸ ಮಾಡುವ ಸ್ಥಳವೆಂದು ಅಕ್ಕ ಪಕ್ಕದ ಊರಿನ ಜನತೆ ಕೊಂಡಾಡುತ್ತಿದ್ದರು. ವೈವಿಧ್ಯಮಯ ಸಂಸ್ಕೃತಿಯ ತಾಣವೆನಿಸಿದ್ದ ಈ ಹಳ್ಳಿಯಲ್ಲಿ ಬಾಲಕ ಹೊನ್ನಪ್ಪ ತನ್ನ ಹತ್ತನೇ ವಯಸ್ಸಿನವರೆಗೂ ನೆಲೆಸಿದ್ದು, ಕೆಲವಾರು ಕಾರಣಗಳಿಂದ ಬೆಂಗಳೂರಿಗೆ ತಾಯಿಯ ಜೊತೆಯಲ್ಲಿ ಬಂದರು. ಜೀವನ ಸುಧಾರಣೆಗಾಗಿ ತಾಯಿ, ಇಬ್ಬರು ಮಕ್ಕಳನ್ನು ಕಬ್ಬನ್ ಪೇಟೆ ಪಕ್ಕದಲ್ಲಿರುವ ನಾರಾಯಣಶೆಟ್ಟಿ ಪೇಟೆಯಲ್ಲಿ ಶ್ರೀಮಂತರೊಬ್ಬರ ಮನೆಯಲ್ಲಿ ಜೀತಕ್ಕೆ ಇಟ್ಟರು. ಹೊನ್ನಪ್ಪನವರಿಗೆ ತಿಂಗಳಿಗೆ ಕೊಡುತ್ತಿದ್ದ ಸಂಬಳ ಕೇವಲ ಎರಡು ರೂಪಾಯಿ ಮಾತ್ರ, ಇವರ ಕೆಲಸ ನೋಡಿಕೊಂಡು ವರ್ಷಕ್ಕೆ ಒಂದು ರೂಪಾಯಿ ಜಾಸ್ತಿ ಮಾಡುತ್ತಿದ್ದರಂತೆ!... ರೇಷ್ಮೆ ತೋಡುವುದು, ಯಜಮಾನರ ಮಕ್ಕಳನ್ನು ಆಡಿಸುವುದು, ಬೇಲ್ ಎತ್ತುವುದು (ಸೀರೆಗಳಲ್ಲಿ ಕಲಾಪತ್ತು ಮಾಡುವುದು) – ಇವೇ ಮೊದಲಾದವು ಹೊನ್ನಪ್ಪನವರು ಶ್ರೀಮಂತರ ಮನೆಯಲ್ಲಿ ದಿನನಿತ್ಯ ಮಾಡುತ್ತಿದ್ದ ಕಾರ್ಯಕಲಾಪಗಳಾಗಿದ್ದವು. ಆಗ ಇವರ ವಯಸ್ಸು ಸುಮಾರು ಹನ್ನೆರಡು ಅಥವಾ ಹದಿಮೂರು ವರ್ಷ ಇರಬಹುದು. ತಂದೆ ತೀರಿಕೊಂಡ ಬಳಿಕ ತಮ್ಮನ್ನು ಕಟ್ಟಿಕೊಂಡು ತಾಯಿ ಪಡುತ್ತಿದ್ದ ಕಷ್ಟ, ಅನುಭವಿಸುತ್ತಿದ್ದ ನೋವು ತಾನು ಬೇರೆಯವರ ಮನೆಯಲ್ಲಿ ಕೂಲಿ ಕೆಲಸ ಮಾಡುವ ಸ್ಥಿತಿಯೊದಗಿದ್ದು ಇದರ ಬಗ್ಗೆಯೂ ಎಳೆಯ ವಯಸ್ಸಿನ ಹೊನ್ನಪ್ಪ ಚಿಂತಿಸುತ್ತಿದ್ದರು. ತನ್ನ ಹಾಗೂ ತನ್ನ ಕುಟುಂಬದ ಭವಿಷ್ಯದ ಬಗೆಗೂ ಚಿಂತಿಸುತ್ತಾ ಬಂದರು. ತಮ್ಮ ಹದಿಮೂರನೆ ವಯಸ್ಸಿನಲ್ಲಿ ಬೆಂಗಳೂರಿನ ಆಂಜನೇಯನ ದೇವಸ್ಥಾನವೊಂದರಲ್ಲಿ ಒಬ್ಬ ಮೇಷ್ಟರು ಇದ್ದರಂತೆ. ಅದುವರೆಗೂ ಶಾಲೆ ಏನೆಂಬುದೂ ತಿಳಿಯದ ಹೊನ್ನಪ್ಪ ಏನಾದರೂ ಕಲಿಯೋಣ ಎಂದು ಅವರ ಬಳಿಗೆ ಹೋದರು. ರಾತ್ರಿ ವೇಳೆ ಕಲಿಯುವ ಅವಧಿಗಾಗಿ ಇವರು ಕೊಡಬೇಕಾಗಿದ್ದ ಫೀಸು ನಾಲ್ಕು ಆಣೆಯಾಗಿತ್ತು. ಸುಮಾರು ಮೂವತ್ತು ಮೂವತ್ತೈದು ಜನ ಹುಡುಗರು ಆ ಮೇಷ್ಟರ ಬಳಿ ಕಲಿಯಲು ಬರುತ್ತಿದ್ದರು. ನಾಲ್ಕು ಆಣೆಗೆ ಮೂರು ಸೇರು ಅಕ್ಕಿ ಕೊಡುತ್ತಿದ್ದ ಕಾಲ ಅದು, ಎರಡು ರೂ.ಗೆ ಒಂದು ಮೂಟೆ ರಾಗಿ ಕೊಡುತ್ತಿದ್ದ ಕಾಲ ಅದಾಗಿತ್ತು. ಕಡಿಮೆ ಹಣಕ್ಕೆ ಹೆಚ್ಚಿನ ವಸ್ತುಗಳು ಲಭ್ಯವಾಗುತ್ತಿದ್ದ ಸಂದರ್ಭವಾಗಿತ್ತು.

ಹೊನ್ನಪ್ಪ ಕೆಲಸ ಮಾಡುತ್ತಿದ್ದ ಮನೆಯ ಯಜಮಾನನ ಪತ್ನಿ ಬುದ್ಧಿವಂತೆ ಹಾಗೂ ಮಾನವೀಯತೆಯುಳ್ಳವಳಾಗಿದ್ದಳು. ಕಲಿಯುವ ಆಸಕ್ತಿ ಇದ್ದ ಹೊನ್ನಪ್ಪ 'ಸಂಜೆ ಹೊತ್ತು ದೇವಸ್ಥಾನದ ಮೇಷ್ಟ್ರು ಬಳಿ ಪಾಠಕ್ಕೆ ಹೋಗಬೇಕಾಗಿದೆ ಬೇಗ ನನ್ನನ್ನು ಕಳಿಸಿಕೊಡಿ' ಎಂದು ಒಮ್ಮೆ ಕೇಳಿದರು. ಅದಕ್ಕೆ ಆಕೆಯಿಂದ ಸಂತೋಷದಿಂದಲೇ ಅನುಮತಿಯು ದೊರಕಿತು. ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಸರಾಗವಾಗಿ ನಡೆಯಿತು. ಕನಕದಾಸರ ಹರಿಭಕ್ತ ಸಾರದ ಬಗೆಗೆ, ಪುರಂದರದಾಸರ ಭಕ್ತಿಗೀತೆಗಳ ಬಗೆಗೆ ಹೊನ್ನಪ್ಪನವರಿಗೆ ಆಗಲೇ ವಿಶೇಷ ಆಸಕ್ತಿ ಇತ್ತು. ಅವುಗಳ ಜೊತೆಗೆ ಕಾಪಿ ಬರೆಯುವುದು, ಮಗ್ಗಿ ಹೇಳುವುದು, ಕಾಗುಣಿತ ಹೇಳುವುದು ಒಳ್ಳೊಳ್ಳೆ ಹಾಡುಗಳನ್ನು ಕಂಠಪಾಟ ಮಾಡುವುದು – ಮೊದಲಾದುವುಗಳನ್ನು ಅಭ್ಯಾಸ ಮಾಡುತ್ತಿದ್ದರು. ಕಾಗುಣಿತವಂತೂ ಬಹಳ ಮುಖ್ಯವಾಗಿತ್ತಂತೆ. ಒಬ್ಬ ಹೇಳಿದ ಮಗ್ಗಿಯನ್ನು ಉಳಿದವರು ಹೇಳಬೇಕಾಗಿತ್ತು. ಸ್ವಲ್ಪ ಏನಾದರೂ ತಪ್ಪು ಹೇಳಿದರೆ ಮೇಷ್ಟ್ರ ಕೈಯಲ್ಲಿದ್ದ ರೂಲುದೊಣ್ಣೆಯ ಪೆಟ್ಟನ್ನು ತಿನ್ನಬೇಕಾಗಿತ್ತು, ತರಗತಿಗೆ ಒಬ್ಬ ಲೀಡರ್ ಅಂತ ಮಾಡುತ್ತಿದ್ದರು. ಮೇಷ್ಟ್ರು ಇಲ್ಲದಿರುವಾಗ ಆತನ ಮಾತನ್ನು ಕೇಳಬೇಕಾಗಿತ್ತು. ಹೀಗೆ ಸುಮಾರು ನಾಲ್ಕು ವರ್ಷಗಳ ಕಾಲ ಬೆಳಗ್ಗೆ ಶ್ರೀಮಂತರ ಕುಟುಂಬದಲ್ಲಿ ಇದ್ದು ಹೊನ್ನಪ್ಪ ಕಾಲಾಹರಣ ಮಾಡಿದರು. ಅಷ್ಟೆ ಇವರ ವಿದ್ಯಾಭ್ಯಾಸ.

ಹೀಗೆ ಬೆಳೆಯುತ್ತ ಬಂದ ಹೊನ್ನಪ್ಪನವರು, ಆಗಾಗ್ಗೆ ಕೆಲವರು ನಡೆಸುತ್ತಿದ್ದ ಭಜನಾ ಮೇಳಗಳಿಂದ ಆಕರ್ಷಿತರಾದರು. ಸೋಮವಾರ, ಶುಕ್ರವಾರಗಳಂದು ಕೆಲವು ಸಂಪ್ರದಾಯಸ್ಥರು ಭಜನಾ ಮಂದಿರಗಳಲ್ಲಿ ಭಜನೆಯನ್ನು ನಡೆಸುವುದು ಸರಿಯಷ್ಟೆ. ಹೀಗೆ ನಡೆಯುತ್ತ ಬಂದ ಭಜನಾ ಮನೆಗಳಿಗೆ ಹೊನ್ನಪ್ಪನವರು ಹಾಜರಾಗುತ್ತಿದ್ದರು. ಅಲ್ಲಿ ಹೇಳಿದ ಹಾಡುಗಳನ್ನು ಮೆಲುಕು ಹಾಕುತ್ತಾ ಹಾಡಲು ಪ್ರಾರಂಭಿಸಿದರು. ತ್ಯಾಗರಾಜರ ಕೀರ್ತನೆಗಳು, ಭಕ್ತಿಗೀತೆಗಳೆಂದರೆ ತುಂಬ ಇಷ್ಟಪಡುತ್ತಿದ್ದ ಹೊನ್ನಪ್ಪನವರು ಅವನ್ನು ತಮ್ಮ ಮಧುರವಾದ ಕಂಠದಲ್ಲಿ ಹಾಡಲು ತೊಡಗಿದರು. ಕ್ರಮೇಣ ಜನರಿಗೆ ಪ್ರಿಯವಾದರು.

ಹೀಗೆಲ್ಲ ನಡೆಯುತ್ತಿರಬೇಕಾದರೆ ಸಹೋದರರನ ಮಾರ್ಗದರ್ಶನ ಸರಿಯಾಗಿಲ್ಲದ್ದರಿಂದ ಇಬ್ಬರೂ ನಗರ ಜೀವನದಲ್ಲಿ ಎಲ್ಲಿ ದಾರಿ ತಪ್ಪುತ್ತಾರೋ ಎಂದು ಭಾವಿಸಿದ ತಾಯಿ ಮತ್ತೆ ಮಕ್ಕಳ ಸಹಿತ ತನ್ನ ತವರೂರಾದ ಮೋಟಗಾನಹಳ್ಳಿಗೆ ಬಂದು ಸೇರಿ ಮಾಮೂಲಿನಂತೆ ಕುಲಕಸುಬಿನಲ್ಲಿ ತೊಡಗಿದರು. ವೃತ್ತಿಪರ ಕಲಿಕೆ ಜರುಗುತ್ತಿರುವಾಗಲೇ ಬೆಂಗಳೂರಲ್ಲಿದ್ದು – ಅಲ್ಲಿಯ ಉತ್ತಮ ಗುಣಗಳನ್ನು ರೂಢಿಸಿಕೊಂಡು ಬಂದವನೆಂದು ಅಲ್ಲಿನ ಜನ

ಹೊನ್ನಪ್ಪನವರನ್ನು ಗೌರವದಿಂದ ಕಾಣಲು ತೊಡಗಿದರು. ನಗರದಲ್ಲಿ ಕಂಡು–ಅನುಭವಿಸಿದ ದೃಶ್ಯಗಳನ್ನು ಹಳ್ಳಿಯಲ್ಲಿ ಅನುಸರಿಸಲು ಪ್ರಯತ್ನಿಸಿದರು.

ಕಾಮನ ಹಬ್ಬ, ಬಾಬಯ್ಯನ ಹಬ್ಬ – ಮೊದಲಾದ ಸಂದರ್ಭಗಳಲ್ಲಿ ಹುಲಿವೇಷ ಮತ್ತಿತರ ಇನ್ನೂ ಹಲವಾರು ವೇಷಗಳನ್ನು ಹಾಕುತ್ತಾ ಬಾಲವಿಲ್ಲದೆ ಕುಣಿಯುತ್ತ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿಬಿಟ್ಟರು. ತಮ್ಮ ತಾತನವರ ಭಜನಾ ಮಂದಿರಗಳಲ್ಲಿ ತಬಲ ಮತ್ತು ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ತನಗಿಷ್ಟ ಬಂದಂತೆ ನುಡಿಸುವುದರ ಮೂಲಕ ಜನರ ಸಂತೋಷದ ವಸ್ತುವಾಗಿಬಿಟ್ಟರು. ಇಂಥ ನೆಮ್ಮದಿಯ ಜೀವನಕ್ಕಾಗಿ ಹಬ್ಬಗಳು ಬಂದರಂತೂ ಇವರಿಗೆ ಎಲ್ಲಿಲ್ಲದ ಸಂತೋಷವಾಗುತ್ತಿತ್ತು. ಕುಣಿತ, ಹಾಡು, ಹುಡುಗರನ್ನು ಕಟ್ಟಿಕೊಂಡು ಭಜನೆಗೆ ಹೊರಡುವುದು ಇತ್ಯಾದಿಗಳಲ್ಲಿ ಭಾಗವಹಿಸುತ್ತಿದ್ದರು.

ತನ್ನ ಸುತ್ತ ಮುತ್ತಲಿನ ಯಾವುದಾದರೂ ಹಳ್ಳಿಯಲ್ಲಿ ಯಕ್ಷಗಾನ ಬಯಲಾಟಗಳು ಏರ್ಪಾಡಾಗಿದ್ದ ವಿಷಯ ತಿಳಿದ ಕೂಡಲೆ ಗೆಳೆಯರ ಗುಂಪು ಕಟ್ಟಿಕೊಂಡು ರಾತ್ರೋರಾತ್ರಿ ಬಯಲಾಟ ಜರುಗುವ ಸ್ಥಳಕ್ಕೆ ನಡೆದೇ ಬಿಡುತ್ತಿದ್ದರು. ಹೊನ್ನಪ್ಪ ಬಂದಿರುವ ವಿಷಯ ನಾಟಕದವರಿಗೆ ತಿಳಿದರಂತೂ ಮುಗಿದೇಹೋಯಿತು. ಇವರನ್ನು ಬಿಡದೆ ರಂಗಸಜ್ಜಿಕೆಗೆ ಕರೆಯುತ್ತಿದ್ದರಂತೆ. ನಾಟಕದ ಮಧ್ಯೆ ಮಧ್ಯೆ ಹೊನ್ನಪ್ಪನವರಿಗೆ ಹಾಡುವುದಕ್ಕೆ ಅವಕಾಶ ಕೊಡುತ್ತಿದ್ದರಂತೆ. ಹಾಡುತ್ತಲೇ ಪ್ರೇಕ್ಷಕರಿಂದ 'ಒನ್ಸ್‌ಮೋರ್'ಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದರು. 'ರಾತ್ರಿಯೆಲ್ಲಾ ಹುಡುಗ ಹಾಡಿದ್ದಾನೆ' ಎಂದು ನಾಟಕದವರು ಮರುದಿನ ಸಂಭಾವನೆಯಾಗಿ ಧಾನ್ಯ ಅಥವಾ ತರಕಾರಿಗಳನ್ನು ಕೊಟ್ಟು ಕಳಿಸುತ್ತಿದ್ದರು. ಹಾಡುವುದರ ಮೂಲಕ ಮಗ ಏನೋ ಸಂಪಾದಿಸಿಕೊಂಡು ಬಂದ ಎಂದು ತಾಯಿ ಹಸನ್ಮುಖಿಯಾಗಿ ಸ್ವಾಗತಿಸುತ್ತಿದ್ದರು. ಸೊಗಸಾಗಿ ಹಾಡುತ್ತಿದ್ದ ಹೊನ್ನಪ್ಪನವರಿಗೆ ಬಯಲಾಟದವರು ಕ್ರಮೇಣ ವೇಷ ಕೊಡಲು ಆರಂಭಿಸಿದರು. ಲವಕುಶದಂಥ ಬಾಲ ಪಾತ್ರಗಳನ್ನು ನಿರ್ವಹಿಸಲು ಆದೇಶ ನೀಡಿದರು. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ಯಕ್ಷಗಾನ, ಬಯಲಾಟ, ಭಜನೆ, ನಾಟಕ ಮತ್ತು ಹಳ್ಳಿಯ ಜನಪದ ಕಲೆಗಳಲ್ಲಿ ಭಾಗವಹಿಸುವುದನ್ನು ರೂಢಿ ಮಾಡಿಕೊಂಡರು. ವ್ಯವಸ್ಥಿತವಾಗಿ ಶಾಲೆಗೂ ಹೋಗದ ಹೊನ್ನಪ್ಪನವರಿಗೆ ಗೆಳೆಯರೆ ಬಯಲು ರಂಗವನ್ನು ಪ್ರವೇಶಿಸಲು ಕಾರಣರಾದರೆಂಬುದು ಸಂತೋಷದ ವಿಷಯವಾಯಿತು. ಮೋಟಗಾನಹಳ್ಳಿಯಲ್ಲಿ ಬೊಮ್ಮನಹಳ್ಳಿ ಶಾಮಣ್ಣ ಎಂಬುವವರು ಸ್ವಲ್ಪ ತಿಳಿವಳಿಕೆಯುಳ್ಳವರು. ಅವರು ಭಜನೆ ಮಂದಿರದಲ್ಲಿ ಕುಳ್ಳಿರಿಸಿಕೊಂಡು ಹೊನ್ನಪ್ಪನವರಿಗೆ ಸ್ವಲ್ಪ ಮಟ್ಟಿಗೆ ವಿದ್ಯ

ಮಾರ್ಗದರ್ಶನ ನೀಡಿದ್ದರು. ಇದೊಂದು ಪ್ರಸಂಗವನ್ನು ಬಿಟ್ಟರೆ ಉಳಿದಂತೆಲ್ಲ ಆತ್ಮೀಯ ಸ್ನೇಹಿತರೆ ಹೊನ್ನಪ್ಪನವರಿಗೆ ವಿದ್ಯಾಗುರುಗಳೆನಿಸಿದರು.

## ಚಿತ್ರರಂಗಕ್ಕೆ ಪಾದಾರ್ಪಣೆ

ಹೊನ್ನಪ್ಪ ಹದಿನೇಳು ಹದಿನೆಂಟನೇ ವಯಸ್ಸಿನಲ್ಲಿರುವಾಗ ಸಹೋದರನ ಮದುವೆ ಜರುಗಿತು. ಅದೇ ಸಂದರ್ಭದಲ್ಲಿ ಸುಮಾರು 1928ರಲ್ಲಿ ಮಹಾರಾಜರ ಜೂಬಿಲಿ ಉತ್ಸವ ಜರುಗಿತು. ಅದನ್ನು ನೋಡಬೇಕೆಂದು ಗೆಳೆಯರ ಗುಂಪಿನಲ್ಲಿ ರಾತ್ರಿ ಹತ್ತು ಗಂಟೆಗೆ ಮೋಟಗಾನಹಳ್ಳಿಯಿಂದ ಹೊರಟು ಬೆಳಗ್ಗೆ ಐದು ಗಂಟೆಗೆ ನಡೆದುಕೊಂಡೆ ಬೆಂಗಳೂರು ಸೇರಿದರು. ಉತ್ಸವ ನೋಡಿದರು. ಬೆಂಗಳೂರಿನ ಸೌಂದರ್ಯವನ್ನು ಕಂಡು ಖುಷಿಗೊಂಡ ಸಹೋದರರಿಬ್ಬರೂ ಹೇಗಾದರೂ ಮಾಡಿ ಮತ್ತೆ ಬೆಂಗಳೂರಿಗೇ ಬಂದು ನೆಲಸಬೇಕೆಂದು ಬಯಸಿದರು. ಊರಿಗೆ ಬಂದು ದಿನೇ ದಿನೇ ಶಾಸ್ತ್ರೀಯ ಸಂಗೀತ ಕಲಿಯಬೇಕೆಂಬ ಆಸೆಯಿದ್ದ ಹೊನ್ನಪ್ಪನವರಿಗೆ ಬೆಂಗಳೂರು ನಗರದ ಕಡೆಗೆ ಆಸೆಯಾಯಿತು. ಆದರೆ, ಮಕ್ಕಳ ಜೊತೆಯಲ್ಲಿ ತಾಯಿ ಬೆಂಗಳೂರಿಗೆ ಬರಲು ಇಷ್ಟಪಡುತ್ತಿರಲಿಲ್ಲ. ಸಹೋದರರಿಬ್ಬರೂ ಸೇರಿ ಇದಕ್ಕೆ ಒಂದು ಒಳ್ಳೆ ಉಪಾಯವನ್ನು ಹುಡುಕಿಬಿಟ್ಟರು. ಬಟ್ಟೆ ಮಾರಾಟ ಮಾಡಲು ಅಣ್ಣ ಬೆಂಗಳೂರಿಗೆ ಹೋದಾಗ ತಾಯಿ ಸಿಹಿ ನೀರು ಬಾವಿಗೆ ಹೋಗುವುದನ್ನೇ ಕಾದಿದ್ದ ಹೊನ್ನಪ್ಪನು ತಾಯಿ ನೀರು ತೆಗೆದುಕೊಂಡು ಮನೆಗೆ ಬರುತ್ತಲೇ "ಕಾಗೆ ನಡುಮನೆಯಲ್ಲಿ ಬಂದು ಕುಳಿತುಬಿಟ್ಟಿತ್ತು" ಎಂದು ಹೇಳಿದರು! ಕಾಗೆ ನಮ್ಮಲ್ಲಿ ಅಪಶಕುನ. ಸುದ್ದಿಯನ್ನು ಕೇಳಿದ ಕೂಡಲೆ ತಾಯಿ ದಿಗಿಲುಬಿದ್ದರು. ಈ ಅಪಶಕುನದ ಸುದ್ದಿಯ ನೆಪದಲ್ಲಿ ಬೆಂಗಳೂರಿಗೆ ಹೋಗಿಬಿಡಬೇಕೆಂದು ಹೊನ್ನಪ್ಪನವರು ಭಾವಿಸಿದರೆ, ಈ ರೀತಿ ಹೇಳಿದ ಒಂದೆರಡು ಗಂಟೆಯಲ್ಲಿಯೇ ತಾಯಿ ಬೇರೊಂದು ಬಾಡಿಗೆ ಮನೆಯನ್ನು ಹುಡುಕಿಯೇಬಿಟ್ಟರು. ನಾವು ಮಾತನಾಡಿಕೊಂಡಂತೆ ನಮ್ಮ ದಾರಿಗೆ ಸುಲಭವಾಗಿ ತಾಯಿ ಬರಲಾರಳು ಎಂದು ಭಾವಿಸಿದ ಸೋದರರಿಬ್ಬರು "ನೀನು ಬರದೇ ಹೋದರೆ ನಾವಿಬ್ಬರೇ ಬೆಂಗಳೂರಿಗೆ ಹೋಗಿಬಿಡುತ್ತೇವೆ" ಎಂದು ತಾಯಿಗೆ ಬೆದರಿಕೆ ಹಾಕಿಬಿಟ್ಟರು. ಮಕ್ಕಳ ಅಭಿವೃದ್ಧಿಯ ದೃಷ್ಟಿಯಿಂದ ನೀವು ಬೆಂಗಳೂರಿಗೆ ಹೋಗುವುದೇ ಉತ್ತಮ ಎಂದು ನೆರೆಹೊರೆಯವರು ತಾಯಿಗೆ ಬುದ್ಧಿವಾದ ಹೇಳಲು ಆರಂಭಿಸಿದರು. ಅಂತೂ ಇಂತೂ 1928ರಲ್ಲಿ ಬೆಂಗಳೂರಿನಲ್ಲಿ ಹೊನ್ನಪ್ಪನವರು ನೆಲೆಸಿದರು. ನಾರಾಯಣ ಶೆಟ್ಟಿ ಪೇಟೆಯ ಶ್ರೀಮಂತರ ಒಂದು ಮನೆಯಲ್ಲಿ ಇದ್ದರು. ಸಹೋದರರಿಬ್ಬರೂ ಮಗ್ಗದ ಕೆಲಸ ಮಾಡುತ್ತಿದ್ದುದರಿಂದ ಮನೆ ಪುಕ್ಕಟೆ ದೊರೆಯಿತು. ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ ದೊರೆಯುತ್ತಿದ್ದ ಕಾಲ

ಅದು. ಆದರೂ ತಿರುವಿನೋಯುವ ಮೂರು ಲಾಲಿ ಕೆಲಸವಾದ್ದರಿಂದ ಒಂದು ತಿಂಗಳಿಗೆ ಎರಡು ಕಣ ನೇಯಬೇಕಾದರೆ ಕಷ್ಟವಾಗುತ್ತಿತ್ತು. ಕೂಲಿ ಹದಿನೆಂಟು ರೂಪಾಯಿ ಸಿಗುತ್ತಿತ್ತು. ಹಾಗೆಯೇ ಒಂದಷ್ಟು ದಿವಸ ಹೊನ್ನಪ್ಪನವರು ಬೆಂಗಳೂರಿನ ಬದುಕಿಗೆ ಹೊಂದಿಕೊಳ್ಳಲು ಪ್ರಯತ್ನಿಸಿದರು.

ಈ ಮಧ್ಯೆ ಊರಲ್ಲಿ ಸಹೋದರರಿಬ್ಬರು ಕುಲಕಸುಬನ್ನು ಸ್ವಂತವಾಗಿ ಮಾಡಲು ಪ್ರಾರಂಭಿಸಿದರು. ಆ ನಂತರದ ಕೆಲವು ದಿವಸಗಳಲ್ಲಿಯೇ ತಮ್ಮ ಬಂಧುಗಳ ಒಂದು ಮದುವೆಗಾಗಿ ತಾಯಿಯ ಜೊತೆಯಲ್ಲಿ ಹೊನ್ನಪ್ಪನವರು ಬೆಂಗಳೂರಿಗೆ ಬಂದರು. ಈ ಸಂದರ್ಭದಲ್ಲಿ ಸ್ವಾರಸ್ಯಕರವಾದ ಘಟನೆಯೊಂದು ಜರುಗಿತಂತೆ : ಹೊನ್ನಪ್ಪನಿಗೆ ಸೀರೆ ಕುಪ್ಪಸ ತೊಡಿಸಿ ಕೈಯಲ್ಲಿ ಆರತಿ ತಟ್ಟೆ ಹಿಡಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿಟ್ಟ ವಾಲಗದ ಸಮೇತ ಅವರನ್ನು ಮದುವೆಯ ಮನೆಗೆ ಕರೆದೊಯ್ದರು. ಹಸೆಯ ಮೇಲೆ ನವ ದಂಪತಿಗಳನ್ನು ಕುಳ್ಳಿರಿಸಿದ್ದರು. ಅವರ ಪಕ್ಕದಲ್ಲಿ 'ಸ್ತ್ರೀವೇಷಧಾರಿ' ಹೊನ್ನಪ್ಪನವನ್ನು ಕುಳ್ಳಿರಿಸಿದರು. ಆಗಲೂ ಅವರು ಸುಮ್ಮನಿರದೆ ತಮಾಷೆ ಮಾಡುತ್ತ ಜನರನ್ನು ನಗಿಸುತ್ತ ಕುಳಿತಿದ್ದರು. ಆ ಸಮಯದಲ್ಲಿ ಸಂಗೀತ ಕ್ಷೇತ್ರದಲ್ಲಿ ಜನಪ್ರಿಯರಾಗಿದ್ದ ಸಂಬಂಧ ಮೂರ್ತಿ ಭಾಗವತರು ಅಲ್ಲಿಗೆ ಬಂದರು. ಹೊನ್ನಪ್ಪನವರಿಗಿಂತ ಸುಮಾರು ಹತ್ತು ವರ್ಷ ಸಂಬಂಧ ಮೂರ್ತಿಯವರು ವಯಸ್ಸಿನಲ್ಲಿ ಹಿರಿಯರು. ಮದ್ರಾಸ್ ಕಡೆಯವರು, ಬೆಂಗಳೂರಲ್ಲಿ ವಾಸವಾಗಿದ್ದರು. ಆಗ ಅವರ ವಿಷಯ ಏನೊಂದೂ ಹೊನ್ನಪ್ಪನಿಗೆ ತಿಳಿದಿರಲಿಲ್ಲ. ಆ ವೇಳೆಗಾಗಲೇ ಸಂಗೀತ ಕ್ಷೇತ್ರದಲ್ಲಿ ಸಂಬಂಧಮೂರ್ತಿಯವರು ಪ್ರಖ್ಯಾತರಾಗಿದ್ದರು. "ಮದ್ರಾಸಿನಿಂದ ಬಂದಿದ್ದಾರೆ, ಅವರ ಮುಂದೆ ನೀನೂ ಹಾಡಿದರೆ ನಿನ್ನ ಬಗೆಗೆ ಅವರ ನಾಡಿನಲ್ಲಿ ಅದ್ಭುತ ಪ್ರಚಾರ ಮಾಡುತ್ತಾರೆ. ಆದ್ದರಿಂದ "ಹಾಡು" ಎಂದು ಅಲ್ಲಿದ್ದವರು ಹೊನ್ನಪ್ಪನನ್ನು ಒತ್ತಾಯಿಸಿದರು. ಅದನ್ನೇ ಕಾಯುತ್ತಿದ್ದ ಹೊನ್ನಪ್ಪ ಸೊಗಸಾಗಿ ಹಾಡಿಯೇ ಬಿಟ್ಟರು. ಹರಟೆ ಹೊಡೆಯುತ್ತಿದ್ದುದನ್ನು ಕಂಡ ಸಂಬಂಧಮೂರ್ತಿಗಳು ಜೋರಾಗಿ ನಕ್ಕು "ಈ ಹೆಣ್ಣು ಯಾರದು? ವಿಚಿತ್ರವಾಗಿದೆಯಲ್ಲ" ಎಂದರು. ಅಲ್ಲಿದ್ದ ಮಿತ್ರರೊಬ್ಬರು ಹೊನ್ನಪ್ಪನವರಿಗೆ "ಅವರು ಮದ್ರಾಸ್ ಕಡೆಯವರು" ಎಂದು ತಿಳಿಸಿ "ನಿಮ್ಮ ಹಾಡನ್ನು ಮದ್ರಾಸಲ್ಲಿ ಕೇಳಿದ್ದೆ. ನೀವೊಂದು ಹಾಡಿ ಎಂದು ಕೇಳು" ಎಂಬುದಾಗಿ ಹೇಳಿಕೊಟ್ಟರು. ಅದರಂತೇನೋ ಹೊನ್ನಪ್ಪನವರೂ ಅವರನ್ನು ಕೇಳಿಯೇ ಬಿಟ್ಟರು. ಆಗ ಸಂಬಂಧಮೂರ್ತಿ ಭಾಗವತರು "ಓಹೋ ಮದ್ರಾಸಲ್ಲಿ ನನ್ನ ಹಾಡು ಕೇಳಿದ್ದೀಯಾ ಭಲೆ ಭಲೆ" ಎಂದರು. ಅಲ್ಲಿದ್ದವರು "ಹುಡುಗ ಬಹಳ ಸೊಗಸಾಗಿ ಹಾಡುತ್ತಾನೆ. ನೀವು ಕೇಳಬೇಕು ಸ್ವಾಮಿ" ಎಂದರು. ಆಗ

ಅವರು "ಮೊದಲು ನೀನು ಹಾಡು ನಂತರ ನಾನು ಹಾಡುತ್ತೇನೆ" ಎಂದು ಹೇಳಿದರು. ಆಗ ಹೊನ್ನಪ್ಪನು ತ್ಯಾಗರಾಜಸ್ವಾಮಿಗಳ ಒಂದು ಕೃತಿಯನ್ನು ಸೊಗಸಾಗಿ ಹಾಡಿದರು. ಇದು ಅವರಿಗೆ ತುಂಬಾ ಇಷ್ಟ. ಆದರೆ ಇವರ ಸಾಹಿತ್ಯದ ಬಗೆಗೆ ಹೊನ್ನಪ್ಪಗೆ ಪರಿಚಯವಿರಲಿಲ್ಲ. ಆದರೂ ಭಜನೆ ಮನೆಯಲ್ಲಿ ಹಾಡುವಂತೆಯೇ ಹಾಡಿಬಿಟ್ಟರು.

ಕೊಳಲು ಗಾಯನದಲ್ಲಿ ಪ್ರಖ್ಯಾತಿ ಪಡೆದಿದ್ದ ಮಹಾಲಿಂಗಂ ಅವರ ಆ ಕಾರ್ಯಕ್ರಮವನ್ನು ಕಂಡು ಆನಂದಿಸಿದ ಜನ "ಏನಯ್ಯ ಏನು ಬಾರಿಸಿದ! ಎಂಥಾ ಸಂಗೀತ, ಕೃಷ್ಣನಾಗಿಯೇ ಅವತರಿಸಿದ್ದಾನೆ" ಎಂದು ಮಾತನಾಡಿ ಕೊಂಡರು. ಇದನ್ನು ಗಮನಿಸಿದ ಪಾರ್ಥಸಾರಥಿ ಭಾಗವತರು ಹೊನ್ನಪ್ಪನಿಗೆ "ಆತನ ಬಗೆಗೆ ಜನಗಳು ಈ ರೀತಿ ಮಾತನಾಡಿಕೊಂಡು ಸಂತೋಷಪಡುತ್ತಿದ್ದಾರೆ. ಈ ದಿವಸ ನಮ್ಮ ಹರಿಕಥೆ ಚೆನ್ನಾಗಿ ನಡೆದು ನಾವೂ ಜನರಲ್ಲಿ ಒಳ್ಳೆ ಹೆಸರು ಸಂಪಾದಿಸಬೇಕು. ನೀನು ಭಯಪಡಬೇಡ, ಧೈರ್ಯವಾಗಿ ಹಾಡು" ಎಂದು ಹೇಳಿ ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಅದರಂತೆಯೇ ಅಲ್ಲಿ ಜರುಗಿದ ಮೂರು ಕಡೆಗಳಲ್ಲಿಯೂ ಇಬ್ಬರಿಗೂ ಒಳ್ಳೆ ಹೆಸರು ಬಂದಿತ್ತು. ಆಗ ಜನರಿಂದ ಉತ್ತಮ ಪ್ರತಿಕ್ರಿಯೆಗಳೇ ಬಂದವು. ಪಾರ್ಥಸಾರಥಿಯವರೂ ತುಂಬು ಮನಸ್ಸಿನಿಂದ ಹೊನ್ನಪ್ಪನನ್ನು ಆಶೀರ್ವದಿಸಿದರು.

ಪಾರ್ಥಸಾರಥಿ ಮತ್ತು ಸಂಬಂಧಮೂರ್ತಿ ಭಾಗವತರು ಈ ಇಬ್ಬರ ಜೊತೆಯಲ್ಲಿ ಹಿನ್ನೆಲೆಗಾಯಕರಾಗಿ ಹಾಡುತ್ತ ಬಂದ ಹೊನ್ನಪ್ಪನವರು ನಡುನಡುವೆ ಸ್ವತಂತ್ರವಾಗಿಯೂ ಸಂಗೀತ ಕಛೇರಿ ನಡೆಸಲು ತೊಡಗಿದರು. ಬೆಂಗಳೂರಿನಲ್ಲಿ ಜರುಗುತ್ತಿದ್ದ ಮದುವೆಯ ಮನೆಗಳಲ್ಲಿ ಹಾಗೂ ಇನ್ನಿತರ ಶುಭ ಸಂದರ್ಭಗಳಲ್ಲಿ ಇವರ ಸಂಗೀತ ಕಛೇರಿಗಳು ನಡೆಯತೊಡಗಿದವು. ಹೀಗೆಯೇ ಮದುವೆಯ ಮನೆಯೊಂದರಲ್ಲಿ ಹೊನ್ನಪ್ಪನವರ ಸಂಗೀತ ಕಛೇರಿ ಜರುಗುತ್ತಿದ್ದಾಗ ಆ ಮದುವೆಗೆ ಆಹ್ವಾನಿತರಾಗಿ ಬಂದಿದ್ದ ಸೇಲಂನ ಕೆಲವು ರಸಿಕರು ಹೊನ್ನಪ್ಪನವರ ಸಂಗೀತ ಕಛೇರಿ ಕೇಳಿ ಸಂತೋಷಪಟ್ಟು ಅವರು "ನಾವು ತ್ಯಾಗರಾಜ ಉತ್ಸವ ಮಾಡುತ್ತೇವೆ. ನೀವು ಬಂದು ದಯವಿಟ್ಟು ಕಛೇರಿ ಮಾಡಿ" ಎಂದು ಆಹ್ವಾನಿಸಿದರು. ಅದಕ್ಕೆ ಹೊನ್ನಪ್ಪನವರು ಒಪ್ಪಿಕೊಂಡರು. ಅನಂತರ ಬೆಂಗಳೂರಿನಲ್ಲಿ ಒಬ್ಬ ಶ್ರೀಮಂತರ ಮನೆಯಲ್ಲಿ ಇವರ ಸಂಗೀತ ಕಛೇರಿ ಏರ್ಪಾಡಾಗಿ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಸಾಹೇಬರು ಬಂದಿದ್ದರು. ಉನ್ನತ ಪದವಿಯವರು ಸಾಮಾನ್ಯವಾಗಿ ಹೆಚ್ಚು ಹೊತ್ತು ಸಭೆಗಳಲ್ಲಿ ಕುಳಿತುಕೊಳ್ಳುವುದಿಲ್ಲ ಎಂಬುದು ಇತಿಹಾಸದುದ್ದಕ್ಕೂ ಕಾಣುವ ಸತ್ಯ. ಆದರೆ ಈ ದಿವಾನರು ಸುಮಾರು ಅರ್ಧಗಂಟೆಗಳ ಕಾಲ

ಅಲ್ಲಿದ್ದು ಸಂಗೀತ ಕೇಳಿ ಹೊರಡುವಾಗ "ಇವರು ಯಾವ ಊರಿನವರು" ಎಂದು ಅಲ್ಲಿದ್ದ ಜನರಲ್ಲಿ ಕೇಳಿದರಂತೆ. ಆತ "ಬೆಂಗಳೂರಿನವರೇ" ಎಂದು ಉತ್ತರಿಸಿದರಂತೆ. "ನಾನೆಲ್ಲೊ ಮದ್ರಾಸಿನ ಕಡೆಯವರು ಅಂತ ಭಾವಿಸಿದ್ದೆ" ಎಂದು ಹೇಳಿದ ದಿವಾನರು "ಚಿಕ್ಕ ವಯಸ್ಸಿನಲ್ಲೇ ಸಂಗೀತ ಹಾಡುತ್ತಿರುವೆ. ನಿನಗೆ ಉತ್ತಮ ಭವಿಷ್ಯವಿದೆ. ಕನ್ನಡ ನಾಡಿನಲ್ಲೇ ತುಂಬ ಹೆಸರುವಾಸಿಯಾದ ಕಲಾವಿದನಾಗಬೇಕು. ದೊಡ್ಡ ವಿದ್ವಾಂಸನಾಗಬೇಕು" ಎಂದೆಲ್ಲಾ ಹೇಳುತ್ತಾ ಹೊನ್ನಪ್ಪನವರಿಗೆ ಆಶೀರ್ವದಿಸಿದರಂತೆ.

ಸ್ಥಳೀಯವಾಗಿ ಆರಂಭವಾದ ಹೊನ್ನಪ್ಪ ಭಾಗವತರ ಸಂಗೀತ ಕಛೇರಿ ಬೆಂಗಳೂರಿನ ಹೊರವಲಯಗಳಿಗೂ ವ್ಯಾಪಿಸಿತು. ಆಹ್ವಾನದ ಕರೆಯಂತೆ 1937ರಲ್ಲಿ ಸೇಲಂ ತ್ಯಾಗರಾಜ ಸ್ವಾಮಿ ಉತ್ಸವದಲ್ಲಿ ಇವರ ಸಂಗೀತ ಕಛೇರಿ ಹೊರಗಡೆ ಏರ್ಪಾಡಾದ ಇವರ ಪ್ರಪ್ರಥಮ ಸಂಗೀತ ಕಛೇರಿ ಇದು. ಒಂದು ವಾರ ನಡೆಯುತ್ತಿದ್ದ ತ್ಯಾಗರಾಜಸ್ವಾಮಿ ಆರಾಧನೆಯಲ್ಲಿ ಇವರು ಭಾಗವಹಿಸಿದರು. ಬೆಂಗಳೂರಿನ ಆಗಿನ ವಿದ್ವಾಂಸರಾದ ತಾಯಪ್ಪನವರು ಮತ್ತು ಮಗ ರಾಜಣ್ಣ ಇವರಿಬ್ಬರೂ ಎರಡು ಪಿಟೀಲುಗಳು, ಹಾಗೂ ಪಾಲ್ಘಾಟ್‌ನ ಅಯ್ಯಮಣಿ ಅಯ್ಯರ್ ಮತ್ತು ಸೇಲಂನ ಮೃದಂಗ ವಿದ್ವಾನ್ ಪಳನಿಸ್ವಾಮಿ–ಇವರುಗಳ ಎರಡು ಮೃದಂಗಗಳು–ಈ ರೀತಿ ಪಕ್ಕವಾದ್ಯಗಳನ್ನು ವ್ಯವಸ್ಥೆ ಮಾಡಿಕೊಂಡು ಹೊನ್ನಪ್ಪನವರು ಅಲ್ಲಿ ಸಂಗೀತ ಕಛೇರಿ ನಡೆಸಿ, ಬಹಳ ವಿದ್ವತ್ ಸಂಗೀತ ಕಛೇರಿಯಾಗಿ ನಡೆಯಿತು. ಏಳುದಿನ ಜರುಗಿದ ಕಛೇರಿ ಕಾರ್ಯಕ್ರಮಗಳಲ್ಲೆಲ್ಲ ಹೊನ್ನಪ್ಪನವರ ಸಂಗೀತ ಕಛೇರಿ ಜನಪ್ರಿಯತೆ ಗಳಿಸಿತು. ಇವರ ನಿಜವಾದ ಪ್ರತಿಭೆಯು ಬೆಳಕಿಗೆ ಬಂದು ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ ತಮಿಳುನಾಡಿನ ಸೇಲಂನಲ್ಲಿ ಇವರಿಗೆ 'ಬೆಂಗಳೂರಿನ ಹೊನ್ನಪ್ಪ ಭಾಗವತರ್' ಎಂಬ ಪಟ್ಟ ಬಂದದ್ದೂ ಅಲ್ಲಿನವರಿಂದಲೇ ಎಂಬುದು ಗಮನಾರ್ಗ ವಿಷಯ.

ಅದೇ ಸಂದರ್ಭದಲ್ಲಿ ಸೇಲಂನ 'ಶಂಕರ್ ಫಿಲಂ'ನವರು ಚಲನಚಿತ್ರ ಕಂಪನಿಯನ್ನು ಹೊಸದಾಗಿ ಆರಂಭಿಸಿದರು. ಕಛೇರಿ ಜರುಗಿದ ಎರಡನೇ ದಿನವೇ ಆ ಕಂಪನಿಯವರು ಹೊನ್ನಪ್ಪನವರು ಉಳಿದುಕೊಂಡಿದ್ದ ಸ್ಥಳಕ್ಕೆ ಬಂದರು. "ನಿನ್ನೆ ರಾತ್ರಿ ನಡೆದ ಕಛೇರಿ ಸೊಗಸಾಗಿತ್ತು. ನಾವೀಗ ಹೊಸದಾಗಿ ಫಿಲಂ ಕಂಪನಿಯನ್ನು ಆರಂಭಿಸಿದ್ದೇವೆ. ಅದರಲ್ಲಿ ತ್ಯಾಗರಾಜ ಭಾಗವತರನ್ನು ಮುಖ್ಯ ಪಾತ್ರಕ್ಕೆ ಈಗಾಗಲೇ ಗೊತ್ತು ಮಾಡಿಕೊಂಡಿದ್ದೇವೆ. ಆ ಪಾತ್ರದ ಜೊತೆಯಲ್ಲಿ ನೀವು ಪಾತ್ರ ವಹಿಸಬೇಕು" ಎಂದು ಅತ್ಯಂತ ವಿನಯದಿಂದಲೇ ಕೇಳಿಕೊಂಡರು.

ಹೊನ್ನಪ್ಪನವರು ತಡೆಯಲಾರದೆ ನಕ್ಕುಬಿಟ್ಟರು. "ಯಾಕೆ ನಗುತ್ತಿದ್ದೀರಿ" ಎಂದು ಅವರು ಕೇಳಿದರು.

'ನಾನು ಈವರೆಗೆ ನೋಡಿರುವುದು ಎರಡು ಮೂಕಿ ಚಿತ್ರಗಳು. ಈಗ ಬೆಂಗಳೂರಲ್ಲಿ ನಡೆಯುತ್ತಿರುವ ತೆಲುಗು ಭಾಷೆಯ 'ಸತ್ಯವಾನ ಸಾವಿತ್ರಿ' ಎಂಬ ಚಿತ್ರ (ಗಗ್ಗಯ್ಯ ಮತ್ತು ರಾಮತಿಲಕಂರವರು ನಟಿಸಿದ್ದು) ಮಾತ್ರ ನೋಡಿದ್ದೇನೆ. ಇದಕ್ಕಿಂತ ಹೆಚ್ಚಿನ ಚಿತ್ರಗಳನ್ನು ನೋಡಿಲ್ಲ. ಅದಕ್ಕಾಗಿಯೇ ನನಗೆ ನಗು ಬಂದಿದ್ದು ಎಂದು ಹೊನ್ನಪ್ಪನವರು ಅವರ ಪ್ರಶ್ನೆಗೆ ಹೇಳಿದರು. ಹೀಗೆ ಎರಡು ಮೂಕಿ, ಒಂದು ಟಾಕಿ ಚಿತ್ರ ಕಂಡಿದ್ದ ಹೊನ್ನಪ್ಪನವರು "ಇಷ್ಟೇ ನನ್ನ ಅನುಭವ" ಎಂದು ಹೇಳಿ ನಕ್ಕಿದ್ದರಲ್ಲಿ ಅರ್ಥವೂ ಇತ್ತು. "ನಿಮಗೆ ತಮಿಳು ಬರುತ್ತಾ" ಎಂದು ಕೇಳಿದಾಗ. ಹೊನ್ನಪ್ಪನವರು 'ಸುಮಾರಾಗಿ ಬರುತ್ತದೆ' ಎಂದರು. ಕಂಪನಿಯವರು ತಮಿಳು ಪತ್ರಿಕೆಯೊಂದನ್ನು ಓದಲು ಕೊಟ್ಟು, ಓದಿದ್ದನ್ನು ಕೇಳಿದ ಕಂಪನಿಯವರು 'ಇಷ್ಟು ಮಾತ್ರವಿದ್ದರೆ ಸಾಕು' ಎಂದು ಸಂತೋಷಪಟ್ಟರು.

ಹೇಳಿದಂತೆಯೇ ಒಂದು ತಿಂಗಳೊಳಗೆ ಸೇಲಂ ಶಂಕರ್ ಫಿಲಂ ಕಂಪನಿಯವರು ಹೊನ್ನಪ್ಪನವರು ಇದ್ದ ಬೆಂಗಳೂರಿಗೆ ಬಂದರು. ಅಲ್ಲದೆ ಅವರು ತೆಗೆಯಬೇಕೆಂದಿದ್ದ 'ಅಂಬಿಕಾಪತಿ' ಎಂಬ ತಮಿಳು ಚಿತ್ರಕ್ಕೆ ನಿರ್ದೇಶಕರನ್ನಾಗಿ ವೈ.ವಿ. ರಾವ್ ಅವರನ್ನು ಗೊತ್ತು ಮಾಡಬೇಕೆಂಬ ಉದ್ದೇಶದಿಂದಲೂ ಅವರು ಬೆಂಗಳೂರಿಗೆ ಬಂದಿದ್ದರು. ಚಿತ್ರದ ಸಂಭಾವನೆ ವಿಷಯದಲ್ಲಿ ಉಭಯತ್ರರಿಗೂ (ವೈ.ವಿ. ರಾವ್ ಮತ್ತು ಕಂಪನಿಯವರು) ಸಮಾಧಾನವಾಗಲಿಲ್ಲ; ಆಗ ಶಂಕರ್ ಫಿಲಂನವರು ಆ ವಿಷಯವನ್ನು ಕೈಬಿಟ್ಟು "ನೀವು ನಮ್ಮ ಜೊತೆಯಲ್ಲಿ ಸೇಲಂಗೆ ಬರಬೇಕು. ಯಾಕೆಂದರೆ ಮುಂದೆ ನೀವು ತ್ಯಾಗರಾಜ ಭಾಗವತರ ಜೊತೆ ಪಾತ್ರ ವಹಿಸಬೇಕಾಗಿರುವುದರಿಂದ ಅವರನ್ನು ಪರಿಚಯ ಮಾಡಿಸುತ್ತೇವೆ. ಇನ್ನೆರಡು ದಿವಸದಲ್ಲಿ ಸೇಲಂನಲ್ಲಿ ತ್ಯಾಗರಾಜ ಭಾಗವತರ ಸ್ಪೆಷಲ್ ನಾಟಕವಿದೆ. ತ್ಯಾಗರಾಜ ಭಾಗವತರ ವೃಂದವೆಲ್ಲ ಬಂದು ನಮ್ಮ ಕಛೇರಿಯಲ್ಲಿ ಇಳಿದುಕೊಳ್ಳುತ್ತದೆ. ಅವರಿಗೂ ನಿಮಗೂ ಪರಿಚಯ ಮಾಡಿಸುತ್ತೇವೆ. ಹಾಗೆಯೇ ನಮ್ಮ ಚಿತ್ರದ ಒಪ್ಪಂದ ಮಾಡಿಕೊಳ್ಳೋಣ" ಎಂದು ಹೇಳಿ ಜೊತೆಯಲ್ಲಿ ಹೊನ್ನಪ್ಪನವರನ್ನು ಕರೆದುಕೊಂಡು ಹೋದರು. ಅದಾದ ಎರಡು ದಿವಸಗಳ ತರುವಾಯ ಶಂಕರ್ ಫಿಲಂಸ್‌ರವರ ಕಛೇರಿಯಲ್ಲಿ ತ್ಯಾಗರಾಜ ಭಾಗವತರ ನಾಟಕದ ತಂಡದವರೆಲ್ಲ ಇಳಿದುಕೊಂಡರು. ಅವರಿಗೆಲ್ಲ ಊಟದ ವ್ಯವಸ್ಥೆಯನ್ನು ಶಂಕರ್ ಫಿಲಂಸ್‌ನವರು ಅಲ್ಲಿಯೇ ಏರ್ಪಾಡು ಮಾಡಿದ್ದರು. ಆಹ್ವಾನಿಸಿದ ಪ್ರೊಪ್ರೈಟರುಗಳಲ್ಲಿ ಮುಖ್ಯಸ್ಥರೊಬ್ಬರು ಎಲ್ಲರೂ ಊಟಕ್ಕೆ ಕುಳಿತಿದ್ದ

ವೇಳೆಯಲ್ಲಿ "ಇವರು ಬೆಂಗಳೂರಿನ ಹೊನ್ನಪ್ಪ ಭಾಗವತರು ಅಂತ ಎಂದು ಎಲ್ಲರಿಗೂ ಪರಿಚಯಿಸಿದರು. ಮೂರು ತಿಂಗಳ ಹಿಂದೆ ಇಲ್ಲೊಂದು ಸಂಗೀತ ಕಛೇರಿ ಜರುಗಿದಾಗ ಇವರಿಗೆ ಒಳ್ಳೆ ಹೆಸರು ಬಂತು. ಆದ್ದರಿಂದ ಇವರನ್ನು ನಿಮ್ಮ ಜೊತೆಯಲ್ಲಿ ಪಾತ್ರ ವಹಿಸಲು ಒಪ್ಪಿಸಿದ್ದೇವೆ. ನಿಮಗೂ ಇವರಿಗೂ ಪರಿಚಯ ಮಾಡಿಸುವುದು ನಮ್ಮ ಕರ್ತವ್ಯವಲ್ಲವೆ?" ಎಂದು ಅವರು ಹೇಳಿದರು. ಅವರು ಈ ರೀತಿ ಹೇಳಿದ ಕೂಡಲೆ ಹೊನ್ನಪ್ಪನವರು ತ್ಯಾಗರಾಜ ಭಾಗವತರಿಗೆ ವಿನಯದಿಂದಲೇ ನಮಸ್ಕಾರ ಮಾಡಿದರು. ಪ್ರತಿ ನಮಸ್ಕಾರ ಮಾಡಲಾರದಷ್ಟು ಉದಾಸೀನ ಭಾವನೆಯಿಂದ ತ್ಯಾಗರಾಜ ಭಾಗವತರು "ಆಹಾ... ಹಾಗೋ" ಎಂದರು. ತ್ಯಾಗರಾಜರ ಈ ತಾತ್ಸಾರದ ಪ್ರತಿಕ್ರಿಯೆ, ಅಸಡ್ಡೆಯ ಮನೋಭಾವನೆ ಅಲ್ಲಿ ಕುಳಿತಿದ್ದವರ ಮನಸ್ಸಿಗೂ ಬೇಸರ ಉಂಟುಮಾಡಿದ್ದಲ್ಲದೆ ಅವರ ತಂಡದವರಿಗೂ ತ್ಯಾಗರಾಜರ ವರ್ತನೆ ಅಷ್ಟು ಲೌಕಿಕವೆನಿಸಲಿಲ್ಲ. ಇದು ಹೊನ್ನಪ್ಪನವರಿಗೂ ಅರ್ಥವಾಯಿತು. ತ್ಯಾಗರಾಜ ಭಾಗವತರು ತಮ್ಮ ಬಗೆಗೆ ತೋರಿದ ಉದಾಸೀನ ಭಾವನೆಯಿಂದ ಹೊನ್ನಪ್ಪ ಭಾಗವತರು ತುಂಬ ವೇದನೆಗೊಳಗಾಗಿ ಊಟವೂ ಸಹ ಸೇರದಾಯಿತು. ಅವರ ಭಾವನೆಯನ್ನು ಅಲ್ಲಿದ್ದ ಪ್ರೊಪ್ರೈಟರು ಗಮನಿಸಿದರು.

## ತ್ಯಾಗರಾಜ ಭಾಗವತರ ಮೆಚ್ಚುಗೆ

ಎರಡನೇ ದಿನ ಶಂಕರ್ ಫಿಲಂಸ್‌ನವರ ಚಿತ್ರದ ಮಾತುಕತೆ ನಡೆಯಿತು. ಆಗ ಹೊನ್ನಪ್ಪನವರನ್ನು ತಮ್ಮ ಚಿತ್ರದಲ್ಲಿ ನಟಿಸುವುದಕ್ಕೆ 'ನಿಮಗೇನು ಸಂಭಾವನೆ ಬೇಕು' ಎಂದು ಕೇಳಿದರು. ಸಿನಿಮಾದ ವಿಷಯವೇ ಗೊತ್ತಿಲ್ಲದಿದ್ದ ಹೊನ್ನಪ್ಪನವರು 'ನಾನು ನಿಮ್ಮನ್ನು ಏನು ಕೇಳಬೇಕೆಂಬುದೇ ಗೊತ್ತಿಲ್ಲ' ಎಂದರು. ಹೊನ್ನಪ್ಪನವರಿಂದ ಈ ಉತ್ತರ ಬಂದ ಕೂಡಲೆ ಶಂಕರ್ ಫಿಲಂಸ್‌ನವರೇ ಒಂದು ಸಾವಿರದ ಒಂದು ರೂ.ಗಳಿಗೆ ಒಪ್ಪಂದ ಮಾಡಿಕೊಂಡರು. ಚಿತ್ರರಂಗದಲ್ಲಿ ಜನಪ್ರಿಯತೆ ಗಳಿಸಿದ್ದ ತ್ಯಾಗರಾಜ ಭಾಗವತರಿಗೇ ಸಂಭಾವನೆ ಕೇವಲ ಏಳು ಸಾವಿರ ರೂ. ಕೊಡುತ್ತಿದ್ದರು. ಅದಕ್ಕೆ ಹೊನ್ನಪ್ಪನವರ ಸಂಭಾವನೆಯನ್ನು ಹೋಲಿಸಿ ನೋಡಿದರೆ ಆರಂಭದಲ್ಲಿಯೇ ಅಷ್ಟೊಂದು ಸಂಭಾವನೆ ಪಡೆಯುತ್ತಿದ್ದರು ಎಂಬುದು ಸಂತೋಷದ ವಿಷಯವಲ್ಲವೇ?

ಸುಮಾರು ಒಂದು ತಿಂಗಳ ನಂತರ ಶಂಕರ್ ಫಿಲಂಸ್‌ನವರು ಚಿತ್ರ ನಿರ್ಮಿಸಲು ಕಲಾವಿದರುಗಳ ತಂಡವನ್ನು ಕಲ್ಕತ್ತಕ್ಕೆ ಕರೆದೊಯ್ದರು. ಅಲ್ಲಿ ನಾಲ್ಕು ಅಂತಸ್ತಿನ ಸುಮಾರು ಮೂವತ್ತು ಕೊಠಡಿಗಳಿರುವ ಒಂದು ಕಟ್ಟಡ. ಅದರ ಬಾಡಿಗೆ ಎಷ್ಟು ಗೊತ್ತೆ? ತಿಂಗಳಿಗೆ ಒಂದುನೂರಾ ಐವತ್ತು ರೂ.ಮಾತ್ರ. ಇನ್ನು

ಸ್ಟುಡಿಯೋ ಬಾಡಿಗೆ ಒಂದು ದಿವಸಕ್ಕೆ ಕೇವಲ ಒಂದುನೂರಾ ಇಪ್ಪತ್ತೈದು ರೂ. ಆ ಕಟ್ಟಡದಲ್ಲಿಯೇ ಆಫೀಸ್ ಅನುಕೂಲ. ಎಲ್ಲರ ಊಟ ವಸತಿಯೂ ಅಲ್ಲೇ ಜರುಗುತ್ತಿತ್ತು. ಶುಭದಿವಸದಲ್ಲಿ ತಮ್ಮ ಕಛೇರಿಯಲ್ಲಿಯೇ ಶಂಕರ್ ಫಿಲಂಸ್‌ನವರು ಪೂಜೆ ನಡೆಸಿದರು. ಸ್ಟುಡಿಯೋದಲ್ಲಿ ಷೂಟಿಂಗ್ ನಡೆಸಲು ಸೆಟ್ಟಿಂಗ್ ವಗೈರೆ ಏರ್ಪಾಡು ಮಾಡಿದರು. "ಮೊದಲು ತ್ಯಾಗರಾಜ ಭಾಗವತರು ಮತ್ತು ಹೊನ್ನಪ್ಪ ಭಾಗವತರು ಇವರಿಬ್ಬರ ಷೂಟಿಂಗ್ ಪ್ರಾರಂಭಿಸೋಣ" ಎಂದು ಹೇಳಿ ಇಬ್ಬರಿಗೂ ರಿಹರ್ಸಲ್ ನಡೆಸಿದರು. ನಿರ್ದೇಶಕ ಎಲ್ಲೀಸಾನ್ ಡಂಕನ್, ಸಹಾಯಕ ನಿರ್ದೇಶಕ ಮಣಿ, ಚಿತ್ರಸಾಹಿತಿ ಎಂದೂ ಹೆಸರಾಗಿದ್ದ ಇಳಂಗೋವನ್ ಇವರುಗಳ ಸಮ್ಮುಖದಲ್ಲಿ ರಿಹರ್ಸಲ್ ಜರುಗಿತು.

ಆಗ ನಿರ್ದೇಶಕರು "ತ್ಯಾಗರಾಜ ಭಾಗವತರಿಗಿಂತಲೂ ಹೊನ್ನಪ್ಪ ಭಾಗವತರು ಹೊಸಬರಾದರೂ ಕೂಡ ಚಲನಚಿತ್ರ ರಂಗದ ಹೇಳಿಕೆ ಅಭಿಪ್ರಾಯಗಳನ್ನು ತಿಳಿದುಕೊಂಡು ಮುಖಭಾವ, ಸನ್ನೆ, ಎಲ್ಲವನ್ನೂ ಚೆನ್ನಾಗಿ ಮಾಡುತ್ತಾರೆ" ಇತ್ಯಾದಿಯಾಗಿ ಎಲ್ಲರ ಎದುರಿನಲ್ಲಿ ಹೊನ್ನಪ್ಪನವರನ್ನು ಕೊಂಡಾಡಿಬಿಟ್ಟರು. ಅಲ್ಲದೆ "ಇನ್ನೆರಡು ದಿನಗಳಲ್ಲಿ ಇವರಿಬ್ಬರ ಷೂಟಿಂಗ್ ಅನ್ನು ಪ್ರಾರಂಭಿಸೋಣ" ಎಂದೂ ಹೇಳಿದರು. ಈ ರೀತಿ ತಿಳಿಸಿದ ನಂತರ ಮೂರು ದಿನಗಳಾದರೂ ಷೂಟಿಂಗ್ ನಡೆಯಲೇ ಇಲ್ಲ! ಇದಕ್ಕೆ ಮುಖ್ಯ ಕಾರಣ : ರಿಹರ್ಸಲ್ ನಡೆದ ದಿನ ಎಲ್ಲರ ಮುಂದೆ ನಿರ್ದೇಶಕರು ಹೊನ್ನಪ್ಪ ಭಾಗವತರನ್ನು ಹೊಗಳಿದ್ದು. ಅದರ ಪರಿಣಾಮ ಏನಾಯ್ತೆಂದರೆ, ಮತ್ತೆರಡು ದಿನಗಳು ಕಳೆದು "ಇನ್ನೊಂದು ಸಾರಿ ಇವರಿಬ್ಬರ ರಿಹರ್ಸಲ್ ನೋಡಬೇಕು" ಎಂದು ಹೇಳಿದರು. ಅದರಂತೆ ರಿಹರ್ಸಲ್ ಗಮನಿಸಿ ಹೊನ್ನಪ್ಪನವರನ್ನು ಕೊಂಡಾಡಿದ ನಿರ್ದೇಶಕರೇ ಈಗಿನ ರಿಹರ್ಸಲ್ ಕಂಡು ಹೊನ್ನಪ್ಪನವರನ್ನು ಹೀಗಳೆದರು!

ಜೊತೆಗೆ "ಈ ಪಾತ್ರ, ಕಥೆಯಲ್ಲಿ ಹೀರೋ ಪಾತ್ರದ ಜೊತೆಯಲ್ಲಿ ಉದ್ದಕ್ಕೂ ಬೆರೆಯುವುದು ಬೇಡ. ಇದು ಹಳೇ ತಂತ್ರವನ್ನೆ ಒಂದೆರಡು ದೃಶ್ಯಗಳಲ್ಲಿ ತಂದರೆ ಸಾಕು" ಎಂದು ಹೇಳಿಬಿಟ್ಟರು. ಆ ದಿನ ಹೊನ್ನಪ್ಪನವರ ಮನಸ್ಸಿಗೆ ತುಂಬ ದುಃಖವಾಯಿತು. ಕೊಠಡಿಗೆ ಹೋಗಿ ಚಿಲಕ ಹಾಕಿಕೊಂಡು ಆರಾಧ್ಯದೈವವಾದ ರಾಮನ ಭಾವಚಿತ್ರದ ಮುಂದೆ ನಿಂತುಕೊಂಡು ಕಣ್ಣೀರು ಸುರಿಸುತ್ತ "ರಾಮ ನಾನೇನಾದರೂ ಈ ವೃತ್ತಿಗೆ ಬರಬೇಕೆಂದು ಆಸೆ ಪಟ್ಟೆನೇ? ಎಲ್ಲಾ ನೀನೆ ಹೀಗೆ ಮಾಡಿದೆ. ನನಗೆ ಈ ರೀತಿ ಅವಮಾನ ಮಾಡುವುದರಿಂದ ನಿನಗೆ ಸಂತೋಷವೆ. ಈಗ ನಮ್ಮ ಊರಿನಲ್ಲಿ ಹೊನ್ನಪ್ಪ ಭಾಗವತರು ತ್ಯಾಗರಾಜ ಭಾಗವತರ ಜೊತೆಯಲ್ಲಿ ಎರಡನೇ ಹೀರೋ ಪಾತ್ರ ಮಾಡಲು ಕಲ್ಕತ್ತಕ್ಕೆ ಹೋಗಿದ್ದಾರೆ ಎಂದು

ಪ್ರಚಾರವಾಗಿಬಿಟ್ಟಿದೆ. ಇಲ್ಲಿ ನೋಡಿದರೆ ಪರಿಣಾಮ ಈ ರೀತಿಯಲ್ಲಿ ಇತ್ತು. ಇದೇನೇ ಆಗಿರಲಿ, ನಿನ್ನಲ್ಲಿ ನನಗೆ ನಿಜವಾಗಲೂ ಭಕ್ತಿ ಇರುವುದೇ ಆಗಿದ್ದರೆ ಇದೇ ತಮಿಳು ನಾಡಿನಲ್ಲಿ ತ್ಯಾಗರಾಜ ಭಾಗವತರು ಚಲನಚಿತ್ರ ಪ್ರಪಂಚದಲ್ಲಿ ಯಾವ ಸ್ಥಾನ ಪಡೆದುಕೊಂಡಿದ್ದಾರೋ ಅದೇ ಸ್ಥಾನದಲ್ಲಿ ನನ್ನನ್ನು ನೀನು ಮೇಲಕ್ಕೆ ತರಬೇಕು. ಹಾಗಿಲ್ದೇ ಹೋದರೆ ನನ್ನ ಭಾಗಕ್ಕೆ ನೀನು ದೇವರೇ ಅಲ್ಲ. ನಿನ್ನ ಪಾದದಾಣೆ ಇದು ನನ್ನ ಶಪಥ!" ಎಂದು ಹೇಳಿದರು. ಕಣ್ಣೀರು ಸುರಿಸುತ್ತ ಹಾಗೇ ಮಲಗಿಕೊಂಡರು.

ಮಧ್ಯಾಹ್ನ ಊಟದ ವೇಳೆಯಲ್ಲಂತೂ ಹೊನ್ನಪ್ಪನವರು ಊಟಕ್ಕೇ ಹೋಗಲಿಲ್ಲ. ಅವರ ಗೈರುಹಾಜರಿಯನ್ನು ಗಮನಿಸಿದ ಅಡಿಗೆ ಭಟ್ಟರು ಹಾಗೂ ಕೆಲವು ಮುಖ್ಯ ಕಲಾವಿದರುಗಳು ಬಂದು ಹೊನ್ನಪ್ಪನವರ ಕೊಠಡಿಯ ಬಾಗಿಲು ತಟ್ಟಿ ಊಟಕ್ಕೆ ಬನ್ನಿ ಎಂದು ತುಂಬ ಒತ್ತಾಯಪಡಿಸಿದರು. ಯಾರು ಎಷ್ಟೇ ಒತ್ತಾಯಿಸಿದರೂ ಹೊನ್ನಪ್ಪನವರು ಚಿಲಕ ತೆಗೆಯಲಿಲ್ಲ. ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಹೊರಗೆ ಹೋಗಿದ್ದ ಪ್ರೊಪ್ರೈಟರುಗಳು ಬಂದರು. ತ್ಯಾಗರಾಜ ಭಾಗವತರು ಊಟ ಮುಗಿಸಿದ ನಂತರ ಏನೋ ನೋಡಬೇಕೆಂದು ಹೊರಗಡೆ ಹೋದರು. ಮತ್ತೆ ಪ್ರೊಪ್ರೈಟರುಗಳು ಕೊಠಡಿಯಲ್ಲಿ ಕುಳಿತಿರುವಾಗ ಹೊನ್ನಪ್ಪನವರನ್ನು ಕುರಿತು "ಯಾಕೆ ಸರಿಯಾಗಿ ಊಟ ಮಾಡಲಿಲ್ಲ, ಏನೋ ಬೇಸರವಾಗಿರಬೇಕು! ಅದನ್ನೆಲ್ಲ ಯೋಚನೆ ಮಾಡಬೇಡಿ. ಬೇಸರವನ್ನೆಲ್ಲ ಮರೆತು ನೀವು ಯಾವುದಾದರೊಂದು ಕೀರ್ತನೆ ಹಾಡಿ, ಅವರೆಲ್ಲ ಕೇಳಲಿ" ಎಂದರು. ಆಗ ಆ ಬೇಸರದಲ್ಲೂ ಹೊನ್ನಪ್ಪನವರು ಹಾಡಲಿಕ್ಕೆ ಆರಂಭಿಸಿದರು. ಹಾಡು ಕೇಳಿ ಬರುತ್ತಿದ್ದಂತೆ ತ್ಯಾಗರಾಜ ಭಾಗವತರ ತಂಡದವರಲ್ಲಿ ಕೆಲವರು ಬಂದು ಕೊಠಡಿಯಲ್ಲಿ ಕುಳಿತು ಕೇಳಿ, ಸಂತೋಷಪಟ್ಟರು. ಹೊರಗಡೆ ಹೋಗಿದ್ದ ತ್ಯಾಗರಾಜ ಭಾಗವತರು ಅನಂತರ ಸಂಜೆ ನಾಲ್ಕು ಗಂಟೆಯ ಮೇಲೆ ಬಂದರು. ಕೂಡಲೆ ಅವರ ತಂಡದವರು "ಹೊನ್ನಪ್ಪ ಭಾಗವತರು ತುಂಬ ಚೆನ್ನಾಗಿ ಹಾಡುತ್ತಾರೆ, ನಾವೆಲ್ಲ ಈಗ ಕೇಳಿದೆವು" ಅಂದರು. ನಂತರ ತಂಡದವರು ತ್ಯಾಗರಾಜ ಭಾಗವತರ ಸಮೇತ ವರಾಂಡದ ಕುರ್ಚಿಗಳಲ್ಲಿ ಕುಳಿತ್ತಿದ್ದರು. ಅದೇ ಸಂದರ್ಭದಲ್ಲಿ ಹೊನ್ನಪ್ಪ ಭಾಗವತರು ಕೊಠಡಿಯಿಂದ ಹೊರಗಡೆ ಬಂದರು. ಅವರು ಹೊರಗಡೆ ಬಂದದ್ದನ್ನು ಕಂಡ ತಕ್ಷಣ ತ್ಯಾಗರಾಜ ಭಾಗವತರು ತಾವು ಕುಳಿತಿದ್ದ ಕುರ್ಚಿಯಿಂದ ದಿಢೀರನೆ ಎದ್ದು ಹೊನ್ನಪ್ಪನವರ ಕೈಹಿಡಿದುಕೊಂಡು "ನೀವು ಚೆನ್ನಾಗಿ ಹಾಡುತ್ತೀರಂತೆ, ಹಾಡು ಕೇಳಿದ ನಮ್ಮ ಮಿತ್ರರು ಸಂತೋಷದಿಂದ ಹೇಳಿದರು. ಆ ವಿಷಯ ತಿಳಿದು ನನಗೆ ತುಂಬ ಸಂತೋಷವಾಯಿತು. ಮಧ್ಯಾಹ್ನ ಊಟದ ಸಮಯದಲ್ಲಿ

ಪ್ರೊಪ್ರೈಟರುಗಳು ನಿಮ್ಮನ್ನು ಪರಿಚಯ ಮಾಡಿಕೊಟ್ಟಾಗ ನಿಮ್ಮೊಂದಿಗೆ ಸರಿಯಾಗಿ ನಾನು ವರ್ತಿಸಲಿಲ್ಲ. ನಮ್ಮ ಮನಸ್ಸು ಎಲ್ಲೋ ಇತ್ತು. ಅದಕ್ಕಾಗಿ ಬೇಸರ ಪಟ್ಟುಕೊಳ್ಳಬೇಡಿ. ನೀವು ಹಾಡುವುದನ್ನು ನಾನೂ ಕೇಳಬೇಕು. ದಯವಿಟ್ಟು ಹಾಡಿ" ಎಂದು ಪ್ರಾರ್ಥಿಸಿಕೊಂಡರು. ಎಷ್ಟೇ ಬೇಜಾರಾದರೂ ಹೊನ್ನಪ್ಪನವರು ತಾಳ್ಮೆ ಮೀರಲಿಲ್ಲ. ತ್ಯಾಗರಾಜರ ಆ ಮಾತಿಗೆ ಹೊನ್ನಪ್ಪನವರು "ನೀವು ತಮಿಳುನಾಡಿನಲ್ಲಿ ತುಂಬ ಕೀರ್ತಿ ಸಂಪಾದಿಸಿದವರು. ನಿಮ್ಮ ಮುಂದೆ ಹಾಡಲಿಕ್ಕೆ ನನಗೇನು ತಿಳಿಯದು" ಎಂದರು. ಆಗ ತ್ಯಾಗರಾಜರು "ದಯವಿಟ್ಟು ಹಾಗೆಲ್ಲ ಮಾತನಾಡಬೇಡಿ, ನೀವು ಹಾಡುವುದನ್ನು ನಾನು ಕೇಳಲೇಬೇಕು" ಎಂದು ಒತ್ತಾಯಿಸಿದರು. ಹೆಚ್ಚು ಹೇಳಿಸಿಕೊಳ್ಳುವುದು ಸರಿಯಲ್ಲವೆಂದು ಭಾವಿಸಿದ ಹೊನ್ನಪ್ಪನವರು ತ್ಯಾಗರಾಜ ಭಾಗವತರ ಕೋರಿಕೆಯಂತೆ ಹಾಡಿದರು. ಹೊನ್ನಪ್ಪನವರ ಹಾಡು ಕೇಳಿ ತುಂಬ ಸಂತೋಷಪಟ್ಟ ತ್ಯಾಗರಾಜ ಭಾಗವತರು "ಸಂಜೆ ನಾಟಕವಿದೆ. ಅದಕ್ಕೆ ಬಂದು ನೀವು ಕುಳಿತು ನೋಡಬೇಕು" ಎಂದು ಹೇಳಿ ಆಹ್ವಾನಿಸಿದರು.

ಹೊನ್ನಪ್ಪನವರು ತಮಿಳು ಚಿತ್ರರಂಗದಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದರು. ಪ್ರಪ್ರಥಮವಾಗಿ ಹೊನ್ನಪ್ಪನವರ ಪ್ರತಿಭೆಯನ್ನು ಗುರುತಿಸಿದ್ದು ತಮಿಳುನಾಡಿನ ಜನತೆ ಎಂಬುದು ಇಲ್ಲಿ ಮರೆಯದೇ ಗಮನಿಸಬೇಕಾದ ಸಂಗತಿ. 1937ರ ಸಂದರ್ಭದಲ್ಲಿ ಕನ್ನಡ ನಾಡಿನ ಕಲಾವಿದರ ಅರ್ಹತೆಗಳನ್ನು, ಯೋಗ್ಯತೆಗಳನ್ನು ಗುರುತಿಸುವ ವಸ್ತುನಿಷ್ಠವಾದ ಕಣ್ಣುಗಳು, ಮಾನವೀಯತೆಯ ದೃಷ್ಟಿಕೋನ ನಮ್ಮ ನಾಡಿನ ಜನತೆಗೆ ಇಲ್ಲವಾಯಿತಲ್ಲ ಎಂಬುದು ವ್ಯಸನದ ಸಂಗತಿ ಅಲ್ಲವೆ? ಕನ್ನಡ ನಾಡಿನ ಕಲಾಕ್ಷೇತ್ರ ಹೊನ್ನಪ್ಪನವರ ಪ್ರತಿಭೆಗೆ ನೀರೆರೆದು ಪೋಷಿಸುವಲ್ಲಿ ಆರಂಭದಲ್ಲೇ ತೀರಾ ತಾತ್ಸಾರವನ್ನು ತೋರಿರುವುದು ಎದ್ದು ಕಾಣುವ ಅಂಶವಾಗಿದೆ. "ಕನ್ನಡ ನಾಡಿನವನಾದ ನನ್ನನ್ನು ತಮಿಳುನಾಡಿನ ಕಲಾರಸಿಕರು ಸಂಗೀತ ಹಾಗೂ ಚಲನಚಿತ್ರ ರಂಗದಲ್ಲಿ ಗುರುತಿಸಿ ಗೌರವದಿಂದ ಕಂಡರು. ಆದ್ದರಿಂದ ಆ ನಾಡಿನ ಜನತೆಯ ಬಗೆಗೆ ನನಗೆ ಅತ್ಯಂತ ಗೌರವವಿದೆ" ಎಂದು ಆತ್ಮೀಯರಲ್ಲಿ ಆಗಾಗ್ಗೆ ಹೇಳಿಕೊಳ್ಳುತ್ತಿದ್ದ ಹೊನ್ನಪ್ಪನವರು ಕನ್ನಡ ನಾಡಿನಲ್ಲಿ ಕೆಲವು ಸಂದರ್ಭಗಳಲ್ಲಿ ವೇದಿಕೆಗಳಲ್ಲೆಲ್ಲಾ ಅದೇ ರೀತಿ ಹೇಳತೊಡಗಿದರು. 'ಕನ್ನಡ ನಾಡಿನಲ್ಲಿದ್ದು ನೆರೆರಾಜ್ಯದವರನ್ನು ಮೆಚ್ಚಿ ಮಾತಾಡಿದ್ದು' ಕೆಲವು ಸಂಪ್ರದಾಯವಾದಿ ಹಾಗೂ ಪೂರ್ವಾಗ್ರಹಪೀಡಿತ ಮನಸ್ಸಿನ 'ಕೆಲವರಿಗೆ' ಹೊನ್ನಪ್ಪನವರ ಆ ಪ್ರಶಂಸೆಯ ಮಾತುಗಳು ಇಷ್ಟವಾಗಲಿಲ್ಲ! 'ತಮಿಳುನಾಡನ್ನು ಹೊಗಳಲು ನಾವು ಕೊಟ್ಟಂಥ ವೇದಿಕೆಗಳನ್ನು ಏಕೆ ಬಳಸಿಕೊಳ್ಳುತ್ತೀರಿ', 'ಈ ರೀತಿ ಹೇಳುವುದರಿಂದ ಕನ್ನಡ ನಾಡಿಗೆ ಒಂದು ರೀತಿಯಲ್ಲಿ ಅವಮಾನ

ಮಾಡಿದಂತೆ', 'ಇಂಥವುಗಳನ್ನು ಯಾಕೆ ಹೇಳಿಕೊಳ್ಳಬೇಕು', 'ಇವರಲ್ಲಿ ಪ್ರತಿಭೆಯಿತ್ತು, ತಮಿಳಿನವರು ಬಳಸಿಕೊಂಡರು' – ಹೀಗೆ ಹೇಳುತ್ತಾ ಹೋದಂತೆ ಸಣ್ಣದಾಗಿ ಜಗಳಗಳೂ ಆರಂಭವಾಗಿಬಿಟ್ಟವು! ವ್ಯಕ್ತಿಯೊಬ್ಬನ ಬದುಕಿನಲ್ಲಿ ನಡೆದಿದೆಯೆನ್ನ ಬಹುದಾದ ವಾಸ್ತವದ ವಿವರಗಳನ್ನು ಹೇಳಲು ತೊಡಗಿತೆಂದರೆ ಈ 'ವ್ಯವಸ್ಥೆ' ಅಂಥ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತದೆ. ಹೊನ್ನಪ್ಪನವರ ವಿಷಯದಲ್ಲಿ ಆ 'ಕೆಲವರು' ನಡೆದುಕೊಂಡ ರೀತಿ ಇದಕ್ಕೆ ಉದಾಹರಣೆಯಾಗಿದೆ.

'ಅಂಬಿಕಾಪತಿ' ಚಿತ್ರದ ಕೆಲಸ ಮುಗಿಯುವ ಸಂದರ್ಭದಲ್ಲಿ ಹೊನ್ನಪ್ಪನವರು ಬೆಂಗಳೂರಿಗೆ ಹೊರಟು ಬಂದರು. ಬೆಂಗಳೂರಿಗೆ ಬಂದ ಕೆಲವು ದಿನಗಳ ನಂತರ ಬೆಂಗಳೂರಿನ ಎಂಪೈರ್ ಫೋಟೋ ಸ್ಟುಡಿಯೋದ ವಾರ್ಷಿಕೋತ್ಸವ ಏರ್ಪಾಡಾಗಿತ್ತು. ಅದರ ಅಂಗವಾಗಿ ಹೊನ್ನಪ್ಪನವರ ಸಂಗೀತ ಕಛೇರಿಯನ್ನು ಏರ್ಪಡಿಸಿದ್ದರು. ಎಂಪೈರ್ ಫೋಟೋ ಸ್ಟುಡಿಯೋದವರ ಆಹ್ವಾನದಂತೆ ಗುಬ್ಬಿ ವೀರಣ್ಣನವರೂ ಅಲ್ಲಿಗೆ ಆಗಮಿಸಿದ್ದರು. ಗುಬ್ಬಿ ಕಂಪನಿಯಲ್ಲಿ ಪಿಟೀಲು ನುಡಿಸುತ್ತಿದ್ದ ಹಿರಿಯ ವಿದ್ವಾಂಸರಾದ ಪಿಟೀಲು ಕೇಶವಮೂರ್ತಿಗಳು, ಮೃದಂಗ ಪುಟ್ಟಾಚಾರ್, ಪುಟ್ಟಾಚಾರ್ ಅವರ ಮಗ ರಾಮಾಚಾರಿ ಆಗಿನ್ನೂ ಹತ್ತು ವರ್ಷದ ಬಾಲಕ, ಆತ ಕಂಜರ – ಹೀಗೆ ಇವರುಗಳೆಲ್ಲರೂ ಹೊನ್ನಪ್ಪನವರ ಅಂದಿನ ಸಂಗೀತ ಕಛೇರಿಗೆ ಪಕ್ಕ ವಾದ್ಯ ನುಡಿಸಿದರು. ಆಹ್ವಾನಿತರಾಗಿ ಬಂದಿದ್ದ ವೀರಣ್ಣನವರು ಹೊನ್ನಪ್ಪನವರ ಸಂಗೀತ ಕಛೇರಿ ಕೇಳಿ ಸಂತೋಷಪಟ್ಟರು. ಆ ತರುಣದಲ್ಲಿಯೇ ಹೊನ್ನಪ್ಪನವರಿಗೆ ಮದುವೆಯಾಗಿ ಸುಮಾರಿನಲ್ಲಿ ಹೊನ್ನಪ್ಪನವರು ತಮ್ಮ ಮಿತ್ರರೊಬ್ಬರಿಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದರು. ಆ ಮಿತ್ರನ ಮಾವನವರು ಮೈಸೂರಿನಲ್ಲಿ ಆಗಿನ ಯುವರಾಜರ ಆಪ್ತಕಾರ್ಯದರ್ಶಿಯಾಗಿದ್ದರು. ಆದಕಾರಣ ಹೊನ್ನಪ್ಪನವರ ಮಿತ್ರ ಮೈಸೂರಿಗೆ ಹೋಗಿ, ಅರಮನೆಯಿಂದ ಅರಮನೆಯ ಉಡುಪುಗಳಾದ ಕೋಟು, ಶುರುವಾಲು, ಪೇಟ, ಶಾಲು, ಸೀರೆ– ಮೊದಲಾದುವುಗಳನ್ನು ತೆಗೆದುಕೊಂಡು ಬಂದು ಆ ಉಡುಪುಗಳನ್ನು ಹೊನ್ನಪ್ಪನವರಿಗೆ ಹಾಕಿಸಿ ಆತನೇ ನಿಂತು ಇವರ ಫೋಟೋ ತೆಗೆಸಿದ. ಈ ರೀತಿ ತೆಗೆದ ಫೋಟೋವನ್ನು ಎನ್‌ಲಾರ್ಜ್ ಮಾಡಿ ಸ್ಟುಡಿಯೋದಲ್ಲಿ ಹಾಕಿದ್ದರು. ಸಂಗೀತ ಕಛೇರಿ ಕೇಳಿ ಸಂತೋಷಪಟ್ಟಿದ್ದ ಗುಬ್ಬಿ ವೀರಣ್ಣನವರು ಹೊನ್ನಪ್ಪನವರ ಈ ಭಾವಚಿತ್ರವನ್ನು ಕುತೂಹಲದಿಂದ ಗಮನಿಸಿದರು. ಜೊತೆಗೆ 'ಈತನಿಂದ ಹೇಗಾದರೂ ಮಾಡಿ ನಮ್ಮ ಕಂಪನಿಯ ನಾಟಕಗಳಲ್ಲಿ ರಾಜನ ಪಾತ್ರಗಳನ್ನು ಮಾಡಿಸಬೇಕು' ಎಂದು ನಿರ್ಧರಿಸಿದರು. ಮಾರನೆ ದಿನವೇ ವೀರಣ್ಣನವರು ಸ್ಟುಡಿಯೋಕ್ಕೆ ಬಂದು ಹೊನ್ನಪ್ಪನವರನ್ನು ಕರೆಸಿ "ನೀವು ನಮ್ಮ ನಾಟಕ ಕಂಪನಿಗೆ ಸೇರಿ ನಾಟಕಗಳಲ್ಲಿ ಪಾತ್ರ ವಹಿಸಬೇಕು" ಎಂದು ತುಂಬ ಆಗ್ರಹಪಡಿಸಿದರು.

ಆಗ ಹೊನ್ನಪ್ಪನವರು "ನನಗೆ ಇನ್ನೂ ಸಂಗೀತ ಅಭ್ಯಾಸ ಮಾಡಬೇಕೆಂಬ ಆಸೆ ಬಹಳ ಇದೆ. ಆದ್ದರಿಂದ ನಾನು ನಿಮ್ಮ ನಾಟಕದ ಕಂಪನಿಯನ್ನು ಸೇರುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ದಯವಿಟ್ಟು ಕ್ಷಮಿಸಿ" ಎಂದು ಹೇಳಿಬಿಟ್ಟರು. ಅಲ್ಲಿಗೇ ವೀರಣ್ಣನವರೂ ಸುಮ್ಮನಾಗಲಿಲ್ಲ. ವೀರಣ್ಣನವರ ಜೊತೆಯಲ್ಲೇ ಇದ್ದ ಪಿಟೀಲು ವಿದ್ವಾನ್ ಕೇಶವಮೂರ್ತಿ ಮತ್ತು ಹೊನ್ನಪ್ಪನವರ ಆತ್ಮೀಯರಾದ ಎಂಪೈರ್ ಸ್ಟುಡಿಯೋಗೆ ಸೇರಿದ ಮುನಿಯಪ್ಪ ಇವರುಗಳು ಕೀರ್ತಿ ಗಳಿಸಿದ್ದ ವಿದ್ವಾಂಸರುಗಳು. ಇವರಿಬ್ಬರೂ ಬಹಳ ದಿವಸಗಳಿಂದ ಗುಬ್ಬಿ ಕಂಪನಿಯಲ್ಲಿ ಹಾರ್ಮೋನಿಯಂ ಮತ್ತು ಪಿಟೀಲು ವಾದನವನ್ನು ಮಾಡಿಕೊಂಡಿದ್ದ ಒಳ್ಳೆಯ ಅನುಭವಿಗಳು. ಇವರೆಲ್ಲರೂ ಸೇರಿ ಹೊನ್ನಪ್ಪನವರನ್ನು ಗುಬ್ಬಿ ಕಂಪನಿಗೆ ಸೇರುವಂತೆ ತುಂಬ ಒತ್ತಾಯಿಸಿದರು. ಅದೇ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಹೆಸರಾಗಿದ್ದ ಹಿರಿಯ ವಿದ್ವಾಂಸರಾದ ಶ್ರೀ ಅರುಣಾಚಲಪ್ಪನವರ ಬಳಿಯಲ್ಲಿ ಹೊನ್ನಪ್ಪನವರು ಸಂಗೀತ ಅಭ್ಯಾಸ ಮಾಡುತ್ತಿದ್ದರು.

ವೀರಣ್ಣನವರು ಮತ್ತು ಅವರ ಕಂಪನಿಯ ಹಿರಿಯ ಕಲಾವಿದರುಗಳ ಒತ್ತಾಯಕ್ಕೆ ಮಣಿದು ಹೊನ್ನಪ್ಪನವರು "ನಮ್ಮ ಗುರುಗಳನ್ನು ಕೇಳುತ್ತೇನೆ. ಅವರು ಪರವಾಯಿಲ್ಲ ನಾಟಕದ ಕಂಪನಿಗೆ ನೀನು ಸೇರಿಕೊ ಎಂದು ಹೇಳಿದರೆ ಮಾತ್ರ ನಾನು ಬರುತ್ತೇನೆ. ಇಲ್ಲವಾದರೆ ಸಾಧ್ಯವಿಲ್ಲ" ಎಂದು ಹೇಳಿದರು. ಮಾತು ಕೊಟ್ಟಂತೆ ಅದೇ ದಿನದ ರಾತ್ರಿ ಹೊನ್ನಪ್ಪನವರು ತಮ್ಮ ಗುರುಗಳ ಬಳಿಗೆ ಪಾಠಕ್ಕೆ ಹೋದಾಗ ವಿಷಯ ತಿಳಿಸಿದರು: "ಹೀಗೆ ವೀರಣ್ಣನವರು ನಾಟಕ ಕಂಪನಿಗೆ ಬರಬೇಕೆಂದು ನನ್ನನ್ನು ಬಹಳ ಒತ್ತಾಯಪಡಿಸುತ್ತಿದ್ದಾರೆ. ನನಗಾದರೆ ಇನ್ನೂ ಸಂಗೀತ ಅಭ್ಯಾಸ ಮಾಡಬೇಕೆಂಬ ಆಸೆ ಬಹಳ ಇದೆ. ಹೀಗಾಗಿ ಅವರ ನಾಟಕ ಕಂಪನಿ ಸೇರಬೇಕೆಂದರೆ ಮನಸ್ಸು ಒಪ್ಪುತ್ತಿಲ್ಲ. ಈ ಬಗೆಗೆ ತಾವೇನು ಹೇಳುತ್ತೀರಿ. ತಮ್ಮನ್ನು ಇದರ ಬಗ್ಗೆ ಕೇಳಿ ಹೇಳುತ್ತೇನೆಂದು ಅವರಿಗೆ ಉತ್ತರ ಕೊಟ್ಟಿರುವೆ" – ಇತ್ಯಾದಿಯಾಗಿ ಹೊನ್ನಪ್ಪನವರು ವಿಷಯವನ್ನು ಗುರುಗಳಾದ ಅರುಣಾಚಲಪ್ಪನವರಿಗೆ ತಿಳಿಸಿದರು. ಹೊನ್ನಪ್ಪನವರ ಮಾತು ಕೇಳಿದ ಅರುಣಾಚಲಪ್ಪನವರು ಸ್ವಲ್ಪಹೊತ್ತು ಹಾಗೇ ಯೋಚನೆ ಮಾಡಿ "ಇದೇನೋ ದೈವಪ್ರೇರಣೆ ಎಂದು ಕಾಣುತ್ತೆ. ಮುಂದಿನ ಕಾಲಸ್ಥಿತಿಯಲ್ಲಿ ಚಲನಚಿತ್ರ ಪ್ರಪಂಚ ಬಹಳ ಮುಂದುವರಿಯುವ ಸಾಧ್ಯತೆಗಳಿರುವಂತೆ ಕಂಡುಬರುತ್ತಿದೆ. ಹೇಗೂ ನೀವು ಈಗಾಗಲೇ ತಮಿಳು ಚಿತ್ರ ಪ್ರಪಂಚದಲ್ಲಿ ಪ್ರವೇಶಿಸಿ ಒಂದು ಚಿತ್ರದಲ್ಲಿ ಪಾತ್ರವಹಿಸಿ ಬಂದಿದ್ದೀರಿ. ಆ ಪಾತ್ರ ಚಿಕ್ಕದೋ ದೊಡ್ಡದೋ! ಅಂತೂ ಆ ಪಾತ್ರದ ಮೂಲಕ ನಮ್ಮ ಕರ್ನಾಟಕದಲ್ಲಿ ತುಂಬ ಜನಪ್ರಿಯತೆಯನ್ನು ಗಳಿಸಿರುವ

ಗುಬ್ಬಿ ಕಂಪನಿಗೆ ನಟನೆಗೆ ಅಗತ್ಯವೆನಿಸಬಹುದಾದ ಅನುಭವಗಳನ್ನೆಲ್ಲ ಆ ಕಂಪನಿಯಲ್ಲಿದ್ದುಕೊಂಡು ಪಡೆದುಕೊಳ್ಳುವುದು ಒಳ್ಳೆಯದು ಎಂಬುದೇ ನನ್ನ ಅಭಿಪ್ರಾಯವಾಗಿದೆ" ಎಂದರು. ಗುರುಗಳು ಈ ರೀತಿ ಹೇಳಿದ್ದರಿಂದ ಹೊನ್ನಪ್ಪನವರು ಗುಬ್ಬಿ ಕಂಪನಿಗೆ ಸೇರುವ ಮನಸ್ಸು ಮಾಡಿದರು. ಎರಡನೇ ದಿವಸವೂ ವೀರಣ್ಣನವರು ಮತ್ತಿತರರು ಆ ವಿಷಯದ ಬಗೆಗೆ ಹೊನ್ನಪ್ಪನವರನ್ನು ಬಿಡಲಿಲ್ಲ. "ನಿಮ್ಮ ಗುರುಗಳು ಏನು ಹೇಳಿದರು" ಎಂದು ಮೇಲಿಂದ ಮೇಲೆ ಕೇಳತೊಡಗಿದರು. ಆಗ ಹೊನ್ನಪ್ಪನವರು ದಿಢೀರನೆ ಗುರುಗಳು ಹೇಳಿದ್ದ ವಿಷಯವನ್ನು ಹೇಳದೆ "ನನ್ನದೊಂದು ಕಂಡೀಷನ್ ಇದೆ. ಅದಕ್ಕೆ ನೀವು ಒಪ್ಪಬೇಕು. ಒಪ್ಪುವುದಾದರೆ ನಾನು ನಿಮ್ಮ ಕಂಪನಿಗೆ ಬರುತ್ತೇನೆ" ಎಂದು ಹೇಳಿದರು. ಹೊನ್ನಪ್ಪನವರ ಮಾತಿಗೆ ವೀರಣ್ಣನವರು ತಲೆದೂಗಿ "ಸರಿ ನಿಮ್ಮ ಕಂಡೀಷನ್ ಯಾವುದು ಹೇಳಿ" ಎಂದರು. ಆಗ ಹೊನ್ನಪ್ಪನವರು ವೀರಣ್ಣನವರನ್ನು ಕುರಿತು "ನಿಮ್ಮ ನಾಟಕ ಕಂಪನಿ ಎಲ್ಲೇ ಕ್ಯಾಂಪ್ ಮಾಡಿದರೂ ನನಗೆ ಮಧ್ಯೆ ಮಧ್ಯೆ ಸಂಗೀತ ಕಛೇರಿ ನಡೆಸಲು ಬೇರೆ ಬೇರೆ ಕಡೆಯಿಂದ ಆಹ್ವಾನಗಳು ಬಂದಾಗ ನನ್ನನ್ನು ಬಿಟ್ಟು ಕೊಡಬೇಕಾಗುತ್ತದೆ" ಎಂದರು.

ಅಲ್ಲದೆ "ನನಗೆ ಬೇಸರವಾದಾಗ ನಿಮ್ಮ ಕಂಪನಿಯನ್ನು ತ್ಯಜಿಸಲು ನನಗೆ ಅವಕಾಶವಿರಬೇಕು. ಆ ರೀತಿ ನೀವು ಒಪ್ಪುವುದಾದರೆ ಮಾತ್ರ ನಿಮ್ಮ ಕಂಪನಿಗೆ ಸೇರಲು ನಾನು ಇಷ್ಟಪಡುತ್ತೇನೆ" ಎಂದೂ ಹೊನ್ನಪ್ಪನವರು ಹೇಳಿಬಿಟ್ಟರು. ಇವರ ಕಂಡೀಷನ್‌ಗಳನ್ನು ಕೇಳಿ ಸಂತೋಷಗೊಂಡ ವೀರಣ್ಣನವರು "ಬಹಳ ಸಂತೋಷ. ಸಂಗೀತ ಕಛೇರಿಗಳನ್ನು ನಡೆಸುವುದಕ್ಕೆಂದು ಆಹ್ವಾನಗಳು ಬಂದಾಗ ಎಲ್ಲಿಗೆ ಬೇಕಾದರೂ ಹೋಗಬಹುದು" ಎಂದು ಹೇಳಿ ಸಮ್ಮತಿ ಸೂಚಿಸಿದರು. ಇದನ್ನೆಲ್ಲ ಒಪ್ಪಂದದ ಪತ್ರದಲ್ಲಿ ವೀರಣ್ಣನವರು ದಾಖಲಿಸಲಿಲ್ಲ! ಅಂತೂ ಇಂತೂ ಎರಡು ವರ್ಷದ ಒಪ್ಪಂದ ಮಾಡಿಕೊಂಡಿದ್ದಾಯಿತು. ಆಗ ಹೊನ್ನಪ್ಪನವರು "ಈ ಮೊದಲು ತಿಳಿಸಿದ ನನ್ನ ಕಂಡೀಷನ್ನುಗಳನ್ನು ಒಪ್ಪಂದದ ಪತ್ರದಲ್ಲಿ ದಾಖಲಿಸಲೇ ಇಲ್ಲವಲ್ಲ" ಎಂದು ಕೇಳಿದರು. ಕೂಡಲೇ ಹೊನ್ನಪ್ಪನವರ ಗೆಳೆಯರಾದ ಕೇಶವಮೂರ್ತಿ ಹಾಗೂ ಮುನಿಯಪ್ಪನವರು "ಅದೆಲ್ಲ ಯಾಕೆ ಬಿಡಿ ಏನೂ ತೊಂದರೆಯಿಲ್ಲ. ನಾವೆಲ್ಲ ಇಲ್ವ? ಅಂಥ ಸಮಯ ಬಂದಾಗ ನಾವು ಬಗೆಹರಿಸುತ್ತೇವೆ" ಎಂದು ಹೇಳಿ ಸಮಾಧಾನಪಡಿಸುತ್ತಾ ಹೊನ್ನಪ್ಪನವರಿಂದ ಒಪ್ಪಂದದ ಪತ್ರಕ್ಕೆ ಸಹಿ ಹಾಕಿಸಿಯೇಬಿಟ್ಟರು!

ಆ ವೇಳೆಗಾಗಲೇ ಗುಬ್ಬಿ ಕಂಪನಿ ಬೆಂಗಳೂರನ್ನು ಮುಗಿಸಿಕೊಂಡು ದಸರಾ ಹಬ್ಬದ ಸಂದರ್ಭವಾದ್ದರಿಂದ ಮೈಸೂರಿನಲ್ಲಿ ಕ್ಯಾಂಪ್ ಮಾಡಿತ್ತು. 'ಕ್ಯಾಂಪ್

ಪ್ರಾರಂಭಕ್ಕೆ ಮೈಸೂರಿಗೇ ಬರಬೇಕೆಂದು' ಹೊನ್ನಪ್ಪನವರಿಗೆ ತಿಳಿಸಿದ್ದರಿಂದ ಹೊನ್ನಪ್ಪನವರು ನಾಟಕ ಆರಂಭವಾಗುವ ಸಮಯಕ್ಕೆ ಸರಿಯಾಗಿ ಮೈಸೂರಿಗೆ ಹೊರಟರು. ಅಲ್ಲಿಗೆ ಹೋದಾಗ ಮೊದಲ ನಾಟಕದ ಪ್ರದರ್ಶನ ಜರುಗುತ್ತಿದ್ದವು. ಅಂದು ವೀರಣ್ಣನವರು ಹೊನ್ನಪ್ಪನವರಿಗೆ "ಇವತ್ತು ನೀವು ಸೂತ್ರಧಾರನ ಪಾತ್ರವನ್ನು ಮಾಡಬೇಕೆಂದು ಹೇಳಿದರು. ಅದರಂತೆಯೇ ಹೊನ್ನಪ್ಪನವರು ಆ ಪಾತ್ರ ನಿರ್ವಹಿಸುವ ಜವಾಬ್ದಾರಿಯನ್ನು ಹೊತ್ತರು. ಸೂತ್ರಧಾರನ ಪಾತ್ರವನ್ನು ಮಾಡಿದರು. ಶ್ಲೋಕವೊಂದನ್ನು ರಾಗಮಾಲಿಕೆಯಲ್ಲಿ ಹಾಡಿದರು. ಮುತ್ತುಸ್ವಾಮಿ ದೀಕ್ಷಿತರು ರಚಿಸಿದ 'ಕಂಜದಳಾಯತಾಕ್ಷ' ಎಂಬ ಕೀರ್ತನೆಯನ್ನು ಹಾಡಿದರು. ಜನರಂತೂ ತುಂಬಾ ಖುಷಿಪಟ್ಟರು.

ಜನರು 'ಒನ್ಸ್ ಮೋರ್' ಹಾಕಿದರು. ಮತ್ತೆ ಮತ್ತೆ ಹಾಡಬೇಕೆಂದೂ ಒತ್ತಾಯಿಸಿದರು. ಪ್ರೇಕ್ಷಕರ ಕೋರಿಕೆಯಂತೆ ಹೊನ್ನಪ್ಪನವರು ಪುನಃ ಹಾಡಿದರು. ಇದನ್ನು ಗಮನಿಸಿದ ವೀರಣ್ಣನವರು ತುಂಬ ಸಂತೋಷಪಟ್ಟರು. ಅಲ್ಲದೆ... "ಸದ್ಯದಲ್ಲಿಯೇ 'ಸದಾರಮೆ' ಎಂಬ ಒಂದು ನಾಟಕ ಜರುಗಲಿದೆ. ಅದರಲ್ಲಿ 'ಕರವಸ್ತ್ರದ ರಾಜ' ಎಂಬ ಒಂದು ರಾಜನ ಪಾತ್ರ ಬರುತ್ತದೆ. ಅದನ್ನು ನೀವೇ ನಿರ್ವಹಿಸಬೇಕಾಗುತ್ತದೆ" ಎಂದು ಹೇಳಿದರು. ಜಯಮ್ಮನವರ ಮನೆಗೆ ಕರೆದುಕೊಂಡು ಹೋಗಿ "ಜಯಮ್ಮನವರೇ ಸದಾರಮೆ ಪಾತ್ರ ವಹಿಸುತ್ತಿದ್ದಾರೆ. ಆದ್ದರಿಂದ ಕರವಸ್ತ್ರದ ರಾಜನ ಪಾತ್ರ ಮಾಡಬೇಕಾದ ಸನ್ನಿವೇಶವನ್ನು ವೀರಣ್ಣನವರೇ ಪ್ರೇಮದ ಸನ್ನಿವೇಶಗಳನ್ನು ನಮ್ಮಿಬ್ಬರಿಗೂ ಹೇಗೆ ಅಭಿನಯಿಸಬೇಕು ಎಂಬುದನ್ನು ಹೊದ್ದಿಕೆ ಮಾಡಿಸಿ ಅದರಲ್ಲಿ ಹಾಡಬೇಕಾದ ಒಂದೆರಡು ಹಾಡುಗಳನ್ನು ನಿಮ್ಮಿಷ್ಟದಂತೆ ನೀವು ಹಾಡಬಹುದು" ಎಂದು ಹೇಳಿದರು. ವೀರಣ್ಣನವರ ಮಾತಿನಂತೆಯೇ ಹೊನ್ನಪ್ಪನವರು ಸದಾರಮೆ ನಾಟಕದಲ್ಲಿ ಬರುವ ಹಾಡುಗಳನ್ನು ವಾದ್ಯ ವೃಂದದವರ ಜೊತೆಯಲ್ಲಿ ಅವರಿಗೆ ಇಷ್ಟ ಬಂದಂತೆ ಅಭ್ಯಾಸ ಮಾಡಿಕೊಂಡರು.

ಸುಮಾರು ಎಂಟು ಹತ್ತು ದಿನಗಳು 'ಕುರುಕ್ಷೇತ್ರ' ನಾಟಕ ಜರುಗಿತು. ಅದರ ನಂತರ ಸದಾರಮೆ ನಾಟಕದ ಏರ್ಪಾಡಾಯಿತು. ಅದರಲ್ಲಿ ಪ್ರಥಮಬಾರಿಗೆ ಹೊನ್ನಪ್ಪನವರು ಕರವಸ್ತ್ರದ ರಾಜನ ಪಾತ್ರವನ್ನು ಮಾಡಿದರು. ವಾದ್ಯ ನುಡಿಸುತ್ತಿದ್ದವರಿಗೆ ಸ್ವಲ್ಪ ಕಷ್ಟವಾಯಿತು! ಇದನ್ನು ಗಮನಿಸಿದ ವೀರಣ್ಣನವರು ಸೈಡ್‌ವಿಂಗ್ಸ್‌ನಲ್ಲಿ ಬಂದು "ಯಾಕೆ ಏನಾಯಿತು ನಿಮಗೆ? ಈ ರೀತಿ ಬಾರಿಸುತ್ತಿದ್ದೀರಿ ಎಚ್ಚರಿಕೆಯಿಂದ ಬಾರಿಸಿ" ಎಂದು ಸೂಚನೆಕೊಟ್ಟರು. ವೀರಣ್ಣನವರು ಆ ರೀತಿ ಸೂಚಿಸಿದ್ದರಿಂದ ವಾದ್ಯವೃಂದವರಿಗೆ ಅವಮಾನವಾದಂತಾಯಿತು. ವೀರಣ್ಣನವರು

ಕಳ್ಳನ ಪಾತ್ರ ಮಾಡಿದ್ದರು. ಮೊದಲನೇ ನಾಟಕದಲ್ಲಿ ರಾಜನ ಪಾತ್ರ ಮಾಡಿದಾಗ ಜಯಮ್ಮನವರ ನಟನೆಯ ಸಹಕಾರದಿಂದ ಇಬ್ಬರಿಗೂ ಉತ್ತಮ ಕೀರ್ತಿ ಲಭಿಸಿತು. ಇದರಿಂದ ವೀರಣ್ಣನವರೂ ಹೆಚ್ಚು ಸಂತೋಷಗೊಂಡರು. ಕರವಸ್ತ್ರದ ರಾಜ ಪಾತ್ರದಲ್ಲಿ ಬರುವ ಹಾಡುಗಳನ್ನು ಹೊನ್ನಪ್ಪನವರು ತಮ್ಮ ಮನೋಧರ್ಮಕ್ಕೆ ತಕ್ಕಂತೆ ಜನಗಳ ಮನಸ್ಸಿಗೆ ತುಂಬ ರಂಜನೀಯವಾಗುವ ರೀತಿಯಲ್ಲಿ ಹಾಡಿದರು. ಆ ರೀತಿ ಹಾಡುತ್ತಿದ್ದಾಗ ವಾದ್ಯದವರು ತನಗಿಷ್ಟ ಬಂದಂತೆ ಹಾಡಿ, ಈತ ಈ ಕಂಪನಿಗೆ ಬಂದು ಈತನ ಸಲುವಾಗಿ ವೀರಣ್ಣವರಿಂದ ನಮಗೆ ಅವಮಾನವಾಯಿತಲ್ಲ' ಎಂದು ಒಳಗೊಳಗೇ ನೊಂದುಕೊಂಡರು, ಅಂದಿನಿಂದಲೇ ಹೊನ್ನಪ್ಪನವರ ವಿಷಯದಲ್ಲಿ ತಬಲ, ಹಾರ್ಮೋನಿಯಂ ಈ ಇಬ್ಬರು ಕಲಾವಿದರು ಅಸಮಾಧಾನಗೊಂಡರು. ಅದೇ ಭಾವನೆಯಿಂದಲೇ ವರ್ತಿಸತೊಡಗಿದರು. ಹೊನ್ನಪ್ಪನವರು ಗುಬ್ಬಿ ಕಂಪನಿಯಲ್ಲಿ ಇವರಿರುವವರೆಗೂ ಅವರಿಬ್ಬರ ಆ ಭಾವನೆ ಬದಲಾಗಲೇ ಇಲ್ಲ!

ವೀರಣ್ಣನವರ ಕೋರಿಕೆಯಂತೆ ಅವರ ಕಂಪನಿಯಲ್ಲಿ ಜರುಗಿದ ಕುರುಕ್ಷೇತ್ರ ನಾಟಕದ ಕೃಷ್ಣ ಮತ್ತು ಅರ್ಜುನನ ಪಾತ್ರವನ್ನು ಹೊನ್ನಪ್ಪನವರು ಅಭ್ಯಾಸ ಮಾಡಿ ಅಭಿನಯಿಸಲು ಪ್ರಾರಂಭಿಸಿದರು.

ತದನಂತರ ಗುಬ್ಬಿ ಕಂಪನಿ ಮಂಗಳೂರಿನಲ್ಲಿ ಕ್ಯಾಂಪು ಮಾಡಿತು. ಗುಬ್ಬಿ ಕಂಪನಿಯವರು ಅಲ್ಲಿ ನಡೆಸುತ್ತಿದ್ದ ಎಲ್ಲ ನಾಟಕಗಳಲ್ಲೂ ಹೊನ್ನಪ್ಪನವರು ಪ್ರಮುಖ ಪಾತ್ರಗಳನ್ನು ಮಾಡತೊಡಗಿದರು. ಆ ಕಂಪನಿಯಲ್ಲಿ ನಾಟಕ ಮಾಡಲು ಪ್ರವೇಶ ಮಾಡಿದಾಗಿನಿಂದ ಹೊನ್ನಪ್ಪನವರಿಗಾದ ಅನುಭವಗಳು ಹಲವಾರು. ಅಂಥವುಗಳಲ್ಲಿ ಇದು ಒಂದು: ಗುಬ್ಬಿ ಕಂಪನಿಯ ನಾಟಕಗಳಲ್ಲಿ ಜನಪ್ರಿಯತೆ ಗಳಿಸಿದ್ದಂಥ ನಟಿ ಒಬ್ಬರು ಹೊನ್ನಪ್ಪನವರು ಗುಬ್ಬಿ ಕಂಪನಿಯಲ್ಲಿ ಸೇರಿ ಪ್ರಖ್ಯಾತಿ ಪಡೆಯುವ ಸಂದರ್ಭದಲ್ಲಿ ಗುಬ್ಬಿ ಕಂಪನಿಯಲ್ಲಿ ಇದ್ದರು. ಹೊನ್ನಪ್ಪನವರ ಜೊತೆಯಲ್ಲೆ ಪಾತ್ರ ಮಾಡುತ್ತಿದ್ದರು. ಆಕೆ ಪಾತ್ರ ನಿರ್ವಹಿಸುವಾಗ ಹೊನ್ನಪ್ಪನವರ ಜೊತೆಯಲ್ಲಿ ಪಾತ್ರದ ವ್ಯಕ್ತಿತ್ವಕ್ಕೆ ತಕ್ಕಂತೆ ನಟಿಸುತ್ತಿರಲಿಲ್ಲ. ಆ ನಟಿಯ ಅಸಹಕಾರ ಪ್ರವೃತ್ತಿ ಹೊನ್ನಪ್ಪನವರಿಗೂ ಅರ್ಥವಾಯಿತು. ಈಕೆಯ ಉದಾಸೀನ ಭಾವನೆ ನಾಟಕದಿಂದ ನಾಟಕಕ್ಕೆ ಬೆಳೆಯುತ್ತಾ ಹೋಯಿತು. ಪ್ರೇಮ, ಶೃಂಗಾರ, ಶೋಕ – ಮೊದಲಾದ ರಸಗಳನ್ನು ನಟನೆಯಲ್ಲಿ ಅಭಿವ್ಯಕ್ತಿಸುವಲ್ಲಿ ಅಷ್ಟು ಪರಿಣಾಮಕಾರಿಯಾಗಿ, ಸಮಾಧಾನವಾಗುವ ರೀತಿಯಲ್ಲಿ ಅಭಿನಯಿಸುತ್ತಿರಲಿಲ್ಲ. ಇದು ಗುಬ್ಬಿ ಕಂಪನಿಯವರಿಗೆಲ್ಲ ತಿಳಿದ ವಿಷಯವೇ ಆಗಿತ್ತು. ಅಲ್ಲಿ ಕಲಾವಿದರು ಈ ಸಂಗತಿಯನ್ನು ವೀರಣ್ಣನವರ ಗಮನಕ್ಕೂ ತಂದಿದ್ದರು. 'ನಟಿ'ಯ ಅಸಹಕಾರ

ನಟನಾ ಪ್ರವೃತ್ತಿಯನ್ನು ಕಂಡು ಬೇಸರಿಸಿಕೊಂಡಿದ್ದ ಹೊನ್ನಪ್ಪನವರೂ ಸಹ ವೀರಣ್ಣನವರ ಗಮನಕ್ಕೆ ತಂದದ್ದುಂಟು. ಕಂಪನಿಯಲ್ಲಿದ್ದವರೆಲ್ಲ ಈ ವಿಷಯವನ್ನು ಯಾವಾಗ ತಿಳಿಸಿದರೋ ಇಲ್ಲವೋ ವೀರಣ್ಣನವರು 'ಇನ್ನು ಪರಿಸ್ಥಿತಿ ಕೈಮೀರಿ ಹೋದೀತು' ಎಂದು ಭಾವಿಸಿ ಆಕೆಯನ್ನು ಸಮೀಪಕ್ಕೆ ಕರೆದು, 'ರಂಗಮಂಟಪದ ಮೇಲೆ ಆ ರೀತಿ ಉದಾಸೀನ ಭಾವನೆಯಿಂದ ನಟನೆ ಮಾಡಬಾರದು' ಎಂದು ಎಚ್ಚರಿಕೆ ಕೊಟ್ಟರು. ವೀರಣ್ಣನವರು ಆ ರೀತಿ ಸೂಚನೆ ಕೊಟ್ಟ ನಂತರವೂ ಆಕೆ ತನ್ನ ನಟನೆಯ 'ವರ್ತನೆ'ಯನ್ನು ಬದಲಿಸಿಕೊಳ್ಳಲೇ ಇಲ್ಲ! ಗುಬ್ಬಿ ಕಂಪನಿಯ ಮಾಲೀಕರು, ಹಿರಿಯರು ಹೇಳಿದರೂ ಆಕೆ ಅದೇ ರೀತಿ ವರ್ತಿಸುತ್ತಿದ್ದುದನ್ನು ಕಂಡ ಹೊನ್ನಪ್ಪನವರಿಗೆ ವಿಪರೀತ ಕೋಪ ಬರತೊಡಗಿತು. ಸರಿಯಾದ ಸಂದರ್ಭಕ್ಕಾಗಿ ಕಾಯತೊಡಗಿದರು. ಇದೇ ಕ್ಯಾಂಪಿನಲ್ಲಿ 'ಸುಭದ್ರ ಅರ್ಜುನ' ನಾಟಕವನ್ನು ಪ್ರದರ್ಶಿಸಬೇಕೆಂದು ತೀರ್ಮಾನವಾಯಿತು. ಅದರಂತೆ ನಾಟಕವನ್ನು ಅಭ್ಯಾಸ ಮಾಡುವುದಕ್ಕೆ ಆರಂಭಿಸಿದರು. ಈ ನಾಟಕದಲ್ಲಿ ಅರ್ಜುನನ ಪಾತ್ರವನ್ನು ಹೊನ್ನಪ್ಪನವರಿಗೂ ಸುಭದ್ರ ಪಾತ್ರವನ್ನು ಆಕೆಗೂ ನೀಡಲಾಗಿತ್ತು. ನಾಟಕವನ್ನು ಅಭ್ಯಾಸ ಮಾಡುವಾಗ ಹೊನ್ನಪ್ಪನವರು ಮಾಮೂಲಿಯಾಗೆ ನಡೆದುಕೊಂಡು ತರಬೇತಿ ಪಡೆಯುತ್ತಿದ್ದರು. ಮಂಗಳೂರು ಕ್ಯಾಂಪಿನಲ್ಲಿಯೇ ನಾಟಕ ಪ್ರದರ್ಶನವು ಏರ್ಪಾಡಾಯಿತು. ಆರಂಭವಾದ ಮೊದಲ ದಿನ ನಾಟಕದ ಸನ್ನಿವೇಶವೊಂದರಲ್ಲಿ ಅರ್ಜುನ ಸನ್ಯಾಸಿ ವೇಷದಲ್ಲಿರುವಾಗ ಸುಭದ್ರ ಪೂಜಾ ಸನ್ನಿವೇಶದಲ್ಲಿ ಬರುತ್ತಾಳೆ.

ಆ ರೀತಿ ಬಂದಾಗ ಕಪಟ ಸನ್ಯಾಸಿಯಾಗಿ ನಟಿಸುವಾಗ ಸುಭದ್ರಳನ್ನು ಎಳೆದಾಡುವ ಸಂದರ್ಭದಲ್ಲಿ ಹೊನ್ನಪ್ಪನವರ ಉಗುರುಗಳು ಅವಳ ಕೈಗಳಿಗೆ ತಗುಲಿದವು. ಕೈಗಳನ್ನು ತರಚಿಸಿಕೊಂಡಿದ್ದ ಆಕೆ ನಾಟಕದ ಆ ಸನ್ನಿವೇಶ ಮುಗಿದ ತಕ್ಷಣ ರಂಗಸ್ಥಳದಿಂದ ವೀರಣ್ಣನವರ ಬಳಿಗೆ ಹೋದಳು. ಅವಳ ಮುಖ ಭಾವವನ್ನು ಕಂಡ ವೀರಣ್ಣನವರು 'ಏನಾಯಿತು, ಏನು ವಿಶೇಷ' ಎಂದರು. ಅದಕ್ಕೆ ಆಕೆ "ನೋಡಿ ಹೊನ್ನಪ್ಪನವರು ಕೈಗಳನ್ನೆಲ್ಲ ಉಗುರುಗಳಿಂದ ಪರಚಿ ಬಿಟ್ಟಿದ್ದಾರೆ. ಹೀಗಾದರೆ ನಾನು ಹೇಗೆ ನಟನೆ ಮಾಡುವುದು"–ಇತ್ಯಾದಿಯಾಗಿ ವೀರಣ್ಣನವರ ಮುಂದೆ ಅಳುತ್ತಲೇ ತನ್ನ ವೇದನೆಯನ್ನು ತೋಡಿಕೊಂಡರು. ಆಕೆ ವೀರಣ್ಣನವರ ಬಳಿ ಹೇಳಿಕೊಳ್ಳುತ್ತಿದ್ದುದನ್ನು ನೋಡಿಯೂ ನೋಡದವರಂತೆ ಹೊನ್ನಪ್ಪನವರು ಬೇರೊಂದು ಕಡೆಗೆ ಹೋಗಿ ಕುಳಿತುಬಿಟ್ಟರು.

ಆಕೆ ಆ ರೀತಿ ತಮ್ಮ ಅಳಲನ್ನು ತೋಡಿಕೊಂಡ ಕೂಡಲೇ ವೀರಣ್ಣನವರು "ಗುಬ್ಬಿ ಕಂಪನಿಗೆ ಹೊನ್ನಪ್ಪನವರು ಬಂದಾಗಿನಿಂದಲೂ ನೀವು ಅವರ ಜೊತೆಯಲ್ಲಿ ಸರಿಯಾಗಿ ನಟನೆ ಮಾಡುತ್ತಿಲ್ಲ. ವರ್ತಿಸುತ್ತಿಲ್ಲ. ನಿಮ್ಮ ಅಸಹಕಾರ ಪ್ರವೃತ್ತಿಯ

ಬಗೆಗೆ ಬಹಳ ಹಿಂದೆಯೇ ನನ್ನ ಗಮನ ಸೆಳೆದಿದ್ದರು. ಅನಂತರ ನಿಮಗೂ ಈ ಬಗೆಗೆ ಸೂಕ್ಷ್ಮವಾಗಿ ತಿಳಿಸಿದೆ. ಇಷ್ಟೆಲ್ಲ ಹೇಳಿದ್ದರೂ ನೀವು ಹೊನ್ನಪ್ಪನವರ ಜೊತೆಯಲ್ಲಿ ತೀರಾ ತಾತ್ಸಾರ ಭಾವನೆಯಿಂದ ವರ್ತಿಸುತ್ತಿದ್ದೀರಿ. ನಟನೆ ಮಾಡುವಾಗ ಎಲ್ಲೋ ಹೊನ್ನಪ್ಪನವರ ಬೆರಳುಗಳ ಉಗುರು ತಗುಲಿರಬಹುದು. ನಟಿಸುವಾಗ ಇದೆಲ್ಲ ಆಗುವುದು ಸಹಜ. ಇಂಥ ಸಣ್ಣ ಸಣ್ಣವುಗಳನ್ನು ಮುಂದುವರಿಸಿಕೊಂಡು ಹೋಗುವುದು ಉತ್ತಮವಲ್ಲ" ಇತ್ಯಾದಿಯಾಗಿ ಸಮಾಧಾನ ಪಡಿಸಿದರು.

ಜೊತೆಗೆ ವೀರಣ್ಣನವರು ಹೊನ್ನಪ್ಪನವರನ್ನು ಕರೆಸಿ "ಈ ರೀತಿ ನಟಿಸುವಾಗ ಜಾಗರೂಕತೆಯಿಂದ ಇರಬೇಕು. ಉಗುರಿನಲ್ಲಿ ಪರಚಬಾರದು" ಎಂದು ಹೇಳಿದರು. ಆಗ ಹೊನ್ನಪ್ಪನವರು "ಸ್ವಾಮಿ, ಹೇಳಿ ಕೇಳಿ ಅರ್ಜುನ ಸನ್ಯಾಸಿ. ಆತನಿಗೆ ಉಗುರುಗಳು ಬೆಳೆದಿರುವುದು ಸಹಜ. ಹಾಗಾಗಿ ಆತನ ಉಗುರುಗಳು ಅಕಸ್ಮಾತ್ ಸುಭದ್ರೆಯ ಕೈಗಳಿಗೆ ತಗುಲಿರಬಹುದು. ಅದಕ್ಕೆ ನಾನೇನು ಮಾಡಲಿ" ಎಂದರು. ಹೊನ್ನಪ್ಪನವರ ತಕ್ಷಣದ ಉತ್ತರ ಕೇಳಿ ಅಲ್ಲಿದ್ದವರೆಲ್ಲ 'ಗೊಳ್' ಎಂದು ನಕ್ಕು ಬಿಟ್ಟರು. ಹೀಗಾದರೆ ಸರಿಹೋಗಲ್ಲ ಅಂತ ಭಾವಿಸಿದ ವೀರಣ್ಣನವರು ಇಬ್ಬರನ್ನು ಸಮೀಪಕ್ಕೆ ಕರೆದು 'ಇನ್ನು ಮುಂದೆ ನೀವಿಬ್ಬರೂ ಪೂರ್ವಗ್ರಹ ಪೀಡಿತವಾದ ಭಾವನೆಗಳನ್ನು ಬಿಟ್ಟು ಅನ್ಯೋನ್ಯವಾಗಿ ನಟನೆ ಮಾಡಿ" ಎಂದು ಹೇಳಿ ಸಮಾಧಾನ ಪಡಿಸುತ್ತ ಇಬ್ಬರನ್ನು ನಗಿಸಿ ಬಿಟ್ಟರು.

ಮುಂದೆ ಕಾಲಕ್ರಮದಲ್ಲಿ ಗುಬ್ಬಿ ಕಂಪನಿಯ ಎಲ್ಲ ನಾಟಕಗಳಲ್ಲಿನ ಮುಖ್ಯ ಪಾತ್ರಗಳನ್ನು ನಿರ್ವಹಿಸುವಲ್ಲಿ ಹೊನ್ನಪ್ಪನವರು ಕಾರ್ಯೋನ್ಮುಖರಾದರು. ಎರಡು ಮೂರು ಕ್ಯಾಂಪುಗಳಲ್ಲಿಯೇ ಅಭ್ಯಾಸ ಮಾಡಿಕೊಂಡು ಪಾತ್ರಾಭಿನಯ ಮಾಡಲು ಆರಂಭಿಸಿದರು.

ಕಡಿಮೆ ವೇಳೆಯಲ್ಲಿಯೇ ಹೆಚ್ಚು ಜನಪ್ರಿಯತೆ ಮತ್ತು ಕೀರ್ತಿ ಸಂಪಾದಿಸಿದ ಹೊನ್ನಪ್ಪನವರ ಸಾಧನೆಗಳನ್ನು ಕಂಡು ಗುಬ್ಬಿ ಕಂಪನಿಯಲ್ಲಿದ್ದ ಕೆಲವು ಹಿರಿಯ ನಟರುಗಳು ಹೊನ್ನಪ್ಪನವರ ಬಗೆಗೆ ಅಸೂಯೆಪಡತೊಡಗಿದರು. ಅದರ ಪರಿಣಾಮವಾಗಿ ಕೆಲವು ಮುಖ್ಯ ನಟರುಗಳು ಗುಬ್ಬಿ ಕಂಪನಿಯನ್ನು ಬಿಟ್ಟೇ ಹೊರಟರು ! ಯಾರೇ ಕಂಪನಿಯಿಂದ ಹೊರಗೆ ಹೋಗುತ್ತಿದ್ದರೂ ಹೊನ್ನಪ್ಪನವರು ಮಾತ್ರ ತಮಗೆ ವಹಿಸಿದ ಕೆಲಸವನ್ನು ತುಂಬ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಅಚ್ಚುಕಟ್ಟಾಗಿ ಪಾತ್ರಾಭಿನಯ ಮಾಡುತ್ತಿದ್ದರು. ಹೀಗಾಗಿ ಕೆಲವು ದಿವಸಗಳಲ್ಲಿಯೇ ವೀರಣ್ಣನವರು ತಮ್ಮ ಕಂಪನಿಯನ್ನು ತಮಿಳುನಾಡಿಗೆ ತೆಗೆದುಕೊಂಡು ಹೋದರು. ಮೊದಲಿಗೆ ಕೊಯಮತ್ತೂರಿನಲ್ಲಿ ಕ್ಯಾಂಪ್ ಮಾಡಿದರು.

ಎರಡು ತಿಂಗಳ ಮಟ್ಟಿಗೆ ಸೇರಿದ್ದ ಕ್ಯಾಂಪಿನಲ್ಲಿ ಜರುಗಿದ ಎಲ್ಲ ನಾಟಕಗಳಲ್ಲೂ ಹೊನ್ನಪ್ಪನವರು ಅಭಿನಯಿಸಿ ಉತ್ತಮ ಕೀರ್ತಿಯನ್ನು ಸಂಪಾದಿಸಿದರು. ಇವರ ಪಾತ್ರಾಭಿನಯವನ್ನು ಮೆಚ್ಚಿಕೊಂಡಿದ್ದ ಅಲ್ಲಿಯ ಅಭಿಮಾನಿ ಮಿತ್ರ ಬಳಗವೆಲ್ಲ ಸೇರಿ ಇನ್ನೇನು ಕೊಯಮತ್ತೂರಿನಲ್ಲಿ ಕ್ಯಾಂಪ್ ಕೊನೆಯಾಗುತ್ತದೆ ಎನ್ನುವಷ್ಟರಲ್ಲಿ ಹೊನ್ನಪ್ಪನವರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಕೊಟ್ಟರು. ಅಭಿಮಾನಿ ಗೆಳೆಯರು ಹೊನ್ನಪ್ಪನವರಿಗೆ ನೀಡಿದ ಈ ಬಹುಮಾನ ಕಂಪನಿಯ ಪ್ರೊಪ್ರೈಟರುಗಳಿಗೆ ಅಷ್ಟು ಸಮಾಧಾನವನ್ನು ತಂದುಕೊಡಲಿಲ್ಲ! ಅಲ್ಲಿಂದ ಗುಬ್ಬಿ ಕಂಪನಿ ತಿರುಪೂರ್‌ನಲ್ಲಿ ಕ್ಯಾಂಪ್ ಮಾಡಿತು.

ಈ ಕ್ಯಾಂಪ್ ಸುಮಾರು ಒಂದು ತಿಂಗಳ ಕಾಲ ಜರುಗಿತು. ಅಲ್ಲಿಯೂ ಇನ್ನೇನೂ ಕ್ಯಾಂಪ್ ಮುಗಿಯುತ್ತದೆ ಎಂಬಷ್ಟರಲ್ಲಿ ಅಭಿಮಾನಿ ಮಿತ್ರರು ಹೊನ್ನಪ್ಪನವರ ಪಾತ್ರವನ್ನು ಮೆಚ್ಚಿ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡಬೇಕೆಂದು ತೀರ್ಮಾನಿಸಿದ್ದರು. ಕೊಯಮತ್ತೂರು ಕ್ಯಾಂಪಿನಲ್ಲಿ ಇಂಥದೇ ಪ್ರಸಂಗ ಅಂದರೆ ಬಂಗಾರದ ಪದಕವನ್ನು ಅಭಿಮಾನಿ ಮಿತ್ರರು ಹೊನ್ನಪ್ಪನವರಿಗೆ ನೀಡಿದ ಸಂದರ್ಭದಲ್ಲಿ ವೀರಣ್ಣನವರಿಗೆ ಅಸಮಾಧಾನವುಂಟಾಗಿತ್ತು. ಅಲ್ಲಿ ತಮಗಾದ ಅಸಮಾಧಾನದಿಂದಾಗಿ ತಿರುಪೂರ್ ಕ್ಯಾಂಪಿನಲ್ಲಿ ಅಭಿಮಾನಿ ಗೆಳೆಯರಿಂದ ಹೊನ್ನಪ್ಪನವರಿಗೆ ಸೇರಬೇಕಾಗಿದ್ದ ಬಂಗಾರ ಪದಕವನ್ನು ತಾವೇ ಪಡೆಯುವಂತೆ ಮಾಡಿಕೊಂಡು ಹೊನ್ನಪ್ಪನವರಿಗೆ ಬೆಳ್ಳಿ ಪದಕವನ್ನು ಕೊಡಿಸಿ ಬಿಟ್ಟರು !

ಈ ಪ್ರಸಂಗ ಜರುಗಿದ ಮಾರನೇ ದಿವಸ ಪದಕ ನೀಡಿದ ಅಭಿಮಾನಿ ಗೆಳೆಯರು ಹೊನ್ನಪ್ಪನವರನ್ನು ಕುರಿತು "ತಾವು ದಯವಿಟ್ಟು ಏನೂ ತಪ್ಪು ತಿಳಿಯಬೇಡಿ. ನಿಮ್ಮ ಕಂಪನಿಯ ಮಾಲೀಕರಿಂದಲೇ ನಾವು ಈ ರೀತಿ ನಡೆದುಕೊಳ್ಳಬೇಕಾಗಿ ಬಂತು. ಇದಕ್ಕಾಗಿ ಕ್ಷಮೆ ಕೋರುತ್ತೇವೆ" ಎಂದು ಹೇಳಿದರು. ಸಹೃದಯಿಗಳಾದ ಹೊನ್ನಪ್ಪನವರು "ಆ ರೀತಿ ಕ್ಷಮಾಪಣೆ ಕೇಳುವ ಪ್ರಮೇಯವೇ ಇಲ್ಲ. ಜೊತೆಗೆ ಚಿನ್ನದ ಮುಲಾಂ ಮಾಡಿಸಿ ಬೆಳ್ಳಿ ಪದಕವನ್ನು ನನಗೆ ಕೊಡುವ ಅವಶ್ಯಕತೆಯೂ ಇರಲಿಲ್ಲ. ವೀರಣ್ಣನವರಿಗೆ ಕೊಟ್ಟದ್ದೂ ನನಗೆ ಸಂತೋಷವೇ" ಎಂದು ಹೇಳಿದರು. ಈ ಪದಕಗಳ ಬದಲಾವಣೆಯ ಸಂದರ್ಭದಲ್ಲಿ ಗುಬ್ಬಿ ಕಂಪನಿಯ ಮಾಲೀಕರ ಬಗೆಗೆ ಹೊನ್ನಪ್ಪನವರಿಗೆ ಬೇಸರವುಂಟಾಗಲು ಆರಂಭವಾಯಿತು. ಮತ್ತೆ ಗುಬ್ಬಿ ಕಂಪನಿ ಸೇಲಂಗೆ ಹೊರಟಿತು. ಅಲ್ಲಿ ಕ್ಯಾಂಪ್ ಪ್ರಾರಂಭವಾದ ಎರಡು ವಾರದಲ್ಲಿಯೇ ಸೇಲಂ ಹಾಗೂ ಅದರ ಪಕ್ಕದ ಊರಿನಲ್ಲಿ ಆಹ್ವಾನದ ಮೇರೆಗೆ ಎರಡು ಸಂಗೀತ ಕಛೇರಿ ನಡೆಸಿಕೊಡಲು ಹೊನ್ನಪ್ಪನವರು

ಒಪ್ಪಿಕೊಂಡಿದ್ದರು. ಸಂಗೀತ ಕಛೇರಿಗೆ ಹೋಗುವ ವಿಷಯ ತಿಳಿದ ವೀರಣ್ಣನವರು ಸಂಗೀತ ಕಛೇರಿಗೆ ಹೋಗದಂತೆ ಹೊನ್ನಪ್ಪನವರಿಗೆ ತೊಂದರೆ ಕೊಡಲು ಆರಂಭಿಸಿದರು. ಅದಕ್ಕೆ ಹಿಂಜರಿಯದೆ ಹೊನ್ನಪ್ಪನವರು "ಹಿಂದೆಯೇ ನೀವು ಹೇಳಿದ್ದಿರಿ, 'ಸಂಗೀತ ಕಛೇರಿಗಳಿಗೆ ಹೋಗಲು ಅಭ್ಯಂತರವೇನೂ ಇಲ್ಲ' ಅಂತ. ಅದನ್ನು ಮರೆತು ನನಗೇಕೆ ಈ ರೀತಿ ತೊಂದರೆ ಕೊಡುತ್ತಿದ್ದೀರಿ. ನೀವು ಇದೇ ರೀತಿ ಸಂಗೀತ ಕಛೇರಿಗೆ ಹೋಗದಂತೆ ಅಡಚಣೆ ಮಾಡುವುದನ್ನು ಮುಂದುವರಿಸಿದ್ದಾದರೆ ನಾನು ಈ ಕ್ಯಾಂಪಿನಿಂದಲೇ ಗುಬ್ಬಿ ಕಂಪನಿ ಬಿಟ್ಟು ಬಿಡುತ್ತೇನೆ" ಎಂದು ಹೇಳಿದರು. ಮಾತಿಗೆ ಮಾತು ಬೆಳೆಯುತ್ತಾ ಹೋಗಿ ಉಭಯತ್ರರಲ್ಲಿ ಸ್ವಲ್ಪ ವಿರಸದ ವಾತಾವರಣ ಉಂಟಾಯಿತು. ಈ ಘಟನೆ ಜರುಗಿದ ವೇಳೆಗಾಗಲೇ ಹೊನ್ನಪ್ಪನವರು ಗುಬ್ಬಿ ಕಂಪನಿ ಸೇರಿ ಸುಮಾರು ಆರು ತಿಂಗಳಾಗಿತ್ತು. ಸೇಲಂನಲ್ಲಿ ಎರಡು ತಿಂಗಳ ಕ್ಯಾಂಪು ಮುಗಿಯುವುದರೊಳಗೆ ಅಲ್ಲಿಯ ಅಭಿಮಾನಿ ಬಳಗದಿಂದ ಎರಡು ಬಂಗಾರದ ಪದಕಗಳು ಹೊನ್ನಪ್ಪನವರಿಗೆ ದೊರಕಿದವು. ಸಹಜವಾಗಿ ದೊರಕಿದ ಈ ಬಹುಮಾನವನ್ನು ತಪ್ಪಿಸಲಿಕ್ಕೆ ಅಥವಾ ಅದರ ಬದಲಿಗೆ ಬೆಳ್ಳಿ ಪದಕವನ್ನು ಕೊಡಿಸಲಿಕ್ಕೆ ಹಿಂದಿನಂತೆ ಯಾರಿಗೂ ಸಾಧ್ಯವಾಗಲಿಲ್ಲ! ಹೊನ್ನಪ್ಪನವರ ಅಭಿಮಾನಿಗಳ ಸಂಖ್ಯೆ ಹಾಗೂ ಸಂಗೀತಾಭಿಮಾನಿಗಳ ಸಂಖ್ಯೆ ಅಪಾರವಾಗಿದ್ದುದರಿಂದ ಆ ಎರಡು ಬಂಗಾರದ ಪದಕಗಳು ಹೊನ್ನಪ್ಪನವರಿಗೇ ದೊರಕ್ಕಿದ್ದು ಸಂತೋಷದ ವಿಷಯ.

## ಗುಬ್ಬಿ ಕಂಪನಿಯಿಂದ ಹೊರಗೆ

ಸೇಲಂನಲ್ಲಿ ಎರಡು ತಿಂಗಳ ಕ್ಯಾಂಪ್ ಮುಗಿಸಿ ಕೊನೇ ದಿನ 'ರಾಮಾಯಣ' ನಾಟಕ ನಡೆಯುತ್ತಿತ್ತು. ಆಗ ಹೊನ್ನಪ್ಪನವರು ವೀರಣ್ಣನವರಿಗೆ "ನಾನು ಈ ಕ್ಯಾಂಪಿನಿಂದ ಮುಂದೆ ಬರುವುದಿಲ್ಲ ದಯವಿಟ್ಟು ಕ್ಷಮಿಸಿ" ಎಂದು ಹೇಳಿದರು. ನಾಟಕ ನಡೆಯುತ್ತಿರುವಾಗಲೇ ವೀರಣ್ಣನವರು "ಆ ರೀತಿಯೆಲ್ಲ ಮಾಡಬಾರದು" ಎಂದು ನಾನಾ ರೀತಿಯಲ್ಲಿ ಸಮಾಧಾನ ಪಡಿಸುತ್ತಾ "ಈಗ ನೀವು ಬೇಸರ ಪಟ್ಟುಕೊಳ್ಳಬೇಡಿ ಬೆಳಗ್ಗೆ ಮಾತನಾಡೋಣ" ಎಂದು ಹೇಳಿ ನಾಟಕ ಮುಗಿಸಿಕೊಂಡು ಮತ್ತೆ ಸೇಲಂನಲ್ಲಿದ್ದ ಗುಬ್ಬಿ ಕಂಪನಿಯ ಕ್ಯಾಂಪ್ ಧರ್ಮಪುರಿಗೆ ಹೊರಟಿತು. ಅಲ್ಲಿ ಕೇವಲ ಮೂರು ವಾರಗಳ ಕಾಲ ಮಾತ್ರ ಕ್ಯಾಂಪ್ ಮಾಡಲಾಗಿತ್ತು. ಅಲ್ಲಿ ನಾಟಕ ಪ್ರಾರಂಭದಲ್ಲಿಯೇ ಹೊನ್ನಪ್ಪನವರು ಸೇಲಂನಲ್ಲಿನ ಶ್ರೀಮಂತರೊಬ್ಬರ ಮನೆಯ ಮದುವೆಯಲ್ಲಿನ ಸಂಗೀತ ಕಛೇರಿಗೆ ಒಪ್ಪಿಕೊಂಡರು.

ಇದನ್ನು ವೀರಣ್ಣನವರು ಗಮನಿಸಿದ್ದರು. ನಾಟಕ ಜರುಗಿದ ಥಿಯೇಟರಿನಿಂದ ಮನೆಗೆ ಬರುವಾಗ್ಗೆ ವೀರಣ್ಣನವರ ಜೊತೆಯಲ್ಲಿ ಹೊನ್ನಪ್ಪ ಭಾಗವತರು,

ಮುರಾರಾಚಾರಿಯವರು ಬರುತ್ತಿದ್ದರು. ಆಗ ರಾತ್ರಿ ಮೂರು ಗಂಟೆಯ ಸಮಯ. ಧರ್ಮಪುರಿ ಬಜಾರಿನ ಸರ್ಕಲ್ಲಿನಲ್ಲಿ ಬರುತ್ತಿರುವಾಗ ವೀರಣ್ಣನವರು "ಭಾಗವತರೇ ನೀವು ಸಂಗೀತ ಕಛೇರಿಗೆ ಹೋಗುವ ವಿಷಯ ತಿಳಿಯಿತು. ಅದೇ ದಿನ ನೀವು 'ಕೃಷ್ಣಲೀಲಾ' ನಾಟಕದಲ್ಲಿ ನಾರದನ ಪಾತ್ರ ವಹಿಸಬೇಕಾಗುತ್ತದೆ. ಆದ್ದರಿಂದ ನೀವು ಸಂಗೀತ ಕಛೇರಿಗೆ ಹೋಗಲು ಖಂಡಿತ ಸಾಧ್ಯವಾಗುವುದಿಲ್ಲ" ಎಂದು ಹೇಳಿದರು. ಸುಮಾರು ಹೊತ್ತು ಇಬ್ಬರಿಗೂ ಇದರ ಬಗೆಗೆ ಚರ್ಚೆ ನಡೆಯಿತು.

ಕೊನೆಯದಾಗಿ ಹೊನ್ನಪ್ಪನವರು "ನಾನು ಈಗಾಗಲೇ ಒಪ್ಪಿಕೊಂಡಿರುವ ಸಂಗೀತ ಕಛೇರಿಯನ್ನು ಬಿಡಲು ಸಾಧ್ಯವಿಲ್ಲ. ಅದೂ ಬಹುದೊಡ್ಡ ಶ್ರೀಮಂತರ ಮನೆ. ನಾನು ಮಾತಿಗೆ ತಪ್ಪಿ ಅವಮಾನ ಹೊಂದಲು ಸಾಧ್ಯವೇ ಇಲ್ಲ. ಒಪ್ಪಿಕೊಂಡಿರುವ ಸಂಗೀತ ಕಛೇರಿಗೆ ಹೋಗಲೇಬೇಕಾಗಿದೆ. ನೀವು, ಬೇರೆ ಯಾರಿಂದಾದರೂ ಆ ಪಾತ್ರವನ್ನು ಮಾಡಿಸಿಕೊಳ್ಳಿ" ಎಂದರು.

ತಕ್ಷಣ ವೀರಣ್ಣನವರು ಕೋಪಗೊಂಡಯ "ಈ ರೀತಿ ಹಠಮಾಡಿದರೆ ಪರಸ್ಪರ ತೊಂದರೆಗಳನ್ನು ಅನುಭವಿಸಬೇಕಾಗಿ ಬರಬಹುದು. ಆದ್ದರಿಂದ ಯಾವುದಕ್ಕೂ ಯೋಚನೆ ಮಾಡಿ" ಎಂದರು. ಈ ಮಾತುಗಳಿಂದ ಹೊನ್ನಪ್ಪನವರಿಗೂ ಬೇಸರವಾಗಿ 'ಅಂಥ ಸಂದರ್ಭ ಬರಲಿ' ಎಂದು ಉತ್ತರಿಸಿದರು. ಇಷ್ಟೆಲ್ಲ ಮಾತಿನ ಚಕಮಕಿ ಜರುಗಿದ ತರುವಾಯ ವೀರಣ್ಣನವರು "ಹೊನ್ನಪ್ಪ ಭಾಗವತರಿಂದ ಹೇಗಾದರೂ ಮಾಡಿ ನಾಟಕದಲ್ಲಿ ಪಾತ್ರ ಮಾಡಿಸಲೇಬೇಕು" ಎಂದು ಅಲ್ಲಿದ್ದ ಕಂಪನಿಯ ವ್ಯವಸ್ಥಾಪಕರಿಗೆ ತಿಳಿಸಿ ಬೆಂಗಳೂರಿಗೆ ಹೊರಟರು.

ಮರುದಿವಸ ಬೆಳಗ್ಗೆ ಹೊನ್ನಪ್ಪ ಭಾಗವತರು ಹೋಟೆಲಿನಲ್ಲಿ ಫಲಹಾರ ಮಾಡುತ್ತಿದ್ದರು. ಆ ವೇಳೆಗೆ ಕಂಪನಿ ಮನೆಗೆ ಅಲ್ಲಿಯ ಹೆಸರಾಂತ ವಕೀಲರಾದ ಸುಂದರಮಯ್ಯರ್ ಅವರು, ತಮ್ಮ ಜೊತೆಯಲ್ಲಿ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರನ್ನು ಕರೆದುಕೊಂಡು ಬಂದರು. ಕೂಡಲೇ ಪೊಲೀಸ್ ಇನ್ಸ್‌ಪೆಕ್ಟರ್ "ಹೊನ್ನಪ್ಪ ಅನ್ನುವವರು ಯಾರು? ಅಂತ ಕೇಳಿದರು. ಕಂಪನಿ ಮನೆಯಲ್ಲಿ ಇದ್ದವರೆಲ್ಲ "ಹೊನ್ನಪ್ಪನವರು ಏನು ತಪ್ಪು ಮಾಡಿದ್ದಾರೋ ಏನು ಕತೆಯೋ?" ಎಂದು ಗಾಬರಿಗೊಂಡರು. ಅಲ್ಲಿದ್ದ ಇಬ್ಬರು ಹುಡುಗರು ದಿಢೀರನೆ, ಹೊನ್ನಪ್ಪ ಭಾಗವತರು ತಿಂಡಿ ತಿನ್ನುತ್ತ ಕುಳಿತ್ತಿದ್ದ ಹೋಟೆಲಿಗೆ ಬಂದು "ಯಾರೋ ಒಬ್ಬರು, ಜೊತೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರನ್ನು ಕರೆದುಕೊಂಡು ಕಂಪನಿ ಮನೆಗೆ ಬಂದು ನಿಮ್ಮನ್ನು ಕೇಳುತ್ತಿದ್ದಾರೆ, ಏನೇನೋ ಮಾತಾಡುತ್ತಿದ್ದಾರೆ" ಎಂದು ತುಂಬ ಗಾಬರಿಯಿಂದಲೇ ಸುದ್ದಿ ತಿಳಿಸಿದರು. ಆಗ ಹೊನ್ನಪ್ಪನವರಿಗೆ ಅರ್ಥವಾಯಿತು, 'ಇದು ಮಾಲೀಕರ ಏರ್ಪಾಡು ಇರಬೇಕು' ಎಂದು. ಹೊನ್ನಪ್ಪನವರನ್ನು ಕಂಡಕೂಡಲೇ ವಕೀಲರ

ಮುಖ ಪೆಚ್ಚಾಯಿತು! "ಎನ್ನಯ್ಯ ಹೊನ್ನಪ್ಪ ಭಾಗವತರ್ ನೀದಾನ ?" ಎಂದು ಒಂದು ನಮೂನೆಯ ಗತ್ತಿನಲ್ಲಿಯೇ ಪ್ರಶ್ನಿಸಿದ. ತಕ್ಷಣ ಹೊನ್ನಪ್ಪನವರು "ಆಮಾಯ್ಯ, ಎನ್ನ ಸಮಾಚಾರಂ" ಎಂದು ಆತ ಕೇಳಿದ ಗತ್ತಿನಂತೆಯೇ ಉತ್ತರಿಸಿದರು. ಅಷ್ಟರಲ್ಲಿ ವಕೀಲರು ಆ ಇನ್ಸ್‌ಪೆಕ್ಟರ್‌ಗೆ "ನೀ ಸುಮ್ಮ ಇರಯ್ಯ ಪೇಸಾದೆ, ಇದು ವಿಷಯಂ ವೇರೆ" ಎಂದು ಹೇಳಿ, 'ಭಾಗವತರೇ ನಮ್ಮ ವೀಟಿಕ್ ವಾಂಗೋ ಪೇಸಲಾಂ' ಎಂದು ಹೇಳಿ ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಂಡು ಮನೆಗೆ ಕರೆದುಕೊಂಡು ಹೋದರು. ಮನೆಗೆ ಹೋದ ನಂತರ "ಹೊನ್ನಪ್ಪ ಎಂದರೆ ಯಾರೋ ಅಂತ ತಿಳಿದಿದ್ದೆ. ಇಲ್ಲಿಗೆ ಬಂದು ನಿಮ್ಮ ಮುಖವನ್ನು ನೋಡಿದ ಮೇಲೆ ನನಗೆ ಅರ್ಥವಾಯಿತು. ನೀವು ಸಂಗೀತ ವಿದ್ವಾನ್ ಹೊನ್ನಪ್ಪ ಭಾಗವತರು ಅಂತ."

ಸೇಲಂನಲ್ಲಿ ನೀವು ನಡೆಸಿದ ಒಂದೆರಡು ಸಂಗೀತ ಕಛೇರಿಗಳನ್ನು ಕೇಳಿದ್ದೇನೆ. ಆನಂದ ಪಟ್ಟಿದ್ದೇನೆ. ಈಗ ಸೇಲಂನಲ್ಲಿ ನೀವು ಒಪ್ಪಿಕೊಂಡಿರುವ ಸಂಗೀತ ಕಛೇರಿ ಇದೆ. ನನಗೂ ಅಲ್ಲಿಗೆ ಬರಬೇಕೆಂದು ಮದುವೆಯ ಆಹ್ವಾನ ಪತ್ರ ಕಳಿಸಿದ್ದಾರೆ. ಆ ಆಹ್ವಾನ ಪತ್ರಿಕೆಯಲ್ಲಿ ನಿಮ್ಮ ಹೆಸರು ಅಚ್ಚಾಗಿರುವುದನ್ನು ನಾನು ಗಮನಿಸಿದೆ. ನಾನೂ ಸಹ ಅಲ್ಲಿಗೆ ಬರುತ್ತಿದ್ದೇನೆ. ದೊಡ್ಡ ಶ್ರೀಮಂತರೊಬ್ಬರ ಮನೆಯ ಸಂಗೀತ ಕಛೇರಿಯಾದ್ದರಿಂದ ಅಲ್ಲಿಗೆ ಹೊನ್ನಪ್ಪ ಭಾಗವತರು ಹೋಗಲೇಬೇಕಾಗುತ್ತದೆ. ಮದುವೆ ಮನೆಯವರು ನನಗೂ ಬಹಳ ಆತ್ಮೀಯರಾದವರು. ಆದಕಾರಣ ಆ ಸಂಗೀತ ಕಛೇರಿಯನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಬೇರೆ ಯಾರಿಂದಾದರೂ ಆ ಪಾತ್ರವನ್ನು ಮಾಡಿಸಿಕೊಳ್ಳಿ ಎಂದು ಕಂಪನಿಯ ಮ್ಯಾನೇಜರ್‌ಗೆ ಹೇಳಿ ಕಳಿಸುತ್ತೇನೆ. ನಿಮಗೆ ಸಂಗೀತ ಕ್ಷೇತ್ರದಲ್ಲಿ ನಮ್ಮ ತಮಿಳುನಾಡಿನಲ್ಲಿ ಉತ್ತಮ ಕೀರ್ತಿ ಇದೆ. ನೀವು ನಾಟಕ ಕಂಪೆನಿಗೆ ಸೇರಬಾರದಾಗಿತ್ತು. ವೀರಣ್ಣನವರೂ ಸಹ "ಹೊನ್ನಪ್ಪ ಭಾಗವತರು ಇನ್ನು ಎರಡು ಕ್ಯಾಂಪಿನಲ್ಲಿದ್ದರೆ ಸಾಕು. ಅವರ ಅಗ್ರಿಮೆಂಟನ್ನು ಕ್ಯಾನ್ಸಲ್ ಮಾಡಿಕೊಂಡು ಕಳಿಸಿಬಿಡುತ್ತೇನೆ. ಅದುವರೆಗೂ ಅವರು ನಮಗೆ ತೊಂದರೆಕೊಡದೆ ನನ್ನ ಜೊತೆಯಲ್ಲಿರಲಿ" ಎಂದು ಹೇಳಿದ್ದಾರೆ. "ಅವರ ಮಾತಿಗೆ ನಾನೇ ಸಾಕ್ಷಿಯಾಗಿರುವೆ. ಅವರು ತಿಳಿಸಿರುವಂತೆ ಇನ್ನು ಎರಡು ಕ್ಯಾಂಪಿನಲ್ಲಿದ್ದು ನೀವು ಸ್ವಲ್ಪ ಸಹಕರಿಸುತ್ತ ಸಂತೋಷವಾಗಿಯೇ ಕಂಪನಿಯ ಸಂಪರ್ಕವನ್ನು ಬಿಡುವುದು ಒಳ್ಳೆಯದೆಂದೇ ನನ್ನ ಸಲಹೆ. ಇದನ್ನು ಚೆನ್ನಾಗಿ ಯೋಚನೆ ಮಾಡಿ." ಈ ರೀತಿಯಾಗಿ ವಕೀಲರು ಹೊನ್ನಪ್ಪ ಭಾಗವತರಿಗೆ ಸಮಾಧಾನ ಹೇಳಿದರು. ಹೊನ್ನಪ್ಪನವರು ವಕೀಲರಿಗೆ 'ತಾವು ದೊಡ್ಡವರು ತಮ್ಮ ಸಲಹೆಯಂತೆ ನಡೆದುಕೊಳ್ಳುವೆ' ಎಂದು ಹೇಳಿದರು.

ನಂತರ ಗುಬ್ಬಿ ಕಂಪನಿಯ ಕ್ಯಾಂಪ್ ಕೆ.ಜಿ.ಎಫ್.ನ ರಾಬರ್ಟ್‌ಸನ್ ಪೇಟೆಗೆ ಬಂದಿತು. ಅಲ್ಲಿಂದಾಚೆಗೆ ಹೊನ್ನಪ್ಪನವರು ಮತ್ತು ವೀರಣ್ಣನವರಲ್ಲಿ ಮೊದಲಿದ್ದ ಆತ್ಮೀಯತೆ ಇಲ್ಲದಂತಾಯಿತು. ಎರಡು ತಿಂಗಳ ಕಾಲ ಕೆ.ಜಿ.ಎಫ್.ನಲ್ಲಿದ್ದ ಕ್ಯಾಂಪ್ ಬೆಂಗಳೂರಿಗೆ ಬರುವವರೆಗೂ ಹೊನ್ನಪ್ಪನವರು ವೀರಣ್ಣನವರಿಂದ ಸಂಭಾವನೆಯನ್ನೇ ಪಡೆದಿರಲಿಲ್ಲವಂತೆ. ಬೆಂಗಳೂರಿನಲ್ಲಿ ಎರಡು ತಿಂಗಳು ಕ್ಯಾಂಪ್ ಮುಗಿಯುವ ವೇಳೆಗಾಗಲೇ ದಾವಣಗೆರೆಯಲ್ಲಿ ಕ್ಯಾಂಪ್ ಮಾಡಲು ಏರ್ಪಾಡು ಮಾಡಿ, ಹೊನ್ನಪ್ಪ ಭಾಗವತರ ಹೆಸರನ್ನು ಪ್ರಚಾರಗೊಳಿಸಿದ್ದರು.

ಬೆಂಗಳೂರು ಕ್ಯಾಂಪ್ ಮುಗಿಯುವ ನಾಲ್ಕು ದಿವಸ ಮುಂಚೆ ಹೊನ್ನಪ್ಪನವರು ವೀರಣ್ಣನವರನ್ನು ಭೇಟಿ ಮಾಡಿ "ಮುಂದೆ ನಾನು ಕ್ಯಾಂಪಿಗೆ ಬರುವುದಿಲ್ಲ. ಧರ್ಮಪುರಿಯಲ್ಲಿ ವಕೀಲರು ಹೇಳಿದಂತೆ ನನ್ನ ಅಗ್ರಿಮೆಂಟನ್ನು ಕ್ಯಾನ್ಸಲ್ ಮಾಡಿಕೊಳ್ಳಿ. ಯಾವುದೇ ಕಾರಣಕ್ಕೂ ಮುಂದಿನ ಕ್ಯಾಂಪಿಗೆ ನಾನು ಬರುವುದಿಲ್ಲ' ಎಂದು ಹೇಳಿದರು. ವೀರಣ್ಣನವರು ಅದಕ್ಕೆ ಒಪ್ಪದೆ, "ದಾವಣಗೆರೆಯಲ್ಲಿ ನಿಮ್ಮ ಹೆಸರನ್ನು ಈಗಾಗಲೇ ಪ್ರಸಿದ್ಧಿಗೊಳಿಸಲಾಗಿದೆ. ನಾಟಕಗಳಲ್ಲಿ ನೀವು ಸೊಗಸಾಗಿ ಪಾತ್ರ ಮಾಡುತ್ತೀರೆಂದು ಪ್ರಚಾರ ಮಾಡಲಾಗಿದೆ. ಇಷ್ಟೆಲ್ಲ ಸಿದ್ಧತೆಗಳು ಜರುಗಿದ ನಂತರವೂ ನೀವು ಬರುವುದಿಲ್ಲ ಎಂದು ಹೇಳಿದರೆ ನನ್ನ ಮರ್ಯಾದೆ ಹೋದಂತೆಯೇ ಅಲ್ಲವೆ ? ನೀವು ಪದೇ ಪದೇ ತಕರಾರು ಮಾಡುವುದು ಸರಿಯಲ್ಲ ! ನನಗೆ ನೀವ್ಯಾಕೆ ಈ ರೀತಿ ಹೇಳುತ್ತಿದ್ದೀರೆಂಬುದು ನನಗೆ ತಿಳಿಯದ ವಿಷಯವಲ್ಲ ! ಚಲನಚಿತ್ರದಲ್ಲಿ ಪಾತ್ರವಹಿಸಲು ಹೋಗುತ್ತಿದ್ದೀರಿ ಎಂಬುದು ನನಗೆ ಗೊತ್ತಿದೆ. ನನ್ನಲ್ಲಿ ನಿಮ್ಮ ಅಗ್ರಿಮೆಂಟ್ ಇರುವಾಗ ಅಷ್ಟು ಸುಲಭವಾಗಿ ನೀವು ಹೋಗಲು ಸಾಧ್ಯವಾಗುವುದಿಲ್ಲ. ದಾವಣಗೆರೆ ಕ್ಯಾಂಪ್ ಮುಗಿಸಿ, ಅರಸೀಕೆರೆ, ತುಮಕೂರು ಈ ಎರಡೂ ಕ್ಯಾಂಪ್ ಮುಗಿಸಿ ಅದು ಮುಗಿಯುವಷ್ಟರಲ್ಲಿ ನೀವು ಮೂರು ತಿಂಗಳ ಮಟ್ಟಿಗೆ ಬೇಕಾದರೆ ರಜೆಯನ್ನು ಬರೆದುಕೊಳ್ಳಿ. ನಾನು ಅದಕ್ಕೆ ಅನುಮತಿ ಕೊಡುತ್ತೇನೆ. ಮತ್ತೆ ಬಂದು ಕಂಪನಿಯನ್ನು ಸೇರಿ" ಎಂದು ಹೇಳಿದರು. ಈ ಮಾತುಗಳಿಂದ ಇಬ್ಬರಿಗೂ ಸ್ವಲ್ಪ ಖಾರವಾಗಿಯೇ ಮಾತುಕತೆ ಜರುಗಿತು. ಕೋಪದಿಂದಲೇ ಹೊನ್ನಪ್ಪನವರು ತಮ್ಮ ಮನೆಗೆ ಹೊರಟುಬಂದರು.

ಮಾರನೇ ದಿನವೇ ವೀರಣ್ಣನವರು ಹೊನ್ನಪ್ಪನವರಿಗೆ ವಕೀಲರಿಂದ 'ನೋಟೀಸ್' ಕೊಡಿಸಿದರು ! ಹೊನ್ನಪ್ಪ ಭಾಗವತರು ಅದನ್ನು ತೆಗೆದುಕೊಂಡು ಯಾವ ಅಸಮಾಧಾನವನ್ನೂ ತೋರಿಸಿಕೊಳ್ಳದೆ ಆ ದಿನವೂ ಸಹ ಮಾಮೂಲಿನಂತೆ ಹೋಗಿ ನಾಟಕದಲ್ಲಿ ಪಾತ್ರಾಭಿನಯ ಮಾಡಿದರು.

ಹೊನ್ನಪ್ಪನವರಿಗೆ ವೀರಣ್ಣನವರು 'ಲಾಯರ್ ನೋಟೀಸ್' ಕಳಿಸಿದ್ದ ವಿಷಯ ಗುಬ್ಬಿ ಕಂಪನಿಯಲ್ಲಿದ್ದ ಎಲ್ಲ ಕಲಾವಿದರುಗಳಿಗೂ ತಿಳಿದುಬಿಟ್ಟಿತ್ತು. ಅದರಲ್ಲಿದ್ದ ಕೆಲವರು ಹೊನ್ನಪ್ಪನವರ ಆತ್ಮೀಯರು 'ಯಜಮಾನರು ನಿಮಗೆ ಲಾಯರ್ ನೋಟೀಸ್ ಕೊಟ್ಟಿದ್ದಾರಂತೆ ನಿಜವಾ ? ಅಷ್ಟಾದರೂ ನಾಟಕದಲ್ಲಿ ಪಾತ್ರ ವಹಿಸುತ್ತಿದ್ದೀರಲ್ಲಾ' ಎಂದು ಕೇಳಿದರು. ಅದಕ್ಕೆ ಹೊನ್ನಪ್ಪನವರು "ಧರ್ಮಪುರಿಯಲ್ಲಿ ವಕೀಲರ ಸಮ್ಮುಖದಲ್ಲಿಯೇ ಇನ್ನೂ ಎರಡು ಕ್ಯಾಂಪಿನಲ್ಲಿ ಇರುವುದಾಗಿ ಹೇಳಿದ್ದೇನೆ. ಅದು ಮುಗಿದ ಮೇಲೆ ಬಿಟ್ಟು ಕೊಡುತ್ತೇವೆಂದು ತಿಳಿಸಿದ್ದಾರೆ. ಆ ಮಾತಿನಂತೆ ಬೆಂಗಳೂರು ಕ್ಯಾಂಪು ಮುಗಿಯುವವರೆಗೂ ನನ್ನ ಕರ್ತವ್ಯ ಮಾಡಬೇಕಾದದ್ದು ನನ್ನ ನಿಷ್ಠೆ ಎಂದು ಭಾವಿಸಿ ಪಾತ್ರವಹಿಸುತ್ತಿರುವೆ ಅಷ್ಟೆ" ಎಂದು ಹೇಳಿದರು.

ಮಾರನೇ ದಿವಸ ವೀರಣ್ಣನವರ ಹತ್ತಿರವೇ ಹೊನ್ನಪ್ಪನವರು ಒಂದು ನಮೂನೆಯ ಲೌಕಿಕ ನಾಟಕವಾಡಿದರು. 'ಏನ್ ಸ್ವಾಮಿ, ನನಗೆ ಲಾಯರ್ ನೋಟೀಸ್ ಕಳಿಸಿದ್ದೀರಲ್ಲ. ಇದು ಸರಿಯೇ' ಎಂದು ಹೊನ್ನಪ್ಪನವರು ಜೋಲುಮುಖ ಮಾಡಿಕೊಂಡು ಕೇಳಿಬಿಟ್ಟರು. ಅದಕ್ಕೆ ವೀರಣ್ಣನವರು 'ನಿಮಗೆ ವ್ಯಾವಹಾರಿಕವಾದ ಅನುಭವ ಸ್ವಲ್ಪವೂ ಇಲ್ಲವಲ್ಲ, ಏನು ಮಾಡುವುದು ! ನೀವು ಮುಂದಿನ ಕ್ಯಾಂಪಿಗೆ ಬರುವುದೇ ಇಲ್ಲ ಎಂದು ಹೇಳಿದ್ದಕ್ಕಾಗಿಯೇ ನಾನು ಲಾಯರ್ ನೋಟೀಸ್ ಕೊಡಿಸಬೇಕಾಯಿತು' ಎಂದು ಹೇಳಿದರು. ಅಲ್ಲದೆ ನಾನು ಹಿಂದೆಯೇ ತಿಳಿಸಿದಂತೆ ಇನ್ನು ಎರಡು ಕ್ಯಾಂಪುಗಳನ್ನು ಮುಗಿಸಿಕೊಂಡು ನೀವು ಹೊರಡಬಹುದು. ಆಗ ನನ್ನದೇನೂ ಅಭ್ಯಂತರವಿರುವುದಿಲ್ಲ, ಎಂದು ಬಹಳವಾಗಿ ವೀರಣ್ಣನವರು ಸಮಾಧಾನ ಹೇಳಿದರು. ಅವರ ಮಾತುಗಳಿಗೆ ಸಂಪೂರ್ಣವಾಗಿ ಒಪ್ಪಿಗೆ ಸೂಚಿಸಿದಂತೆಯೇ ನಟಿಸಿದ ಹೊನ್ನಪ್ಪನವರು 'ಸರಿ ನಿಮ್ಮಿಷ್ಟ ಸ್ವಾಮಿ. ಇನ್ನೇನು ಕ್ಯಾಂಪಿನಲ್ಲಿ ಇದೇ ಕೊನೇ ನಾಟಕ. ಸೇಲಂ ಕ್ಯಾಂಪಿನಿಂದಲೂ ನಾನು ನಿಮ್ಮಿಂದ ಸಂಭಾವನೆಯನ್ನೇ ತೆಗೆದುಕೊಂಡಿಲ್ಲ. ಮನೆಯಲ್ಲಿ ಇಷ್ಟು ದಿನ ದುಡಿದದ್ದೆಲ್ಲ ಏನಾಯಿತು ಎಂದು ಕೇಳುತ್ತಿದ್ದಾರೆ. 'ನನ್ನ ಲೆಕ್ಕವನ್ನು ನೋಡಿ ಸ್ವಲ್ಪ ಹಣ ಕೊಡಿ' ಎಂದು ಕೇಳಿದರು. ವೀರಣ್ಣನವರು 'ಅದಿರಿಲಿ, ಈಗ ಎಷ್ಟು ಬೇಕಾಗಿತ್ತು ?' ಎಂದು ಕೇಳಿ ತಮ್ಮ ಜೇಬುಗಳನ್ನು ತಡಕಿ ಮುನ್ನೂರು ರೂಪಾಯಿ ಕೊಟ್ಟರು. ಅದನ್ನು ಸ್ವೀಕರಿಸಿದ ಹೊನ್ನಪ್ಪನವರು ವೀರಣ್ಣನವರ ಜೊತೆಯಲ್ಲೇ ಮಾತನಾಡಿಕೊಂಡು ಗಾಂಧಿನಗರದಲ್ಲಿನ ಅವರ ಮನೆಯವರೆಗೂ ಜೊತೆಯಲ್ಲೇ ನಡೆದು ಬಂದು 'ಸ್ವಾಮಿ ನನ್ನನ್ನು ಕ್ಷಮಿಸಿ ! ನೀವು ದೊಡ್ಡವರು. ನಾನು ಇಂದು ರಾತ್ರಿ

ಚಲನಚಿತ್ರದಲ್ಲಿ ಪಾತ್ರವಹಿಸಲು ಮದ್ರಾಸಿಗೆ ಹೊರಡುತ್ತಿರುವೆ' ಎಂದು ಹೇಳಿದರು. ತಕ್ಷಣ ವೀರಣ್ಣನವರು ಗಾಬರಿಯಿಂದ 'ಹಾಂ ! ಏನಂದಿರಿ?' ಎಂದರು. 'ಹೀಗೆಲ್ಲ ಮಾಡುವುದರಿಂದ ನೀವು ಕೋರ್ಟಿಗೆ ಬರಬೇಕಾಗುತ್ತದೆ. ಅದರಿಂದ ತೊಂದರೆ ಪಡಬೇಕಾಗುತ್ತದೆ. ಯೋಚನೆ ಮಾಡಿ' ಎಂದರು ವೀರಣ್ಣನವರು. ಆಗ ಹೊನ್ನಪ್ಪನವರು, 'ಪರವಾಯಿಲ್ಲ ಸ್ವಾಮಿ, ನಾನು ಯಾಕೆ ನಿಮ್ಮ ಕಂಪನಿಯನ್ನು ಬಿಡುತ್ತಿದ್ದೇನೆ ಎಂಬ ವಿಚಾರವನ್ನು ಅಲ್ಲಿಗೇ ಬಂದು ಕೋರ್ಟಿನ ಕಟಕಟೆಯಲ್ಲೇ ನಿಂತು ಹೇಳಿಬಿಡುತ್ತೇನೆ. ಆಗ ನೀವೂ ಬಹಳ ಪಶ್ಚಾತ್ತಾಪಪಡಬೇಕಾದ ಸಂದರ್ಭ ಒದಗಬಹುದು. ಮುಂದಿನ ವಿಚಾರಗಳಿಗೆ ಕೋರ್ಟಿನಲ್ಲೇ ಸಂಧಿಸೋಣ' ಎಂದು ಹೇಳಿ, ಅದುವರೆಗೂ ತಳ್ಳಿಕೊಂಡೇ ಬರುತ್ತಿದ್ದ ಸೈಕಲ್ಲನ್ನು ಹತ್ತಿಕೊಂಡು ಭಾಗವತರು ಮನೆಗೆ ಬಂದರು.

ಮನೆಯಲ್ಲಿ ಹೊನ್ನಪ್ಪನವರಿಗೆ ಊಟ ಮಾಡುವುದಕ್ಕೂ ನೆಮ್ಮದಿಯಿರಲಿಲ್ಲ. ಮಾನಸಿಕವಾಗಿ ತುಂಬ ನೊಂದಿದ್ದ ಭಾಗವತರು ಮನೆಯಲ್ಲಿ ತಮ್ಮ ತಾಯಿಗಾಗಲೀ, ಅಣ್ಣನಿಗಾಗಲೀ ಅದುವರೆಗೆ ಜರುಗಿದ ವಿಚಾರಗಳನ್ನು ಹೇಳಲಿಲ್ಲ. ಸ್ವಲ್ಪ ಹೊತ್ತು ಹಾಗೇ ಯೋಚನೆ ಮಾಡಿದರು. ಗುಬ್ಬಿ ಕಂಪನಿಯಲ್ಲಿ ನಾಟಕಗಳನ್ನು ಬರೆದು ಪ್ರಸಿದ್ಧರಾಗಿದ್ದ ದಾವಣಗೆರೆಯವರೇ ಆದ ಕೋಲು ಶಾಂತಪ್ಪ ಎಂಬುವವರು ಬೆಂಗಳೂರಿನ ಅರಳೇಪೇಟೆಯಲ್ಲಿ ವಾಸ ಮಾಡುತ್ತಿದ್ದರು. ಭಾಗವತರ ವಿಷಯದಲ್ಲಿ ಕೋಲು ಶಾಂತಪ್ಪನವರಿಗೆ ಬಹಳ ಅಭಿಮಾನವಿತ್ತು. ಮನೆಯಿಂದ ಹೊರಟ ಹೊನ್ನಪ್ಪನವರು ನೇರವಾಗಿ ಕೋಲು ಶಾಂತಪ್ಪನವರ ಬಳಿಗೆ ಹೋಗಿ, ವೀರಣ್ಣನವರಿಗೂ ತಮಗೂ ನಡೆದ ವಿಚಾರಗಳನ್ನು ಸಂಪೂರ್ಣವಾಗಿ ವಿವರಿಸಿದರು. ಹೊನ್ನಪ್ಪನವರು ಕೊಟ್ಟ ವಿವರಣೆ ಈ ರೀತಿ ಇದೆ :

**ಮುರಿದು ಬಿದ್ದ ಒಪ್ಪಂದದ ಕರಾರು**

"ನಾನು ಇಂದು ರಾತ್ರಿ ಚಲನಚಿತ್ರದಲ್ಲಿ ಪಾತ್ರವಹಿಸಲು ಮದ್ರಾಸಿಗೆ ಹೋಗುತ್ತಿದ್ದೇನೆ. ಅಲ್ಲಿ ನಾನು ವಾಸ ಮಾಡಲಿರುವ ಪ್ರದೇಶದ ವಿಳಾಸವನ್ನು ನಿಮಗೆ ಕೊಟ್ಟಿರುತ್ತೇನೆ. ಯಾಕೆಂದರೆ ದಾವಣಗೆರೆಯಲ್ಲಿ ನಾಟಕ ಆರಂಭವಾದ ದಿವಸವೇ ಅದರಲ್ಲಿ ನಾನು ಇಲ್ಲದ್ದನ್ನು ನೋಡಿ, ಜನರು ನಿರಾಶೆಯಿಂದ ಗಲಾಟೆ ಮಾಡುವುದು ಸಹಜ. ಆದ್ದರಿಂದ ಎರಡನೇ ದಿವಸವೇ ವೀರಣ್ಣನವರು ಬೆಂಗಳೂರಿಗೆ ಹೊರಟು ಬರಬಹುದು. ಬಂದವರೇ ನಮ್ಮ ಮನೆಗೂ ಬೇರೆಯವರ ಮೂಲಕ ಹೇಳಿ ಕಳಿಸಲೂಬಹುದು. ನಮ್ಮ ಮನೆಯವರಿಗೂ ಹೇಳಿದ್ದೇನೆ. ಏನಂತ ಅಂದರೆ, "ನಿಮ್ಮ ಕಂಪನಿ ಸೇರಿ ನಮ್ಮ ಮಗನ ಪರಿಸ್ಥಿತಿ ಹೀಗಾಯಿತು! ನಿನ್ನೆಯಿಂದಲೂ ಅವನು ಮನೆಯಲ್ಲಿ ಇಲ್ಲ. ಎರಡು ದಿವಸಗಳಿಂದಲೂ ಅವನು

ಎಲ್ಲಿಗೆ ಹೋದ ಎಂಬುದೇ ತಿಳಿಯುತ್ತಿಲ್ಲ" ವೀರಣ್ಣನವರು ಯಾರನ್ನಾದರೂ ಕಳಿಸಿದಾಗ ಈ ರೀತಿ ಹೇಳಿ ಬಿಡಿ ಎಂದು ತಿಳಿಸಿ ಬಂದಿರುವೆ. ಅದೇ ರೀತಿಯಲ್ಲಿ ಮನೆಯಲ್ಲಿ ಹೇಳಿ ಬಿಡುವರು. ಅದರ ಬಗೆಗೆ ದಾವಣಗೆರೆಯಿಂದ ವೀರಣ್ಣನವರು ಬಂದಾಗ ನಿಮ್ಮಲ್ಲಿ ಆತ್ಮೀಯವಾಗಿ ಮಾತನಾಡುತ್ತಿರುವ ನನ್ನ ಈ ವಿಚಾರದ ಬಗೆಗೆ ನೀವು ಯಾವ ರೀತಿಯಲ್ಲಿ ಮಾತನಾಡಬೇಕೋ ಆ ರೀತಿಯಲ್ಲಿ ಮಾತನಾಡಿ. ಒಂದು ವಾರ ಮಾತ್ರ ನಾನು ದಾವಣಗೆರೆ ಕ್ಯಾಂಪಿನಲ್ಲಿದ್ದು ನಾಟಕದಲ್ಲಿ ಪಾತ್ರ ವಹಿಸುತ್ತೇನೆ. ಆದರೆ ಅವರಿಗೂ ನಮಗೂ ಆಗಿರುವ ಅಗ್ರಿಮೆಂಟನ್ನು ಕ್ಯಾನ್ಸಲ್ ಮಾಡಬೇಕು. ಇದಕ್ಕೆ ಮಾಲೀಕರು ಒಪ್ಪುವುದಾದರೆ ಕೊಟ್ಟಿರುವ ನನ್ನ ವಿಳಾಸಕ್ಕೆ ಟೆಲಿಗ್ರಾಂ ಮಾಡಿ, ಒಡನೆಯೇ ಬಂದು ಸೇರುವೆ" ಈ ರೀತಿಯಾಗಿ ಹೊನ್ನಪ್ಪನವರು ಕೋಲು ಶಾಂತಪ್ಪನವರಿಗೆ ತಿಳಿಸಿದರು. ದಾವಣಗೆರೆಯಲ್ಲಿ ಮೊದಲ ದಿವಸ ನಾಟಕ ಆರಂಭವಾಯಿತು. ನಾಟಕದ ಅರ್ಧಭಾಗ ಮುಗಿಯುತ್ತ ಬಂತು. ಹಿಂದೆಯೇ ವೀರಣ್ಣನವರು ಪ್ರಚಾರ ಮಾಡಿಸಿದಂತೆ ಜನರು ನಿರೀಕ್ಷಿಸಿದ ಭಾಗವತರ ಪಾತ್ರ ರಂಗಸ್ಥಳದ ಮೇಲೆ ಬರಲೇ ಇಲ್ಲ ! ನಿರಾಸೆಗೊಂಡ ಜನ ಸುಮ್ಮನಿರಲಿಲ್ಲ. ಅವರ ಗಲಾಟೆ ಶುರುವಾಯಿತು. ಅವರು ವಿಧಿಯಿಲ್ಲದೆ ಕಂಪನಿಯ ಮಾಲೀಕರು ರಂಗಸ್ಥಳದ ಮೇಲೆ ಬಂದು "ಮಹಾಜನಗಳಲ್ಲಿ ವಿನಂತಿ. ಕ್ಷಮಿಸಿ, ಹೊನ್ನಪ್ಪ ಭಾಗವತರು ಅನಾರೋಗ್ಯದ ನಿಮಿತ್ತ ನಾಟಕದಲ್ಲಿ ಪಾತ್ರವಹಿಸುವುದಕ್ಕೆ ಬರಲು ಸಾಧ್ಯವಾಗಲಿಲ್ಲ. ದಯವಿಟ್ಟು ನನಗೆ ಕೇವಲ ಎರಡು ದಿವಸಗಳ ಮಟ್ಟಿಗೆ ಅವಕಾಶ ಕೊಡಿ ನಾನೇ ಹೋಗಿ ಕರೆದುಕೊಂಡು ಬರುತ್ತೇನೆ. ಮಾರನೇ ದಿವಸವೇ ಭಾಗವತರಿಂದ ಪಾತ್ರ ಮಾಡಿಸಿ ನಿಮಗೆ ಸಂತೋಷವಾಗುವಂತೆ ಮಾಡುತ್ತೇನೆ. ದಯವಿಟ್ಟು ಗಲಾಟೆ ಮಾಡದೆ ಕುಳಿತುಕೊಂಡು ನಾಟಕ ನೋಡುವುದರ ಮೂಲಕ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ" ಎಂದು ಕೈಮುಗಿದು ಹೇಳಿದರು. ಅದೇ ದಿನವೇ ವೀರಣ್ಣನವರು ಬೆಂಗಳೂರಿಗೆ ಹೊರಟು ಬಂದರು.

ಹೊನ್ನಪ್ಪನವರ ವಿಷಯ ತಿಳಿಯುವವರೆಗೂ ವೀರಣ್ಣನವರಿಗೆ ನಿದ್ದೆಯೇ ಬರಲಿಲ್ಲ. ಹೊನ್ನಪ್ಪ ಭಾಗವತರನ್ನು ನೋಡಿಕೊಂಡು ಬರಲು ಅವರ ಮನೆಗೆ ಒಬ್ಬರನ್ನು ಕಳಿಸಿಕೊಟ್ಟರು. ವೀರಣ್ಣನವರ ಕಡೆಯಿಂದ ಬಂದಿದ್ದ ವ್ಯಕ್ತಿಗೆ ಮನೆಯಲ್ಲಿ ಈ ಮುಂಚೆ ಹೊನ್ನಪ್ಪನವರು ತಿಳಿಸಿ ಹೋದಂತೆಯೇ ಅವರ ಮನೆಯವರೂ ಸೊಗಸಾದ ನಾಟಕವಾಡಿದರು. ಹೊನ್ನಪ್ಪನವರ ತಾಯಿ "ನೀವು ಕೊಟ್ಟ ತೊಂದರೆಗಳಿಂದ ಬೇಸರಿಸಿಕೊಂಡಿರುವ ನಮ್ಮ ಮಗ ಎಲ್ಲಿ ಹೋದ ಎಂಬುದೇ ನಮಗೆ ಗೊತ್ತಾಗುತ್ತಿಲ್ಲ. ನಿಮ್ಮ ಕಂಪನಿಗೆ ನಮ್ಮ ಹುಡುಗನನ್ನು ಸೇರಿಸಿದ್ದೇ ತಪ್ಪಾಯಿತು" ಎಂದು ತುಂಬ ನೋವಾಗಿರುವವರಂತೆ ನಟಿಸುತ್ತಾ ಹೇಳಿದರು. ಆಳಿನ ಮೂಲಕ ಈ ವಿಷಯ ವೀರಣ್ಣನವರಿಗೂ ತಿಳಿಯಿತು. ಅನಂತರ

ವೀರಣ್ಣನವರು ತಲೆಯ ಮೇಲೆ ಕೈ ಹೊತ್ತು ಮನೆಯಲ್ಲಿ ಕುಳಿತು ಚಿಂತಿಸುತ್ತಿರುವಾಗ ವೀರಣ್ಣನವರ ಮನೆಗೆ ಕೋಲು ಶಾಂತಪ್ಪನವರ ಪ್ರವೇಶವಾಯಿತು. "ಒಳ್ಳೇ ಸಮಯಕ್ಕೇ ಬಂದಿರಿ, ಕುಳಿತುಕೊಳ್ಳಿ" ಎಂದರು ವೀರಣ್ಣನವರು. ಆಗ ಕೋಲು ಶಾಂತಪ್ಪನವರು "ಯಾವಾಗ ಬಂದಿರಿ ದಾವಣಗೆರೆಯಿಂದ, ನೆನ್ನೆ ತಾನೆ ನಾಟಕ ಆರಂಭವಾಗಿರಬೇಕಲ್ಲವೆ ? ಏನೋ ಚಿಂತಿಸುವವರಂತೆ ಕಾಣುತ್ತಿದ್ದೀರಿ ? ಏನು ಸಮಾಚಾರ" ಇತ್ಯಾದಿಯಾಗಿ ತುಂಬ 'ಗಾಬರಿಯಿಂದ'ಲೇ ಕೇಳಿದರು. ತುಂಬ ಸಂದಿಗ್ಧ ಪರಿಸ್ಥಿತಿಯಲ್ಲಿದ್ದ ವೀರಣ್ಣನವರು "ಅಯ್ಯೋ ! ಏನು ಹೇಳ್ಲಿ ! ನೋಡಿ, ಹೊನ್ನಪ್ಪ ಭಾಗವತರು ನಮ್ಮ ಕ್ಯಾಂಪಿಗೇ ಬರಲಿಲ್ಲ ! ನನ್ನ ತಲೆಯ ಮೇಲೆ ಬಂಡೆ ಎಳೆದುಬಿಟ್ಟರು. ದಾವಣಗೆರೆಯಲ್ಲಿ ಅರ್ಧ ನಾಟಕ ಜರುಗಿದ ಕೂಡಲೇ ಹೊನ್ನಪ್ಪನವರ ಪಾತ್ರ ಬಾರದೇ ಇದ್ದುದನ್ನು ಗಮನಿಸಿದ ಅಪಾರ ಸಂಖ್ಯೆಯ ಜನ ವಿಪರೀತವಾಗಿ ಗದ್ದಲವನ್ನುಂಟು ಮಾಡಿಬಿಟ್ಟರು. ಹೊನ್ನಪ್ಪನವರನ್ನು ಹೇಗಾದರೂ ಮಾಡಿ ಕರೆದುಕೊಂಡು ಬರುತ್ತೇನೆ. ಎರಡು ದಿನಗಳ ಮಟ್ಟಿಗೆ ಅವಕಾಶ ಕೊಡಿ ಎಂದು ಮಹಾಜನಗಳಲ್ಲಿ ವಿನಂತಿಸಿಕೊಂಡಿದ್ದಕ್ಕೆ ಜನ ತಾಳ್ಮೆ ತಂದುಕೊಂಡರು. ಅದಕ್ಕೋಸ್ಕರ ಅವರ ಮನೆಗೂ ಹೇಳಿ ಕಳಿಸಿದ್ದೆ. 'ಎಲ್ಲಿಗೋದರೋ ಗೊತ್ತಿಲ್ಲ' ಎಂಬ ಉತ್ತರ ಅವರ ಮನೆಯಿಂದ ಬಂದಿತು. "ಈಗ ನನಗೇನೂ ದಿಕ್ಕೇ ತೋಚುತ್ತಿಲ್ಲ, ಅದೇ ಯೋಚನೆಯಲ್ಲಿದ್ದೇನೆ. ಈ ಸಂದರ್ಭದಲ್ಲಿ ನೀವು ಬಂದದ್ದು ಒಳ್ಳೆಯದೇ ಆಯಿತು" ಎಂದರು. ವಾಸ್ತವ ಸಂಗತಿಯನ್ನು ತಿಳಿದಿದ್ದ ಕೋಲು ಶಾಂತಪ್ಪನವರು ಕೊಂಚ ನಗುಮುಖದಿಂದಲೇ "ನೋಡಿ, ಯಜಮಾನರೇ ನಾನು ಒಂದು ವಿಷಯ ಹೇಳುತ್ತೇನೆ. ತಾವು ತಪ್ಪು ತಿಳಿಯಬಾರದು. ನಿಮ್ಮ ಬೆದರಿಕೆಯ ಮಾತುಗಳಿಗೆ ಹೊನ್ನಪ್ಪ ಭಾಗವತರು ಹೆದರುವವರಲ್ಲ. ಹಿಂದೆ ನಿಮಗೂ ಅವರಿಗೂ ಧರ್ಮಪುರಿ ಕ್ಯಾಂಪಿನಲ್ಲಿ ಘರ್ಷಣೆ ಜರುಗಿತ್ತಂತೆ. ಆ ಎಲ್ಲ ವಿವರಗಳನ್ನು ಹೊನ್ನಪ್ಪ ಭಾಗವತರೇ ನನಗೆ ತಿಳಿಸಿದ್ದಾರೆ. ನಿಮ್ಮ ಯಾವುದೇ ರೀತಿಯ ಬೆದರಿಕೆಗೆ ಅವರು ಬಗ್ಗುವವರಲ್ಲ. ಇನ್ನು ಒಂದು ವಿಶೇಷ ಸುದ್ದಿಯನ್ನು ನಿಮಗೆ ತಿಳಿಸುತ್ತಿರುವೆ. ಅದೇನೆಂದರೆ : ಹೊನ್ನಪ್ಪ ಭಾಗವತರು ಈಗಾಗಲೇ ಅಗ್ರಿಮೆಂಟ್ ಮಾಡಿಕೊಂಡು ಚಲನಚಿತ್ರದಲ್ಲಿ ಅಭಿನಯಿಸಲು ಹೊರಟುಬಿಟ್ಟಿದ್ದಾರೆ. ಈಗ ನಾನು ಹೇಳಿದಂತೆ ನೀವು ಕೇಳುವುದಾದರೆ, ಹೊನ್ನಪ್ಪ ಭಾಗವತರು ಪುನಃ ಬಂದು ನಿಮ್ಮ ಕಂಪನಿಯ ನಾಟಕಗಳಲ್ಲಿ ಪಾತ್ರ ಮಾಡಬೇಕಾದರೆ ಮೊದಲು ಅವರಿಗೂ ನಿಮಗೂ ಆಗಿರುವ ಅಗ್ರಿಮೆಂಟನ್ನು ರದ್ದುಗೊಳಿಸಬೇಕು. ಇನ್ನೂ ಒಂದು ನಿಮಗೂ ಸ್ಪಷ್ಟಪಡಿಬೇಕು. ಅದೇನೆಂದರೆ : ಭಾಗವತರು ಒಂದು ವಾರ ಮಾತ್ರ ದಾವಣಗೆರೆ ಕ್ಯಾಂಪಿನ ನಾಟಕಗಳಲ್ಲಿ ಪಾತ್ರ ಮಾಡುತ್ತಾರೆ. ಈ ಷರತ್ತಿಗೆ ನೀವು ಒಪ್ಪುವುದಾದರೆ ಈಗಲೇ

ನಾನು ಹೊನ್ನಪ್ಪ ಭಾಗವತರಿಗೆ ಟೆಲಿಗ್ರಾಂ ಮಾಡಿ ಕರೆಸುವೆ. ನಾಳೆ ಬೆಳಗ್ಗೆಯೇ ಅವರು ಇಲ್ಲಿರುವಂತೆ ಏರ್ಪಾಡು ಮಾಡುವೆ. ನಾನು ತಿಳಿಸಿದ ಷರತ್ತುಗಳಿಗೆ ನೀವು ಒಪ್ಪದೇ ಹೋದರೆ ನಿಮ್ಮಿಷ್ಟ" ಎಂದು ಹೇಳಿದರು. ಕೋಲು ಶಾಂತಪ್ಪನವರು ಈ ರೀತಿ ಹೇಳಿದ್ದೇ ತಡ ಗಾಬರಿಗೊಂಡು "ಓಹೋ ! ವಿಷಯ ಹೀಗೋ ! ನಿಮಗೆ ಎಲ್ಲಾ ವಿಷಯ ಗೊತ್ತಿದೆ ಅಂತ ಆಯ್ತು ! ಹಾಗಾದರೆ ಸದ್ಯ ಕರೆಸಿರಿ ಏನು ಬೇಕಾದರೂ ಮಾಡುತ್ತೇನೆ" ಎಂದು ಬಿಟ್ಟರು ವೀರಣ್ಣನವರು. ಅಲ್ಲದೆ, ಭಾವೋದ್ರೇಕಗೊಂಡವರಾಗಿ ವೀರಣ್ಣನವರು "ಸದ್ಯದ ಪರಿಸ್ಥಿತಿಯಲ್ಲಿ ಹೊನ್ನಪ್ಪ ಭಾಗವತರು ದಾವಣಗೆರೆಗೆ ಬಂದು ಅಲ್ಲಿಯ ಜನಗಳಿಗೆ ಮುಖ ತೋರಿಸಿದರೆ ಸಾಕು, ನನ್ನ ಮರ್ಯಾದೆ ಉಳಿಸಿದಂತಾಗುತ್ತದೆ" ಎಂದು ಹೇಳಿದರು. ಯಾವಾಗ ವೀರಣ್ಣನವರು ಆ ರೀತಿ ಹೇಳಿದರೊ ಇಲ್ಲವೋ ಕೋಲು ಶಾಂತಪ್ಪನವರು ಕೂಡಲೆ ಹೊನ್ನಪ್ಪ ಭಾಗವತರ ವಿಳಾಸಕ್ಕೆ ಟೆಲಿಗ್ರಾಂ ಕಳಿಸಿ ಬಿಟ್ಟರು.

ಟೆಲಿಗ್ರಾಂ ದೊರಕಿದ ಮಾರನೇ ದಿನವೇ ಹೊನ್ನಪ್ಪ ಭಾಗವತರು ಬೆಂಗಳೂರಿಗೆ ಬಂದೇ ಬಿಟ್ಟರು. ಕೋಲುಶಾಂತಪ್ಪನವರನ್ನು ಹೊನ್ನಪ್ಪನವರು ಕಂಡರು. ಇಬ್ಬರೂ ಜೊತೆಗೂಡಿ ವೀರಣ್ಣನವರ ಮನೆಗೆ ಹೋದರು. ನಾಟಕ ಕಂಪನಿಯಲ್ಲಿ ಪಾತ್ರ ವಹಿಸುವುದರ ಬಗೆಗೆ ಮಾತುಕತೆ ಜರುಗಿದವು. ಕೊನೆಗೆ ವೀರಣ್ಣನವರು "ನಮ್ಮ ಕ್ಯಾಂಪಿನಲ್ಲಿ ಕನಿಷ್ಠ ಒಂದು ತಿಂಗಳಾದರೂ ಇರಬೇಕು" ಎಂದು ಹೊನ್ನಪ್ಪನವರಿಗೆ ತಿಳಿಸಿದರು. ಅದಕ್ಕೆ ಹೊನ್ನಪ್ಪನವರು "ಸಾಧ್ಯವೇ ಇಲ್ಲ, ಎಂಟು ದಿವಸದ ಮೇಲೆ ಇರಲಿಕ್ಕಾಗುವುದಿಲ್ಲ" ಎಂದು ಖಡಾಖಂಡಿತವಾಗಿ ಹೇಳಿ ಬಿಟ್ಟರು ! ಎಷ್ಟು ಹೊತ್ತಾದರೂ ಇಬ್ಬರ ಮಾತುಕತೆಗಳು ಒಂದು ನಿರ್ಧಾರಕ್ಕೆ ಬಾರದೇ ಇದ್ದುದನ್ನು ಗಮನಿಸಿದ ಕೋಲು ಶಾಂತಪ್ಪನವರು "ಹದಿನೈದು ದಿವಸಗಳ ಮಟ್ಟಿಗೆ ಕಂಪನಿಯಲ್ಲಿ ಹೊನ್ನಪ್ಪನವರು ಇರುತ್ತಾರೆ" ಎಂದು ಘೋಷಿಸಿಬಿಟ್ಟರು. ಕೋಲು ಶಾಂತಪ್ಪನವರ ಮಾತಿಗೆ ಗೌರವ ಕೊಟ್ಟು ಹೊನ್ನಪ್ಪನವರು ಒಪ್ಪಲೇಬೇಕಾಯಿತು, "ಹೊನ್ನಪ್ಪನವರ ಒಪ್ಪಂದದ ಪತ್ರ ಕೊಡಿ. ಅದನ್ನು ರದ್ದುಪಡಿಸೋಣ" ಎಂದು ವೀರಣ್ಣನವರನ್ನು ಕೇಳಿದರು. ಕೋಲು ಶಾಂತಪ್ಪನವರು ಈ ರೀತಿ ಹೇಳಿದ ಕೂಡಲೆ ವೀರಣ್ಣನವರು ಒಳಗೆ ಹೋದರು. 'ಹುಡುಕಾಟದ ನಾಟಕವಾಡಿ' ಬಂದು "ಒಪ್ಪಂದದ ಪತ್ರ ಕಂಪನಿ ಮನೆಯಲ್ಲಿ ಎಲ್ಲೋ ಇರಬೇಕು. ಅಲ್ಲಿಗೇ ಹೋಗಿ ಎಲ್ಲವನ್ನು ಮಾತನಾಡೋಣ" ಎಂದು ಹೇಳಿದರು. ವೀರಣ್ಣನವರ ಉದಾಸೀನ ಮನೋಭಾವದ ಉತ್ತರವನ್ನು ಕೇಳಿದ ಕೋಲು ಶಾಂತಪ್ಪನವರು "ನೀವು ಹೇಳಿದ ಮಾತಿಗೆ ಹೊನ್ನಪ್ಪ ಭಾಗವತರು ಒಪ್ಪುವುದಿಲ್ಲ. ನನ್ನ ಸಮ್ಮುಖದಲ್ಲಿಯೇ ಅದೂ ಈಗಲೇ ಇತ್ಯರ್ಥವಾಗಬೇಕು ಎಂದು ಹೇಳಿದರು. ಆ ರೀತಿ ಹೇಳಿದ್ದಲ್ಲದೆ, "ಒಂದು ಪೆನ್ನು, ಬಿಳಿ ಹಾಳೆ ಕೊಡಿ" ಎಂದು ಕೇಳಿ

ಪಡೆದ ಕೋಲು ಶಾಂತಪ್ಪನವರೇ ಒಂದು ಒಪ್ಪಂದದ ಕ್ಯಾನ್ಸಲ್ ಪತ್ರವನ್ನು ಬರೆದುಬಿಟ್ಟರು. ಆ ಪತ್ರ ಈ ರೀತಿ ಇತ್ತು. "ಭಾಗವತರಿಗೂ ನಮ್ಮ ಕಂಪನಿಗೂ ಹಿಂದೆ ಆದ ಒಪ್ಪಂದ ಪತ್ರವು ಇಂದಿಗೆ ರದ್ದಾಗಿ ದಾವಣಗೆರೆ ಕ್ಯಾಂಪಿನಲ್ಲಿ ಹದಿನೈದು ದಿವಸಗಳು ಮಾತ್ರ ಪಾತ್ರ ವಹಿಸಿ, ನೀವು ಚಲನಚಿತ್ರದಲ್ಲಿ ಪಾತ್ರ ವಹಿಸಲು ಹೋಗಲು ನಾನು ಒಪ್ಪಿರುತ್ತೇನೆ. ಅನಂತರ ನಿಮಗೂ–ನನಗೂ ಯಾವ ವಿಧವಾದ ಕರಾರು ಸಂಬಂಧವೂ ಇರುವುದಿಲ್ಲ" ಹೀಗೆ ಬರೆದು ಇದಕ್ಕೆ ಸಹಿ ಮಾಡಿಸಿದರು. ಸಾಕ್ಷಿಯಾಗಿ ಕೋಲುಶಾಂತಪ್ಪನವರೇ ಸಹಿ ಮಾಡಿದರು. ವೀರಣ್ಣನವರು ಸಹಿ ಮಾಡಿದ್ದ 'ಒಪ್ಪಂದದ ಕ್ಯಾನ್ಸಲ್ ಪತ್ರ'ದ ಪ್ರತಿಯೊಂದನ್ನು ಹೊನ್ನಪ್ಪ ಭಾಗವತರಿಗೆ ಕೊಟ್ಟರು. ಈ ಪ್ರಸಂಗ ಜರುಗಿದ ತರುವಾಯ ವೀರಣ್ಣನವರು ಮತ್ತು ಹೊನ್ನಪ್ಪ ಭಾಗವತರು ಜೊತೆಯಲ್ಲಿಯೇ ಆ ರಾತ್ರಿಯೇ ದಾವಣಗೆರೆಗೆ ಹೋದರು. ತಾನು ಕೊಟ್ಟ ಮಾತಿನಂತೆ ಹದಿನಾಲ್ಕು ದಿವಸ ಜರುಗಿದ ನಾಟಕಗಳಲ್ಲಿ ಪ್ರತಿದಿನವೂ ಹೊನ್ನಪ್ಪ ಭಾಗವತರು ಪಾತ್ರ ವಹಿಸಿದರು.

ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದ ಸಂದರ್ಭದಲ್ಲಿ ಹೊನ್ನಪ್ಪ ಭಾಗವತರು ಕಂಪನಿ ಮನೆಯಲ್ಲಿ ಉಳಿದುಕೊಂಡಿರಲಿಲ್ಲ. ದುರ್ಗದ ನಾರಾಯಣಪ್ಪನವರ ಹೋಟೆಲಿನಲ್ಲಿ ಇಳಿದುಕೊಂಡಿದ್ದರು. ಹದಿನಾಲ್ಕನೇ ದಿನದ ರಾತ್ರಿ ನಾಟಕ ಮುಗಿಸಿಕೊಂಡು ತಾನು ಉಳಿದುಕೊಂಡಿದ್ದ ಹೋಟೆಲ್‌ಗೆ ಹೊನ್ನಪ್ಪನವರು ಬಂದರು. ಅಲ್ಲಿಂದ ಬರುವಾಗಲೇ ಅವರಿಗೆ ವಿಪರೀತ ಜ್ವರ ಕಾಡಿಸುತ್ತಿದ್ದವು. ರಾತ್ರಿಯೆಲ್ಲಾ ಜ್ವರದ ಹಾವಳಿಯಿಂದ ನಿದ್ರೆಬಾರದೆ ನರಳುತ್ತಿದ್ದರು. ಹೋಟೆಲ್ ಪ್ರೊಪ್ರೈಟರ್ ನಾರಾಯಣಪ್ಪನವರು ಹೊನ್ನಪ್ಪ ಭಾಗವತರ ಬಗೆಗೆ ಅಪಾರವಾದ ಅಭಿಮಾನವುಳ್ಳವರಾಗಿದ್ದರು. ಬೆಳಗ್ಗೆ ಎದ್ದು ಸ್ನಾನಕ್ಕೆ ಬರಬೇಕಾಗಿದ್ದ ಹೊನ್ನಪ್ಪ ಭಾಗವತರು ಆ ದಿನ ಕಾಣಲಿಲ್ಲ. ಪ್ರೊಪ್ರೈಟರ್ ನಾರಾಯಣಪ್ಪನವರಿಗೆ "ಇದೇನು! ಪ್ರತಿನಿತ್ಯ ಬೆಳಗ್ಗೆ ಎದ್ದ ಕೂಡಲೆ ಸ್ನಾನಕ್ಕೆ ಹೋಗುತ್ತಿದ್ದ ಹೊನ್ನಪ್ಪ ಭಾಗವತರು ಈ ದಿನ ಬರಲೇ ಇಲ್ಲವಲ್ಲ ಎಂದು ಆಶ್ಚರ್ಯಗೊಂಡರು. ಅವರು ಅಲ್ಲಿಗೇ ಸುಮ್ಮನಾಗಲಿಲ್ಲ. ಒಬ್ಬ ಹುಡುಗನನ್ನು ಕರೆದು, "ಹೊನ್ನಪ್ಪ ಭಾಗವತರು ಎದ್ದಿದ್ದಾರೇನು ನೋಡು, ಇನ್ನೂ ಸ್ನಾನಕ್ಕೇ ಬರಲಿಲ್ಲ" ಎಂದು ಹೇಳಿ ಕಳಿಸಿದರು. ನಾರಾಯಣಪ್ಪನವರ ಆದೇಶದಂತೆ ಹುಡುಗ ಹೊನ್ನಪ್ಪ ಭಾಗವತರಿದ್ದ ಕೊಠಡಿಯ ಬಳಿಗೆ ಬಂದ. ಬಾಗಿಲು ತಟ್ಟಿದ, ಕೊನೆಗೆ ಜೋರಾಗಿ ಕೂಗಿದ. ಓಹೋ ! ಯಾರೋ ಬಾಗಿಲ ಬಳಿಗೆ ಬಂದು ಕೂಗುತ್ತಿದ್ದಾರೆಂದು ತಿಳಿದ ಹೊನ್ನಪ್ಪ ಭಾಗವತರು "ಎದ್ದು ಕದ ತೆಗೆಯೋಣ" ಎಂದು ಪ್ರಯತ್ನಿಸುತ್ತಿದ್ದರು. ಆದರೆ,

ಅಸಹಾಯಕತೆಯಿಂದಾಗಿ ಅವರಿಗೆ ಸಲೀಸಾಗಿ ಎದ್ದು ನಿಲ್ಲುವುದಕ್ಕೇ ಆಗುತ್ತಿರಲಿಲ್ಲ. ಏಳಲಿಕ್ಕೇ ಶಕ್ತಿಯಿಲ್ಲದೆ ಕಷ್ಟಪಡುತ್ತಿದ್ದ ಹೊನ್ನಪ್ಪ ಭಾಗವತರ ಪರಿಸ್ಥಿತಿಯನ್ನು ಕಂಡು ಗಾಬರಿಯಿಂದಲೇ ಹುಡುಗ ಓಡಿಬಿಟ್ಟನು. ನಾರಾಯಣಪ್ಪನವರಿಗೆ ಹೊನ್ನಪ್ಪ ಭಾಗವತರ ಅಸಹಾಯಕ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ. ಒಡನೆಯೇ ನಾರಾಯಣಪ್ಪನವರೇ ಹೊನ್ನಪ್ಪನವರ ಕೊಠಡಿಯ ಬಳಿಗೆ ಬಂದು ಕಿಟಕಿಯ ಮೂಲಕ ಹೊನ್ನಪ್ಪನವರನ್ನು ಕೂಗಿದರು. "ಏನಾಯ್ತು ? ಮೆತ್ತಗೆ ಎದ್ದು ಚಿಲಕವನ್ನು ತೆಗೆಯಿರಿ" ಎಂದು ಹೇಳಿದರು. ಆಗ ಹೊನ್ನಪ್ಪನವರು ತತ್ತರಿಸುತ್ತಲೇ ಎದ್ದು ಚಿಲಕವನ್ನು ತೆಗೆದರು. ನಾರಾಯಣಪ್ಪನವರು ಹೊನ್ನಪ್ಪ ಭಾಗವತರನ್ನು ನೋಡಿ ಬಹಳ ಗಾಬರಿಯಾದರು. ಭಾಗವತರು ದೈಹಿಕವಾಗಿ ಬಳಲಿದವರಂತೆ ಕಂಡರು. ಕೂಡಲೆ ಕಾಫಿಯನ್ನು ತರಿಸಿ, ಕುಡಿಸಿ 'ಸುಧಾರಿಸಿಕೊಳ್ಳಿ' ಎಂದು ಹೇಳಿ ಸಮಾಧಾನಪಡಿಸಿದರು. ಆಗ ಭಾಗವತರು ತಮ್ಮ ಮನೆಯ ವಿಳಾಸವನ್ನು ನಾರಾಯಣಪ್ಪನವರಿಗೆ ಕೊಟ್ಟು "ದಯವಿಟ್ಟು ನಮ್ಮ ಸಹೋದರನಿಗೆ ಇಲ್ಲಿಗೆ ಬರುವಂತೆ ಟೆಲಿಗ್ರಾಂ ಕಳಿಸಿ" ಎಂದು ಕೇಳಿಕೊಂಡರು. ಅದಕ್ಕೆ ಪ್ರೊಪ್ರೈಟರ್ ನಾರಾಯಣಪ್ಪನವರು "ಆ ರೀತಿಯೆಲ್ಲಾ ಟೆಲಿಗ್ರಾಂ ಮಾಡುವುದು ಬೇಡ, ಹಾಗೊಮ್ಮೆ ಟೆಲಿಗ್ರಾಂ ಮಾಡಿದ್ದಾದರೆ ಮನೆಯಲ್ಲಿ ಎಲ್ಲರೂ ಗಾಬರಿಯಾಗುತ್ತಾರೆ. ನಾನೇ ನಿಮ್ಮ ಸಹೋದರನೆಂದು ತಿಳಿದುಕೊಳ್ಳಿ" ಎಂದು ಹೇಳಿದರು. ಬರೀ ಮಾತಿನಲ್ಲಿಯೇ ಕಾಲ ಕಳೆಯದೆ ಪ್ರೊಪ್ರೈಟರ್ ನಾರಾಯಣಪ್ಪ "ಡಾಕ್ಟರನ್ನು ಕರೆದುಕೊಂಡು ಬಾ" ಎಂದು ಒಬ್ಬ ಹುಡುಗನನ್ನು ಕಳಿಸಿಕೊಟ್ಟರು. ಅದೇ ವೇಳೆಗೆ ಸರಿಯಾಗಿ ಗುಬ್ಬಿ ಕಂಪನಿಯ ಆಫೀಸಿನಿಂದ ಕಂಪನಿಯ ಮ್ಯಾನೇಜರ್ ಒಬ್ಬ ಹುಡುಗನ ಕೈಯಲ್ಲಿ ಪತ್ರವೊಂದನ್ನು ಕಳಿಸಿದ್ದರು. "ಇವತ್ತು ನಾಟಕವಿದೆ. ನೀವು ಅರ್ಜುನನ ಪಾತ್ರವನ್ನು ಮಾಡಬೇಕು" ಎಂದು ಆ ಪತ್ರದಲ್ಲಿ ಬರೆದಿತ್ತು. "ಆ ಪತ್ರವನ್ನು ತೋರಿಸಿ ಭಾಗವತರಿಂದ ಸಹಿ ಮಾಡಿಸಿಕೊಂಡು ಬರಬೇಕು" ಎಂದು ಮ್ಯಾನೇಜರ್ ಹೇಳಿದ ಮಾತನ್ನು ಪತ್ರ ತಂದಿದ್ದ ಹುಡುಗ ತಿಳಿಸಿದ. ಆ ಪತ್ರವನ್ನು ನೋಡಿದ ಪ್ರೊಪ್ರೈಟರ್ ನಾರಾಯಣಪ್ಪನವರು "ಯಾರೋ ಹೀಗೆ ಬರೆದು ಕಳಿಸಿದ್ದಾರೆ ? ಅವರಿಗೇನು ಬುದ್ಧಿಗಿದ್ದಿ ಇದೆಯೋ ಇಲ್ಲವೋ ? ಅವರೇನು ಮನುಷ್ಯರೋ ಅಥವಾ... ಇಲ್ಲಿ ಜ್ವರದಿಂದ ಭಾಗವತರು ತುಂಬ ನರಳುತ್ತಿದ್ದಾರೆ. ಅವರಿಗೆ ಏಳಲಿಕ್ಕೇ ಆಗುತ್ತಿಲ್ಲ. ಅಷ್ಟೊಂದು ಸುಸ್ತಾಗಿ ಬಿಟ್ಟಿದ್ದಾರೆ. ಸುಭದ್ರಾ ನಾಟಕವಂತೆ! ಅದರಲ್ಲಿ ಪಾತ್ರ ಬೇರೆ ಮಾಡಬೇಕಂತೆ ! ನಾಟಕದವರ ಬುದ್ಧಿಯೇ ಹೀಗೆ ! ಹೋಗೋ..." ಎಂದು ಹುಡುಗನಿಂದ ಪತ್ರವನ್ನು ಕಸಿದುಕೊಂಡು ಗದರಿಸಿ ಆತನನ್ನು ಕಳಿಸಿಬಿಟ್ಟರು.

## ಸಂಭಾವನೆ ಜಟಾಪಟಿ

ಮೂರು ದಿವಸ ಅಲ್ಲಿಯೇ ಸ್ವಲ್ಪ ಚೇತರಿಸಿಕೊಂಡ ನಂತರ ಭಾಗವತರು ಗುಬ್ಬಿ ಕಂಪನಿಯ ಆಫೀಸಿಗೆ ಹೋಗಿ ವೀರಣ್ಣನವರನ್ನು ಕಂಡರು. "ನಾನು ಇವತ್ತು ರಾತ್ರಿಯೇ ಹೊರಡುತ್ತಿರುವೆ. ದಯಮಾಡಿ ನನ್ನ ಲೆಕ್ಕವನ್ನು ನೋಡಿ, ನನಗೆ ಬರಬೇಕಾಗಿರುವ ಬಾಕಿ ಹಣವನ್ನು ಚುಕ್ತ ಮಾಡಿ ಎಂದು ವೀರಣ್ಣನವರನ್ನು ಭಾಗವತರು ಕೇಳಿದರು. ಅದುವರೆಗೂ ಭಾಗವತರ ಸಂಭಾವನೆಯ ಸ್ವಲ್ಪ ಹಣ ವೀರಣ್ಣನವರ ಕಡೆ ಬಾಕಿ ಇತ್ತು. ಇದ್ದಕ್ಕಿದ್ದ ಹಾಗೆ ಅವರು ಬರಬೇಕಾದ ಹಣವನ್ನು ಕೇಳಿದ ಕೂಡಲೇ ಮಾಲೀಕರಿಗೆ ದಿಕ್ಕೇ ತೋಚಲಿಲ್ಲ. ಮ್ಯಾನೇಜರ್ ಅನ್ನು ಕರೆದು, ಭಾಗವತರ ಲೆಕ್ಕ ನೋಡಿ, ಅವರಿಗೆ ಎಷ್ಟು ಹಣ ಕೊಡಬೇಕು ಎಂಬುದನ್ನು ಲೆಕ್ಕ ಹಾಕಿ ಎಂದು ಹೇಳಿದರು. ಮಾಲೀಕರ ಆದೇಶದಂತೆ ಲೆಕ್ಕ ಹಾಕಿದ ಮ್ಯಾನೇಜರ್ "ನಾವು ಭಾಗವತರಿಗೆ ಕೊಡಬೇಕಾದ ಬಾಕಿ ಹಣ... ಇಷ್ಟು. ಆದರೆ, ಇವರು ಸೇಲಂನಲ್ಲಿ ತೆಗೆದುಕೊಂಡಿದ್ದ ಟಿಕೆಟ್ ಬಾಬ್ತು ಸುಮಾರು ಒಂದು ನೂರು ರೂಪಾಯಿಗಳು ಇವರಿಂದ ಬರಬೇಕಾಗುತ್ತದೆ" ಎಂದು ವರದಿ ಒಪ್ಪಿಸಿದರು. ಸೇಲಂನಲ್ಲಿ ನಾಟಕ ನೋಡಲು ತಮ್ಮ ಸ್ನೇಹಿತರಿಗೆ ಹೊನ್ನಪ್ಪನವರು ತಮ್ಮ ಸ್ವಂತ ಲೆಕ್ಕದಲ್ಲಿ ಟಿಕೆಟ್ ತೆಗೆಸಿಕೊಟ್ಟಿದ್ದರು. ಈ ಸಂದರ್ಭದಲ್ಲಿ ಹೊನ್ನಪ್ಪನವರ ಪ್ರಾಮಾಣಿಕತೆ ಎಂಥವರಿಗೂ ಅರ್ಥವಾಗದೇ ಇರಲಾರದು. ಮ್ಯಾನೇಜರ್ ಆ ರೀತಿ ಹೇಳಿದ ಕೂಡಲೆ ವೀರಣ್ಣನವರು "ಸರಿ, ಅದನ್ನು ಹಿಡಿದುಕೊಂಡು ಉಳಿದಿದ್ದನ್ನು ಕೊಟ್ಟು ಬಿಡಿ" ಎಂದರು. ಹೊನ್ನಪ್ಪನವರು ಗುಬ್ಬಿ ಕಂಪನಿಯ ಸಂಪರ್ಕವನ್ನೇ ಕಡಿದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ "ಟಿಕೆಟ್ ಹಣ ಹಿಡಿಯುವುದು ಇವೆಲ್ಲ ಯಾತಕ್ಕೆ, ಅವರಿಗೆ ಕೊಡಬೇಕಾದ್ದನ್ನು ತುಂಬ ಸಂತೋಷವಾಗೇ ಕೊಟ್ಟು ಕಳಿಸಿ" ಎಂದು ಹೇಳುವ ಉದಾರವಿಲ್ಲವಾಯಿತಲ್ಲ ಎಂಬುದು ಹೊನ್ನಪ್ಪನವರ ಪಾಲಿಗೆ ದುಃಖದ ಸಂಗತಿಯಾಗಿ ಬಿಟ್ಟಿತು.

ಮಾಲೀಕರು ಮ್ಯಾನೇಜರಿಗೆ ಉಳಿದದ್ದನ್ನು ಕೊಟ್ಟು ಕಳಿಸಿ ಎಂದು ಹೇಳಿದ ಕೂಡಲೇ ಭಾಗವತರು "ಬಹಳ ಸಂತೋಷ. ಆದರೆ ಒಂದು ವಿಚಾರ : ನಿಮ್ಮ ಆದೇಶದಂತೆ ನಿಮ್ಮ ಮಕ್ಕಳಿಗೆ ಎರಡು ತಿಂಗಳು ನಾನು ಸಂಗೀತ ಪಾಠವನ್ನು ಹೇಳಿಕೊಟ್ಟಿದ್ದೇನೆ. ಅದರ ಸಂಭಾವನೆ ಸುಮಾರು ಇನ್ನೂರು ರೂಪಾಯಿಗಳು ನಿಮ್ಮಿಂದ ನನಗೆ ಬರಬೇಕಾಗುತ್ತದೆ. ಅದರಲ್ಲಿ ನಾನು ನಿಮಗೆ ಹಿಂತಿರುಗಿಸಬೇಕಾಗಿದ್ದ ಟಿಕೆಟ್ ಹಣವನ್ನು ಕಡಿತಗೊಳಿಸಿ ಉಳಿದದ್ದನ್ನು ಹಿಂತಿರುಗಿಸಿ" ಎಂದು ಕೇಳಿದರು. ಈ ರೀತಿ ಭಾಗವತರು ಜವಾಬು ಕೊಟ್ಟಿದ್ದೇ ತಡ ಮಾಲೀಕರ ಮುಖವೇ ಬದಲಾಯಿತು. ಹಾ ! ಎಂದರು. ಅಲ್ಲದೆ,

"ನೀವು ಮಾಡಿದ ಕೇವಲ ಎರಡು ತಿಂಗಳ ಪಾತಕ್ಕೆ ಇನ್ನೂರು ರೂಪಾಯಿ ಕೊಡಬೇಕಾ" ಎಂದು ಉದ್ಗಾರ ಎಳೆದರು. ಅದಕ್ಕೆ ಹೊನ್ನಪ್ಪನವರು "ಹೌದು ಸ್ವಾಮಿ, ನಿಮ್ಮ ಲೆಕ್ಕ ನಿಮ್ಮದು, ನಮ್ಮ ಲೆಕ್ಕ ನಮ್ಮದು" ಎಂದುಬಿಟ್ಟರು. ವೀರಣ್ಣನವರು ಕೂಡಲೇ ಪಕ್ಕದಲ್ಲಿದ್ದ ಮ್ಯಾನೇಜರ್‌ಗೆ "ಹೊನ್ನಪ್ಪನವರಿಗೆ ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟು ಕಳಿಸಿಬಿಡಿ" ಎಂದು ಹೇಳಿ, ಎದ್ದು ಹೊರಟೇ ಬಿಟ್ಟರು ! ಭಾಗವತರ ಮುಖ ನೋಡಿದ ಮ್ಯಾನೇಜರ್ ನರಸಿಂಹಮೂರ್ತಿಯವರು "ಭಾಗವತರೇ ಸಮಾಧಾನವಾಗಿರಿ. ವೀರಣ್ಣನವರು ಇಷ್ಟು ವರ್ಷ ನಮ್ಮ ಕರ್ನಾಟಕದಲ್ಲಿದ್ದ ಕಂಪನಿಯನ್ನು ಸೊಗಸಾಗಿ ನಡೆಸಿದರು. ಇದು ನಿಮಗೂ ತಿಳಿದಿರುವ ಸಂಗ್ತಿಯೇ. ಕರ್ನಾಟಕದಲ್ಲಿ ತುಂಬ ಹೆಸರಾದ ದೊಡ್ಡ ದೊಡ್ಡ ನಟ ನಟಿಯರುಗಳನ್ನೆಲ್ಲ ಕಂಪನಿಯ ನಾಟಕಗಳಲ್ಲಿ ಬಳಸಿಕೊಂಡು ವೀರಣ್ಣನವರು ಒಂದು ರೀತಿಯ ಗೊಂಬೆಯಾಟವನ್ನೇ ಆಡಿಸಿದ್ದರು. ಆದರೆ ಈಗ ನೀವು ಅವರನ್ನೇ ಗೊಂಬೆಯನ್ನಾಗಿ ಆಡಿಸಿಬಿಟ್ಟಿರಿ. ಇದು ಗುಬ್ಬಿ ಕಂಪನಿ ಚರಿತ್ರೆಯಲ್ಲಿ ದಾಖಲೆಯಾಗಿ ಬಿಟ್ಟಿತು. ಅವರ ಮತ್ತು ಅವರ ಕಂಪನಿಯ ವಿಷಯ ಏನಾದರೂ ಆಗಿರಲಿ ದೇವರು ನಿಮಗೆ ಒಳ್ಳೆಯದನ್ನು ಮಾಡಲಿ, ಕರ್ನಾಟಕದಲ್ಲಿ ಅದರಲ್ಲೂ ಚಲನಚಿತ್ರ ಪ್ರಪಂಚದಲ್ಲಿ ನಿಮಗೆ ಉತ್ತಮ ಅವಕಾಶಗಳು ಒದಗಿಬರಲಿ ಎಂದು ಹೇಳಿ ಆಶೀರ್ವಾದ ಮಾಡಿ ಹೊನ್ನಪ್ಪನವರನ್ನು ಕಳಿಸಿಕೊಟ್ಟರು. ಕಂಪನಿಯ ಅಭಿವೃದ್ಧಿಗೆ ಸತತವಾಗಿ ದುಡಿಸಿಕೊಂಡ ಮಾಲೀಕರ ಬಾಯಿಂದ ಇಂಥ ಒಳ್ಳೇ ಮಾತುಗಳು ಬರಬೇಕಾಗಿತ್ತು. ಮಾಲೀಕರಲ್ಲಿ ಇಲ್ಲದ ಸೌಜನ್ಯ ಕಂಪನಿಯ ಮ್ಯಾನೇಜರ್ ನರಸಿಂಹಮೂರ್ತಿಯವರಲ್ಲಿ ಅಪಾರವಾದ ಪ್ರೀತಿ ವಿಶ್ವಾಸ ವ್ಯಕ್ತವಾದದ್ದು ಹೊನ್ನಪ್ಪನವರಿಗೆ ಕೊಂಚ ಸಮಾಧಾನದ ಸಂಗತಿಯಾಯಿತು.

ಇಷ್ಟೆಲ್ಲ ಆದರೂ ವೀರಣ್ಣನವರಿಗೂ ಭಾಗವತರಿಗೂ ಇದುವರೆಗೂ ಜರುಗಿದ ನಾಟಕ ಕಂಪನಿಯ ವ್ಯವಹಾರದಲ್ಲಿ ಮನಸ್ಸಿಗೆ ಸ್ವಲ್ಪ ನೋವಾದರೂ ವೀರಣ್ಣನವರ ಬಗೆಗೆ ಭಾಗವತರಿಗೆ ಅಪಾರವಾದ ಗೌರವವಿದೆ. ಪೂಜ್ಯ ಭಾವನೆ ಇದೆ. ಇದಕ್ಕೆ ಕಾರಣಗಳು ಹಲವಾರು. ಯಾಕೆಂದರೆ, ನಾಟಕದ ದ್ರೋಣಾಚಾರ್ಯ, ನಾಟಕರತ್ನ, ನಾಟಕಮಣಿ, ರಾಷ್ಟ್ರಪ್ರಶಸ್ತಿ ವಿಜೇತ, ನಾಟಕ ಕಲಾ ನಿಪುಣ, ವಿನೋದ ರತ್ನಾಕರ – ಮೊದಲಾದ ಹೆಸರುಗಳಿಂದ ಜನಪ್ರಿಯರಾಗಿದ್ದ ಗುಬ್ಬಿ ವೀರಣ್ಣನವರದು ಕನ್ನಡ ರಂಗಭೂಮಿಯಲ್ಲಿ ಅಪರಿಮಿತವಾದ ಸಾಧನೆ. ಸುಮಾರು 75 ವರ್ಷಗಳಿಗೂ ಹೆಚ್ಚಿನ ಕಾಲ ತಮ್ಮ ಜೀವಿತವನ್ನು ರಂಗಭೂಮಿಗಾಗಿಯೇ ಮುಡುಪಾಗಿಟ್ಟ ಮಹಾನ್ ಚೇತನ. ಗುಬ್ಬಿ ವೀರಣ್ಣನವರು ನಟರಾಗಿ, ಕಂಪನಿಯ ಮಾಲೀಕರಾಗಿ, ನಿರಂತರವಾಗಿ ಕಲಾಸೇವೆಯಲ್ಲಿ ತೊಡಗಿದ ಬದುಕು ರಂಗಭೂಮಿಯ ಚರಿತ್ರೆಯಲ್ಲಿ ಮಹತ್ವಪೂರ್ಣವಾದ ಘಟ್ಟ. ಕನ್ನಡ ನಾಡಿನಲ್ಲಿ

ರಂಗಭೂಮಿಯ ಮೇಲೆ ಅತ್ಯುನ್ನತವಾದ ತಂತ್ರಜ್ಞಾನವನ್ನು ನಿರ್ಮಿಸಿದವರು. ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಜೊತೆಗೆ ಇಂದಿನ ಕಾಲಕ್ಕೆ ತಕ್ಕಂತಹ ಸಾಮಾಜಿಕ ವಸ್ತುವುಳ್ಳ ನಾಟಕಗಳನ್ನು ಹೆಸರಾಂತ ಹಿರಿಯ ಸಾಹಿತಿಗಳಿಂದ ಬರೆಸಿ ರಂಗ ಪ್ರಯೋಗ ಮಾಡಿ ಅತ್ಯುನ್ನತ ಮಟ್ಟದಲ್ಲಿ ಸಾಹಿತ್ಯ ಸೇವೆಯನ್ನು ಮಾಡಿದರು.

ಆ ನಂತರ ಹೊನ್ನಪ್ಪನವರು ಹೋಟೆಲ್‌ಗೆ ಬಂದು, ಪ್ರೊಪ್ರೈಟರ್ ನಾರಾಯಣಪ್ಪನವರಿಗೆ ವಿಚಾರವನ್ನೆಲ್ಲ ತಿಳಿಸಿ "ಸ್ವಾಮಿ ನೀವು ನನಗೆ ಮೂರು ದಿನ ಇಳಿದುಕೊಳ್ಳಲು ತಮ್ಮ ಹೋಟೆಲ್‌ನಲ್ಲಿ ಆಶ್ರಯ ಕೊಟ್ಟದ್ದೀರಿ. ಇದಕ್ಕಾಗಿ ತಮಗೆ ನನ್ನ ಹೃದಯಪೂರ್ವಕವಾದ ಧನ್ಯವಾದಗಳು. ನನ್ನ ಲೆಕ್ಕ ನೋಡಿ, ನಾನು ತಮಗೆ ಎಷ್ಟು ಹಣ ಕೊಡಬೇಕು ಎಂಬುದನ್ನು ತಿಳಿಸಿದರೆ ಕೊಟ್ಟು ಹೊರಟುಬಿಡುವೆ" ಎಂದರು. ಅದಕ್ಕೆ ನಾರಾಯಣಪ್ಪನವರು "ನೀವು ಹದಿನಾಲ್ಕು ದಿವಸ ಗುಬ್ಬಿ ಕಂಪನಿಯ ನಾಟಕಗಳಲ್ಲಿ ಸೊಗಸಾಗಿ ಪಾತ್ರ ಮಾಡಿದಿರಿ. ನಿಮ್ಮ ಪಾತ್ರಾಭಿನಯವನ್ನು ನಾನೂ ಸಹ ನೋಡಿ ಅಪಾರವಾಗಿ ಸಂತೋಷಪಟ್ಟಿರುವೆ, ಇದಕ್ಕಿಂತ ಇನ್ನೇನು ಬೇಕು ನನಗೆ? ಕನ್ನಡ ನಾಡಿನಲ್ಲಿ ನಿಮಗೆ ಇದಕ್ಕಿಂತಲೂ ಹೆಚ್ಚಿನ ಕೀರ್ತಿ ಲಭಿಸುವಂತಾಗಲಿ, ನಾಟಕದಲ್ಲಷ್ಟೇ ಅಲ್ಲ ಸಂಗೀತ ಹಾಗೂ ಚಲನಚಿತ್ರ ಪ್ರಪಂಚದಲ್ಲೂ ನಿಮಗೆ ಅಪಾರವಾದ ಯಶಸ್ಸು ದೊರಕಿ, ನಮ್ಮ ನಾಡಿಗೂ ಕೀರ್ತಿ ಲಭಿಸಲಿ" ಎಂದು ಹೇಳಿ ಆಶೀರ್ವಾದ ಮಾಡಿದರೇ ಹೊರತು ಭಾಗವತರಿಂದ ಹೋಟೆಲ್ ಕೊಠಡಿಯ ಬಾಡಿಗೆಯನ್ನಾಗಲಿ ಊಟದ ವೆಚ್ಚವನ್ನಾಗಲಿ ಪಡೆಯಲಿಲ್ಲ. ನಾರಾಯಣಪ್ಪನವರ ವ್ಯಕ್ತಿತ್ವ ಎಂಥ ಉತ್ತಮವಾದುದು ಎಂಬುದು ಇದರಿಂದ ತಿಳಿಯುತ್ತದೆ.

ಗುಬ್ಬಿ ಕಂಪನಿಯಿಂದ ಬೀಳ್ಕೊಂಡ ರಾತ್ರಿಯೇ ಭಾಗವತರು ದಾವಣಗೆರೆಯಿಂದ ಬೆಂಗಳೂರಿಗೆ ಬಂದರು. ಮರುದಿವಸವೇ ಮದರಾಸಿಗೆ ಹೊರಟರು.

## ನನ್ನ ಗತಿ ಹೀಗಾಯಿತಲ್ಲ !

ಹೊನ್ನಪ್ಪ ಭಾಗವತರು ಮದರಾಸಿಗೆ ಹೋದಾಗ 'ಕೃಷ್ಣಕುಮಾರ' ಎಂಬ ತಮಿಳು ಚಿತ್ರ ನಿರ್ಮಾಣದ ಕೆಲಸ ಮದ್ರಾಸ್ ಪೂಂದವಸಂ ಹೈರೋಡಿನಲ್ಲಿ ಆಗ ನಡೆಯುತ್ತಿದ್ದ ಪ್ರವೀಣ ಸ್ಟುಡಿಯೋದಲ್ಲಿ ಪ್ರಾರಂಭವಾಯಿತು. ಬಿರುಸಿನಿಂದಲೇ ಚಿತ್ರ ಕಾರ್ಯಗಳು ಜರುಗುತ್ತಿರುವಾಗಲೇ ಇಲ್ಲೊಂದು ವಿಚಿತ್ರ ಪ್ರಸಂಗ ಜರುಗಿತು. ಕೃಷ್ಣಕುಮಾರ ಚಿತ್ರಕ್ಕೆ ಸಂಬಂಧಿಸಿದಂತೆ ಭಾಗವತರ ಹಾಡುಗಳು

ಧ್ವನಿಮುದ್ರಣವಾಗಬೇಕಾಗಿದ್ದ ದಿವಸ ನಿರ್ದೇಶಕರ ಸಮೇತ ವಾದ್ಯವೃಂದವರೆಲ್ಲ ಬಂದು ಸೇರಿದರು. ಹಾಡಲು ರಿಹರ್ಸಲ್ ಜರುಗಿತು. ಆಗ ಆ ಸ್ಟುಡಿಯೋ ಮಾಲೀಕರೊಬ್ಬರಾದ ನಾಟುಕೋಟಿ ಚೆಟ್ಟಿಯಾರ್ ಅವರು ಸಂಗೀತ ನಿರ್ದೇಶಕರನ್ನು ಕರೆದು "ಏನಯ್ಯ ಒಂದು ವಾರಕ್ಕೆ ಮುಂಚೆಯೇ ಭಾಗವತರ ಹಾಡುಗಳು ರೆಕಾರ್ಡಿಂಗ್ ಆಗಬೇಕಾಗಿತ್ತು. ಯಾಕಿಷ್ಟು ನಿಧಾನ ಮಾಡಿದಿರಿ?" ಎಂದು ಕೇಳಿದರು. ಅದಕ್ಕೆ ಸಂಗೀತ ನಿರ್ದೇಶಕರು "ಬೇರೆ ಕಡೆ ಒಪ್ಪಿಕೊಂಡಿದ್ದೆವು, ಆದ್ದರಿಂದ ಬರುವುದು ತಡವಾಯಿತು" ಎಂದು ಹೇಳಿದರು. ಅದಕ್ಕೆ ಮಾಲೀಕರು "ನೀವು ಬೇರೆ ಕಡೆ ಎಲ್ಲಾ ಊದಿಬಿಟ್ಟು, ಬಾರಿಸಿಬಿಟ್ಟು ಇಲ್ಲಿಗೆ ಬಂದು ವಾದ್ಯಗಳಿಂದ ಬರೀ ಗಾಳಿ ಬಿಡುತ್ತೀರಾ !" ಎಂದು ಕೇಳಿಬಿಟ್ಟರು. ಇವರ ಈ ಮಾತು ಕೇಳಿ ಸಂಗೀತ ನಿರ್ದೇಶಕರಿಗೂ ವಾದ್ಯವೃಂದದವರಿಗೂ ವಿಪರೀತ ನಗು ಬಂತು. ಸಂಗೀತ ನಿರ್ದೇಶಕರಿಗೆ 'ಇದಕ್ಕೇನು ಉತ್ತರ ಕೊಡಬೇಕೆಂದು' ಆ ತಕ್ಷಣವೇ ತೋಚದಾಯಿತು. ಕೊನೆಗೆ "ಅಯ್ಯೋ ಪಾಪ, ಇವರಿಗೆ ಈ ವಿಷಯವೇ ಗೊತ್ತಿಲ್ಲವಾಗಿದೆಯಲ್ಲ" ಎಂಬ ಕನಿಕರದಿಂದ "ಹಾಗೆಲ್ಲ ಇಲ್ಲ ನಮ್ಮ ವಾದ್ಯವೃಂದದವರು ಬಹಳ ಬಲಶಾಲಿಗಳು. ದಿನಕ್ಕೆ ಎರಡು ಮೂರು ಕಡೆಯಾದರೂ ಊದಿ ವಾದ್ಯಗಳನ್ನು ಬಾರಿಸುತ್ತಾರೆ" ಎಂದು ಹೇಳಿದಾಗ "ಓಹೋ! ಹಾಗಾ! ಹಾಗಿದ್ದರೆ ಸಂತೋಷ" ಎಂದು ಮಾಲೀಕರು ಸಮಾಧಾನ ಪಟ್ಟುಕೊಂಡರು.

ಕ್ಯಾಮೆರಾಗೆ ಫಿಲಂ ಸುತ್ತಿಕೊಳ್ಳಬೇಕಾದರೆ ಡಾರ್ಕ್ ರೂಮಿನಲ್ಲಿ ಹೋಗಿ ಕ್ಯಾಬಿನ್‌ಗೆ ಸುತ್ತಿಕೊಂಡು ಬರಬೇಕಾದ್ದು ಕ್ರಮ. ಪ್ರವೀಣ್ ಸ್ಟುಡಿಯೋದ ಮಾಲೀಕರು ಮತ್ತೊಂದು ದಿವಸ "ಯಾಕೆ, ಇಲ್ಲಿಯೇ ಸುತ್ತಿಕೊಳ್ಳದೆ ಆತ ಎಲ್ಲಿಗೋ ಹೋಗುತ್ತಿದ್ದಾನೆ" ಎಂದು ಕೇಳಿದರು. ಆಗ ಕ್ಯಾಮರಾಮನ್ "ಇಲ್ಲಿ ಬೆಳಕಿನಲ್ಲಿ ಸುತ್ತಿದರೆ ಎಲ್ಲಾ ಫಿಲಂ ಹಾಳಾಗುತ್ತದೆ. ಆಮೇಲೆ ಚಿತ್ರ ತೆಗೆಯಲು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಬೆಳಗ್ಗೆ ಡಾರ್ಕ್‌ರೂಮಿಗೆ ಹೋಗಿ ಕ್ಯಾಬಿನ್‌ನಲ್ಲಿ ಸುತ್ತಿಕೊಂಡು ಬರಬೇಕಾಗುತ್ತದೆ, ಅದಕ್ಕಾಗಿ ಹೋಗಿದ್ದಾರೆ" ಎಂದು ಹೇಳಿದರು. ಹೀಗೆ ಹೇಳಿದರೂ ಸ್ಟುಡಿಯೋ ಮಾಲೀಕರಿಗೆ ಅದು ಅರ್ಥವಾಗದೆ, "ಹೌದು! ಒಂದು ಸಾವಿರ ಅಡಿ ಫಿಲಂ ಇರುತ್ತೆ ಅಂತ ಹೇಳ್ತೀರಲ್ಲಾ ಅದು ಸರಿಯಾಗಿ ಒಂದು ಸಾವಿರ ಅಡಿ ಇರುತ್ತೆ ಅಂತ ಏನ್ ಗ್ಯಾರಂಟಿ?" ಅಂತ ಕೇಳಿದರು. ಆಗ ಕ್ಯಾಮರಾಮನ್ "ಡಬ್ಬದಲ್ಲಿ ಹಾಕಿ ಡಬ್ಬಗಳ ಸಮೇತ ಹಾಕಬೇಕಾದರೆ ಡಾರ್ಕ್ ರೂಮಿಗೇ ಹೋಗಬೇಕು" ಎಂದರು. ಆಗ ಮಾಲೀಕರು "ಇದೆಲ್ಲ ನಾನು ನಂಬೋದಿಲ್ಲ, ಒಂದು ದಿವಸ ಅದನ್ನು ಒಂದು ಸಾವಿರ ಅಡಿ ಇರುತ್ತೋ

ಇಲ್ಲವೋ ಎಂದು ಅಳೆದು ನೋಡಬೇಕು" ಎಂದರು. ಈ ಉತ್ತರದಿಂದ ಅಲ್ಲಿದ್ದವರಿಗೆಲ್ಲ ನಗು ಬಂದಿತು. ನಂತರ ಕ್ಯಾಮೆರಾಮನ್ "ಅಳೆಯಬೇಕಾದರೆ ಫಿಲಂ ನಮ್ಮ ಕೈಗೆ ಸಿಗುವುದಿಲ್ಲ, ನಮ್ಮ ಕೆಲಸಕ್ಕೆ ಉಪಯೋಗವಾಗುವುದಿಲ್ಲ" ಎಂದು ಉತ್ತರಿಸಿದರು. 'ಓಹೋ ಹಾಗಾ!' ಎಂದು ಉದ್ಗಾರ ಎಳೆದ ಮಾಲೀಕರು "ಅಂತೂ ಒಂದು ಸಾವಿರ ಅಡಿ ಇರೋದು ಗ್ಯಾರಂಟಿ ತಾನೆ" ಎಂದು ಕೇಳಿ ತಿಳಿದು ಸಮಾಧಾನ ಮಾಡಿಕೊಂಡು ಆವತ್ತಿನ ಕಾಲದಲ್ಲಿ ಈ ಚಿತ್ರ ನಿರ್ಮಾಣದ ವಿಚಾರ ಏನೇನೂ ಗೊತ್ತಿಲ್ಲದವರೆಲ್ಲ ಸ್ಟುಡಿಯೋ ಇಟ್ಟು ಚಿತ್ರದ ಕಾರ್ಯಗಳನ್ನು ನಡೆಸುತ್ತಿದ್ದರು ಎಂಬುದನ್ನು ತಿಳಿಸುವುದಕ್ಕಾಗಿ ಈ ವಿಚಾರವನ್ನು ಇಲ್ಲಿ ಹೇಳಬೇಕಾಗಿ ಬಂತು ಅಷ್ಟೇ !

ಕಾರಣಾಂತರಗಳಿಂದ 'ಕೃಷ್ಣಕುಮಾರ' ಚಿತ್ರದ ಕೆಲಸ ಸುಮಾರು ಎಂಟು ತಿಂಗಳು ಹಿಡಿಯಿತು. ಈ ಚಿತ್ರದ ಕೆಲಸ ಮುಗಿಯುತ್ತಿರುವ ವೇಳೆಗೆ ಮತ್ತೆ ಒಂದೆರಡು ತಮಿಳು ಚಿತ್ರಗಳಲ್ಲಿ ಪಾತ್ರ ವಹಿಸಲು ಭಾಗವತರಿಗೆ ಆಹ್ವಾನಗಳು ಬಂದವು. ಆಹ್ವಾನಿಸಿದವರ ಜೊತೆಯಲ್ಲಿ ಆ ಬಗೆಗೆ ಮಾತನಾಡುತ್ತಿರುವ ಸಂದರ್ಭದಲ್ಲೇ ಗುಬ್ಬಿ ವೀರಣ್ಣನವರಿಂದ ಭಾಗವತರಿಗೆ ಪತ್ರ ಬಂದಿತು. ಅದರಲ್ಲಿ ವಿಷಯ ಹೀಗಿತ್ತು : "ನೀವು ಅಲ್ಲಿ ನಟಿಸುತ್ತಿರುವ ತಮಿಳು ಚಿತ್ರದ ಕೆಲಸ ಈ ವೇಳೆಗೆ ಮುಗಿಯುತ್ತಿರಬಹುದೆಂದು ಭಾವಿಸಿ ಈ ಪತ್ರ ಬರೆಯುತ್ತಿದ್ದೇನೆ. ಈಗ ನಾವು ಮತ್ತು 'ಬಾಲಾಜಿ ಫಿಲಂ' ಕಂಪನಿಯವರ ಭಾಗತ್ವದಲ್ಲಿ 'ಸುಭದ್ರೆ' ಎಂಬ ಕನ್ನಡ ಚಿತ್ರವನ್ನು ನಿರ್ಮಾಣ ಮಾಡಲು ಏರ್ಪಾಡು ಮಾಡಿದ್ದೇವೆ. ನೀವೇ ಆ ಚಿತ್ರದಲ್ಲಿ ಅರ್ಜುನನ ಪಾತ್ರ ವಹಿಸಬೇಕು. ಜಯಮ್ಮನವರೇ ಸುಭದ್ರ ಪಾತ್ರವನ್ನು ವಹಿಸುತ್ತಾರೆ. ಆದಕಾರಣ, ಅಲ್ಲಿಯ ಕೆಲಸ ಮುಗಿಸಿಕೊಂಡು ನೀವು ಯಾವಾಗ ಬೆಂಗಳೂರಿಗೆ ಬರುತ್ತೀರಿ ಎಂಬ ವಿವರಕ್ಕೆ ಕೂಡಲೆ ನೀವು ಉತ್ತರ ಬರೆಯಿರಿ" ಇತ್ಯಾದಿ.

ಈ ಪತ್ರವನ್ನು ಕಂಡ ಕೂಡಲೆ ಭಾಗವತರು ಒಂದು ರೀತಿಯ ಧರ್ಮಸಂಕಟದ ಸನ್ನಿವೇಶಕ್ಕೆ ಒಳಗಾದರು. ಯಾಕೆಂದರೆ, "ಇದೇ ಸಂದರ್ಭದಲ್ಲಿ ಇಲ್ಲಿ ಬಂದಿರುವ ಎರಡು ತಮಿಳು ಚಿತ್ರಗಳ ಆಹ್ವಾನಕ್ಕೆ ಒಪ್ಪಿಕೊಳ್ಳುವುದಾ ಅಥವಾ ವೀರಣ್ಣನವರ ಕನ್ನಡ ಭಾಷೆಯ ಚಿತ್ರ 'ಸುಭದ್ರ'ದಲ್ಲಿ ಪಾತ್ರ ವಹಿಸಲು ಹೋಗುವುದಾ" ಎಂಬ ವಿಚಾರವು ಹೊನ್ನಪ್ಪನವರ ತಲೆಯಲ್ಲಿ ಕೊರೆಯಲು ಪ್ರಾರಂಭವಾಯಿತು. ಆದರೂ ಈ ಸಂದರ್ಭದಲ್ಲಿ ಅವರ ಬುದ್ಧಿಗೆ ಹೊಳೆದ ವಿಷಯಗಳು ನಮ್ಮ ನಾಡಿನ ಯಾರೂ ಮರೆಯಲಾರದಂಥವು. ಬಹಳ ಯೋಚಿಸಿದ ನಂತರ ಭಾಗವತರು ಈ ನಿರ್ಧಾರಕ್ಕೆ ಬಂದರು : "ನಾನು ಕನ್ನಡನಾಡಿನ

ಮನುಷ್ಯ. ಅದೂ ಅಲ್ಲದೆ ಆಗ ಕನ್ನಡ ಚಿತ್ರಗಳೇ ಬಹಳ ಅಪರೂಪವಾಗಿ ನಿರ್ಮಾಣವಾಗುತ್ತಿದ್ದ ಕಾಲ. ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಯಾರೂ ಮುಂದು ಬರುತ್ತಿರಲಿಲ್ಲ. ಹಾಗೊಮ್ಮೆ ಕನ್ನಡದಲ್ಲಿ ಯಾರಾದರೂ ಚಿತ್ರ ತೆಗೆಯುತ್ತಾರೆಂದರೆ, ಅಂಥ ಚಿತ್ರದಲ್ಲಿ ಯಾರಾದರೂ ಅಭಿನಯಿಸುತ್ತಾರೆಂದರೆ ಜನ ಆಶ್ಚರ್ಯದಿಂದ, ಪ್ರೀತಿಯಿಂದ ಹಾಗೂ ಗೌರವದಿಂದ ಕಾಣುತ್ತಿದ್ದರು. ಹೀಗಿರುವಾಗ ಮುಂದೆ ನನ್ನ ಭವಿಷ್ಯ ಒಳ್ಳೆಯದಾಗಬೇಕಾದರೆ, ಒಳ್ಳೆಯ ಹಾದಿಗೆ ತಿರುಗಬೇಕಾದರೆ ಈ ಕನ್ನಡ ಚಿತ್ರದಲ್ಲಿ ನಾನು ಪಾತ್ರ ವಹಿಸುವುದನ್ನು ಕಳೆದುಕೊಂಡರೆ ಕನ್ನಡನಾಡಿನ ಪ್ರೇಕ್ಷಕರಲ್ಲಿಯೂ ನನಗೆ ಕೆಟ್ಟ ಹೆಸರು ಬರುವುದಲ್ಲದೆ, ನನ್ನ ಆತ್ಮಸಾಕ್ಷಿಗೂ ಈ ವಿಚಾರ ವಿರೋಧ ಎಂಬುದನ್ನೇ ಬಹಳ ಚೆನ್ನಾಗಿ ಯೋಚಿಸಿ ಈಗ ತಮಿಳು ಚಿತ್ರಗಳಿಗೆ ಒಪ್ಪಿಕೊಳ್ಳುವುದು ಬೇಡ, ಕನ್ನಡ ಚಿತ್ರಕ್ಕೆ ಹೋಗಿ ಕೆಲಸ ಮಾಡುವುದು ಒಳ್ಳೆಯದು" ಎಂದು ಒಂದು ತೀರ್ಮಾನಕ್ಕೆ ಬಂದ ಹೊನ್ನಪ್ಪನವರು ವೀರಣ್ಣನವರ ವಿಷಯದಲ್ಲಿ ಹಿಂದೆ ನಡೆದ ಕಹಿ ಪ್ರಸಂಗಗಳನ್ನೆಲ್ಲ ಮರೆತು ಅವರ ಪತ್ರಕ್ಕೆ ಈ ರೀತಿ ಉತ್ತರ ಬರೆದರು : "ನಿಮ್ಮ ಪತ್ರ ಬಂದು ವಿವರ ತಿಳಿಯಿತು. ಇನ್ನು ಸುಮಾರು ಒಂದು ತಿಂಗಳ ಒಳಗಾಗಿ ಇಲ್ಲಿ 'ಕೃಷ್ಣಕುಮಾರ' ಚಿತ್ರದ ಕೆಲಸ ಮುಗಿಯುತ್ತದೆ. ನಿಮ್ಮ ಏರ್ಪಾಡಿನ 'ಸುಭದ್ರ' ಚಿತ್ರವನ್ನು ಎಲ್ಲಿ ನಿರ್ಮಾಣ ಮಾಡುತ್ತೀರಿ? ಸುಮಾರು ಎಷ್ಟು ದಿವಸಗಳಲ್ಲಿ ನಾನು ಬರಬೇಕಾಗುತ್ತದೆ ಎಂಬುದನ್ನು ವಿವರವಾಗಿ ಮುಂದಿನ ಪತ್ರದಲ್ಲಿ ತಿಳಿಸಬೇಕಾಗಿ ಕೋರುತ್ತೇನೆ. ಈಗಾಗಲೇ ಇಲ್ಲಿ ಎರಡು ತಮಿಳು ಚಿತ್ರಗಳಲ್ಲಿ ಪಾತ್ರವಹಿಸಬೇಕೆಂದು ನನ್ನನ್ನು ಕೇಳುತ್ತಿದ್ದಾರೆ. ಆದರೂ ನನ್ನ ಸ್ವಭಾಷೆಯ ಅಭಿಮಾನಕ್ಕೆ ಕಟ್ಟುಬಿದ್ದು ಮತ್ತು ನೀವು ಅಭಿಮಾನಪೂರ್ವಕವಾಗಿ ಈ ಚಿತ್ರದಲ್ಲಿ ನೀವೇ ಅರ್ಜುನನ ಪಾತ್ರವನ್ನು ವಹಿಸಬೇಕೆಂದು ಬರೆದಿರುವ ಕಾರಣದಿಂದ ಇಲ್ಲಿನ ತಮಿಳು ಚಿತ್ರಗಳಿಗೆ ಆಹ್ವಾನ ಬಂದದ್ದನ್ನು ಬಿಟ್ಟು, ನೀವು ತೆಗೆಯಲಿರುವ ಚಿತ್ರದಲ್ಲಿ ಪಾತ್ರ ವಹಿಸಲು ಸಂತೋಷದಿಂದ ಬರಲು ಒಪ್ಪಿರುತ್ತೇನೆ" ಇತ್ಯಾದಿಯಾಗಿ ಉತ್ತರ ಬರೆದರು.

ಅದರಂತೆಯೇ ಒಂದು ವಾರದ ನಂತರ ವೀರಣ್ಣನವರಿಂದ "ನಾವುಗಳು 'ಸುಭದ್ರ' ಚಿತ್ರವನ್ನು ಪೂನಾದಲ್ಲಿರುವ ಒಂದು ಸ್ಟುಡಿಯೋದಲ್ಲಿ ನಿರ್ಮಾಣ ಮಾಡಲು ತೀರ್ಮಾನಿಸಿದ್ದೇವೆ. ಎಂದು ಕಾರ್ಯಗಳೂ ಬಿರುಸಿನಿಂದಲೇ ಸಾಗುತ್ತಿವೆ. ಇನ್ನು ಎರಡು ವಾರಗಳ ಒಳಗಾಗಿ ಇಲ್ಲಿಗೆ ಬರಬೇಕಾಗುತ್ತದೆ. ಮಿಕ್ಕ ವಿಚಾರಗಳೆಲ್ಲವೂ ಸಮಕ್ಷಮ ತೀರ್ಮಾನ ಮಾಡಿಕೊಳ್ಳೋಣ" ಎಂದು ಉತ್ತರ ಬಂದಿತು. ಆನಂತರ ಹೊನ್ನಪ್ಪನವರು 'ಕೃಷ್ಣಕುಮಾರ' ಕಂಪನಿಯ ಮಾಲೀಕರಿಗೆ "ನೋಡಿ, ನನಗೆ ಈ ರೀತಿ ಪತ್ರಗಳು ಬಂದಿವೆ. ಇನ್ನು ಎರಡು ವಾರದೊಳಗಾಗಿ ಬಾಕಿ ಇರುವ ನನ್ನ ಕೆಲಸವನ್ನು ಮುಗಿಸಿಕೊಂಡು ನನ್ನನ್ನು ಕಳಿಸಿಕೊಡಿ"

ಎಂದು ಹೇಳಿದರು. ಕೂಡಲೇ ಮಾಲೀಕರು "ಏನು ! ಹೀಗೆ ಹೇಳುತ್ತಿದ್ದೀರಿ? ಇಲ್ಲಿ ಎರಡು ತಮಿಳು ಚಿತ್ರಗಳಿಗೆ ನಾವೇ ನಿರ್ಮಾಣಕಾರರಿಗೆ ಹೇಳಿ ಅವರು ಇನ್ನೆರಡು ದಿವಸಗಳೊಳಗಾಗಿ ಬಂದು ನಿಮ್ಮಲ್ಲಿ ಒಪ್ಪಂದ ಮಾಡಿಕೊಳ್ಳಬೇಕೆಂದು ಇದ್ದಾರೆ. ಹೀಗೆ ಹೇಳುತ್ತಿದ್ದೀರಲ್ಲ ! ಹಾಗಾದರೆ ನೀವು ಈ ತಮಿಳು ಚಿತ್ರಗಳಿಗೆ ಒಪ್ಪಿಕೊಳ್ಳುವುದಿಲ್ಲವೇ? ಯಾತಕ್ಕಾಗಿ ದಿಢೀರನೆ ಈ ತೀರ್ಮಾನ ತೆಗೆದುಕೊಂಡಿರಿ" ಎಂದು ಕೇಳಿದರು. ಆಗ ಹೊನ್ನಪ್ಪನವರು "ನಮ್ಮ ಕನ್ನಡ ಚಿತ್ರಗಳು ನಿರ್ಮಾಣವಾಗುವುದೇ ಬಹಳ ಅಪರೂಪ. ಅದರಲ್ಲಿಯೂ ಕನ್ನಡ ನಾಡಿನಲ್ಲಿಯೇ ನಾಟಕಕಲೆಯಲ್ಲಿ ಅಪಾರವಾದ ಕೀರ್ತಿ ಗಳಿಸಿರುವ ವೀರಣ್ಣನವರು ನನಗೆ ಬಹಳ ಪೂಜ್ಯರು. ಅವರು ನಿರ್ಮಿಸುವ ಚಿತ್ರಕ್ಕೆ ನಾನು ಹೋಗದೆ ತಪ್ಪಿಕೊಂಡರೆ ನಮ್ಮ ನಾಡಿನಲ್ಲಿ ನನಗೆ ಕೆಟ್ಟ ಹೆಸರು ಬರುತ್ತದೆ. ಆದಕಾರಣ ಈ ತೀರ್ಮಾನಕ್ಕೆ ನಾನು ಬರಬೇಕಾಯಿತು" ಎಂದು ಅವರಿಗೆ ಉತ್ತರ ಹೇಳಿದರು. 'ಸರಿ, ನಿಮ್ಮ ಇಷ್ಟ' ಎಂದು ಅವರೂ ಹೇಳಿಬಿಟ್ಟರು.

ಅದರಂತೆಯೇ ಒಂದು ವಾರದ ನಂತರ ವೀರಣ್ಣನವರ ಆಹ್ವಾನದಂತೆ ಬೆಂಗಳೂರಿಗೆ ಬಂದ ಭಾಗವತರು ಎರಡನೇ ದಿನದ ಬೆಳಿಗ್ಗೆ ವೀರಣ್ಣನವರ ಮನೆಗೆ ಹೋದರು. ಮನೆಯಲ್ಲಿ ವೀರಣ್ಣನವರನ್ನು ಭೇಟಿಮಾಡಿದರು. 'ಯಾವಾಗ ಬಂದಿರಿ, ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದಾರಾ' ಎಂದು ಕೇಳಿದ ವೀರಣ್ಣನವರು ಮಾದೇವ ಎಂಬ ಅಡಿಗೆಯವನನ್ನು ಕರೆದು 'ಭಾಗವತರು ಬಂದಿದ್ದಾರೆ. ಅವರಿಗೆ ತಿಂಡಿ ಕಾಫಿ ತಂದುಕೊಡು' ಎಂದು ಹೇಳಿದರು. ಯಜಮಾನರ ಆದೇಶದಂತೆ ಅವನು ತಂದಿಟ್ಟ. ಭಾಗವತರು ಫಲಹಾರವನ್ನು ಮುಗಿಸಿ "ವೀರಣ್ಣನವರು ಈಗಾಗಲೇ ಪತ್ರದಲ್ಲಿ ಬರೆದಿದ್ದಂತೆ 'ಸುಭದ್ರ' ಚಿತ್ರದ ವಿಷಯವಾಗಿ ಈಗ ಏನಾದರೂ ಹೇಳಬಹುದು" ಎಂದು ಸುಮಾರು ಹದಿನೈದು ಇಪ್ಪತ್ತು ನಿಮಿಷಗಳ ಕಾಲ ಎದುರು ನೋಡಿದರು. ವೀರಣ್ಣನವರು ಬೇರೆ ವಿಷಯವನ್ನೇ ಮಾತನಾಡಲಿಲ್ಲ. ಸುಮಾರು ದಿನಗಳ ಕಾಲ ಪತ್ರ ಬರೆದು, ಟೆಲಿಗ್ರಾಂ ಕಳಿಸಿ ವ್ಯವಹಾರ ನಡೆಸಿದ್ದ ವೀರಣ್ಣನವರು ಭಾಗವತರ ಬಗೆಗೆ ಈ ಸಂದರ್ಭದಲ್ಲಿ ನಡೆದುಕೊಂಡ ರೀತಿ ಆಶ್ಚರ್ಯಕರವಾದುದು. ಹೊನ್ನಪ್ಪನವರ ಹಾಗೂ ಅವರ ಮನೆಯವರ ಕ್ಷೇಮ ಸಮಾಚಾರ ವಿಷಯವನ್ನೇ ಹೇಳಲಿಲ್ಲವಂತೆ !

ವೀರಣ್ಣನವರ ಈ ರೀತಿಯ ವರ್ತನೆಯಿಂದ ಹೊನ್ನಪ್ಪ ಭಾಗವತರಿಗೆ ಅಸಮಾಧಾನವುಂಟಾಯಿತು. "ಏನು ಹೀಗಾಯಿತಲ್ಲ. ಸುಭದ್ರ ಚಿತ್ರದ ಬಗೆಗೆ ಯಾವ ವಿಷಯವನ್ನು ವೀರಣ್ಣನವರು ಮಾತನಾಡಲಿಲ್ಲವಲ್ಲ. ನಾನು ಮದ್ರಾಸಿನಿಂದ ಹೊರಟು ಬರುವ ಮುಂಚೆ ವೀರಣ್ಣನವರು ಎರಡು ಟೆಲಿಗ್ರಾಂಗಳನ್ನು

ಕಳಿಸಿಕೊಟ್ಟಿದ್ದರಲ್ಲ. ಯಾಕೆ ಹೀಗೆ ಮಾಡಿದರು" – ಇತ್ಯಾದಿಯಾಗಿ ಯೋಚಿಸತೊಡಗಿದರು. ವೀರಣ್ಣನವರು, "ಇನ್ನೊಂದು ವಾರದಲ್ಲಿ ಸುಭದ್ರ ಚಿತ್ರದ ಕೆಲಸಕ್ಕಾಗಿ ನಾವೆಲ್ಲ ಪೂನಾಕ್ಕೆ ಹೋಗಬೇಕಾಗುತ್ತದೆ. ನಿಧಾನ ಮಾಡಬೇಡಿ, ಒಡನೆಯೇ ಹೊರಟುಬನ್ನಿ" – ಇತ್ಯಾದಿಯಾಗಿ ಟೆಲಿಗ್ರಾಂನಲ್ಲಿ ವಿಷಯ ತಿಳಿಸಿದರು. ಇಷ್ಟಾಗಿ ವೀರಣ್ಣನವರ ಸಮ್ಮುಖದಲ್ಲಿ ನಿಂತುಕೊಂಡಿದ್ದರೂ ಚಿತ್ರದ ವಿಷಯವನ್ನೇ ಮಾತನಾಡಲೇ ಇಲ್ಲವಲ್ಲ ಎಂದು ಹೊನ್ನಪ್ಪನವರಿಗೆ ಸಂದೇಹ ಬಂದಿತು. "ಇರಲಿ! ಈ ದಿವಸ ಏನೂ ಮಾತನಾಡುವುದೇ ಬೇಡ, ನಾಳೆ ಬಂದು ಮಾತನಾಡೋಣ" ಎಂದು ತೀರ್ಮಾನ ಮಾಡಿಕೊಂಡು ಹೊನ್ನಪ್ಪನವರು ವೀರಣ್ಣನವರಿಗೆ 'ನಾನು ಬರುತ್ತೇನೆ ಸ್ವಾಮಿ' ಎಂದರು. ವೀರಣ್ಣನವರು 'ಹೂ! ಕಳಿಸಿದರು. ಬೇಸರದಿಂದಲೇ ಹೊನ್ನಪ್ಪನವರು ಮನೆಗೆ ಬಂದುಬಿಟ್ಟರು. ಆ ಯೋಚನೆಯಲ್ಲಿ ಯಾವ ಕೆಲಸ ಮಾಡಲು ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಯಾಕೆಂದರೆ ಮದರಾಸಿನಲ್ಲಿ ಬಂದ ಎರಡು ತಮಿಳು ಚಿತ್ರಗಳ ಆಹ್ವಾನವನ್ನು ಬಿಟ್ಟು ತಮ್ಮ ಸ್ವಭಾಷೆಯ ಕನ್ನಡಾಭಿಮಾನ ಮತ್ತು ಗುಬ್ಬಿ ವೀರಣ್ಣನವರಲ್ಲಿದ್ದ ಪೂಜ್ಯಭಾವಕ್ಕೆ ಮರುಳಾಗಿ 'ನನ್ನ ಗತಿ ಹೀಗಾಯಿತಲ್ಲ!' ಎಂದು ಬಹಳವಾಗಿ ಪರಿತಪಿಸುವ ಗತಿ ಬಂದಿತು ಹೊನ್ನಪ್ಪನವರಿಗೆ.

**ಅರ್ಜುನನಾಗಿ, ಚವನ ಋಷಿಯಾಗಿ**

ಬೆಂಗಳೂರಿನ ಮೂವಿಲ್ಯಾಂಡ್ ಥಿಯೇಟರ್ ಇರುವ ಜಾಗದಲ್ಲಿ ಮೊದಲು 'ಶಿವಾನಂದ' ಎಂಬ ಹೆಸರಿನ ನಾಟಕದ ಥಿಯೇಟರ್ ಒಂದಿತ್ತು. ಅದರಲ್ಲಿ ಗುಬ್ಬಿ ವೀರಣ್ಣನವರ ಕಂಪನಿಯ ನಾಟಕವೊಂದು ಜರುಗುತ್ತಿತ್ತು. ಆ ಸಂದರ್ಭದಲ್ಲಿ ವಾಸ್ತವ ಸಂಗತಿಯನ್ನು ತಿಳಿಯಬೇಕೆಂಬ ಕುತೂಹಲದಿಂದ ಹೊನ್ನಪ್ಪ ಭಾಗವತರು ಅಂದು ಸಂಜೆಯೇ ನಾಟಕದ ಥಿಯೇಟರ್ ಬಳಿಗೆ ಹೊರಟರು. ಅಲ್ಲಿ ಇವರ ವೃತ್ತಿ ಬಂಧುಗಳಾದಂಥ ಬೇಲೂರು ರಾಘವೇಂದ್ರರಾಯರು, ಅಚ್ಯುತರಾವ್, ಮಹಾಬಲರಾವ್ ಮೊದಲಾದ ಹಿರಿಯ ಕಲಾವಿದರುಗಳು ಹಾಜರಿದ್ದರು. ಇದ್ದಕ್ಕಿದಂತೆ ಕಾಣಿಸಿಕೊಂಡ ಭಾಗವತರನ್ನು ಕಂಡ ಇವರೆಲ್ಲ ಆಶ್ಚರ್ಯಗೊಂಡರು. ಆದರೂ ತುಂಬು ಹೃದಯದಿಂದಲೇ ಭಾಗವತರನ್ನು ಎದುರು ಭಾಗದಲ್ಲಿದ್ದ ಹೋಟೆಲಿಗೆ ಕರೆದುಕೊಂಡು ಹೋಗಿ "ಯಾವಾಗ ಬಂದಿರಿ? ಏನು ಸಮಾಚಾರ? ವೀರಣ್ಣನವರರನ್ನು ನೋಡಿದ್ದಿರಾ? ಅವರು ಏನು ಹೇಳಿದರು ?" ಎಂದು ಬಹಳ ಕುತೂಹಲದಿಂದಲೇ ಕೇಳಿದರು. ಅದಕ್ಕೆ ಉತ್ತರವಾಗಿ ಭಾಗವತರು ಇನ್ನೂ ಅವರನ್ನು ನೋಡಲಿಕ್ಕಾಗಿಲ್ಲ, ರಾತ್ರಿಯೆಲ್ಲಾ ರೈಲಿನಲ್ಲಿ ಬಂದದ್ದಾಯಿತು. ನಿದ್ದೆಯಿಲ್ಲದ್ದರಿಂದ ಬೆಳಗ್ಗೆಯಿಂದಲೂ ಮಲಗಿ ಎದ್ದು ನಿಮ್ಮನ್ನೆಲ್ಲ ಕಾಣಲು

ಇಲ್ಲಿಗೆ, ಬಂದೆ, ಏನು ವಿಶೇಷ?" ಎಂದು ಅಲ್ಲಿ ಸೇರಿದ್ದ ಅವರುಗಳನ್ನೇ ಪ್ರಶ್ನಿಸಿದರು. ಅದಕ್ಕೆ ಆ ಹಿರಿಯ ಕಲಾವಿದರುಗಳು "ಈಗ 'ಸುಭದ್ರ' ಚಿತ್ರದಲ್ಲಿ ನಿಮ್ಮಿಂದಲೇ ಅರ್ಜುನನ ಪಾತ್ರ ಮಾಡಿಸಬೇಕೆಂಬ ಬಯಸಿ ವೀರಣ್ಣನವರು ನಿಮ್ಮೊಂದಿಗೆ ಪತ್ರ ವ್ಯವಹಾರ ಮತ್ತು ಟೆಲಿಗ್ರಾಂ ಕಳಿಸಿರುವುದುಂಟು. ಆದರೆ, ಈ ಮಧ್ಯೆ ಯಾರ್‍ಯಾರದೋ ಮಾತುಗಳನ್ನು ಕೇಳಿದ ವೀರಣ್ಣನವರು ಕೆಲವು ದಿವಸಗಳ ಹಿಂದೆ ಮೈಸೂರಿಗೆ ಹೋಗಿ ದೇವೇಂದ್ರಪ್ಪನವರನ್ನು ಅರ್ಜುನನ ಪಾತ್ರಕ್ಕೆ ಒಪ್ಪಿಸಿಕೊಂಡು ಬಂದಿದ್ದಾರೆ. ಆ ವೀರಣ್ಣನವರು ಈಗ ನಿಮಗೆ ಏನು ಹೇಳುತ್ತಾರೆ ಎಂಬುದೇ ನಮ್ಮೆಲ್ಲರ ಕುತೂಹಲವಾಗಿದೆ" ಎಂದರು. ಈ ಸುದ್ದಿ ಕೇಳಿದ ಭಾಗವತರಿಗೆ ಇನ್ನಷ್ಟು ಬೇಸರವಾಯಿತು. ಹಿರಿಯ ಕಲಾವಿದರುಗಳಿಗೆ 'ಆ ಬಗೆಗೆ' ಏನನ್ನೂ ಹೇಳಲು ಬಯಸದೆ ಮನೆಗೆ ಬಂದುಬಿಟ್ಟರು.

ಸಮಾಧಾನ ಮಾಡಿಕೊಂಡು ಏನಾದರಾಗಲಿ ವಿಚಾರ ತಿಳಿಯಲೇಬೇಕೆಂದು ಮಾರನೇ ದಿವಸದ ಬೆಳಗ್ಗೆ ಭಾಗವತರು ವೀರಣ್ಣನವರ ಮನೆಗೆ ಹೋದರು. ಹೊನ್ನಪ್ಪನವರು ಒಳಪ್ರವೇಶಿಸಿದ ಕೂಡಲೇ "ಬನ್ನಿ, ಭಾಗವತರೇ" ಎಂದು ಸ್ವಾಗತಿಸಿದರು. 'ಕುಳಿತುಕೊಳ್ಳಿ' ಎಂದರು ಮೊದಲ ದಿನದ ಅಡಿಗೆಯವನಿಗೆ "ಭಾಗವತರು ಬಂದಿದ್ದಾರೆ. ಅವರಿಗೆ ತಿಂಡಿ ಕಾಫಿ ತಂದುಕೊಡು" ಎಂದು ಹೇಳಿದರು. ಆ ರೀತಿ ಹೇಳಿದ ತಕ್ಷಣ ಬೇಸತ್ತು ಹೋಗಿದ್ದ ಭಾಗವತರ ತಲೆ ಸ್ವಲ್ಪ ಬಿಸಿಯಾಯಿತು ! "ನೋಡಿ ಸ್ವಾಮಿ ನಾನು ನಿಮ್ಮ ತಿಂಡಿ ಕಾಫಿಗಾಗಿ ಬಂದಿಲ್ಲ. ಸುಮಾರು ಒಂದು ವಾರದ ಹಿಂದೆ ಮದ್ರಾಸಿನಲ್ಲಿದ್ದ ನನ್ನ ವಿಳಾಸಕ್ಕೆ ನೀವು ಕಳಿಸಿದ ಪತ್ರಗಳು, ಟೆಲಿಗ್ರಾಂಗಳು ಎಲ್ಲವೂ ನನ್ನ ಕೈ ಸೇರಿವೆ. ಇವುಗಳ ನೆನಪಾದರೂ ನಿಮಗಿದೆಯಾ? ಮುದ್ದಾಂ ಆಗಿ ನನ್ನನು ಕರೆಸಿದ್ದು ಯಾಕೆ? ನಿಮ್ಮ ಆಹ್ವಾನದಂತೆ ನಾನು ಬಂದರೆ, ನೆನ್ನೆಯ ದಿವಸ 'ಸುಭದ್ರ' ಚಿತ್ರದ ಬಗೆಗೆ ಯಾವ ವಿಚಾರವನ್ನು ಮಾತನಾಡದೆ ಕ್ಷೇಮ ಸಮಾಚಾರ ವಿಚಾರಿಸಿ ಕಳಿಸಿದರಲ್ಲ. ಇದರ ಅರ್ಥವೇನು? ಎಂದು ಕೇಳುವುದಕ್ಕಾಗಿ ಮಾತ್ರ ನಾನು ಈ ದಿವಸ ಇಲ್ಲಿಗೆ ಬಂದಿದ್ದೇನೆ" ಎಂದು ಹೊನ್ನಪ್ಪನವರು ಒಂದೇ ಸಮನೆ ಪ್ರಶ್ನೆಗಳ ಸುರಿಮಳೆಯನ್ನೇ ಕರೆದುಬಿಟ್ಟರು ! ವೀರಣ್ಣನವರು "ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ನನಗೆ ಸಾಧ್ಯವಾಗುತ್ತಿಲ್ಲ. ಅದು, ಏನೂ ಸ್ವಲ್ಪ ಹೆಚ್ಚು ಕಡಿಮೆ ಆಗಿ ಹೋಯಿತು. ನಾನು ಮುಂದೆ ಆ ವಿಚಾರವನ್ನೆಲ್ಲ ತಿಳಿಸುತ್ತೇನೆ" ಎಂದು ಹೇಳಿದರು. ಆಗ ಹೊನ್ನಪ್ಪನವರು "ನೋಡಿ, ನೀವು ನಮ್ಮ ಕರ್ನಾಟಕದಲ್ಲಿ ರಂಗಭೂಮಿಯ ಬಹು ದೊಡ್ಡ ಕಲಾವಿದರು. ಅಪಾರವಾದ ಕಲಾಸೇವೆ ಸಲ್ಲಿಸುತ್ತಿರುವವರು ಎಂದು ನಿಮ್ಮಲ್ಲಿ ಪೂಜ್ಯ ಭಾವವನ್ನಿಟ್ಟುಕೊಂಡು, ನೀವು

ಕಳಿಸಿದ ಪತ್ರಗಳಿಗೂ ಟೆಲಿಗ್ರಾಂಗಳಿಗೂ ಗೌರವ ಕೊಟ್ಟೆ. ಅಷ್ಟೇ ಅಲ್ಲದೆ ನಮ್ಮ ಕನ್ನಡ ಭಾಷೆಯಲ್ಲಿ ಅದೂ ವೀರಣ್ಣನವರು ನಿರ್ಮಿಸಿದ ಕನ್ನಡ 'ಸುಭದ್ರ' ಚಿತ್ರಕ್ಕೆ ನಾನು ಹೋಗದೇ ಹೋದರೆ ನಮ್ಮ ನಾಡಿನಲ್ಲಿಯೂ ನನಗೆ ಕೆಟ್ಟ ಹೆಸರು ಬರುತ್ತದೆಂದು ತಿಳಿದು, ಮದ್ರಾಸಿನಲ್ಲಿ ಎರಡು ತಮಿಳು ಚಿತ್ರಕ್ಕೆ ಬಂದ ಆಹ್ವಾನವನ್ನು ತ್ಯಜಿಸಿ ನಾನು ಹೊರಟು ಬಂದರೆ, ನೀವು ಈ ರೀತಿಯಾಗಿ ಹೇಳುತ್ತಿದ್ದೀರಲ್ಲಾ! ಇದರ ಅಭಿಪ್ರಾಯವಾದರೂ ಏನು? ಎಂದು ನಾನು ಕೇಳಿದರೆ 'ಮುಂದೆ ಹೇಳುತ್ತೇನೆ' ಎಂದು ಹೇಳುತ್ತಿದ್ದೀರಿ, ಇದು ನಿಮ್ಮಂಥವರಿಗೆ ಯೋಗ್ಯವಾದ ಮಾತೆ?" ಇತ್ಯಾದಿಯಾಗಿ ಸ್ವಲ್ಪ ಗಡುಸಾಗಿಯೇ ಮಾತನಾಡಬೇಕಾದ ಪರಿಸ್ಥಿತಿಯಲ್ಲಿದ್ದರು. ಆದರೂ ಸಹ ವೀರಣ್ಣನವರು ನಿರ್ದಿಷ್ಟವಾದ ಉತ್ತರವನ್ನು ಹೇಳುವಲ್ಲಿ ಅಸಹಾಯಕರಾದರು! ಆಗ ಹೊನ್ನಪ್ಪನವರಿಗೆ ತುಂಬ ಬೇಸರವಾಗಿ "ಸ್ವಾಮಿ, ಹಿಂದೆ ನಾನು ನಿಮ್ಮ ಕಂಪನಿ ಬಿಡುತ್ತೇನೆಂದು ಹೇಳಿದಾಗ ನೀವು ನನಗೆ ಲಾಯರ್ ನೋಟೀಸ್ ಕೊಡಿಸಿದಿರಿ. ಈಗ ನನ್ನ ಪರಿಸ್ಥಿತಿಯೂ ಸಹ, ಅದೇ ರೀತಿ ನಿಮ್ಮ ವಿಷಯದಲ್ಲಿಯೂ ವರ್ತಿಸಬೇಕಾಗಿ ಬರಬಹುದೇನೋ, ನಿಮ್ಮ ವಿಷಯದಲ್ಲಿ ನನಗೆ ಮರುಕವುಂಟಾಗುತ್ತದೆ. ಮುಂದಿನ ವಿಚಾರ 'ಪರದೆ'ಯ ಮೇಲೆ ಉಭಯತ್ರರೂ ನೋಡೋಣ ! ಬರುತ್ತೇನೆ" ಎಂದು ಹೇಳಿ ವೀರಣ್ಣನವರಿಗೆ ನಮಸ್ಕಾರವನ್ನೂ ಮಾಡದೆಯೇ ಹೊರಟುಬಂದರು. ಮುಂದೆ ಇದಕ್ಕೇನು ಮಾಡಬೇಕೆಂಬುದೇ ತೋಚದಂತಾಗಿ ಹೊನ್ನಪ್ಪನವರು ಮಾನಸಿಕವಾಗಿ ತುಂಬ ನೊಂದು ಹುಚ್ಚನಂತಾದರು. ಅಷ್ಟಾದರೂ ಅವರು ತಾಳ್ಮೆಗೆಡಲಿಲ್ಲ : "ನಾಲ್ಕು ದಿವಸ ತಡೆದು ನೋಡೋಣ ಏನೇನು ನಡೆಯುತ್ತದೆ ಎಂದು ನಿರೀಕ್ಷಿಸೋಣ" ಎಂದು ಮನಸ್ಸಿನ ಬೇಗುದಿಯಲ್ಲಿಯೇ ನಾಲ್ಕಾರು ದಿನಗಳನ್ನು ಕಳೆದರು. ಹೀಗಿರುವಾಗ ಇಂಥ ಕೆಲಸಗಳನ್ನು ಸಾಧಿಸುವುದಕ್ಕಾಗಿಯೇ ವೀರಣ್ಣನವರು ಗಂಗಣ್ಣ ಎಂಬ ವ್ಯಕ್ತಿಯನ್ನು ತನ್ನ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡಿದ್ದರು. ವೀರಣ್ಣನವರ ಆದೇಶದಂತೆ ಆ ವ್ಯಕ್ತಿ ಭಾಗವತರ ಮನೆಗೆ ಬಂದ. ಆಗ ಭಾಗವತರು ಇದ್ದಾರೆಯೇ? ಎಲ್ಲಿ ಹೋದರು ? ಅಂತ ಭಾಗವತರ ತಾಯಿ ಮತ್ತು ಕಲ್ಲಮ್ಮನವರನ್ನು ಕೇಳಿದ. ಆಗ ಅವರು 'ಪೂಜೆ ಮಾಡುತ್ತಿದ್ದಾನೆ' ಎಂದು ಹೇಳಿ 'ನೀವು ಯಾರು ಎಲ್ಲಿಂದ ಬರುತ್ತಿದ್ದೀರಿ' ಎಂದು ಕೇಳಿದರು. "ಅಯ್ಯೋ ! ವೀರಣ್ಣನವರು ಕಳಿಸಿದ್ದಾರಮ್ಮ ನನ್ನನ್ನ. ಏನಂತ ಹೇಳಲಿ" ಎಂದು ತಿಳಿಸಿದ. ಆಗ ಭಾಗವತರ ಸಹೋದರ ದೊಡ್ಡ ಹೊನ್ನಪ್ಪನವರು "ಸರಿ, ನಿಮ್ಮ ವೀರಣ್ಣನವರು ನಡೆದುಕೊಂಡಿರುವ ರೀತಿ ಅಷ್ಟು ಲೌಕಿಕವಾಗಿ ಕಾಣುತ್ತಿಲ್ಲವಲ್ಲ. ನನ್ನ ತಮ್ಮ ಮದ್ರಾಸಿನಿಂದ ಬಂದು ಒಂದು ವಾರದಿಂದ ಬಹಳ ಬೇಸರವಾಗಿದ್ದಾನೆ. ಇಂಥ ದೊಡ್ಡವರು ಈ ರೀತಿಯಾಗಿ ನಡೆದುಕೊಳ್ಳುವುದು ಸರಿಯೇ?" ಎಂದು

ಕೇಳಿದರು. ಅದಕ್ಕೆ ಉತ್ತರವಾಗಿ ಗಂಗಣ್ಣ "ಅದೆಲ್ಲ ಏನು ನೀವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡಿ. ನಮ್ಮ ವೀರಣ್ಣನವರು ಜನರ ಮರಳುಮಾಡುವುದು ಎಲ್ಲರಿಗೂ ತಿಳಿದ ವಿಷಯ. ಯಾರೋ ಕೆಲವರು ಮಧ್ಯೆ ಸೇರಿ ಹೊನ್ನಪ್ಪನವರನ್ನು ಬಿಟ್ಟು ಮೈಸೂರಿನ ಆಸ್ಥಾನ ವಿದ್ವಾಂಸರಾದ ದೇವೇಂದ್ರಪ್ಪನವರನ್ನು ಅರ್ಜುನನ ಪಾತ್ರಕ್ಕೆ ಹಾಕಿದರೆ ಚೆನ್ನಾಗಿರುತ್ತದೆಂದು ಹೇಳಿಬಿಟ್ಟಿದ್ದಾರೆ.

'ಅಂಥವರ' ಮಾತು ಕೇಳಿ ಈ ರೀತಿ ವೀರಣ್ಣನವರು ನಡೆದುಕೊಂಡದ್ದು ಬಹಳ ತಪ್ಪು. ಅದನ್ನು ನಾನೇ ಹೇಳುತ್ತೇನೆ. ಆದ್ದರಿಂದ ಅದನ್ನೆಲ್ಲ ನೀವು ಯಾರೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಭಾಗವತರಿಗೂ ಸಮಾಧಾನ ಹೇಳಿ, ಈಗ ನನ್ನ ಜೊತೆಯಲ್ಲಿಯೇ ಅವರನ್ನು ಕಳಿಸಿಕೊಡಿ. ಈಗ ಭಾಗವತರೇ ಅರ್ಜುನನೆಂದು ತೀರ್ಮಾನವಾಗಿಬಿಟ್ಟಿದೆ. 'ಭಾಗವತರನ್ನು ಕರೆದುಕೊಂಡು ಬರಲೇಬೇಕೆಂದು ಹೇಳಿ, ವೀರಣ್ಣನವರು ಅಲ್ಲಿ ಕಾಯುತ್ತ ಕುಳಿತಿದ್ದಾರೆ. ದಯವಿಟ್ಟು ಭಾಗವತರನ್ನು ನನ್ನ ಜೊತೆಯಲ್ಲಿ ಕಳಿಸಿಕೊಡಿ" ಎಂದು ಕೇಳಿದ. ಆ ವೇಳೆಗೆ ಸರಿಯಾಗಿ ಪೂಜಾಕಾರ್ಯ ಮುಗಿಸಿಕೊಂಡು ಹೊರಬಂದ ಭಾಗವತರಿಗೆ ಗಂಗಣ್ಣ "ನಮಸ್ಕಾರ ಭಾಗವತರೇ" ಅಂದ. ಅದಕ್ಕೆ ಪ್ರತಿಯಾಗಿ ಭಾಗವತರು "ಏನು ಶಕುನಿಯ ಪಾತ್ರ ವಹಿಸಲಿಕ್ಕೆ ಬಂದಿದ್ದೀಯಾ! ವಿಷಯವೇನು?" ಎಂದು ಕೇಳಿದರು (ಭಾಗವತರ ಬಳಿಯಲ್ಲಷ್ಟೇ ಅಲ್ಲದೆ ಕಂಪನಿಯ ಎಲ್ಲ ಕಲಾವಿದರುಗಳಲ್ಲಿಯೂ ಬಹಳ ಆತ್ಮೀಯವಾಗಿ ವರ್ತಿಸುತ್ತಿದ್ದ ಮನುಷ್ಯ ಗಂಗಣ್ಣ). "ನೀನು ಸುಮ್ಮಿರಪ್ಪ ಹಾಗೆಲ್ಲ ಮಾತನಾಡಬೇಡ. ನಮ್ಮ ವೀರಣ್ಣನವರು ಯಾರದೋ ಮಾತುಕೇಳಿ ಹಾಗೆ ವರ್ತಿಸಿಬಿಟ್ಟಿದ್ದಾರೆ, ಅಷ್ಟೆ. ಅದನ್ನೆಲ್ಲ ಮರೆತುಬಿಡು. ಈಗ ಸುಭದ್ರ ಚಿತ್ರದಲ್ಲಿ ನೀನೇ ಅರ್ಜುನ. ಈಗ ಯಜಮಾನರು ಥಿಯೇಟರಿನಲ್ಲಿ ನಿನಗಾಗಿ ಕಾದಿದ್ದಾರೆ. ನೀನು ನನ್ನ ಜೊತೆಯಲ್ಲಿ ಬಂದು ನಿಮ್ಮಿಬ್ಬರ ವ್ಯವಹಾರ ಮುಗಿಸಿಕೊಂಡು ಚಿತ್ರ ಚೆನ್ನಾಗಿ ಬರುವಂತೆ ಮಾಡಿ ನಮ್ಮ ನಾಡಿನಲ್ಲಿಯೇ ಒಳ್ಳೆ ಹೆಸರನ್ನು ತೆಗೆದುಕೊಳ್ಳಿ" ಎಂದು ಹೇಳಿದ ಗಂಗಣ್ಣ. ಆಗ ಭಾಗವತರು "ಹೀಗೆ ನಾನು ನಿನ್ನ ಜೊತೆಯಲ್ಲಿ ಬಂದು ನಿಮ್ಮ ಯಜಮಾನರನ್ನು ನೋಡಬೇಕಾದ ರೀತಿಯಲ್ಲಿ ನೋಡುತ್ತೇನೆ, ದಯವಿಟ್ಟು ನೀನು ಹೊರಟುಹೋಗು" ಎಂದು ಹೇಳಿದರು. ಆದರೂ ಗಂಗಣ್ಣ ಆ ಸ್ಥಳದಿಂದದ ಕದಲಲಿಲ್ಲ. "ಅಮ್ಮ ನೀವು ಹೇಗಾದರೂ ಮಾಡಿ ಅವರನ್ನು ಕಳಿಸಿಕೊಡಲೇಬೇಕು" ಎಂದು ಹೊನ್ನಪ್ಪನವರ ತಾಯಿ ಕಲ್ಲಮ್ಮನವರನ್ನು ಪ್ರಾರ್ಥಿಸಿಕೊಂಡ. ನಂತರ ಕಲ್ಲಮ್ಮನವರು ಮಗನಿಗೆ ಬುದ್ಧಿವಾದ ಹೇಳಿದರು: "ಅಪ್ಪಾ, ವ್ಯವಹಾರದಲ್ಲಿ ಅನಿಷ್ಟ ಜನಗಳಿಂದ ಈ ರೀತಿ ಸಂದರ್ಭಗಳು ಜರುಗುವುದೆಲ್ಲ ಸಹಜವೇ. ಎಷ್ಟೇ ಆದರೂ ವೀರಣ್ಣನವರು ದೊಡ್ಡವರು. ಕೆಲವು ದಿವಸಗಳಾದರೂ ಅವರ ಆಶ್ರಯದಲ್ಲಿ ನೀನು ಕೆಲಸ ಮಾಡಿದ್ದೀಯೆ. ಮುಂದೆ

ನಿನ್ನ ಭವಿಷ್ಯ ಒಳ್ಳೆಯದಾಗಬೇಕಾದರೆ ಇಂಥವರ ಆಶೀರ್ವಾದ, ಕಲಾ ದೇವತೆಯ ಅನುಗ್ರಹ ನಿನಗೆ ಸಂಪೂರ್ಣವಾಗಿ ಇರಬೇಕಾಗುತ್ತದೆ. ಆ ದೃಷ್ಟಿಯಿಂದ ನೀನು ಸಂಪೂರ್ಣವಾಗಿ ಇರಬೇಕಾಗುತ್ತದೆ, ನೀನು ಹಠ ಮಾಡದೆ ನನ್ನ ಮಾತಿಗೆ ಗೌರವಕೊಟ್ಟು ಗಂಗಣ್ಣನವರ ಜೊತೆಯಲ್ಲಿಯೇ ಹೋಗಿ ವೀರಣ್ಣನವರ ಹತ್ತಿರ ಗೌರವವಾಗಿ ನಡೆದುಕೊಂಡು ವ್ಯವಹಾರ ಮುಗಿಸಿಕೊಂಡು ಸಂತೋಷದಿಂದಲೇ ಬಾ" ಎಂದು ಹೇಳಿದ ನಂತರ ತಾಯಿಯ ಮಾತಿಗೆ ಗೌರವ ಕೊಟ್ಟು ಹೊನ್ನಪ್ಪನವರು ಗಂಗಣ್ಣನ ಜೊತೆಯಲ್ಲಿಯೇ ವೀರಣ್ಣನವರ ಬಳಿಗೆ ಹೋದರು. ಆಗ ವೀರಣ್ಣನವರು ಶಿವಾನಂದ ಥಿಯೇಟರಿನ ಸಭಾಂಗಣದಲ್ಲಿ ಹಾಕಿದ್ದ ಸೋಫಾದ ಮೇಲೆ ತಲೆಯ ಮೇಲೆ ಕೈಯನ್ನು ಇಟ್ಟುಕೊಂಡು ಕುಳಿತಿದ್ದರು. ಭಾಗವತರು ಅಲ್ಲಿಗೆ ಪ್ರವೇಶಿಸಿದ ಕೂಡಲೆ ವೀರಣ್ಣನವರು ಎದ್ದು ನಿಂತು ಭಾಗವತರ ಕೈ ಹಿಡಿದು "ಭಾಗವತರೇ ನೀವು ಒಳ್ಳೆಯ ವಂಶದಲ್ಲಿ ಹುಟ್ಟಿ ಬೆಳೆದಿದ್ದೀರಿ. ನಾನು ಈ 'ಜನರ' ಮಾತು ಕೇಳಿ ಮೋಸ ಹೋದೆ! ನೀವು ಮದ್ರಾಸಿನಿಂದ ಬಂದ ದಿವಸ ನಾನು ನಿಮ್ಮೊಡನೆ ನಡೆದುಕೊಂಡ ರೀತಿ, ನಿಮಗೆ ಬೇಸರವಾಗಿದೆ ಎಂಬುದೂ ನನಗೆ ತಿಳಿದಿದೆ. ಆದರೂ ಅದನ್ನೆಲ್ಲ ಮರೆತು ನನ್ನ ವಯಸ್ಸಿಗಾದರೂ ಗೌರವ ಕೊಟ್ಟು ಈಗ ನಾನು ತೆಗೆಯಲಿರುವ ಸುಭದ್ರ ಚಿತ್ರದಲ್ಲಿ ನೀವೇ ಅರ್ಜುನನಾಗಿ ಪಾತ್ರ ವಹಿಸಿ ಸಹಕರಿಸಬೇಕು. ಇನ್ನು ಮುಂದಿನ ವ್ಯವಹಾರ ತೀರ್ಮಾನ ಮಾಡಿಕೊಳ್ಳೋಣ" ಎಂದು ಹೇಳಿ ಹೊನ್ನಪ್ಪನವರಿಗೆ ಮಧ್ಯೆ ಮಾತನಾಡುವುದಕ್ಕೇ ಅವರು ಆಸ್ಪದ ಕೊಡಲಿಲ್ಲ. ವೀರಣ್ಣನವರು ಆ ರೀತಿ ಕೇಳಿಕೊಂಡಾಗ 'ಇಷ್ಟು ದೊಡ್ಡವರು ಈ ರೀತಿ ಕೇಳುತ್ತಿದ್ದಾರಲ್ಲ' ಎಂದು ಹೊನ್ನಪ್ಪನವರ ಕಣ್ಣಲ್ಲಿಯೂ ಹನಿ ತುಂಬಿತು. ಆಗ ಮುಂದಿನ ವ್ಯವಹಾರಗಳನ್ನೆಲ್ಲಾ ಮಾತನಾಡಿಕೊಂಡು ಸುಭದ್ರ ಚಿತ್ರದ ಕೆಲಸಕ್ಕಾಗಿ ಪೂನಾಗೆ ಹೊರಡಲು ಇಬ್ಬರೂ ತೀರ್ಮಾನಿಸಿದರು.

ಸುಮಾರು ಎರಡು ವಾರ ಕಳೆದ ನಂತರ 'ಸುಭದ್ರ' ಚಿತ್ರದ ನಿರ್ದೇಶನಕ್ಕೆ ಗೊತ್ತಾಗಿದ್ದ ಪಿ. ಪುಲ್ಲಯ್ಯನವರೊಂದಿಗೆ ಹೊನ್ನಪ್ಪನವರೂ ನಟನಟಿಯರೂ ವಾದ್ಯವೃಂದದವರೂ ಹಾಗೂ ಸಂಗೀತ ನಿರ್ದೇಶಕರೂ (ಪದ್ಮನಾಭ ಶಾಸ್ತ್ರಿ), ಪ್ರಸಿದ್ಧ ಕವಿಗಳೂ ನಾಟಕಕಾರರೂ ಆದ ಬೆಳ್ಳಾವೆ ನರಹರಿ ಶಾಸ್ತ್ರಿ ಹಾಗೂ ಪುಟ್ಟಸ್ವಾಮಯ್ಯ ಅವರುಗಳು ಪೂನಾಗೆ ಹೊರಟರು. ಒಂದು ವಾರದ ನಂತರ ಸುಭದ್ರ ಚಿತ್ರದ ಕೆಲಸ ಪ್ರಾರಂಭವಾಯಿತು. ಅದರ ಕಾರ್ಯಚಟುವಟಿಕೆಗಳು ಜರುಗುತ್ತಿರುವಾಗಲೇ ದುರ್ದೈವದಿಂದ ಚಿತ್ರದ ಸಲುವಾಗಿ ಪೂನಾಗೆ ತಲುಪಿದ ಅಷ್ಟೂ ಜನರು ಸುಮಾರು ಎರಡು ತಿಂಗಳವರೆಗೂ ಜ್ವರದಿಂದ ನರಳಿದರು. ಕಲಾವಿದರುಗಳ ಅನಾರೋಗ್ಯದ ನಿಮಿತ್ತವಾಗಿ ವೀರಣ್ಣನವರ ಲೆಕ್ಕಾಚಾರದಂತೆ

ಚಿತ್ರದ ಕೆಲಸ ನಡೆಯದೆ, ಚಿತ್ರ ಮುಗಿಯಬೇಕಾದರೆ ಆರೇಳು ತಿಂಗಳೇ ಬೇಕಾಯಿತು. ಸುಭದ್ರ ಚಿತ್ರದಲ್ಲಿ ಭಾಗವತರನ್ನು ಬಿಟ್ಟು ದೇವೇಂದ್ರಪ್ಪನವರನ್ನು ಅರ್ಜುನನ ಪಾತ್ರಕ್ಕೆ ಗೊತ್ತುಮಾಡಿಕೊಂಡಿದ್ದ ಮಾಲೀಕರು ಈ ಹಿಂದೆ ಜರುಗಿದ ಕೆಲವು ಘಟನೆಗಳಿಂದಾಗಿ ದೇವೇಂದ್ರಪ್ಪನವರಿಗೆ ನಾರದನ ಪತ್ರ ವಹಿಸುವಂತೆ ಏರ್ಪಾಡು ಮಾಡಿದ್ದರು. ಹಾಗೆ ಮಾಡಿದ್ದರೂ, ಆ ಪಾತ್ರದ ವಿಚಾರ ಕಡೆಯವರೆಗೂ ಬಹಳ ವಿಚಿತ್ರವಾಗಿಯೇ ಮುಗಿಯಿತು ! 'ಸುಭದ್ರ' ಚಿತ್ರಕ್ಕೆ ನಿರ್ದೇಶಕರಾಗಿದ್ದ ಪಿ. ಪುಲ್ಲಯ್ಯನವರು ಹೊನ್ನಪ್ಪನವರ ಹಾಗೂ ಜಯಮ್ಮನವರ ವಿಚಾರದಲ್ಲಿ ಬಹಳ ವಾತ್ಸಲ್ಯದಿಂದ ನಡೆದುಕೊಂಡು ಬಂದವರು. ಇವರಿಬ್ಬರ ಚಿತ್ರ ಕೆಲಸವನ್ನು ಪಿ.ಪುಲ್ಲಯ್ಯನವರು ಬಹಳ ಅಚ್ಚುಮೆಚ್ಚಾಗಿ ನಿರ್ದೇಶಿಸಿಕೊಂಡು ಚಿತ್ರಕ್ಕೆ ಹಾಗೂ ಇವರಿಬ್ಬರಿಗೂ ಉತ್ತಮ ಕೀರ್ತಿ ಬರಲು ಸಹಕರಿಸಿದರು. ಅವರ ಸಹಕಾರವನ್ನು ಹೊನ್ನಪ್ಪನವರು ಗೌರವದಿಂದಲೇ ಸ್ಮರಿಸುತ್ತಾರೆ. ಅಂತೂ ಸುಭದ್ರ ಚಿತ್ರವನ್ನು ಮುಗಿಸಿಕೊಂಡು ಹೊನ್ನಪ್ಪನವರು ಬೆಂಗಳೂರಿಗೆ ಬಂದರು.

'ಸತಿ ಸುಕನ್ಯಾ' ಎಂಬ ಚಿತ್ರವನ್ನು ನಿರ್ಮಿಸಲು ಸೇಲಂ ಮಾಡ್ರನ್ ಥಿಯೇಟರ್ಸ್‌ನಲ್ಲಿ ಏರ್ಪಾಡು ಮಾಡಿಕೊಂಡಿದ್ದ ನಿರ್ಮಾಪಕರು ಪೂನಾದಲ್ಲಿ ಹೊನ್ನಪ್ಪನವರು ಇದ್ದಾಗಲೇ ಪತ್ರ ವ್ಯವಹಾರ ನಡೆಸಿದ್ದರಂತೆ. ಹೊನ್ನಪ್ಪನವರು ಬೆಂಗಳೂರಿಗೆ ಬಂದ ಮೂರು ದಿವಸದಲ್ಲಿಯೇ ಒಂದು ತಮಿಳು ಚಿತ್ರವೊಂದಕ್ಕೆ ಒಪ್ಪಂದ ಮಾಡಿಕೊಂಡರು. 'ಇನ್ನು ಎರಡು ವಾರದೊಳಗೆ ಸೇಲಂಗೆ ಬರಬೇಕು ಕೆಲಸ ಪ್ರಾರಂಭವಾಗುತ್ತದೆ' ಎಂದು ಹೇಳಿ ಹೊರಟರು.

ಅದರಂತೆಯೇ ಭಾಗವತರು ಸೇಲಂಗೆ ಹೋದರು. ಅಲ್ಲಿ 'ಸತಿ ಸುಕನ್ಯಾ' ಚಿತ್ರದ ಕೆಲಸ ಪ್ರಾರಂಭವಾಯಿತು. ಅಷ್ಟರ ವೇಳೆಗಾಗಲೇ ತಮಿಳು ಚಿತ್ರರಂಗದಲ್ಲಿ ಅಪಾರವಾದ ಕೀರ್ತಿ ಗಳಿಸಿದ್ದ ರಾಜಕುಮಾರಿ ಎಂಬುವರು 'ಸುಕನ್ಯೆ'ಯಾಗಿಯೂ, ಟಿ.ಆರ್. ಮಹಾಲಿಂಗಂ ಅವರು 'ನಾರದ'ನಾಗಿಯೂ ಹೊನ್ನಪ್ಪನವರು 'ಚವನಋಷಿ'ಯಾಗಿಯೂ ಅಭಿನಯಿಸಿದರು. ಗೀತ, ನಟನೆ, ತಾಂತ್ರಿಕತೆ–ಇತ್ಯಾದಿ ಎಲ್ಲ ಬಗೆಯಲ್ಲೂ ಚಿತ್ರವು ಬಹಳ ಚೆನ್ನಾಗಿ ಮೂಡಿ ಬಂದಿತು. ಇಲ್ಲಿ ಒಂದು ವಿಷಯವನ್ನು ಮರೆಯದೆ ಹೇಳಬೇಕಾಗಿತ್ತು. ನಿರ್ದೇಶಕರು "ಈ ದೃಶ್ಯದಲ್ಲಿ ಭಾಗವತರು ಒಂದು ಪದ್ಯ ಹಾಡಿದರೆ ಚೆನ್ನಾಗಿರುತ್ತ"ದೆಂದು ಅಭಿಪ್ರಾಯಪಟ್ಟರು. ಒಡನೆಯೇ ಸೆಟ್ಟಿನಲ್ಲಿಯೇ ಕವಿಗಳಿಂದ ಸನ್ನಿವೇಶಕ್ಕೆ ತಕ್ಕಂತೆ ನಾಲ್ಕು ಸಾಲಿನ ಒಂದು ಪದ್ಯವನ್ನು ಬರೆಸಿದರು. ಹಾಗೇ ಮೂರು ಜನ ವಾದ್ಯದವರನ್ನು ಕರೆಸಿ ದೃಶ್ಯ ನಡೆಯುತ್ತಿದ್ದ ಹಾಗೆಯೇ ಹಾಡಬೇಕೆಂದು ಹೊನ್ನಪ್ಪನವರಿಗೆ ತಿಳಿಸಿದರು. "ಧಿಡೀರನೆ ಹೀಗೆ ಹೇಳಿದರೆ ಯಾವ ರೀತಿ ಹಾಡುವುದು? ಅದನ್ನು ಹೊದ್ದಿಕೆ

ಮಾಡಿಕೊಂಡು ಹಾಡಿದರೆ ಚೆನ್ನಾಗಿರುತ್ತದೆ" ಎಂದು ಹೊನ್ನಪ್ಪನವರು ಹೇಳಿದರೂ ಸಹ ನಿರ್ದೇಶಕರು ಒಪ್ಪದೇ "ಪರವಾಯಿಲ್ಲ, ಸ್ವಲ್ಪ ಕಾರ್ಯ ನಡೆಯುವುದು ಕಡಿಮೆಯಾದರೂ ಚಿಂತೆಯಿಲ್ಲ. ಇಲ್ಲೇ ಎರಡು ಸಾರಿ ಹೊದ್ದಿಕೆ ಮಾಡಿಕೊಂಡು ಹಾಡಿಬಿಡಿ" ಎಂದು ಹೇಳಿದರು. ಆಗ ವಿಧಿಯಿಲ್ಲದೆ ಹೊನ್ನಪ್ಪನವರು, ತೆಲುಗು ಗಗ್ಗಯ್ಯನವರು ಪದ್ಯಗಳನ್ನು ಹಾಡುವ ರೀತಿಯಲ್ಲಿ ವಾದ್ಯಗಳ ಜೊತೆಯಲ್ಲಿ ಹೊದ್ದಿಕೆ ಮಾಡಿಕೊಂಡು ನೇರವಾಗಿಯೆ ನಟನೆ ಮಾಡಿಕೊಂಡು ಹಾಡಿದರು. ಅದೃಷ್ಟವಶಾತ್ ಇದು ಬಹಳ ಸೊಗಸಾಗಿ ಮೂಡಿಬಂದು ನಿರ್ದೇಶಕರಾದಿಯಾಗಿ ಎಲ್ಲರೂ ಸಂತೋಷಪಟ್ಟರು. 'ಸತಿ ಸುಕನ್ಯಾ' ಚಿತ್ರ ತೆರೆಯಮೇಲೆ ಬಂದಾಗ ರಸಿಕರೆಲ್ಲರೂ ಪದ್ಯದ ಸನ್ನಿವೇಶ ಬಂದಾಗ ಹೆಚ್ಚಿನ ಸಂತೋಷ ವ್ಯಕ್ತಪಡಿಸಿ ಒಂದೊಂದು ಊರಿನಲ್ಲಿಯೂ ಕರತಾಡನ ಮಾಡಿದರು, ಅದುವರೆಗೂ ತೆರೆಯ ಮೇಲಿನ ಚಿತ್ರದ ಪದ್ಯ ಕೇಳಿ ಕರತಾಡನ ಮಾಡಿರಲಿಲ್ಲವೆಂದು ಅಲ್ಲಲ್ಲಿ ಜನ ಅಭಿಪ್ರಾಯಪಡುತ್ತಿದ್ದರು. ಅಲ್ಲದೆ ತಿರುಚಿ, ಕಾರೆಕುಡಿ, ಮಾಯಾವರಂ, ಕುಂಭಕೋಣಂ – ಇತ್ಯಾದಿ ಪ್ರಮುಖ ಪಟ್ಟಣಗಳಲ್ಲಿ ಸುಮಾರು ಎರಡು ವಾರಗಳ ಕಾಲ ಹೊನ್ನಪ್ಪನವರನ್ನು ಸ್ಟೇಜಿನ ಮೇಲೆ ಕರೆದೊಯ್ದು ಆ ಪದ್ಯಗಳನ್ನು ಮಾತ್ರ ಹಾಡಿಸಿ ಹೂವಿನಹಾರ ಮತ್ತು ವಸ್ತುಗಳನ್ನು ಅರ್ಪಿಸಿ ಗೌರವ ಸಲ್ಲಿಸಿದ್ದಾರೆ.

### ಪಾತ್ರಕ್ಕಾಗಿ ಸಿಗರೇಟು

ಸತಿ ಸುಕನ್ಯಾ ಚಿತ್ರದ ಕೆಲಸ ಮುಗಿದ ಕೂಡಲೆ ಮಾಡ್ರನ್ ಥಿಯೇಟರ್ಸ್‌ನ ಅದೇ ಮಾಲೀಕರು ತಮ್ಮ ನಿರ್ದೇಶನದಲ್ಲಿಯೇ ನಿರ್ಮಾಣ ಮಾಡಬೇಕೆಂದಿದ್ದ 'ರಾಜರಾಜೇಶ್ವರಿ' ಎಂಬ ತಮಿಳು ಭಾಷೆಯ ಚಿತ್ರಕ್ಕೆ ಹೊನ್ನಪ್ಪನವರನ್ನು ಗೊತ್ತುಮಾಡಿಕೊಂಡರು. ನಂತರ ಹೊನ್ನಪ್ಪನವರು ಬೆಂಗಳೂರಿಗೆ ಹೊರಟು ಬಂದರು. ಆಗಿನ ಕಾಲದಲ್ಲಿ ಸಂಕ್ರಾಂತಿ ಹಬ್ಬದಂದು ಒಂದೊಂದು ಭಜನಾ ಮಂದಿರದವರು ಗುಂಪುಗಳೊಡನೆ ಬೆಳಿಗ್ಗೆ ಎಂಟು ಗಂಟೆ ಸುಮಾರಿಗೆ ಭಜನೆ ಹೊರಟು ಬೆಂಗಳೂರಿನ ಮುಖ್ಯ ಬೀದಿಗಳಲ್ಲೆಲ್ಲಾ ಭಜನೆ ಮಾಡಿಕೊಂಡು ರಾತ್ರಿ ಸುಮಾರು ಹತ್ತು ಗಂಟೆಗೆ ತಮ್ಮ ಭಜನಾ ಮಂದಿರಗಳನ್ನು ಸೇರುವ ಪದ್ಧತಿಯಿತ್ತು. ಹೀಗಿರುವಾಗ ಸಂಕ್ರಾಂತಿ ಹಬ್ಬ ಮುಗಿದ ಮರುದಿವಸ ಸಂಗೀತ ವಿದ್ವಾನ್ ಪಾಲ್ಘಾಟ್ ಸೋಮೇಶ್ವರ ಭಾಗವತರ್, ಕಂಜಿರ ವಿದ್ವಾಂಸರಾದ ಶೃಂಗಾರಂ ಪಿಳ್ಳೆಯವರ ನೇತೃತ್ವದಲ್ಲಿ ಸಂಗೀತ ವಿದ್ವಾಂಸರುಗಳೆಲ್ಲ ಭಜನೆ ಹೊರಟು ಬಳೇಪೇಟೆಯ ನರಸಿಂಹಸ್ವಾಮಿ ಹಾಗೂ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಭೇಟಿಕೊಟ್ಟು, ಅಲ್ಲಿಂದ ತುಳಸೀತೋಟದ ದೇವಸ್ಥಾನಕ್ಕೆ ಹೋಗಿ ಅಲ್ಲಿ ಭಜನೆ ಮಾಡಿ ಮತ್ತೆ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಬಂದು ಮುಕ್ತಾಯ ಮಾಡುವುದೆಂದು

ತೀರ್ಮಾನಿಸಿ ಈ ಸಮೂಹದವರು ಹೊನ್ನಪ್ಪನವರನ್ನು ಕರೆದುಕೊಂಡು ನರಸಿಂಹಸ್ವಾಮಿ ದೇವಸ್ಥಾನದಿಂದ ಸಂಜೆ ಸುಮಾರು ಆರು ಗಂಟೆಗೆ ಭಜನೆ ಹೊರಟರು. ಒಂದೊಂದು ವೃತ್ತದಲ್ಲಿಯೂ ಸ್ವಲ್ಪ ಹೊತ್ತು ನಿಂತು ಭಜನೆ ಮಾಡಿಕೊಂಡು ಮುಂದೆ ಹೊರಟರು. ಹೀಗೆ ಮುಂದುವರೆಯುತ್ತಿರುವಾಗ ಮೊದಲನೆಯ ವೃತ್ತದಲ್ಲಿಯೇ ಒಂದು ಕೀರ್ತನೆಯನ್ನು ಪ್ರಾರಂಭಿಸಿ, ಅದನ್ನು ಪ್ರತಿಯೊಬ್ಬ ವಿದ್ವಾಂಸರೂ ಅವರವರ ಮನೋಧರ್ಮದಂತೆ ವಿಸ್ತಾರವಾಗಿ ಹಾಡುತ್ತಾ ಸ್ವರ ಹಾಕಬೇಕೆಂದು ನೇತೃತ್ವ ವಹಿಸಿದ್ದ ವಿದ್ವಾಂಸರುಗಳ ಆದೇಶದಂತೆ ಉಳಿದ ಸಂಗೀತ ವಿದ್ವಾಂಸರು ಹಾಡುತ್ತಿದ್ದರು. ಆಗ ಕಂಜಿರ ವಿದ್ವಾಂಸರಾದ ಶೃಂಗಾರಂ ಪಿಳ್ಳೆಯವರು ಸ್ವರ ಆಡುವ ಪದ್ಧತಿಯಲ್ಲಿ ಸ್ವಲ್ಪ ಕಷ್ಟವಾದ ಲಯ ವಿನ್ಯಾಸದ ಪದ್ಧತಿಯನ್ನು ಹೇಳಿ ಈ ಸ್ಥಳಕ್ಕೆ ಸ್ವರ ಹಾಡಬೇಕೆಂದು ಹೇಳಿದರು. ಸುಮಾರು ನಾಲ್ಕೈದು ಜನ ಹಾಡಿ ತಪ್ಪಿದರು. ಹೊನ್ನಪ್ಪನವರ ಸರದಿಯೂ ಬಂದಿತು. ಹೊನ್ನಪ್ಪವನರು ಲೆಕ್ಕಾಚಾರಕ್ಕೆ ಸರಿಯಾಗಿ ಒಂದು ತೀರ್ಮಾನ ಕೊಟ್ಟು ಹಾಡಿದರು. ಅಲ್ಲಿ ಸೇರಿದ್ದ ಬಹಳ ಜನ ಸಂತೋಷದಿಂದ ಕರಡಾತನ ಮಾಡಿಬಿಟ್ಟರು. ಇದನ್ನು ಗಮನಿಸಿದ ಸುಮಾರು ಎಪ್ಪತ್ತು ವರ್ಷದ ಹಿರಿಯರೊಬ್ಬರು ಮುಂದಿನ ವೃತ್ತಕ್ಕೆ ಬಂದು ಹಾಡುತ್ತಿರುವಾಗ ಒಂದು ಹೂಮಾಲೆಯನ್ನು ತಂದು ಸಂಕುಚಿತ ಭಾವನೆಯಿಂದ ತಾಳ ತಪ್ಪಿ ಹಾಡಿದವರಿಗೆ ಹಾಕಿಬಿಟ್ಟರು ! ಇದನ್ನು ಗಮನಿಸಿದ ಒಂದು ಗುಂಪಿನ ಪ್ರೇಕ್ಷಕರು ಸುಮ್ಮನಿರಲಿಲ್ಲ. ಮುಂದೆ ಶ್ರೀನಿವಾಸ ಮಂದಿರದ ಮುಂಭಾಗದಲ್ಲಿ ನಿಂತು ಹಾಡುತ್ತಿರುವಾಗ್ಗೆ ಒಂದು ಗುಂಪಿನ ಜನ ಸುಮಾರು ಐದಾರು ಅಡಿ ಉದ್ದದ ಒಂದು ದೊಡ್ಡ ಹೂವಿನ ಹಾರವನ್ನು ತಂದು ಹೊನ್ನಪ್ಪನವರ ಕೊರಳಿಗೆ ಹಾಕಿಬಿಟ್ಟರು. ಕೂಡಲೇ ಗಲಭೆ ಆರಂಭವಾಯಿತು! ಆಗ ಕಂಜಿರ ವಿದ್ವಾಂಸರು 'ಯಾರು ಇದನ್ನು ತಂದು ಹಾಕಿದ್ದು' ಎಂದು ಕೇಳಿದರು. ಗುಂಪಿನಲ್ಲಿ ಒಬ್ಬಾತ ಯಾಕ್ರಿ ಹಾಗೆ ಕೇಳ್ತೀರಿ, ನಾನೆ ಹಾಕಿದ್ದು. ಹಿಂದಿನ ಸರ್ಕಲ್‌ನಲ್ಲಿ ತಾಳತಪ್ಪಿ ಹಾಡಿದವರಿಗೆ ಒಬ್ಬ ಮುದುಕ ಹೂವಿನ ಹಾರ ತಂದು ಹಾಕಿದಾಗ ನೀವು ಸುಮ್ಮನೆ ಇದ್ದಿರಿ. ಹೊನ್ನಪ್ಪನವರು ಹಾಡಿ ಜನಗಳನ್ನು ಸಂತೋಷಪಡಿಸಿದ್ದಕ್ಕಾಗಿ ನಮ್ಮ ಸಂತೋಷ, ನಾವು ತಂದು ಹಾಕಿದ್ದೇವೆ! ನೀವ್ಯಾರು ಕೇಳಲಿಕ್ಕೆ" ಎಂದು ಹೇಳಿಬಿಟ್ಟ. ಈ ಮಾತು ಎರಡು ಗುಂಪುಗಳ ನಡುವಿನ ವಿರಸಕ್ಕೆ ಕಾರಣವಾಯಿತು. ಈ ವಿಚಾರ ಕೇಳಿ ಅಲ್ಲೇ ಅಂಗಡಿಯಲ್ಲಿದ್ದ ಹೊನ್ನಪ್ಪನವರ ಗುರು ಅರುಣಾಚಲಪ್ಪನವರು "ಯಾಕೋ ಸರಿಹೋಗಲಿಲ್ಲ, ಇದು ಸ್ವಲ್ಪ ಅನರ್ಥಕ್ಕೆ ಗುರಿಯಾಗಬಹುದು" ಎಂದು ಭಾವಿಸಿದರು.

ಈ ನಡುವೆಯೂ ಭಜನಾವೃಂದದವರು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಹೋಗಿ ಭಜನೆ ಮುಂದುವರೆಸಿದರು. ಆಗ ಹಿರಿಯ ವಿದ್ವಾಂಸರಾದ ನಾರಾಯಣಸ್ವಾಮಿ ಭಾಗವತರ್ ದೇವಸ್ಥಾನದ ಬಳಿಗೆ ಬಂದು ಭಜನಾವೃಂದದಲ್ಲಿದ್ದ ಹೊನ್ನಪ್ಪನವರನ್ನು ಕರೆದು, "ಅರುಣಾಚಲಪ್ಪನವರು ಹೇಳಿದ್ರು, ನೀನಿಲ್ಲಿಂದ ಹೀಗೆ ಮನೆಗೆ ಹೋಗಿಬಿಡು. ಈ ಭಜನಾ ಗೋಷ್ಠಿಯಲ್ಲಿ ಇರಬೇಡ ಎಂಬುದಾಗಿ ತಿಳಿಸಬೇಕೆಂದು ಹೇಳಿದ್ದಾರೆ. ಈಗಲೇ ಹೊರಟುಬಿಡು" ಎಂದು ಹೇಳಿದರು. ಅದೇ ರೀತಿ ಹೊನ್ನಪ್ಪನವರು ಹಾಗೂ ಹಿರಿಯ ವಿದ್ವಾಂಸರಾದ ಪಿಟೀಲು ತಾಯಪ್ಪನವರ ಶಿಷ್ಯರಾದ ವಿದ್ವಾನ್ ಪುಟ್ಟಸ್ವಾಮಪ್ಪನವರು ಇಬ್ಬರೂ ಒಟ್ಟಾಗಿ ಮನೆಗೆ ಹೊರಟರು. ಈ ಪ್ರಸಂಗವನ್ನು ಯಾತಕ್ಕಾಗಿ ಇಲ್ಲಿ ಹೇಳಬೇಕಾಗಿ ಬಂತೆಂದರೆ, ಹೊನ್ನಪ್ಪನವರು ಸಂಗೀತ, ರಂಗಭೂಮಿ, ಹರಿಕಥೆ ಹಾಗೂ ಚಲನಚಿತ್ರ ಪ್ರಪಂಚದಲ್ಲಿ ಹೆಸರು ಪಡೆದವರು. ಈ ಕ್ಷೇತ್ರಗಳಲ್ಲಿ ಅವರು ಯಶಸ್ವಿಯಾಗಿ ಮುಂದುವರೆಯುತ್ತಿರುವುದನ್ನು ಕಂಡು ಸಹಿಸಲಾರದೆ "ಕೆಲವು ಕಲಾವಿದರುಗಳು" ಪ್ರಾರಂಭದಲ್ಲಿ ಹೊನ್ನಪ್ಪನವರಿಗೆ ಕಿರುಕುಳ ಕೊಟ್ಟರು. ಇದನ್ನು ತಿಳಿಸುವುದಕ್ಕಾಗಿ ಈ ಪ್ರಸಂಗವನ್ನು ಹೇಳಬೇಕಾಗಿ ಬಂತು ಅಷ್ಟೆ !

ಎರಡು ವಾರ ಕಳೆದ ನಂತರ 'ಶ್ರೀ ರಾಜರಾಜೇಶ್ವರಿ' ತಮಿಳು ಚಿತ್ರದ ಕೆಲಸಕ್ಕಾಗಿ ಹೊನ್ನಪ್ಪನವರು ಮಾಡ್ರನ್ ಥಿಯೇಟರ್ಸ್‌ಗೆ ಹೋದರು. ಆ ಚಿತ್ರದಲ್ಲಿ ಹೊನ್ನಪ್ಪನವರು ಹಾಗೂ ಕೆ.ಎಲ್.ವಿ. ವಸಂತ ಮುಖ್ಯನಾಯಕ-ನಾಯಕಿಯ ಪಾತ್ರ ವಹಿಸಿದ್ದರು. ನಿರ್ದೇಶನ ಟಿ.ಆರ್. ಸುಂದರಮ್ ಅವರದೇ. ಈ ಚಿತ್ರದಲ್ಲಿ ಕೆಲಸ ಸುಮಾರು ಮೂರು ತಿಂಗಳಲ್ಲಿ ಮುಗಿಯುತ್ತದೆ. ಎನ್ನುವಾಗಲೇ ಮತ್ತೆ ಸುಂದರಂ ಅವರೇ 'ಬರ್ಮಾ ರಾಣಿ' ಎಂಬ ತಮಿಳು ಸಾಮಾಜಿಕ ಚಿತ್ರದ ಜೊತೆಗೆ ಮದ್ರಾಸಿನ ಶ್ರೀ ಕೃಷ್ಣ ಫಿಲಂಸ್ ಕಂಪನಿಯ ನಿರ್ಮಾಪಕರಾದ ಲೇನಾ ಚೆಟ್ಟಿಯವರು 'ಪ್ರಭಾವತಿ' ಎಂಬ ತಮಿಳು ಚಿತ್ರಕ್ಕೆ ಹೊನ್ನಪ್ಪನವರನ್ನು ಗೊತ್ತು ಮಾಡಿಕೊಂಡರು. ಈ ಎರಡೂ ಚಿತ್ರಗಳ ಒಪ್ಪಂದ ಮುಗಿಸಿಕೊಂಡು ಬೆಂಗಳೂರಿಗೆ ಬಂದ ಕೆಲವೇ ದಿವಸಗಳ ನಂತರ 'ಬರ್ಮಾ ರಾಣಿ' ಚಿತ್ರದ ಕೆಲಸಕ್ಕಾಗಿ ಹೊನ್ನಪ್ಪನವರು ಸೇಲಂ ಮಾಡ್ರನ್ ಥಿಯೇಟರ್ಸ್‌ಗೆ ಹೊರಟರು. ಚಿತ್ರದ ಕೆಲಸವೂ ಆರಂಭವಾಯಿತು. ಆ ಸಂದರ್ಭದಲ್ಲಿಯೇ ಇವರು ತಮ್ಮ ನೀಳವಾದ ತಲೆಯ ಕೂದಲನ್ನು ಕತ್ತರಿಸಿಕೊಂಡು ಕ್ರಾಪ್ ಮಾಡಿಸಿಕೊಂಡದ್ದು. ಈ ಚಿತ್ರದ ಷೂಟಿಂಗ್ ಸಂದರ್ಭದಲ್ಲಿ ಕೆಲವು ವಿಚಿತ್ರ ಸಂದರ್ಭಗಳು ಜರುಗಿದವು. ಒಂದು ಸನ್ನಿವೇಶದಲ್ಲಿ ಹೊನ್ನಪ್ಪನವರು ಸಿಗರೇಟು ಸೇದಬೇಕಾಯಿತು! ಆದರೆ ಅವರಿಗೆ ಅದನ್ನು ಸೇದುವ ಅಭ್ಯಾಸವಿರಲಿಲ್ಲ. ಹೊನ್ನಪ್ಪನವರು ಎಷ್ಟು ಹೇಳಿದರೂ ನಿರ್ದೇಶಕರು ಕೇಳಲಿಲ್ಲ. 'ಏನಾಗುತ್ತೆ ನೋಡೋಣ. ಈ ಸನ್ನಿವೇಶಕ್ಕೆ ಬೇಕಾಗಿದೆ. ನೀವು ಸೇದಲೇಬೇಕು'

ಎಂದು ಹೇಳಿದರು. ಅಲ್ಲದೆ 'ಮೊದಲು ಒಂದು ಸ್ಟೈಲಿನಲ್ಲಿ ಈ ರೀತಿ ಸೇದಬೇಕು' ಎಂದು ನಿರ್ದೇಶಕರು ತೋರಿಸಿಕೊಟ್ಟರು. ವಿಧಿಯಿಲ್ಲದೆ ಹೊನ್ನಪ್ಪನವರು ಸಿಗರೇಟು ಸೇದಲೇಬೇಕಾಯಿತು. 'ಸರಿ ಇನ್ನೇನು ಮಾಡುವುದು' ಎಂದು ಸಿಗರೇಟು ಹಚ್ಚಿ ಒಂದು ದಂ ಎಳೆಯುವಾಗ್ಗೆ ಕೆಮ್ಮು ಶುರುವಾಯಿತು. ಆಗ ನಿರ್ದೇಶಕರು 'ನೀನು ಹೀಗಿದ್ದರೆ ಹೇಗೆ? ಹೇಗಾಗುತ್ತೆ? ಇವನ್ನೆಲ್ಲಾ ಸ್ವಲ್ಪ ಅಭ್ಯಾಸವಿಟ್ಟುಕೊಳ್ಳಬೇಕು' ಎಂದು ಹೇಳುತ್ತಾ ಹೊನ್ನಪ್ಪನವರನ್ನು ಗೇಲಿ ಮಾಡಿದರು. 'ಹಾಗೆ ಆಗಲಿ ಸಾರ್, ನಿಮ್ಮ ಚಿತ್ರಕ್ಕಾಗಿ ಸ್ವಲ್ಪ ಅಭ್ಯಾಸ ಮಾಡಿಕೊಳ್ಳುತ್ತೇನೆ' ಎಂದು ಹೇಳಿ ಚಿತ್ರದ ಸನ್ನಿವೇಶಕ್ಕೆ ತಕ್ಕಂತೆ ನಟಿಸಿದರು.

ಇನ್ನೊಂದು ಸನ್ನಿವೇಶದಲ್ಲಿ, ಜಪಾನಿನವರು ಬರ್ಮಾದಲ್ಲಿ ಯುದ್ಧ ನಡೆಸುತ್ತಿದ್ದ ಸಂದರ್ಭದ ಕತೆಯನ್ನು ಆಧರಿಸಿದ್ದು 'ಬರ್ಮಾ ರಾಣಿ' ಚಿತ್ರ. ಅದರಲ್ಲಿ ಕತೆಯ ನಾಯಕ ಜಪಾನಿನ ಯೋಧನನ್ನು ಹೊಡೆದು ಸಾಯಿಸಬೇಕಾದ ಒಂದು ದೃಶ್ಯದಲ್ಲಿ ನಿರ್ದೇಶಕರು ಕಪ್ಪಗಿರುವ ದಪ್ಪನೆಯ ಮರದ ಒಂದು ದೊಣ್ಣೆಯನ್ನು ನಾಯಕ ಪಾತ್ರ ವಹಿಸಿದ್ದ ಹೊನ್ನಪ್ಪನವರ ಕೈಗೆ ಕೊಟ್ಟು "ಈ ದೃಶ್ಯದಲ್ಲಿ ಅವನನ್ನು ಚೆನ್ನಾಗಿ ಹೊಡೆದು ಸಾಯಿಸಬೇಕು" ಎಂದು ಹೇಳಿದರು. ಆದರೆ ಇಂಥ ಸಂದರ್ಭದಲ್ಲಿ ರಟ್ಟಿನಿಂದ ಮಾಡಿದ ಕೃತಕವಾದ ಕಟ್ಟಿಗೆಯನ್ನು ಹೊಡೆಯಲು ಕೊಡುವುದು ರೂಢಿ. ಅದನ್ನು ಬಿಟ್ಟು ಸಹಜವಾದ ಕರಿದೊಣ್ಣೆಯನ್ನು ಕೊಟ್ಟಿದ್ದರು. ಆ ಮಾತು ಕೇಳಿದಾಕ್ಷಣವೇ ಹೊನ್ನಪ್ಪನವರ ಎದೆ ನಡುಗಿತು. ಆ ದೃಶ್ಯದಲ್ಲಿ "ಹ್ಯಾಗೆ ಇದನ್ನು ಮಾಡುವುದು" ಎಂದುಕೊಂಡು ಹೊನ್ನಪ್ಪನವರು ಧೈರ್ಯತಂದುಕೊಂಡರೂ ಅವರ ಕೈ ಆ ಸಾಹಸಕ್ಕೆ ಸಹಕರಿಸಲಿಲ್ಲ.

## ಶಾಪಗ್ರಸ್ತ ಪ್ರದ್ಯುಮ್ನ

ಕ್ಯಾಮರಾ ಸ್ಟಾರ್ಟ್ ಆಯಿತು. ನಿರ್ದೇಶಕರು ಸ್ಟಾರ್ಟ್ ಎಂದರು, ಕ್ಯಾಮರಾ ಓಡುತ್ತಿತ್ತು, ಹೊನ್ನಪ್ಪನವರು ಓಡಿಬಂದದ್ದೇ ಅವನನ್ನು ಚೆನ್ನಾಗಿ ಹೊಡೆಯಬೇಕೆಂದು ಎಷ್ಟು ಧೈರ್ಯ ಮಾಡಿಕೊಂಡರೂ ಅವರ ಕೈ ಆ ಸಾಹಸಕ್ಕೆ ಸಹಕರಿಸಲಿಲ್ಲ. ಒಡನೆಯೇ ನಿರ್ದೇಶಕರು ಕಟ್ ಕಟ್ ! ಎಂದರು. 'ಹೀಗೆ ನಟಿಸಿದರೆ ನಾನು ಏನು ಮಾಡುವುದು? ನನಗೆ ಶಾಟ್ ಚೆನ್ನಾಗಿ ಬರಬೇಕು' ಎಂದು ಕೋಪದಿಂದಲೇ ನಿರ್ದೇಶಕರು ಹೇಳಿದರು. ಆಗ ಹೊನ್ನಪ್ಪನವರು 'ಅವನಿಗೆ ಜಾಸ್ತಿ ಏಟುಬಿದ್ದರೆ ಅವನ ಗತಿ ಏನ್ಸಾರ್' ಎಂದರು ತಾಳ್ಮೆಯಿಂದಲೆ. 'ಆ ವಿಷಯವಾಗಿ ನೀನು ಯಾಕ್ ಯೋಚನೆ ಮಾಡ್ತಿಯಾ? ಅವನ ಜವಾಬ್ದಾರಿ ನನಗೆ ಸೇರಿದ್ದು. ಒಂದು ಸಮಯ ಏಟುಬಿದ್ದು ಅವನು ಸತ್ತರೆ ಆ ಕಷ್ಟ–ಸುಖಕ್ಕೆ ಭಾಗಿಯಾಗುವವನು ನಾನು. ನೀನು ಸರಿಯಾಗಿ ನಟಿಸಿ ಅವನನ್ನು ಸರಿಯಾಗಿ

ಹೊಡೆಯಬೇಕು. ಈಗ ತೆಗೆಯುವ ಒಂದೇ ಶಾಟ್‌ನಲ್ಲಿ ಆ ದೃಶ್ಯ ಮುಗಿಯಬೇಕು. ಮತ್ತೆ ರೀಟೇಕ್ ಮಾಡಲು ಸಾಧ್ಯವಿಲ್ಲ' ಎಂದು ನಿರ್ದೇಶಕರು ಖಡಾ ಖಂಡಿತವಾಗಿ ಹೇಳಿಬಿಟ್ಟರು. ನಿರ್ದೇಶಕರು ಗೇಲಿಮಾಡಿ ಮಾತನಾಡಿದ್ದರಿಂದ ಹೊನ್ನಪ್ಪನವರಿಗೆ ರೋಷ ಬಂದು ಅವರು ಹೇಳಿದಂತೆಯೇ ಹೊಡೆದೇ ಬಿಟ್ಟರು.

ಏಟುಬಿದ್ದ ತಕ್ಷಣ ಆತ ಹ್ಹಾ... ಎಂದು ಚೀರುತ್ತ ಕೆಳಗೆ ಬಿದ್ದುಬಿಟ್ಟ. ಆಗ ಸೆಟ್ಟಿನಲ್ಲಿದ್ದವರಿಗೆಲ್ಲ ಗಾಬರಿಯಾಯಿತು. ನಿರ್ದೇಶಕರು ಮಾತ್ರ 'ವೆರಿಗುಡ್ ಶಾಟ್ ಓಕೆ' ಎಂದು ಖುಷಿಯಿಂದ ಕೂಗಿಕೊಂಡರು. ಹೊನ್ನಪ್ಪನವರಿಗೆ ಏನೂ ತೋಚದೆ ಅವನ ಹಣೆಯಮೇಲೆ ಬಂದ ರಕ್ತವನ್ನು ನೋಡಿ ಮೂರ್ಛೆ ಬರುವಂತಾಯಿತು. ಅವನನ್ನು ಉಪಚರಿಸುತ್ತಿರುವಾಗ್ಗೆ 'ವ್ಯಾನ್ ತೆಗೆದುಕೊಂಡು ಬಂದು ಅವನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸಿಬಿಡಿ. ಮುಂದಿನ ವಿಷಯ ಮಾತನಾಡುತ್ತೇನೆ' ಎಂದು ನಿರ್ದೇಶಕರು ಹೇಳಿದರು. ಆಸ್ಪತ್ರೆಯ ಮುಖ್ಯ ವೈದ್ಯರನ್ನು ಫೋನಿನ ಮೂಲಕ ಕೂಗಿ 'ಒಬ್ಬ ರೋಗಿ ಬರುತ್ತಿದ್ದಾನೆ ಅವನಿಗೆ ಸ್ವಲ್ಪ ಏಟು ಬಿದ್ದಿದೆ ಸರಿಯಾದ ರೀತಿಯಲ್ಲಿ ಗಮನಿಸಿ, ಮುಂದಿನ ವಿಷಯ ಅನಂತರ ತಿಳಿಸುತ್ತೇನೆ' ಎಂತಲೂ ನಿರ್ದೇಶಕರು ಹೇಳಿದರು. ಈ ಚಿತ್ರ ಮುಗಿಯುವಾಗ್ಗೆ ಮತ್ತೊಂದು 'ಅರುಂಧತಿ' ಎಂಬ ಪೌರಾಣಿಕ ಚಿತ್ರಕ್ಕೆ ಹೊನ್ನಪ್ಪನವರನ್ನು ಇದೇ ಮಾಲೀಕರು ಒಪ್ಪಿಸಿಕೊಂಡರು. ಸುಮಾರು ಎರಡು ತಿಂಗಳಲ್ಲಿ ಬರಬೇಕಾಗುತ್ತದೆಂದು ತಿಳಿಸಿದರು. ಆಗ ಹೊನ್ನಪ್ಪನವರು 'ಪ್ರಭಾವತಿ' ಚಿತ್ರಕ್ಕಾಗಿ ಮದ್ರಾಸ್ ಕೃಷ್ಣ ಫಿಲಂಸ್‌ಗೆ ಹೊರಟರು. 'ಪ್ರಭಾವತಿ' ಚಿತ್ರದಲ್ಲಿ ಹೊನ್ನಪ್ಪನವರು ನಾಯಕರಾಗಿಯೂ, ಟಿ.ಆರ್. ರಾಜಕುಮಾರಿ ಮತ್ತು ಧನಲಕ್ಷ್ಮಿ ಎಂಬುವರು ನಾಯಕಿಯರಾಗಿಯೂ ಪಾತ್ರವಹಿಸಿದರು. ಚಿತ್ರದ ಷೂಟಿಂಗ್ ಸಂದರ್ಭದಲ್ಲಿ ಸ್ವಾರಸ್ಯಕರವಾದ ಪ್ರಸಂಗವೊಂದು ಜರುಗಿತು.

ಏನೆಂದರೆ ದೂರ್ವಾಸ ಋಷಿಗಳಿಂದ ಪ್ರದ್ಯುಮ್ನನಿಗೆ ಶಾಪ ಬಂದು ಪ್ರದ್ಯುಮ್ನ ಹದಿನೈದು ದಿವಸ ಹೆಂಗಸಾಗಿಯೂ ಹದಿನೈದು ದಿವಸ ಗಂಡಸಾಗಿಯೂ ಇರುವಂಥ ಒಂದು ಸನ್ನಿವೇಶ. ಈ ಚಿತ್ರದಲ್ಲಿ ಆಗ ಪ್ರಸಿದ್ಧರಾಗಿದ್ದ ಎನ್.ಎಸ್.ಕೃಷ್ಣನ್, ಟಿ.ಎ. ಮಧುರಂ– ಇತ್ಯಾದಿ ಹೆಸರಾದಂಥ ಕಲಾವಿದರು ನಟಿಸುತ್ತಿದ್ದರು. ಹೊನ್ನಪ್ಪನವರ ಸ್ತ್ರೀ ಪಾತ್ರದ ಷೂಟಿಂಗ್ ನೋಡಬೇಕೆಂಬ ಕುತೂಹಲ ಅನೇಕರಿಗೆ. ಅವರಲ್ಲಿ ಎನ್.ಎಸ್. ಕೃಷ್ಣನ್, ಟಿ.ಎ. ಮಧುರಂ ಇಬ್ಬರೂ ಹೊನ್ನಪ್ಪನವರು ಸ್ತ್ರೀ ಪಾತ್ರ ಮಾಡುವುದನ್ನು ನೋಡಿ ಸಂತೋಷಪಟ್ಟು ಷೂಟಿಂಗ್ ನಡೆಯುತ್ತಿರುವಾಗ್ಗೆ ತಮ್ಮ ತಮ್ಮ ಸ್ನೇಹಿತರಿಗೆಲ್ಲ ದೂರವಾಣಿಯ ಮೂಲಕ ವಿಷಯ ತಿಳಿಸಿ ಷೂಟಿಂಗ್ ನಡೆಯುತ್ತಿದ್ದ ಸ್ಥಳಕ್ಕೆ ಕರೆಸಿಕೊಳ್ಳುತ್ತಿದ್ದರು.

ಅಪಾರಸಂಖ್ಯೆಯಲ್ಲಿ ಸೇರುತ್ತಿದ್ದ ಜನ ಹೊನ್ನಪ್ಪನವರ ಸ್ತ್ರೀ ಪಾತ್ರದ ಅಭಿನಯವನ್ನು ಕಂಡು ನಗತೊಡಗಿದ್ದರು. ಅವರ ನಗುವಿನಿಂದ ಚಿತ್ರದ ಕೆಲಸಕ್ಕೆ ತೊಂದರೆ ಯಾಗುತ್ತಿತ್ತು. ಕಾರಣಾಂತರಗಳಿಂದ ಚಿತ್ರ ಮುಗಿಯಲು ಸ್ವಲ್ಪ ಸಾವಕಾಶವಾಯಿತು. ಆ ಸಂದರ್ಭದಲ್ಲಿ ಜರ್ಮನ್ ಯುದ್ಧ ಭೀತಿ ಇದ್ದುದರಿಂದ ಮದ್ರಾಸ್‌ಗೆ ಬಾಂಬ್ ಬೀಳುತ್ತದೆಂಬ ಭಯವಿತ್ತು. ಆಗ ಮದ್ರಾಸ್‌ನಲ್ಲಿ ಏರ್ಪಾಡಾಗಿದ್ದ ಚಿತ್ರದ ಕೆಲಸಗಳನ್ನು ಸೇಲಂ ಕೊಯಮತ್ತೂರಿನಲ್ಲಿ ಮುಗಿಸಬೇಕಾಗಿತ್ತು. ಅದರಂತೆ 'ಪ್ರಭಾವತಿ' ಹಾಗೂ 'ಅರುಂಧತಿ' ಚಿತ್ರಗಳನ್ನು ಸೇಲಂನಲ್ಲಿಯೇ ಮುಗಿಸಬೇಕಾಯಿತು.

ಅರುಂಧತಿ ಚಿತ್ರದ ಷೂಟಿಂಗ್ ಸಂದರ್ಭದಲ್ಲಿ ಮರೆಯಲಾರದ ಪ್ರಸಂಗವೊಂದು ಜರುಗಿತು. ಹೊನ್ನಪ್ಪನವರು ಅರುಂಧತಿ ಚಿತ್ರದಲ್ಲಿ ಅಗ್ನಿಯ ಹೆಂಡತಿ ಪಾತ್ರವನ್ನು ಸಂತಾನಲಕ್ಷ್ಮಿ ವಹಿಸಿದ್ದರು. ಅಗ್ನಿಯು ತನ್ನ ಹೆಂಡತಿಯನ್ನು ಕಾಲಿನಿಂದ ಒದೆಯಬೇಕಾದ ಒಂದು ಸಂದರ್ಭ. ಷೂಟಿಂಗ್ ನಡೆಯುವಾಗ ಹೊನ್ನಪ್ಪನವರಿಗೆ ಅಗ್ನಿಯ ಪಾತ್ರಧಾರಿಗೆ ತಮ್ಮ ಕಾಲಿನಿಂದ ಒದೆಯಲಿಕ್ಕೆ ಮನಸ್ಸಾಗಲಿಲ್ಲ. ಒಂದು ಶಾಟ್‌ನಲ್ಲಿ ಒದ್ದರು, ಅದು ಸರಿಯಾಗಿ ಬರಲಿಲ್ಲ. ನಿರ್ದೇಶಕರು 'ಈ ರೀತಿ ಮಾಡಿದರೆ ಹೇಗೆ? ಮತ್ತು ರೀಟೇಕ್ ಮಾಡುವೆ. ಜೋರಾಗಿ ಒದೆಯಬೇಕು' ಎಂದರು. ಒದೆಸಿಕೊಳ್ಳಬೇಕಾದ ನಟಿ ಸಂತಾನ ಲಕ್ಷ್ಮಿಯವರು ಒಂದು ರೀತಿಯ ಗೇಲಿ ರೂಪದಲ್ಲಿ ಹೊನ್ನಪ್ಪನವರನ್ನು 'ಬೇರೆ ರಸಿಕತನ ನಿಮ್ಮಲ್ಲಿ ಇಲ್ಲ. ಸರಿಯಾಗಿ ಒದೆಯಲಿಕ್ಕೂ ಬರುವುದಿಲ್ಲವೆ?' ಎಂದು ಹೇಳಿ ನಕ್ಕರು. ಈ ಮಾತುಗಳಿಂದ ಅಲ್ಲಿದ್ದವರೆಲ್ಲ ಸುಮಾರು 15–20 ನಿಮಿಷಗಳ ಕಾಲ ನಗಲಿಕ್ಕೆ ಆರಂಭಿಸಿದರು. ಅದರಿಂದ ಹೊನ್ನಪ್ಪನವರು ಪೆಚ್ಚಾಗಿ ಒಂದು ಕಡೆ ಕುಳಿತುಬಿಟ್ಟರು. ಆಮೇಲೆ ನಟಿ ಸಂತಾನಲಕ್ಷ್ಮಿ 'ಚೆನ್ನಾಗಿ ಒದೀರಿ–ಶಾಟ್ ಚೆನ್ನಾಗಿ ಬರಲಿ ಎಂದರು. ತನ್ನ ಸುತ್ತ ಮುತ್ತ ನಡೆದ ವಿದ್ಯಮಾನಗಳಿಂದ ಹೊನ್ನಪ್ಪನವರಿಗೂ ರೋಷ ಉಕ್ಕಿ ಬಂತು ! ಒಂದೇ ಶಾಟ್‌ನಲ್ಲಿ ಸಖತ್ತಾಗಿ ಒದ್ದೇ ಬಿಟ್ಟರು. ಒದೆಸಿಕೊಂಡ ನಟಿ 'ಅಮ್ಮಾ', ಎನ್ನುತ್ತ ಅಂಗಾತ ಬಿದ್ದಳು, ಆಗ ನಿರ್ದೇಶಕರು 'ಶಹಭಾಷ್' ಎಂದು ಹೊನ್ನಪ್ಪನವರ ಕೈಕುಲುಕಿ ಸಂತೋಷ ವ್ಯಕ್ತಪಡಿಸಿದರು. ಆದರೆ ಆ ನಟಿಯನ್ನು ಸುಧಾರಿಸಬೇಕಾದರೆ ಸುಮಾರು ಅರ್ಧ ಗಂಟೆ ಕಾಲ ಬೇಕಾಯಿತು. ನಂತರ ಆಕೆ 'ಚೆನ್ನಾಗಿ ನಟನೆ ಮಾಡಿ ಅಂತ ಹೇಳಿದರೆ ಹೀಗಾ ಒದೆಯೋದು. ಅಕಸ್ಮಾತ್ ನಾನು ಸತ್ತಿದ್ದರೆ ಗತಿಯೇನು ? ಅಂತ ಪರಿತಪಿಸಿದರು. ಅದಕ್ಕೆ ನಿರ್ದೇಶಕರು 'ನೀನೇ ತಾನೆ ಹೇಳಿದ್ದು ಚೆನ್ನಾಗಿ ಒದೀರಿ, ಶಾಟ್ ಚೆನ್ನಾಗಿ ಬರಲಿ ಅಂತ, ಆ ಕೆಲಸವನ್ನು ಸೊಗಸಾಗಿ ಹೊನ್ನಪ್ಪನವರು ಮಾಡಿದರು, ಎಂದು ಉತ್ತರಿಸಿದರು. ಕೊನೆಗೆ ಹೊನ್ನಪ್ಪನವರು

ಆಕೆಗೆ ಸಮಾಧಾನ ಮಾಡಿದರು. ಕಸುಬಿನಲ್ಲಿ ಇದೆಲ್ಲವೂ ಸಹಜವೆಂದು ಆಕೆಯೂ ಒಪ್ಪಿಕೊಂಡಳು.

ಇವೆರಡೂ ಚಿತ್ರಗಳು ಮುಗಿಯುವ ಸಂದರ್ಭದಲ್ಲಿ ತಮಿಳು ಚಿತ್ರಗಳಲ್ಲಿ ಆಗ ಅಪಾರವಾದ ಕೀರ್ತಿ ಗಳಿಸಿದ್ದ ತ್ಯಾಗರಾಜ ಭಾಗವತರು 'ಕೆಲವು ಘಟನೆಗಳಿಂದ' ಜೈಲುವಾಸ ಅನುಭವಿಸಬೇಕಾಗಿ ಬಂತಂತೆ! 'ಅಂಬಿಕಾ ಪತಿ' ಚಿತ್ರದಲ್ಲಿ ಹೊನ್ನಪ್ಪನವರ ಪಾತ್ರದ ವಿಚಾರವಾಗಿ ನಡೆಸಿದ್ದ ರಾಜಕೀಯವೆಲ್ಲಾ ತ್ಯಾಗರಾಜ ಭಾಗವತರಿಗೆ ಜೈಲಿನಲ್ಲಿದ್ದಾಗ ನೆನಪಾಗಿರಬೇಕು ! ಆದ್ದರಿಂದಲೇ ತ್ಯಾಗರಾಜ ಭಾಗವತರು ತಮ್ಮನ್ನು ಈ ಮೊದಲು ಗೊತ್ತುಮಾಡಿದ್ದ ನಿರ್ಮಾಪಕರುಗಳಿಗೆ 'ನಾನು ಮಾಡಬೇಕಾಗಿದ್ದ ನಿಮ್ಮ ಚಿತ್ರಗಳಲ್ಲಿ ನನ್ನಷ್ಟೇ ಅತ್ಯುತ್ತಮವಾಗಿ ಅಭಿನಯಿಸುವ ಹೊನ್ನಪ್ಪ ಭಾಗವತರನ್ನು ನೇಮಿಸಿಕೊಳ್ಳಿ, ನಾನಿದ್ದಂತೆಯೇ ಇರುತ್ತಾರೆ' ಎಂದು ಹೇಳಿಕಳಿಸಿದ್ದರು. ಹಾಗಾಗಿ ತ್ಯಾಗರಾಜ ಭಾಗವತರು ಅಭಿನಯಿಸಬೇಕಾಗಿದ್ದ ಚಿತ್ರಗಳು ಹೊನ್ನಪ್ಪ ಭಾಗವತರ ಪಾಲಾದವು. ಹೀಗಾಗಿ ತಮಿಳು ಚಿತ್ರದಲ್ಲಿ ತ್ಯಾಗರಾಜ ಭಾಗವತರು ಕೀರ್ತಿಗಳಿಸಿದಂತೆಯೇ ಹೊನ್ನಪ್ಪ ಭಾಗವತರೂ ಅಪಾರ ಜನಪ್ರಿಯತೆಯನ್ನು ಗಳಿಸಿದರು.

ಕೊಯಮತ್ತೂರು ಸೆಂಟರ್ ಸ್ಟುಡಿಯೋದಲ್ಲಿ ಜುಪಿಟರ್ ಪಿಕ್ಚರ್ಸ್‌ನವರು ತಯಾರಿಸುತ್ತಿದ್ದ 'ವಾಲ್ಮೀಕಿ ಮತ್ತು ಶ್ರೀ ಮುರುಗನ್' ಹಾಗೂ ಬೇರೊಬ್ಬ ನಿರ್ಮಾಪಕರು ತಯಾರಿಸಬೇಕಾಗಿದ್ದ 'ಕುಂಡಲ ಕೇಶಿ' ಎಂಬ ಮೂರು ಚಿತ್ರಗಳಿಗೆ ಹೊನ್ನಪ್ಪನವರು ಒಪ್ಪಂದ ಮಾಡಿಕೊಂಡರು. ಅಷ್ಟರಲ್ಲಿ ಸೇಲಂ ಮಾಡ್ರನ್ ಥಿಯೇಟರ್ಸ್‌ನವರು 'ಸುಭದ್ರ' ಎಂಬ ಚಿತ್ರದ ಕೃಷ್ಣನ ಪಾತ್ರಕ್ಕಾಗಿ ಹೊನ್ನಪ್ಪನವರನ್ನು ಒಪ್ಪಿಸಿಕೊಂಡರು. ಈ ಚಿತ್ರಗಳ ಕೆಲಸ ನಡೆಯುತ್ತಿದ್ದಂತೆಯೇ ಗುಬ್ಬಿ ವೀರಣ್ಣನವರು, ಮದ್ರಾಸ್ ನ್ಯೂ ಟೋನ್ ಸ್ಟುಡಿಯೋದಲ್ಲಿ "ಹೇಮರೆಡ್ಡಿ ಮಲ್ಲಮ್ಮ" ಎಂಬ ಚಿತ್ರವನ್ನು ಸೌಂದರರಾಜನ್ ಎಂಬುವವರ ನಿರ್ದೇಶಕತ್ವ ಹಾಗೂ ಭಾಗತ್ವದಲ್ಲಿ ತಯಾರಿಸಲು ಏರ್ಪಾಡಾಗಿದೆ. ಕನ್ನಡ ಭಾಷೆಯ ಈ ಚಿತ್ರದಲ್ಲಿ ಜಯಮ್ಮನವರೇ 'ಮಲ್ಲಮ್ಮ', "ನೀವೇ ಈಶ್ವರ ಜಂಗಮಯ್ಯನಾಗಿ ನಟಿಸಬೇಕಾಗುತ್ತದೆ, ಕೂಡಲೇ ಈ ಬಗೆಗೆ ಉತ್ತರ ಬರೆಯಿರಿ" ಎಂಬುದಾಗಿ ಸೇಲಂನಲ್ಲಿದ್ದ ಹೊನ್ನಪ್ಪನವರಿಗೆ ಪತ್ರ ಬರೆದರು.

### ನನ್ನ ಪ್ರತಿಭೆ ನನ್ನ ನಾಡಿಗೂ ಸೇರಬೇಕು

ಆದರೆ, ಆ ಸಮಯದಲ್ಲಿ ಹೊನ್ನಪ್ಪನವರಿಗೆ ಸೇಲಂ ಮತ್ತು ಕೊಯಮತ್ತೂರಿನಲ್ಲಿ ನಾಲ್ಕು ಚಿತ್ರಗಳಲ್ಲಿ ಕೆಲಸ ಮಾಡಬೇಕಾಗಿದ್ದರಿಂದಲೂ

ಮತ್ತು 'ಸುಭದ್ರ' ಚಿತ್ರದ ಸಲುವಾಗಿ ವೀರಣ್ಣನವರು ಕೊಟ್ಟ ಕಿರುಕುಳದಿಂದಲೂ 'ಹೇಮರೆಡ್ಡಿ ಮಲ್ಲಮ್ಮ'ದಲ್ಲಿ ಪಾತ್ರವಹಿಸುವುದೇ ಬೇಡವೆಂದೂ ಹೊನ್ನಪ್ಪನವರು ವೀರಣ್ಣನವರ ಪತ್ರಕ್ಕೆ ಉತ್ತರ ಬರೆಯಲಿಲ್ಲ. ಆದರೂ ವೀರಣ್ಣನವರು ಸುಮ್ಮನಿರಲಿಲ್ಲ. 'ನನ್ನ ವಿಷಯದಲ್ಲಿ ಅವರಿಗೆ ಬೇಸರವಾಗಿರಬಹುದು ಎಂದು ಭಾವಿಸಿ ತಾವೇ ಸೇಲಂಗೆ ಹೊರಟುಬಂದರು. ಹಿಂದಿನ ವಿಷಯಗಳ ಬಗೆಗೆ ಇಬ್ಬರಿಗೂ ಮಾತುಕತೆ ಜರುಗಿತು. ಕೊನೆಗೆ ಹೊನ್ನಪ್ಪನವರು 'ನನಗೆ ತಮಿಳುನಾಡಿನ ಚಿತ್ರ ಪ್ರಪಂಚದಲ್ಲಿ ಬಹಳ ಉತ್ತಮ ಸ್ಥಾನವನ್ನು ಈಶ್ವರ ಕೊಟ್ಟಿದ್ದಾನೆ. ಅಲ್ಲದೆ ಕೊಯಮತ್ತೂರು, ಸೇಲಂನಲ್ಲಿ ನಾಲ್ಕೈದು ಚಿತ್ರಗಳನ್ನು ಒಪ್ಪಿಕೊಂಡಿದ್ದೇನೆ. ಸೇಲಂಗೂ ಕೊಯಮತ್ತೂರಿಗೂ ಓಡಾಡಬೇಕಾಗಿದೆ. ನೀವು ಮದ್ರಾಸಿನಲ್ಲಿ ಚಿತ್ರ ನಿರ್ಮಿಸುವವರಿದ್ದೀರಿ. ಆದ್ದರಿಂದ ದಯವಿಟ್ಟು ನನ್ನ ಬಿಟ್ಟು ಬೇರೆ ಯಾರನ್ನಾದರೂ ಆ ಪಾತ್ರಕ್ಕೆ ಗೊತ್ತುಮಾಡಿಕೊಳ್ಳಿ' ಎಂದು ಹೇಳಿದರು. 'ನೀವು ಒಪ್ಪಿಕೊಳ್ಳುವವರೆಗೆ ನಾನು ಇಲ್ಲಿಂದ ಹೊರಡುವುದಿಲ್ಲ' ಎಂದು ವೀರಣ್ಣನವರು ಪಟ್ಟು ಹಿಡಿದರು. 'ನಿಮ್ಮ ಸೌಕರ್ಯಕ್ಕೆ ತಕ್ಕಂತೆ ಅನುಸರಿಸಿಕೊಂಡು ಮದ್ರಾಸಿನಲ್ಲಿ ನಮ್ಮ ಚಿತ್ರದ ಕೆಲಸವನ್ನು ಮುಗಿಸಿಕೊಳ್ಳುತ್ತೇವೆ' ಎಂದು ಹೇಳಿ ಕೊನೆಗೆ ಹೊನ್ನಪ್ಪನವರನ್ನು ಒಪ್ಪಿಸಿಕೊಂಡು ಹೊರಟರು.

ಕೊಯಮತ್ತೂರು ಮತ್ತು ಸೇಲಂನಲ್ಲಿ ಚಿತ್ರಗಳ ಕೆಲಸ ಮುಗಿಸಿಕೊಂಡ ಹೊನ್ನಪ್ಪನವರು 'ಹೇಮರೆಡ್ಡಿ ಮಲ್ಲಮ್ಮ' ಚಿತ್ರದಲ್ಲಿ ಕೆಲಸ ಮಾಡಲು ಒಪ್ಪಿ ಮದ್ರಾಸಿಗೆ ಹೋದರು. ಈ ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ವಿಚಿತ್ರ ಪ್ರಸಂಗ ಜರುಗಿತು : ಹೊನ್ನಪ್ಪನವರಿಗೆ ಜಂಗಮನ ಪಾತ್ರದ ಮೇಕಪ್ ಎಲ್ಲವೂ ಮುಗಿದಿತ್ತು. ಷೂಟಿಂಗ್‌ಗೆ ಹೊನ್ನಪ್ಪನವರು ಹಾಗೂ ಜಯಮ್ಮನವರು ಸಿದ್ಧವಾಗಿದ್ದಾದರೂ ಸುಮಾರು ಮೂರು ಗಂಟೆಗಳ ಕಾಲ ಸೆಟ್ಟಿನ ಮೇಲೆ ಇವರಿಬ್ಬರನ್ನು ಕರೆಯಲೇ ಇಲ್ಲ. ಈ ವಿಳಂಬಕ್ಕೆ ಕಾರಣವೇನೆಂಬುದೂ ಇವರಿಗೆ ತಿಳಿಯಲಿಲ್ಲ. ಬಹಳ ಹೊತ್ತಿನಿಂದ ಬೇಸರವಾಗಿದ್ದ ಹೊನ್ನಪ್ಪನವರು ಚಿತ್ರದ ಸಹಾಯಕ ನಿರ್ದೇಶಕರನ್ನು ಹತ್ತಿರಕ್ಕೆ ಕರೆದು 'ನಾವು ಸಿದ್ಧವಾಗಿ ಸುಮಾರು ಮೂರು ಗಂಟೆಗಳ ಕಾಲವಾಯಿತು, ವಿಷಯವೇನು? ಷೂಟಿಂಗ್‌ಗೆ ಏಕೆ ಕರೆಯಲೇ ಇಲ್ಲವಲ್ಲ !' ಎಂದು ಕೇಳಿದರು. ಬನ್ನಿ ಹೇಳುವೆ ಎಂದು ತುಂಬಾ ಗುಟ್ಟಾಗಿ ಹೊನ್ನಪ್ಪನವರನ್ನು ಒಳಗೆ ಕರೆದುಕೊಂಡು ಹೋದ ಸಹಾಯಕ ನಿರ್ದೇಶಕರು 'ಜಂಗಮನ ಪಾತ್ರ ವಹಿಸಿರುವ ನಿಮಗೆ ನಿಮ್ಮ ಶರೀರದ ಯಾವ ಭಾಗಕ್ಕೆ ಲಿಂಗ ಕಟ್ಟಬೇಕು ಎಂಬ ವಿಚಾರವಾಗಿ ಮಾಲೀಕರು, ನಿರ್ದೇಶಕರಾದಿಯಾಗಿ, ತಾಂತ್ರಿಕ ವರ್ಗದವರೆಲ್ಲ ಬೆಳಗ್ಗಿನಿಂದಲೂ ಚರ್ಚೆ ನಡೆಸುತ್ತಿದ್ದಾರೆ. ಒಂದು ನಿರ್ಧಾರಕ್ಕೆ ಬಂದ ತಕ್ಷಣ ನಿಮ್ಮಿಬ್ಬರನ್ನು

ಷೂಟಿಂಗ್‌ಗೆ ಆಹ್ವಾನಿಸುತ್ತೇನೆ' ಎಂದು ಹೇಳಿದರು. ಅದರಂತೆ ಮಧ್ಯಾಹ್ನ ಊಟವಾದ ನಂತರ ಇವರಿಬ್ಬರನ್ನು ಸೆಟ್ಟಿನ ಮೇಲೆ ಕರೆದರು. ಹೊನ್ನಪ್ಪನವರ ಎಡತೋಳಿನ ರಟ್ಟೆಗೆ ಲಿಂಗವನ್ನು ಕಟ್ಟಿದರು. ಈ ರೀತಿ ವಿಳಂಬಕ್ಕೆ ಕಾರಣವೇನೆಂದರೆ 'ಭಾಗವತರ ಕೊರಳಿಗೆ ಲಿಂಗ ಕಟ್ಟಿ ನಾನು ಕೈಮುಗಿಯಬೇಕೆ?' ಎಂಬುದೇ ವೀರಣ್ಣನವರ ವಾದವಾಗಿತ್ತಂತೆ ! ಈ ಸಂಗತಿ ಹೊನ್ನಪ್ಪನವರ ಕಿವಿಗೆ ಬಿತ್ತು. ಆಗ ಹೊನ್ನಪ್ಪನವರು 'ವೀರಣ್ಣನವರು ನಮ್ಮ ನಾಡಿನ ಬಹುದೊಡ್ಡ ಕಲಾವಿದರು. ರಂಗಭೂಮಿಯ ಹಿರಿಯ ಕಲಾವಿದರಾಗಿ, ಕಲೆಯ ವಿಷಯದಲ್ಲಿ ಯಾಕೆ ಈ ರೀತಿ ಯೋಚಿಸಿದರು?' ಎಂದು ಆಶ್ಚರ್ಯಪಟ್ಟರು. ಅದೇನಾದರೂ ಇರಲಿ ನಾಲ್ಕು ದಿವಸದಲ್ಲಿ ಚಿತ್ರದ ಕೆಲಸ ಮುಗಿಸಿಕೊಂಡು ಹೊನ್ನಪ್ಪನವರು ಕೊಯಮತ್ತೂರಿಗೆ ಹೊರಟರು. 'ಹೇಮರೆಡ್ಡಿ ಮಲ್ಲಮ್ಮ' ಚಿತ್ರದಲ್ಲಿ ಇವರು ನಾಲ್ಕು ಹಾಡುಗಳನ್ನು ಹಾಡಿದ್ದರು. ಅದರಲ್ಲಿ ಒಂದು ಪದ್ಯವನ್ನು ರಾಗಮಾಲಿಕೆಯಲ್ಲಿಯೂ ಇನ್ನೊಂದು ಸ್ಟುಡಿಯೋದಲ್ಲಿ ಕೇಳಿದ ಜನ ಅತ್ಯಂತ ಸಂತೋಷಪಟ್ಟಿದ್ದರು. ಅಲ್ಲದೆ, 'ಮಲ್ಲಮ್ಮ' ಚಿತ್ರದಲ್ಲಿ ಹಾಡಿರುವ ಎರಡು ಹಾಡುಗಳಂತೂ ತಮಿಳುನಾಡಿನಲ್ಲಿ ಆಗಿನ ಕಾಲದಲ್ಲಿ ಹೆಸರಾಗಿದ್ದಂಥ ಮಹಾ ಗಾಯಕ ನಟ ಕಿಟ್ಟಪ್ಪನವರು ಹಾಡಿದಂತೆಯೇ ಇವೆ ಎಂದು ನಮ್ಮ ಭಾವನೆ' ಎಂದು ಹೇಳುತ್ತಿದ್ದರು. ಆದರೆ ಚಿತ್ರ ಮುಗಿಯುವ ಸಂದರ್ಭದಲ್ಲಿ ತನ್ನ ಪಾಲಿನ ಚಿತ್ರದ ಕೆಲಸ ಮುಗಿಸಲು ಹೊನ್ನಪ್ಪನವರು ಸುಮಾರು ಒಂದು ವಾರ ಅವರಿಗೆ ಅವಕಾಶ ಕೊಟ್ಟು ಚಿತ್ರದ ಎಡಿಟಿಂಗ್ ಕೆಲಸ ಮುಕ್ಕಾಲುವಾಸಿ ನಡೆದಿತ್ತು. ಅದೇ ಸಂದರ್ಭದಲ್ಲಿ ಸಹನಿರ್ದೇಶಕರು ಬಹಳ ಕನಿಕರದಿಂದ 'ಸ್ವಾಮಿ ಭಾಗವತರೇ ಜನರೆಲ್ಲರೂ ಮೆಚ್ಚಿಕೊಂಡಿದ್ದ ನಿಮ್ಮ ಎರಡು ಹಾಡುಗಳು ಚಿತ್ರದಲ್ಲಿ ಇರುವುದಿಲ್ಲ. ಇದನ್ನು ನೀವು ನಂಬಿ, ಈ ವಿಷಯವಾಗಿ ವೀರಣ್ಣನವರ ಹತ್ತಿರ ನೀವು ಮಾತನಾಡಲೇಬೇಕು' ಎಂದು ಹೇಳಿದರು. ಪರಿಸ್ಥಿತಿ ಹೀಗಾಯಿತಲ್ಲ ಎಂದುಕೊಂಡ ಹೊನ್ನಪ್ಪನವರು ವೀರಣ್ಣನವರಲ್ಲಿ 'ಏನ್‌ಸ್ವಾಮಿ' ಯಜಮಾನರೇ ಚಿತ್ರದಲ್ಲಿ ನೀವು ನನಗೆ ಕೊಟ್ಟಿದ್ದ ನಾಲ್ಕು ಹಾಡುಗಳಲ್ಲಿ ಜನರೆಲ್ಲ ಕೇಳಿ ಮೆಚ್ಚಿಕೊಂಡಿದ್ದ ಒಂದು ರಾಗ ಮಾಲಿಕೆ, ಮತ್ತೊಂದು ಹಾಡು ಇವೆರಡೂ ಸಹ ಚಿತ್ರದಲ್ಲಿ ಇರುವುದಿಲ್ಲವೆಂಬ ವಿಷಯ ತಿಳಿಯಿತು. ಇದು ನಿಜವೇ? ನಿಮ್ಮ ಚಿತ್ರಗಳಲ್ಲಿ ನನಗೆ ಈ ತರಹ ತೊಂದರೆಗಳು ಉಂಟಾಗುತ್ತವೆಂದು ತಿಳಿದೇ 'ಹೇಮರೆಡ್ಡಿ ಮಲ್ಲಮ್ಮ' ಚಿತ್ರಕ್ಕೆ ಬರುವುದಿಲ್ಲ ಎಂದು ಸೇಲಂನಲ್ಲಿ ಹೇಳಿದ್ದು ನಿಮಗೆ ನೆನಪಿರಬಹುದು'. ಆಗ ವೀರಣ್ಣನವರು ಜಯಮ್ಮನವರ ಎದುರಿನಲ್ಲಿಯೇ ತಮ್ಮ ಕೊರಳಿನಲ್ಲಿದ್ದ ಲಿಂಗವನ್ನು ತೆಗೆದುಕೊಂಡು ತನ್ನ ಅಂಗೈಯಲ್ಲಿಟ್ಟುಕೊಂಡು 'ಈ ಲಿಂಗಕ್ಕೆ ಸಾಕ್ಷಿಯಾಗಿಯೂ ನಾನು ಆ ರೀತಿ ಮಾಡುವುದಕ್ಕೆ ಬಿಡುವುದಿಲ್ಲ, ಈ ಮಾತನ್ನ ನೀವು ನಂಬಿ'

ಎಂದು ಪ್ರಮಾಣ ಮಾಡಿದರು. ಆದರೆ ಚಿತ್ರ ಹೊರಗೆ ಬಂದಾಗ ಹೊನ್ನಪ್ಪನವರು ಹಾಡಿದ್ದ ಆ ಎರಡೂ ಹಾಡುಗಳು ಇರಲಿಲ್ಲವಂತೆ!

ಇದುವರೆಗೆ ಹೇಳಿದ ವಾಲ್ಮೀಕಿ, ಶ್ರೀ ಮುರುಗನ್, ಕುಂಡಲಕೇಶಿ, ಸುಭದ್ರೆ ಈ ನಾಲ್ಕು ತಮಿಳು ಚಿತ್ರಗಳಲ್ಲಿ ಹೊನ್ನಪ್ಪನವರು ಕಾರ್ಯ ನಿರ್ವಹಿಸುತ್ತಿರುವಾಗಲೇ 'ವಾಲ್ಮೀಕಿ' ಚಿತ್ರದ ಷೂಟಿಂಗ್ ಜರುಗುತ್ತಿತ್ತು. ಕಿರಾತಕನನ್ನು ರಾಜಭಟರು ಬಂಧಿಸಿ ರಾಜನ ದರ್ಬಾರಿಗೆ ಎಳೆದೊಯ್ಯುವ ಒಂದು ಸಂದರ್ಭ ಅದರಲ್ಲಿತ್ತು. ಇಲ್ಲೊಂದು ವಿಶೇಷ ನಡೆಯಿತು. ಕಿರಾತಕನಿಗೆ ಶಿಕ್ಷೆ ವಿಧಿಸುವ ಆ ಸನ್ನಿವೇಶದಲ್ಲಿ ಅವನನ್ನು ಹಗ್ಗದಿಂದ ಹಿಂಗಟ್ಟು ಮುಂಗಟ್ಟುಗಳನ್ನು ಕಟ್ಟಿ ರಾಜಭಟರು ಎಳೆದುಕೊಂಡು ಹೋದರು. ಈ ಸನ್ನಿವೇಶದ ಷೂಟಿಂಗ್ ಜರುಗುವಾಗ ಪೋಷಕ ನಟರೆಲ್ಲ ಸೇರಿ ಸುಮಾರು ನಾಲ್ಕುನೂರು ಜನ ಸೆಟ್ಟಿನಲ್ಲಿದ್ದರು.

ಆ ಸಮಯದಲ್ಲಿ ಅಲ್ಲಿದ್ದವರೆಲ್ಲ ಮಾತಾಡಿಕೊಂಡ ವಿಷಯ ಸ್ವಾರಸ್ಯವಾಗಿತ್ತು: "ಇದೇ ಸನ್ನಿವೇಶದ ಷೂಟಿಂಗ್ ನಡೆಯುತ್ತಿರುವಾಗಲೇ ಯಾವುದೋ ಕೇಸಿನ ವಿಷಯವಾಗಿ ತ್ಯಾಗರಾಜ ಭಾಗವತರನ್ನು ಪೋಲೀಸ್ ಇಲಾಖೆಯವರು ಬಂದು ಬಂಧಿಸಿ ಕರೆದುಕೊಂಡು ಹೋದದ್ದು ಇದೇ ಸೆಟ್ಟಿನಲ್ಲಿಯೇ". ಈ ರೀತಿ ಮಾತನಾಡುತ್ತ ಹೊನ್ನಪ್ಪನವರ ವಿಚಾರವಾಗಿಯೂ ಆ ಜನರೆಲ್ಲ ಪರಿತಪಿಸುತ್ತಿದ್ದರು. ಆಗ ಹೊನ್ನಪ್ಪನವರು 'ನನಗೆ ಆ ರೀತಿ ಯಾವ ಸಂದರ್ಭವೂ ಒದಗಲಾರದು. ನೀವೆಲ್ಲ ಆ ರೀತಿ ಯೋಚಿಸಲೇಬೇಡಿ. ನನ್ನ ವಿಷಯವಾಗಿ ನೀವೆಲ್ಲರೂ ಈ ರೀತಿ ಪರಿತಾಪಪಡುತ್ತಿರುವುದನ್ನು ನೋಡಿದಾಗ ನಿಮ್ಮೆಲ್ಲರಿಗೂ ನನ್ನಲ್ಲಿರುವ ಅಭಿಮಾನಕ್ಕೆ ಬಹಳ ಕೃತಜ್ಞತೆಗಳನ್ನು ಹೇಳಬೇಕಾಗುತ್ತದೆ' ಎಂದು ಹೇಳಿದರು.

ಇನ್ನೊಂದು ವಿಚಾರ: 'ವಾಲ್ಮೀಕಿ' ಚಿತ್ರದ ಷೂಟಿಂಗ್ ಕೇರಳದ ಕಲ್ಲಿಕೋಟೆಯ ಜಿಲ್ಲಾದಲ್ಲಿ ಕೊಯಲಾಂಡಿ ಎಂಬ ಒಂದು ಗ್ರಾಮದ ಹತ್ತಿರ ಏರ್ಪಾಡಾಗಿತ್ತು. ಆ ಹಳ್ಳಿಯ ಸಮೀಪದಲ್ಲಿ ಸಮುದ್ರಕ್ಕೆ ಸೇರಬೇಕಾದ ಬಹಳ ದೊಡ್ಡ ನದಿಗಳ ಕೋವೆಗಳು ಹರಿಯುತ್ತ ಸುತ್ತಲೂ ತೆಂಗಿನ ತೋಟಗಳ ಒಂದು ರಮ್ಯವಾದ ದೃಶ್ಯ. ಆ ನದಿಯಲ್ಲಿ ದೋಣಿಗಳ ಸಂಚಾರವಿತ್ತು. ನಾಯಕ–ನಾಯಕಿಯರು ದೋಣಿಯಲ್ಲಿ ಕುಳಿತು ಶೃಂಗಾರ ಸನ್ನಿವೇಶದಲ್ಲಿ ತೊಡಗಿರುವಂಥದ್ದನ್ನು ಷೂಟಿಂಗ್ ತೆಗೆಯಲು ಅಲ್ಲಿ ಸುಮಾರು ಮೂರು ವಾರಗಳ ಕಾಲ ಕ್ಯಾಂಪು ಮಾಡಿದ್ದರು. ಅದರಂತೆ ಅಲ್ಲಿ ಚಿತ್ರದ ಕೆಲಸಗಳನ್ನು ಮುಗಿಸಿಕೊಂಡು ಹೊನ್ನಪ್ಪನವರು ಕೊಯಮತ್ತೂರಿಗೆ ಬಂದರು. ಈ ಚಿತ್ರದ ನಿದೇಶಕರು ಕರ್ನಾಟಕದವರೇ ಆದ ಸುಂದರರಾವ್ ನಟ್ಕರ್ಣಿ ಎಂಬುವವರು. ಆಗಿನ ಕಾಲದಲ್ಲಿ ತುಂಬಾ ಹೆಸರಾದ ನಿರ್ದೇಶಕರು ಎಂಬ ಭಾವನೆಯಿತ್ತು.

ಹೊನ್ನಪ್ಪನವರು ಕೊಯಮತ್ತೂರಿಗೆ ಬರುವ ವೇಳೆಗೆ ಅಲ್ಲಿಯ ಕೆಲ ಧೂತರು ಒಟ್ಟಿಗೆ ಸಿನೆಮಾ ನಟಿಯರ ವಿಷಯವಾಗಿ ಮನಸ್ಸಿಗೆ ಬಂದಂತೆಲ್ಲಾ ಸ್ಥಳಿಯ ಪತ್ರಿಕೆಯೊಂದರಲ್ಲಿ ಬರೆದು ಸಂಬಂಧಿಸಿದ ನಟನಟಿಯರನ್ನು ಬೆದರಿಸಿ ಹಣ ಗಳಿಸುತ್ತಿದ್ದು ಪದ್ಧತಿಯಾಗಿತ್ತು ! ಹೊನ್ನಪ್ಪನವರೂ ಈ ವಂಚಕರ ಮಾಯಾಜಾಲಕ್ಕೆ ಬಲಿಯಾಗಲೇಬೇಕಾಯಿತು. ಒಮ್ಮೆ ಆ ಧೂರ್ತರು ಹೊನ್ನಪ್ಪನವರ ಬಳಿಗೆ ಬಂದು ಹಣ ಕೀಳಲು ಪ್ರಯತ್ನಪಟ್ಟರು ! ಹೊನ್ನಪ್ಪನವರು 'ಹಣ ಕೊಡುವುದಿಲ್ಲವೆಂದು' ಧೈರ್ಯವಾಗಿ ಹೇಳಿಬಿಟ್ಟರು. ಅಲ್ಲದೆ "ಈ ಚಲನಚಿತ್ರ ಪ್ರಪಂಚದಲ್ಲಿ 'ನಾನು ಏನು?' ಎಂಬುದನ್ನು ಪ್ರೇಕ್ಷಕರೇ ಅಲ್ಲದೆ ನಾನು ಕೆಲಸ ಮಾಡುತ್ತಿದ್ದ ಚಿತ್ರಗಳ ನಿರ್ಮಾಪಕರು, ಕಲಾವಿದರು, ನಿರ್ದೇಶಕರು ಹಾಗೂ ತಾಂತ್ರಿಕ ವರ್ಗದವರೆಲ್ಲ ತಿಳಿದುಕೊಂಡಿದ್ದಾರೆ. ನನ್ನ ವಿರುದ್ಧವಾಗಿ ನೀವು ನಿಮ್ಮ ಪತ್ರಿಕೆಯಲ್ಲಿ ಏನು ಬರೆದರೂ ಯಾರೂ ನಂಬುವುದಿಲ್ಲ. ದಯವಿಟ್ಟು ಹೊರಟು ಹೋಗಿ" ಎಂದು ಹೇಳಿಬಿಟ್ಟರು. ಹೊರಾಂಗಣ ದೃಶ್ಯದ ಷೂಟಿಂಗ್ ಮುಗಿಸಿಕೊಂಡು ಬರುವುದರೊಳಗೆ ಹೊನ್ನಪ್ಪನವರು ಮತ್ತು ಅದೇ ಚಿತ್ರದಲ್ಲಿ ಮುಖ್ಯ ನಾಯಕಿ ಪಾತ್ರ ಮಾಡಿದ್ದ ರಾಜಕುಮಾರಿ ಈ ಇಬ್ಬರನ್ನು ಸೇರಿಸಿ ಇಲ್ಲ ಸಲ್ಲದ ವಿಚಾರಗಳನ್ನೆಲ್ಲ ಬರೆದಿದ್ದ ಪತ್ರಿಕೆ ಹೊರಬಂದಿತ್ತು.

ಪತ್ರಿಕೆಯಲ್ಲಿನ ಸುದ್ದಿಯನ್ನು ಗಮನಿಸಿದ ಸ್ಟುಡಿಯೋದಲ್ಲಿನ ಕಲಾವಿದರುಗಳು ಹೊನ್ನಪ್ಪನವರನ್ನು ಕುರಿತು 'ನೀವೇನೋ ಬಹಳ ಒಳ್ಳೆಯವರು ಅಂತ ತಿಳಿದಿದ್ದೆ. ಕೊಯಲಾಂಡಿಯಲ್ಲಿ ನೀವು ನಡೆದುಕೊಂಡ ರೀತಿ ವಿವರವಾಗಿ ಒಂದು ಪತ್ರಿಕೆಯಲ್ಲಿ ಬಂದಿರುತ್ತದೆ, ನೋಡಿದಿರೇನು?' ಎಂದು ಅಪಹಾಸ್ಯ ಮಾಡಲಿಕ್ಕೆ ಪ್ರಾರಂಭಿಸಿದರು. ಆಗ ಹೊನ್ನಪ್ಪನವರು 'ನೀವೆಲ್ಲ ಅಲ್ಲೇ ಇದ್ದಿರಲ್ಲಾ ನಾನು ನಡೆದುಕೊಂಡ ರೀತಿ ನಿಮ್ಮೆಲ್ಲರಿಗೂ ಗೊತ್ತಿಲ್ಲವೆ?' ಎಂದು ಅವರನ್ನೇ ಕೇಳಿಬಿಟ್ಟರು. ಆಗ ಅವರೆಲ್ಲ ನಗುತ್ತ 'ನೀವು ಅವರಿಗೇನೂ ಹಣ ಕೊಡಲಿಲ್ಲವೆಂದು ಕಾಣುತ್ತೆ ಅದಕ್ಕೇ ಅವರು ಈ ರೀತಿ ಬರೆದಿರುವುದು. ಅಂತೂ ನೀವು ಬಹಳ ಅಸಾಧ್ಯರು, ಧೈರ್ಯವಾಗಿ ಅವರನ್ನು ಎದುರಿಸಿದ್ದೀರಿ' ಎಂದು ಹೇಳುತ್ತ ಹೊನ್ನಪ್ಪನವರ ಬೆನ್ನು ತಟ್ಟಿದರು.

ಕೆಲವು ದಿವಸಗಳು ಕಳೆದ ನಂತರ ವಾಲ್ಮೀಕಿ ಚಿತ್ರದ ಷೂಟಿಂಗ್ ಕೊಯಮತ್ತೂರು ಸೆಂಟ್ರಲ್ ಸ್ಟುಡಿಯೋದಲ್ಲಿ ನಡೆಯುತ್ತಿತ್ತು. ಹೊನ್ನಪ್ಪನವರ ಬಗೆಗೆ ಇಲ್ಲಸಲ್ಲದ ರೀತಿಯಲ್ಲಿ ಬರೆದಿದ್ದ ಆ ಪತ್ರಿಕೆಯ ಇಬ್ಬರು ಧೂರ್ತರು ಸ್ಟುಡಿಯೋಗೆ ಬಂದು ಓಡಾಡುತ್ತಿದ್ದರು. ಇವರು ಬಂದಿರುವ ವಿಷಯ ನಿರ್ಮಾಪಕರಿಗೆ ತಿಳಿಯಿತು. ಬಹಳ ಜಾಣ್ಮೆಯಿಂದ ನಿರ್ಮಾಪಕರು ಅವರಿಬ್ಬರನ್ನು

'ಒಳಗೆ ಕರೆದುಕೊಂಡು ಬನ್ನಿ' ಎಂದರು. ಅವರು ತಮ್ಮ ಕಛೇರಿಗೆ ಬರುವುದರೊಳಗೆ ತಮ್ಮ ಸ್ಟುಡಿಯೋದಲ್ಲಿ ಕೆಲಸಮಾಡುತ್ತಿದ್ದಂಥ ಒಂದಿಬ್ಬರನ್ನು ಕರೆದು 'ಎರಡು ಹಗ್ಗಗಳನ್ನು ಸಿದ್ಧ ಮಾಡಿಕೊಂಡು ನಿಂತಿರಿ' ಎಂದು ಹೇಳಿದರು. ನಂತರ ನಿರ್ಮಾಪಕರ ಕಛೇರಿಗೆ ಸೂಚನೆ ಕೊಟ್ಟಂತೆ ಆ ಇಬ್ಬರು ಧೂರ್ತರು ಬಂದರು. ಬಹಳ ಮರ್ಯಾದೆಯಿಂದಲೇ ಅವರನ್ನು ಸ್ವಾಗತಿಸಿದರು. ಲೋಕಾಭಿರಾಮವಾಗಿ ಮಾತನಾಡುತ್ತಿರುವಾಗ 'ನಿಮಗೆ ಇನ್ಯಾರೂ ಸಿಗಲಿಲ್ಲವೆ? ನೀವು ಭಾಗವತರನ್ನು ಹಣ ಕೇಳಿದ್ದು ನಿಜವೇ? ಎಂದು ಪ್ರಶ್ನಿಸಿದರು. ಆಗ ಆ ಧೂರ್ತರು ತತ್ತರಿಸುತ್ತ 'ಇಲ್ಲ ನಾವು ಕೇಳಲಿಲ್ಲ' ಎಂದರು. 'ಭಾಗವತರು ಪ್ರಾಮಾಣಿಕರು. ತಮಿಳುನಾಡಿನ ಕಲಾವಿದರುಗಳಲ್ಲಿಯೇ ಅತ್ಯಂತ ಗೌರವದಿಂದ ನಡೆದುಕೊಳ್ಳುವಂಥವರು. ಅಂಥವರ ವಿಷಯದಲ್ಲಿ ನೀವು ಹೀಗೆ ಬರೆದಿದ್ದೀರೆಂದರೆ ನೀವು ಯಾವುದಕ್ಕೂ ಹೇಸುವವರಲ್ಲ! ಆದ್ದರಿಂದ ಈ ದಿವಸ ನಾನು ನಿಮಗೆ ಸರಿಯಾದ ಪಾಠ ಕಲಿಸುವೆ, ನನ್ನ ಮೇಲೆ ಏನು ಬೇಕಾದರೂ ಬರೀರಿ ನೀವು' ಎಂದು ಹೇಳಿದ ನಿರ್ಮಾಪಕರು ಆ ಇಬ್ಬರನ್ನು ಹೊರಗಡೆಗೆ ಎಳೆದು ತರಿಸಿ ತೆಂಗಿನಮರದ ಎದುರುಬದರಿಗೆ ಕಟ್ಟಿ ಚೆನ್ನಾಗಿ ಹೊಡೆದುಬಿಟ್ಟರು? ಅಲ್ಲದೆ, 'ಇನ್ನು ಮುಂದಿನ ಜನ್ಮದಲ್ಲಿಯೂ ಪತ್ರಿಕೆಯಲ್ಲಿ ಈ ರೀತಿ ಬರೆಯಬಾರದು, ನೆನಪಿರಲಿ ಎಂದು ಸುಮಾರು ಒಂದು ಗಂಟೆಯ ಕಾಲ ಹಾಗೇ ಕಟ್ಟಿದ್ದು ಷೂಟಿಂಗ್‌ನಲ್ಲಿದ್ದ ಹೊನ್ನಪ್ಪನವರನ್ನು ಕರೆದು 'ಭಾಗವತರೇ ನೋಡಿ ನಿಮ್ಮ ಬಗ್ಗೆ ಬರೆದುದಕ್ಕಾಗಿ ಅವರಿಗೆ ಈ ಶಿಕ್ಷೆ' ಎಂದು ಹೇಳಿದರು. ಅಲ್ಲಿದ್ದ ಉಳಿದ ಕಾರ್ಮಿಕರೂ ಸಹ ಬ್ಲಾಕ್‌ಮೇಲ್ ಮಾಡಿದ ಆ ಧೂತರಿಗೆ ಛೀಮಾರಿ ಹಾಕಿ ಓಡಿಸಿಬಿಟ್ಟರು !

ಹೀಗೆ ತಮಿಳು ಚಿತ್ರರಂಗದಲ್ಲಿ ದಿನೇ ದಿನೇ ಪ್ರಖ್ಯಾತಿ ಹೊಂದುತ್ತಿದ್ದ ಭಾಗವತರಿಗೆ ಬದುಕಿನಲ್ಲಿ ನೆಮ್ಮದಿಯ ಕ್ಷಣಗಳು ಕಾಣಿಸತೊಡಗಿದವು. ಅದ್ಭುತವಾಗಿ ಬೆಳಕಿಗೆ ಬರುತ್ತಿದ್ದ ಇವರ ಪ್ರತಿಭೆ ತಮಿಳು ಚಿತ್ರರಂಗದಲ್ಲಿ ಉನ್ನತ ಶಿಖರವನ್ನು ಮುಟ್ಟಿತು. ಅದೂ ಒಂದು ರೀತಿಯಲ್ಲಿ ಭಾಗವತರಿಗೆ ಚಿಂತೆ ಕಾಡತೊಡಗಿತು : 'ಕನ್ನಡದವನಾದ ನಾನು ಕನ್ನಡೇತರ ಭಾಷೆಯಲ್ಲಿ ಅಭಿನಯಿಸುತ್ತ ಬರುತ್ತಿರುವ ನನ್ನ ಪ್ರತಿಭೆ ನನ್ನ ನಾಡಿಗೂ ಸೇರಬೇಕು' ಎಂದು ಚಿಂತಿಸತೊಡಗುವಾಗಲೇ ಕನ್ನಡ ಚಿತ್ರರಂಗದ ದುರಂತದ ಬಗೆಗೂ ಯೋಚಿಸತೊಡಗಿ ಕನ್ನಡ ಚಿತ್ರರಂಗದ ದುರಂತದ ಬಗೆಗೂ ಯೋಚಿಸುತ್ತ ಬಂದರು. 'ನಮ್ಮ ಭಾಷೆಯಲ್ಲೇ ನಾನೇ ಸ್ವಂತವಾಗಿ ಯಾಕೆ ಚಿತ್ರ ತೆಗೆಯಬಾರದೆಂದೂ' ಯೋಚಿಸಿದರು. ಆಗ ಪೌರಾಣಿಕ ಮತ್ತು ಚಾರಿತ್ರಿಕ ವಿಷಯಗಳನ್ನು ಕುರಿತ ಚಿತ್ರಗಳೇ ಬಹುಪಾಲು ಭಾಷೆಗಳಲ್ಲಿ ತೆರೆಗೆ ಬರುತ್ತಿದ್ದದ್ದು. ಈ ಹಿನ್ನೆಲೆಯಲ್ಲಿ ಭಾಗವತರು ಕನ್ನಡದಲ್ಲಿ 'ಭಕ್ತ ಕುಂಬಾರ'

ಸಿನಿಮಾ ಸಿದ್ಧತೆಗೂ ಕೈ ಹಾಕಿದರು. ಮುಂಬಯಿನ ಬೊಮ್ಮನ್ ವಿರಾನಿ ಎಂಬುವವರು ಆ ವೇಳೆಯಲ್ಲಿ ಉತ್ತಮ ಕ್ಯಾಮರಾಮನ್ ಆಗಿ ಹೆಸರಾಗಿದ್ದವರು. ಭಾಗವತರು ನಟಿಸುತ್ತಿದ್ದ 'ಕುಂಡಲ ಕೇಶಿ' ಎಂಬ ತಮಿಳು ಚಿತ್ರಕ್ಕೆ ನಿರ್ದೇಶಕರಾಗಿ ಬಂದರು.

## ಗೋರ ಕುಂಬಾರ ಚಿತ್ರ ನಿರ್ಮಾಣಕ್ಕೆ ಪ್ರಯತ್ನ

ಅಲ್ಲಿ ಇಬ್ಬರಿಗೂ ಸ್ನೇಹ ಬೆಳೆಯಿತು. ಭಾಗವತರು ನಾನು ಕನ್ನಡದಲ್ಲಿ 'ಗೋರ ಕುಂಬಾರ' ಚಿತ್ರ ತೆಗೆಯಬೇಕೆಂದಿದ್ದೇನೆ' ಎಂದರು. ಅದಕ್ಕೆ ಬೊಮ್ಮನ್ ವಿರಾನಿ "ಬಹಳ ಸಂತೋಷ, ನಾನು ಬೇಕಾದರೆ ಪಾರ್ಟ್ನರ್ ಆಗಿಯೂ ನಿರ್ದೇಶಕನಾಗಿಯೂ ಕೆಲಸ ಮಾಡಿ, ಒಂದು ಭಾಗದಷ್ಟು ಹಣವನ್ನು ಒದಗಿಸುತ್ತೇನೆ" ಎಂದರು. ಆತ ಉತ್ತಮ ಕ್ಯಾಮರಾಮನ್ ಆಗಿದ್ದುದರಿಂದ ಚಿತ್ರಕಥೆಗೆ, ತಾಂತ್ರಿಕ ವಿಷಯಗಳಿಗೆ ಸಹಾಯಕರಾಗಬಹುದು ಎಂಬ ಸದುದ್ದೇಶದಿಂದ ಆತನನ್ನು ನಂಬಿ ಭಾಗವತರು ಚಿತ್ರ ಸಿದ್ಧತೆಗೆ ಏರ್ಪಾಡು ಮಾಡಿಕೊಂಡರು. ಗೋರ ಕುಂಬಾರ ಚಿತ್ರಕ್ಕೆ ಕಥೆ, ಸಂಭಾಷಣೆ ಬರೆಯಲು ಚಿತ್ರ ಪ್ರಪಂಚಕ್ಕೆ ಆಗತಾನೇ ಪ್ರವೇಶಿಸಿದ್ದ ನಮ್ಮ ನಾಡಿನ ಹುಣಸೂರು ಕೃಷ್ಣಮೂರ್ತಿ ಅವರಿಗೆ ಒಪ್ಪಿಸಿದರು. ಈ ಮಧ್ಯೆ ಭಾಗವತರನ್ನು ದೇವಮನೋಹರಿ, ರಾಜರಾಜೇಶ್ವರಿ, ಜನಾಬಾಯಿ, ಭಕ್ತ ಕಾಳತ್ತಿ ಎಂಬ ತಮಿಳು ಚಿತ್ರಗಳಿಗೆ ಸೇಲಂ ಹಾಗೂ ಮದ್ರಾಸಿನವರು ಗೊತ್ತುಮಾಡಿಕೊಂಡ ಕಾರಣದಿಂದಲೂ–ಆ ವೇಳೆಗೆ ಮೊದಲನೇ ನಾಲ್ಕು ಚಿತ್ರಗಳ ಕೆಲಸ ಮುಗಿಯುತ್ತ ಬಂದಿದ್ದ ಕಾರಣದಿಂದಲೂ ಮದ್ರಾಸಿನಲ್ಲಿಯೇ ಗೋರ ಕುಂಬಾರ ಚಿತ್ರವನ್ನು ತೆಗೆಯುವುದೆಂದು ತೀರ್ಮಾನಿಸಿಕೊಂಡ ಭಾಗವತರು ಕೊಯಮತ್ತೂರಿನಲ್ಲಿಯೇ ಭಕ್ತಕುಂಬಾರದ ಸಂಭಾಷಣೆ, ಹಾಡುಗಳು ಎಲ್ಲವನ್ನೂ ಹೊದ್ದಿಕೆ (ರಿಹರ್ಸಲ್) ಮಾಡಿಕೊಳ್ಳಬೇಕೆಂದೂ ನಿರ್ಧರಿಸಿದರು. ಆ ಸಂದರ್ಭದಲ್ಲಿ ಭಾಗವತರು ಕೆಲವು ಸ್ನೇಹಿತರೊಂದಿಗೆ ಕೆಲವು ವಾದ್ಯ ವೃಂದದವರನ್ನೆಲ್ಲಾ ಸೇರಿಸಿಕೊಂಡು ಬೆಂಗಳೂರಿನಲ್ಲಿ 'ಭಾರತ ಸೇವಾ ಮಂಡಲಿ' ಎಂಬ ಹೆಸರಿನಲ್ಲಿ ಒಂದು ವಾದ್ಯಗೋಷ್ಠಿಯನ್ನು ಸ್ಥಾಪಿಸಿದ್ದರು. ಅದು ತನ್ನ ಕಾರ್ಯ ಸಾಧನೆಗಳಿಂದ ಬಹುಬೇಗ ಜನಪ್ರಿಯತೆ ಗಳಿಸಿತು. ಈ ವಾದ್ಯಗೋಷ್ಠಿಯಲ್ಲಿದ್ದ ಸುಮಾರು 15 ಜನರನ್ನು ಭಾಗವತರು ಕೊಯಮತ್ತೂರಿಗೆ ಕರೆಸಿಕೊಂಡು ಅವರ ಊಟ ವಸತಿ ಮಾತಾಡಿ ಖರ್ಚು ವೆಚ್ಚಗಳನ್ನೆಲ್ಲ ತಾವೇ ಭರಿಸುತ್ತ ಚಿತ್ರದ ಹಾಡುಗಳನ್ನು ಬರೆಯುವುದಕ್ಕೆ ಕು.ರಾ. ಸೀತಾರಾಮಶಾಸ್ತ್ರಿ ಅವರನ್ನು ಆಹ್ವಾನಿಸಿದ್ದರು. ಅದೇ ಸಮಯಕ್ಕೆ ಹುಣಸೂರು ಕೃಷ್ಣಮೂರ್ತಿಯವರು 'ಕಥೆಯ ಸಂಭಾಷಣೆಯನ್ನು ಕಾಲುಭಾಗ

ಬರೆದಿದ್ದೇನೆ' ಎಂದು ಮೈಸೂರಿನಿಂದ ಭಾಗವತರಿಗೆ ಉತ್ತರ ಬರೆದಿದ್ದರು. ಅವರನ್ನೂ ಸಹ ಕೊಯಮತ್ತೂರಿಗೆ ಕರೆಸಿಕೊಂಡ ಭಾಗವತರು "ಇಲ್ಲಿ ಉಳಿದುಕೊಳ್ಳಲು ಎಲ್ಲ ಏರ್ಪಾಡುಗಳನ್ನೂ ಮಾಡಿದ್ದೇನೆ. ಇನ್ನೊಂದು ತಿಂಗಳಲ್ಲಿ ನೀವು ಸಂಭಾಷಣೆಯನ್ನು ಪೂರ್ತಿಯಾಗಿ ಬರೆದುಕೊಡಬೇಕು. ಅಲ್ಲದೆ, ಚಿತ್ರದ ಹಾಡುಗಳನ್ನು ಬರೆಯಲು ಕು.ರಾ. ಸೀತಾರಾಮಶಾಸ್ತ್ರಿಗಳು ಇಲ್ಲಿಗೇ ಬಂದಿದ್ದಾರೆ, ವಾದ್ಯಗೋಷ್ಠಿಯವರೂ ಇಲ್ಲಿಯೇ ಇದ್ದಾರೆ. ಚಿತ್ರದಲ್ಲಿ ಎಷ್ಟು ಹಾಡುಗಳು ಇರಬೇಕು ಎಂಬುದನ್ನು ತೀರ್ಮಾನಿಸಿ ಸಂಭಾಷಣೆಯಿಂದ ಹಾಡುಗಳವರೆಗೆ ಎಲ್ಲವನ್ನೂ ಇಲ್ಲಿಯೇ ಹೊದ್ದಿಕೆ ಮಾಡಿಕೊಂಡು ಇನ್ನು ಒಂದು ತಿಂಗಳ ನಂತರ ಮದ್ರಾಸಿಗೆ ಹೋಗಿ ಅಲ್ಲಿಯೇ ಭಕ್ತಕುಂಬಾರ ಚಿತ್ರದ ಕೆಲಸವನ್ನೆಲ್ಲ ಪ್ರಾರಂಭಿಸುವುದೆಂದು ತೀರ್ಮಾನ ಮಾಡಿಕೊಂಡಿದ್ದೇನೆ. ಇದಕ್ಕಾಗಿ ಚಿತ್ರದ ನಿರ್ದೇಶಕರಾದ ಬೊಮ್ಮನ್ ವಿರಾನಿಯವರೂ ಇಲ್ಲಿಯೇ ಇದ್ದಾರೆ. ಆದ ಕಾರಣ ನೀವು ದಯವಿಟ್ಟು ನಮ್ಮಗಳೊಡನೆ ಸಹಕರಿಸಿ ಚಿತ್ರಕಥೆಯ ಸಂಭಾಷಣೆಯನ್ನು ಪೂರ್ತಿಯಾಗಿ ಮುಗಿಸಿಕೊಡಬೇಕು" ಎಂದು ಹೇಳಿದರು. ಅದಕ್ಕೆ ಹುಣಸೂರು ಕೃಷ್ಣಮೂರ್ತಿಯವರು "ನೀವು ಇಷ್ಟು ಅವಸರಪಟ್ಟರೆ ಸಾಧ್ಯವಾಗುವುದಿಲ್ಲ, ಕನಿಷ್ಟ ಮೂರು ತಿಂಗಳಾದರೂ ನನಗೆ ಸಮಯಬೇಕು. ಈಗ ನಾನು ಮೈಸೂರಿನಲ್ಲಿ 'ಕೃಷ್ಣಲೀಲೆ' ಮತ್ತು ಇನ್ನೊಂದು ಚಿತ್ರವನ್ನೂ ಒಪ್ಪಿಕೊಂಡು ಸಂಭಾಷಣೆ ಬರೆಯುತ್ತಿದ್ದೇನೆ" ಎಂದು ಹೇಳಿದರು. ಆಗ ಭಾಗವತರು "ನಾನು ಸಂಭಾವನೆಯಲ್ಲಿ ಅರ್ಧ ಭಾಗ ಕೊಡಬೇಕು. ಮೂರು ತಿಂಗಳೊಳಗಾಗಿ ಬರೆದುಕೊಡುತ್ತೇನೆಂದು ಹೇಳಿದ್ದೀರಿ. ನಾನು ಮೂರ್ನಾಲ್ಕು ಪತ್ರ ಬರೆದರೂ ಸಹ ನೀವು ಏನೇನೋ ಕಾರಣಗಳನ್ನು ಕೊಟ್ಟು ಬರೆದಿರಿ. ಈಗ ನೋಡಿದರೆ ಹೀಗೆ ಹೇಳುತ್ತಿದ್ದೀರಿ, ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಿ" ಎಂದು ಹೇಳಿದರು. ಕೊನೆಗೆ, ಹುಣಸೂರು ಕೃಷ್ಣಮೂರ್ತಿಯವರು "ನಿಮ್ಮ ಅವಸರಕ್ಕೆ ನಾನು ಕಟ್ಟುಬಿದ್ದು ಬರೆಯಲು ಸಾಧ್ಯವಾಗುವುದಿಲ್ಲ, ನಿಮ್ಮ ಇಷ್ಟ !" ಎಂದು ಹೇಳಿಬಿಟ್ಟರು. ಈ ಮಾತಿನಿಂದ ಬೇಸರಗೊಂಡ ಭಾಗವತರು ಈ ಮಾತು 'ಖಂಡಿತವೇ?' ಎಂದರು. ಕೃಷ್ಣಮೂರ್ತಿಯವರಿಂದ 'ಹೌದು' ಎಂಬ ಉತ್ತರ ಹೊರಬಿತ್ತು. ಭಾಗವತರು "ಹಾಗಾದರೆ, ಈಗಾಗಲೇ ನಿಮಗೆ ಮಾತಾಡಿದ ಸಂಭಾವನೆಯ ಹಣದಲ್ಲಿ ಮುಕ್ಕಾಲುಭಾಗ ತೆಗೆದುಕೊಂಡಿದ್ದೀರಿ. ಇನ್ನು ಕೊಡಬೇಕಾಗಿರುವ ಬಾಕಿ ಹಣವನ್ನು ಕೊಟ್ಟುಬಿಡುತ್ತೇನೆ, ನೀವು ತೆಗೆದುಕೊಂಡು ಹೊರಡಬಹುದು" ಎಂದು ಹೇಳಿ ಕೊಡಬೇಕಾಗಿದ್ದ ಬಾಕಿ ಹಣಕ್ಕೆ ಚೆಕ್ಕನ್ನು ಕೊಟ್ಟು ಕಳಿಸಿದರು. ಅದೇ ಸಂದರ್ಭದಲ್ಲಿ ಹಾಡುಗಳನ್ನು ಬರೆಯಲು ಬಂದಿದ್ದ ಕು.ರಾ. ಸೀತಾರಾಮಶಾಸ್ತ್ರಿಯವರಿಗೆ "ಸಂಭಾಷಣೆಯನ್ನು ನೀವೇ ಬರೆಯಿರಿ" ಎಂದು ಹೇಳಿದರು. ಭಾಗವತರು ಆ

ರೀತಿ ಹೇಳಿದಾಕ್ಷಣವೇ ಬೆಚ್ಚಿಬಿದ್ದದ ಶಾಸ್ತ್ರಿಗಳು "ಅಯ್ಯೋ ನಾನು ಬರೆಯುವುದೆ?" ಎಂದರು. ಆಗ ಭಾಗವತರು ತೊಂದರೆ ಏನೂ ಇಲ್ಲ, ನಿಮ್ಮಲ್ಲಿ ಆ ಶಕ್ತಿ ಇದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ನೀವು, ನಾನು, ನಿರ್ದೇಶಕರು ಎಲ್ಲರೂ ಸೇರಿ ಪ್ರತಿದಿವಸವೂ ಕಥೆಯ ವಿಚಾರವಾಗಿ ಚರ್ಚೆಮಾಡಿಕೊಂಡು ಸನ್ನಿವೇಶಗಳನ್ನು ಸೃಷ್ಟಿಸೋಣ, ಅದಕ್ಕೆ ತಕ್ಕ ಹಾಗೆ ಹೃದಯಪೂರ್ವಕವಾಗಿ ಅವರಿಗೆ ಪ್ರೋತ್ಸಾಹ ನೀಡಿದರು. ಅದರಂತೆಯೇ ಸುಮಾರು ಎರಡು ತಿಂಗಳ ಕಾಲ ಕೊಯಮತ್ತೂರಿನಲ್ಲಿಯೇ ಕಥೆಯ ಸಂಭಾಷಣೆ ಹಾಡುಗಳೆಲ್ಲ ಮುಗಿಸಿಕೊಂಡು ವಾದ್ಯವೃಂದಗಳ ಜೊತೆಗೆ ಹೊದ್ದಿಕೆ ಸಹ ಮಾಡಿಕೊಂಡರು, ಆಗ ಭಾಗವತರಿಗಿದ್ದ ಉತ್ಸಾಹವನ್ನು ಯಾರಾದರೂ ಮೆಚ್ಚುವಂಥದ್ದು, ಅದೇನೆಂದರೆ, ನಮ್ಮ ಕನ್ನಡನಾಡಿನ ಕಲಾವಿದರು, ನಮ್ಮ ಭಾರತ ಸೇವಾ ಮಂಡಳಿಯ ವಾದ್ಯವೃಂದದ ಮಿತ್ರರೆಲ್ಲ ಅಭಿವೃದ್ಧಿ ಹೊಂದಬೇಕು ಎಂಬ ಆಶಯದಿಂದ, ಆಕಾಂಕ್ಷೆಯಿಂದ ಈ ವಾದ್ಯವೃಂದದವರನ್ನೆಲ್ಲ ಕೊಯಮತ್ತೂರಿಗೆ ಕರೆಸಿಕೊಂಡು ಎರಡು ತಿಂಗಳವರೆಗೂ ಅವರಿಗೆಲ್ಲಾ ಊಟ ವಸತಿಯನ್ನು ಏರ್ಪಾಡು ಮಾಡಿ ಸುಮಾರು ಹಣವನ್ನು ಭಾಗವತರು ವೆಚ್ಚ ಮಾಡಿಕೊಂಡರು. ಮದ್ರಾಸಿನಲ್ಲಿಯೇ ಚಿತ್ರ ತೆಗೆಯಬೇಕೆಂದು ತೀರ್ಮಾನಿಸಿಕೊಂಡಾಗ ಮದ್ರಾಸಿನಲ್ಲಿದ್ದಂಥ ವಾದ್ಯಗೋಷ್ಠಿಯವರನ್ನೇ ಬಳಸಿಕೊಂಡು ಎರಡು ವಾರದಲ್ಲಿ ಭಾಗವತರು ಚಿತ್ರದ ಎಲ್ಲಾ ಹಾಡುಗಳನ್ನು ಧ್ವನಿಮುದ್ರಣ ಮಾಡಿಕೊಳ್ಳಬಹುದಾಗಿತ್ತು. ಈ ರೀತಿ ಮಾಡುವುದರಿಂದ ಅವರಿಗೆ ಬಹಳ ಖರ್ಚು ಕಡಿಮೆಯಾಗುತ್ತಿತ್ತು. ಆದರೆ, ನಮ್ಮ ಕನ್ನಡ ಕಲಾವಿದರು ಮುಂದೆ ಬರಬೇಕೆಂಬ ಸದುದ್ದೇಶದಿಂದ ಅವರು ಹೀಗೆ ಮಾಡಬೇಕಾಯಿತು.

ಕೊಯಮತ್ತೂರು ಮತ್ತು ಸೇಲಂನಲ್ಲಿ ಒಪ್ಪಿಕೊಂಡಿದ್ದ ನಾಲ್ಕು ಚಿತ್ರಗಳ ಕೆಲಸವನ್ನು ಮುಗಿಸುವುದರೊಳಗೆ ಸೇಲಂ ಮಾಡ್ರನ್ ಥಿಯೇಟರ್ಸ್‌ನಲ್ಲಿ 'ಶ್ರೀರಾಜರಾಜೇಶ್ವರಿ' ಎಂಬ ಚಿತ್ರಕ್ಕೆ ಭಾಗವತರನ್ನು ಗೊತ್ತುಮಾಡಿಕೊಂಡರು. ಆಗ ಮದ್ರಾಸಿನಲ್ಲಿಯೇ ಕೆಲಸ ಮಾಡಿಕೊಂಡು ಸೇಲಂಗೂ ಬಂದು ಆ ಚಿತ್ರದ ಕೆಲಸ ಮುಗಿಸಿಕೊಳ್ಳಬಹುದೆಂದು ತೀರ್ಮಾನಿಸಿ ವಾದ್ಯಗೋಷ್ಠಿಯವರನ್ನೆಲ್ಲ ಬೆಂಗಳೂರಿಗೆ ಕಳಿಸಿ 'ಮತ್ತೆ ಹಾಡುಗಳ ಧ್ವನಿ ಮುದ್ರಣ ಸಂದರ್ಭಕ್ಕೆ ಮದ್ರಾಸಿಗೆ ಕರೆಸಿಕೊಳ್ಳುತ್ತೇನೆಂದು' ಹೇಳಿ ಎಲ್ಲರನ್ನೂ ಕಳಿಸಿ ಹೊನ್ನಪ್ಪನವರೂ ಸಹ ಮದ್ರಾಸಿಗೆ ಹೊರಟು ಬಂದು ನೆಲೆಸಿದರು. ಭಾಗವತರು ತಮಿಳು ಚಿತ್ರಗಳಲ್ಲಿ ಖ್ಯಾತಿಗಳಿಸುತ್ತಲೂ ಸ್ವಂತವಾಗಿ ಕನ್ನಡದಲ್ಲಿ ಗೋರ ಕುಂಬಾರ ಚಿತ್ರ ನಿರ್ಮಿಸಲು ಸಿದ್ಧತೆ ಮಾಡಿಕೊಂಡಿದ್ದ ಭಾಗವತರ ವಿಚಾರಗಳನ್ನೆಲ್ಲ ಪತ್ರಿಕೆಗಳ ಮೂಲಕ ತಿಳಿಯುತ್ತಿದ್ದವರಲ್ಲಿ ಕೆಲವು ಕನ್ನಡಿಗರು, ಬಂಧುಗಳು, ಕಲಾವಿದರು, ಗೆಳೆಯರು,

ಅಸೂಯಾಪರರು, ಹೊನ್ನಪ್ಪನವರ ಚಿತ್ರಪ್ರಪಂಚದಲ್ಲಿನ ಬೆಳವಣಿಗೆಯನ್ನು ಸಹಿಸಲಾರದೆ ಇಲ್ಲಸಲ್ಲದ ಅಪಪ್ರಚಾರಗಳನ್ನು ಹೆಣೆದು, ಬೆಂಕಿಯಿಲ್ಲದೆಯೇ ಹೊಗೆಯಾಡುವ ರೀತಿಯಲ್ಲಿ ಕಥೆಯನ್ನೂ ಕಟ್ಟಿ ಇಡೀ ಕುಟುಂಬದವರೇ ಕಣ್ಣೀರು ಹಾಕುವ ರೀತಿಯಲ್ಲಿ ಅಪಪ್ರಚಾರವನ್ನು ಸೃಷ್ಟಿ ಮಾಡಿದ್ದರು. ಹೊನ್ನಪ್ಪನವರ ಉತ್ಸಾಹಕ್ಕೆ ಈ ರೀತಿ ಭಂಗವುಂಟುಮಾಡಿ ತಮಗೆ ತೋಚಿದಂತೆ ಏನೇನು ಬೇಕೋ ಅವೆಲ್ಲವನ್ನೂ ಮಾಡಿ ಸಂತೋಷಪಟ್ಟಿದ್ದಲ್ಲದೆ, ಭಾಗವತರು ಕೆಲಸ ಮಾಡುತ್ತಿದ್ದ ಚಿತ್ರಗಳ ನಿರ್ಮಾಪಕರುಗಳಿಗೂ ಕೂಡ "ಭಾಗವತರು ಯಾವ ಮಹಾ ದೊಡ್ಡ ಕಲಾವಿದರು ಅಂತ ಇಷ್ಟು ತಮಿಳು ಚಿತ್ರಗಳಲ್ಲಿ ಯಾಕೆ ಅವಕಾಶ ಮಾಡಿಕೊಡುತ್ತಿದ್ದೀರಿ" ಎಂದು ಮೂಗರ್ಜಿಗಳನ್ನು ಬರೆಯುವ ಸಾಹಸಕ್ಕೆ ಇಳಿದರು.! ಆಗ ನಿರ್ಮಾಪಕರುಗಳೆಲ್ಲ "ನಿಮ್ಮ ನಾಡಿನಲ್ಲಿ ನಿಮ್ಮ ವಿಷಯವಾಗಿ ಬಹಳ ಜನ ಅಸೂಯೆಪಡುತ್ತಿದ್ದಾರೆಂದು ಕಾಣುತ್ತದೆ" ಎಂದು ಭಾಗವತರಿಗೆ ಹೇಳಿ 'ನೋಡಿ ನಿಮ್ಮ ಬಗೆಗೆ ಎಷ್ಟೊಂದು ಮೂಗರ್ಜಿಗಳು ಬಂದಿವೆ' ಎಂದು ತಿಳಿಸಿ ಕೊಯಮತ್ತೂರು ಸೆಂಟ್ರಲ್ ಸ್ಟುಡಿಯೋ ವಿಳಾಸಕ್ಕೆ ಬಂದಿದ್ದ ಕೆಲವು ಮೂಗರ್ಜಿಗಳನ್ನು ಭಾಗವತರ ಕೈಗೆ ಕೊಟ್ಟರು. ಅವುಗಳನ್ನು ಓದಿದ ಭಾಗವತರಿಗೆ ತುಂಬಾ ಬೇಸರವಾಗಿ "ಯಾತಕ್ಕಾಗಿ ನಮ್ಮ ನಾಡಿನ ಜನರಿಗೆ ನನ್ನ ವಿಷಯದಲ್ಲಿ ಇಷ್ಟು ಅಸೂಯೆ, ನಾನು ಯಾರಿಗೂ ಕೆಟ್ಟದ್ದು ಮಾಡಿದ್ದವನಲ್ಲ. ನನ್ನ ಪಾಡಿಗೆ ನಾನು ಹೊರ ರಾಜ್ಯದಲ್ಲಿ ಬಂದು ಈಶ್ವರಾನುಗ್ರಹದಿಂದ ನನಗೆ ದೊರಕಿರುವ ಈ ಕಲಾಸೇವೆಯನ್ನು ಮಾಡಿಕೊಂಡು ಮಾನ ಮರ್ಯಾದೆಯಿಂದ ಬದುಕು ನಡೆಸುತ್ತಿದ್ದೇನೆ. ಈ ಜನರಿಗೆ ಇದನ್ನು ನೋಡಿ ಸಹಿಸಲಾಗುತ್ತಿಲ್ಲವಲ್ಲ" ಎಂದು ಬಹಳವಾಗಿ ದುಃಖಿಸುತ್ತ ಭಾಗವತರು ಮತ್ತು ಅವರ ಕುಟುಂಬದವರೆಲ್ಲ ಈ ವಿಷಯದಲ್ಲಿ ಒಂದೆರಡು ತಿಂಗಳು ಅಪಾರ ವೇದನೆಯನ್ನು ಅನುಭವಿಸುತ್ತ ಏಕೋ ಏನೋ ಸ್ವಂತವಾಗಿ ನಮ್ಮ ಭಾಷೆಯ ಮತ್ತು ನಮ್ಮ ನಾಡಿನ ಅಭಿಮಾನದಿಂದ ಸ್ವಂತ ಚಿತ್ರ ತೆಗೆಯಲು ಕೈ ಹಾಕಿದ್ದು ನಮ್ಮ ನಾಡಿನ ಜನತೆಗೆ ಸಹಿಸುತ್ತಿಲ್ಲವೆಂದು ಕಾಣುತ್ತದೆ.

ಭಾಗವತರು ಬಹಳವಾಗಿ ಯೋಚಿಸಿದರು. ಅಲ್ಲದೆ "ಈಗಾಗಲೇ ಸುಮಾರು 30 ಸಾವಿರ ರೂಪಾಯಿಗಳವರೆಗೂ ಚಿತ್ರದ ಕೆಲಸಕ್ಕಾಗಿ ವೆಚ್ಚವಾಗಿದೆ. ತಮಿಳಿನ ಒಂದು ಚಿತ್ರದಲ್ಲಿ ಬರುವ ಸಂಭಾವನೆಯ ಹಣವನ್ನು ನಮ್ಮ ನಾಡಿನ ಅಭಿಮಾನಕ್ಕಾಗಿ ಕಳೆದುಕೊಂಡೆ" ಎಂದು ನಿರ್ಧರಿಸಿದ ಭಾಗವತರು 'ಸ್ವಂತವಾಗಿ ತೆಗೆಯಬೇಕೆಂದಿದ್ದ ಭಕ್ತ ಕುಂಬಾರ ಚಿತ್ರವನ್ನು ನಿಲ್ಲಿಸಿಬಿಡೋಣವೇ' ಎಂದು ಯೋಚಿಸುತ್ತ ಯಾರಲ್ಲಿಯೂ ಈ ವಿಷಯವನ್ನು ಹೇಳದೆ ಕೊಯಮತ್ತೂರಿನಲ್ಲಿ

ಚಿತ್ರಗಳ ಕೆಲಸ ಮುಗಿಸಿಕೊಂಡು ಮದ್ರಾಸಿಗೆ ಬಂದು ನೆಲೆಸಿ ತಮಿಳು ಚಿತ್ರಗಳಲ್ಲಿ ಕೆಲಸ ಮಾಡಿಕೊಂಡು ಸುಮಾರು ಆರು ತಿಂಗಳು ಸುಮ್ಮನಿದ್ದುಬಿಟ್ಟರು.

ದಿನಗಳು ಕಳೆಯುತ್ತಿದ್ದಂತೆ ಎಷ್ಟು ಬೇಡವೆಂದರೂ ಸ್ವತಂತ್ರವಾಗಿ ಚಿತ್ರ ತೆಗೆಯುವ ವಿಷಯ ಭಾಗವತರ ಮನಸ್ಸಿನಿಂದ ದೂರವಾಗಲೇ ಇಲ್ಲ. ಈ ವಿಚಾರ ಪದೇಪದೇ ಬಾಧಿಸುತ್ತಲೇ ಇತ್ತು. ಆ ವೇಳೆಗಾಗಲೆ ನಮ್ಮ ಕನ್ನಡ ನಾಡಿನ ಪತ್ರಿಕೆಗಳೂ ಸಹ 'ಗೋರ ಕುಂಬಾರ ಚಿತ್ರದ ಷೂಟಿಂಗ್ ಮದ್ರಾಸಿನಲ್ಲಿ ನಡೆಯುತ್ತಿದೆ' ಎಂದು ಪ್ರಕಟಿಸಿದ್ದವು. ಜನರ ನಾಲಿಗೆಯಲ್ಲಿಯೂ ಈ ಚಿತ್ರದ ಪ್ರಚಾರ ಕೇಳಿ ಬರುತ್ತಲೇ ಇತ್ತು. ಆಗ ಬಹಳ ಚಿಂತನಶೀಲರಾದ ಭಾಗವತರು "ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯುವುದು ಪುರುಷಲಕ್ಷಣವಲ್ಲ. ಈಗ ಈ ಏರ್ಪಾಡನ್ನು ನಿಲ್ಲಿಸಿದರೆ ಇದರ ವಿಚಾರವಾಗಿಯೂ ಜನರು ನನ್ನನ್ನು ಅವಹೇಳನ ಮಾಡುತ್ತಾರೆ. ಆದ ಕಾರಣ ಏನೇ ಆಗಲಿ 'ಗೋರ ಕುಂಬಾರ' ಚಿತ್ರವನ್ನು ನಿರ್ಮಿಸುವುದೇ ಸರಿಯಾದ ಯೋಚನೆ" ಎಂದು ತೀರ್ಮಾನಿಸಿದರು. ನಂತರ ಬೆಂಗಳೂರಿಗೆ ಬಂದು ಲಕ್ಷ್ಮಿಬಾಯಿ, ಪಂಡರಿಬಾಯಿ, ರಾಘವೇಂದ್ರರಾವ್– ಇನ್ನೂ ಕೆಲವು ನಟನಟಿಯರನ್ನೆಲ್ಲ ಗೊತ್ತು ಮಾಡಿಕೊಂಡು 'ಒಂದೆರಡು ತಿಂಗಳಲ್ಲಿ ಚಿತ್ರದ ಕೆಲಸ ಮದ್ರಾಸಿನಲ್ಲಿ ಪ್ರಾರಂಭವಾಗುತ್ತದೆ. ನೀವುಗಳು ಬಂದು ಸೇರುವ ದಿನಾಂಕವನ್ನು ತಿಳಿಸುತ್ತೇನೆ. ವಿಳಂಬ ಮಾಡದೆ ಬರಬೇಕೆಂದು' ಅವರನ್ನೆಲ್ಲ ಒಪ್ಪಂದ ಮಾಡಿಕೊಂಡು–ಮುಂಗಡವಾಗಿ ಸ್ವಲ್ಪ ಹಣ ಕೊಟ್ಟು" ಹೇಳಿದ ಭಾಗವತರು ಮದ್ರಾಸಿನಲ್ಲಿ ಅದಕ್ಕಾಗಿ ಒಂದು ಬಂಗಲೆಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡರು. ಅದರಲ್ಲಿ ಆಫೀಸನ್ನು ಏರ್ಪಾಡು ಮಾಡಿಕೊಂಡು ಕು.ರಾ. ಸೀತಾರಾಮಶಾಸ್ತ್ರಿಯವರನ್ನು ಕರೆಸಿಕೊಂಡರು.

## '...ಕುಂಬಾರ'ನಿಗೆ ತೊಂದರೆಗಳ ಮೇಲೆ ತೊಂದರೆ

ಮತ್ತೆ ಕೆಲವು ದಿವಸಗಳಲ್ಲಿ ಭಾಗವತರು, ನಿರ್ದೇಶಕರು ಮತ್ತು ಶಾಸ್ತ್ರಿಗಳು ನಿತ್ಯವೂ ಸೇರಿ ಕಥೆಯ ಸನ್ನಿವೇಶಗಳನ್ನು ಮತ್ತು ಹಾಡುಗಳನ್ನು ಮತ್ತೊಂದು ಸಾರಿ ವಿಮರ್ಶೆ ಮಾಡುತ್ತ ತೀರ್ಮಾನ ಮಾಡುವುದಕ್ಕೆ ಎರಡು ತಿಂಗಳಾಯಿತು. ಅನಂತರ ಬೆಂಗಳೂರಿನ ವಾದ್ಯವೃಂದದವರು ಹಾಗೂ ಕೆಲವು ನಟನಟಿಯರನ್ನು ಮದ್ರಾಸಿನ ಶ್ರೀ ಎ.ವಿ.ಎಮ್. ಮೇಯಪ್ಪ ಚೆಟ್ಟಿಯಾರ್ ನಡೆಸುತ್ತಿದ್ದ ಪ್ರಜ್ಯೋತಿ ಸ್ಟುಡಿಯೋಕ್ಕೆ ಕರೆಸಿಕೊಂಡು ಶುಭಸಂದರ್ಭದಲ್ಲಿ ಗೋರ ಕುಂಬಾರ ಚಿತ್ರದ ಕೆಲಸ ಪ್ರಾರಂಭವಾಯಿತು. ಚಿತ್ರದ ಕೆಲಸ ಆರಂಭವಾಗುವುದಕ್ಕೆ ಅಂತೂ ಇಂತೂ ಸುಮಾರು ಒಂದು ವರ್ಷವೇ ಬೇಕಾಯಿತು. ಪ್ರಾರಂಭವಾದ ಒಂದು ತಿಂಗಳೊಳಗೆ ಹಾಡುಗಳನ್ನೆಲ್ಲಾ ಧ್ವನಿಮುದ್ರಿಸಿಕೊಂಡು ವಾದ್ಯವೃಂದದವರನ್ನೆಲ್ಲ

ಕಳಿಸಿಬಿಟ್ಟರು. ಚಿತ್ರದ ಷೂಟಿಂಗ್ ಕೆಲಸ ಪ್ರಾರಂಭವಾಗಿ ನಡೆಯುತ್ತಿರುವಾಗ್ಗೆ ನಿರ್ದೇಶಕರಾದ ಬೊಮ್ಮನ್ ವಿರಾನಿಯವರ ಕಿರುಕುಳ ಪ್ರಾರಂಭವಾಯಿತು. ಆದರೆ, ಬೊಮ್ಮನ್ ವಿರಾನಿಯವರು ಆಶ್ವಾಸನೆ ನೀಡಿದಂತೆ ಕಂಪನಿ ಷೇರಿಗೆ ತಾನು ಕೊಡುತ್ತೇನೆಂದು ಹೇಳಿದ ಹಣವನ್ನು ಕೊಡದೆಯೇ ಭಾಗವತರಿಗೇ ಬೆಳಗಾದರೆ ಹಣಕ್ಕೆ ಒತ್ತಾಯ ಮಾಡುತ್ತ ಒಂದಲ್ಲ ಒಂದು ರೀತಿಯ ಕಿರುಕುಳ ಕೊಡುತ್ತ ಸಕಾಲಕ್ಕೆ ಕೆಲಸವನ್ನೂ ನಡೆಸದ ಆತನೊಂದಿಗೆ ಹೆಣಗಾಡುವುದೇ ಕಷ್ಟವಾಯಿತು. ತಾನು ಚಿತ್ರದ ಕೆಲಸದಲ್ಲಿ ಭಾಗಸ್ಥನಾಗಿ 'ಸುಮಾರು 25 ಸಾವಿರ ರೂಪಾಯಿ ನಷ್ಟವಾದರೂ ಹಣವನ್ನು ಹಾಕಿ ಕೆಲಸಮಾಡುತ್ತೇನೆ' ಎಂದು ಹಿಂದೆ ಹೇಳಿದ್ದಂತೆ ತನ್ನ ಸ್ವಂತ ಹಣವನ್ನೇನನ್ನೂ ಕೊಡದೆ ಭಾಗವತರಿಂದಲೇ ಸುಮಾರು ಹದಿನೈದು ಸಾವಿರ ರೂಪಾಯಿಗಳವರೆಗೂ ಹಣ ತೆಗೆದುಕೊಂಡು ಅವರಿಗೇ ಕಿರುಕುಳ ಕೊಡಲು ಪ್ರಯತ್ನಿಸಿದರು. ಆ ಹಿಂಸೆಯನ್ನು ಸಹಿಸಲಾರದೆ ಭಾಗವತರು ಕೆಲವು ನಿರ್ಮಾಪಕರುಗಳ ಬಳಿಯಲ್ಲಿ ಹಾಗೂ ಚಿತ್ರೋದ್ಯಮದಲ್ಲಿದ್ದ ಕೆಲವು ಹಿರಿಯರ ಬಳಿ ಬೊಮ್ಮನ್ ವಿರಾನಿಯವರಿಂದ ತಮಗಾಗುತ್ತಿದ್ದ ಕಷ್ಟಗಳನ್ನು ತೋಡಿಕೊಂಡರು. ಜೊತೆಗೆ ಆ ಹಿರಿಯರಿಂದಲೂ ಸಹ ಬೊಮ್ಮನ್ ವಿರಾನಿಯವರಿಗೆ ಬುದ್ಧಿವಾದವನ್ನು ಹೇಳಿಸಿದರು. ಆದರೂ ಆತ ಕೊಡುತ್ತಿದ್ದ ಹಿಂಸೆ ಕಡಿಮೆಯಾಗಲಿಲ್ಲ ! ಇದನ್ನು ಗಮನಿಸಿದ ಕೆಲವು ನಿರ್ಮಾಪಕರುಗಳು 'ಇವರನ್ನು ಕೈ ಬಿಟ್ಟು ಬೇರೆ ಯಾರನ್ನಾದರೂ ನಿರ್ದೇಶಕರನ್ನಾಗಿ ನೇಮಿಸಿಕೊಂಡು ಚಿತ್ರವನ್ನು ಮುಗಿಸಿ, ಇಲ್ಲವಾದರೆ ನೀವು ಬಹಳ ಕಷ್ಟಪಡಬೇಕಾಗುತ್ತದೆ' ಎಂದು ಭಾಗವತರಿಗೆ ಸಲಹೆ ನೀಡಿದರು. ಆಗ ಭಾಗವತರು ಹಿರಿಯರ ಮಾತನ್ನು ಉದಾಸೀನ ಮಾಡದೆ ಬೊಮ್ಮನ್ ವಿರಾನಿಯವರ ಜಾಗಕ್ಕೆ ಆಂಧ್ರದ ಪಿ. ಪುಲಯ್ಯನವರನ್ನು ನೇಮಿಸಿಕೊಂಡು ಚಿತ್ರದ ಕೆಲಸವನ್ನು ಆರಂಭಿಸಿಬಿಟ್ಟರು.

ಗೋರ ಕುಂಬಾರ ಕಥೆಯಲ್ಲಿ ಕುಂಬಾರ ಮಣ್ಣು ತುಳಿಯುತ್ತ ಹಾಡುತ್ತ ಪಾಂಡುರಂಗನ ಧ್ಯಾನದಲ್ಲಿ ಮೈ ಮರೆತು ತನ್ನ ಮಗುವನ್ನೇ ಮಣ್ಣಿನ ಜೊತೆಯಲ್ಲಿ ತುಳಿದು ಸಾಯಿಸುವ ಸನ್ನಿವೇಶದ ಒಂದು ದೃಶ್ಯ ಷೂಟಿಂಗ್ ನಡೆಯುತ್ತಿರುವಾಗ್ಗೆ ಗ್ರಹಚಾರವಶಾತ್ ಆ ಮಣ್ಣಿನಲ್ಲಿ ಸೇರಿದ್ದ ಸುಮಾರು ಎರಡು ಅಂಗುಲವಿರುವ ಕಬ್ಬಿಣದ ಮೊಳೆ ಮಣ್ಣು ತುಳಿಯುವಾಗ ಕುಂಬಾರನ ಪಾತ್ರವಹಿಸಿದ್ದ ಭಾಗವತರ ಕಾಲಿಗೆ ಸರ್ರನೆ ಹೊಕ್ಕಿಕೊಂಡಿತು. ಅದೇ ದೃಶ್ಯದಲ್ಲಿ ಬರಬೇಕಿದ್ದ ಮಗುವೂ ಸಹ ಬಂದಿತ್ತು. ಆದರೆ ಭಾಗವತರ ಕಾಲಿಗೆ ಮೊಳೆ ಹೊಕ್ಕಿದ ಕಾರಣ ಆ ದಿವಸ ಷೂಟಿಂಗ್ ರದ್ದಾಯಿತು. ಕಾಲಿಗೆ ಸೆಪ್ಟಿಕ್ ಆಗಿ ಬಾಧೆ ಜಾಸ್ತಿ ಆಯಿತು. ಸುಮಾರು ಎರಡು ವಾರ ಸುಧಾರಿಸಿಕೊಂಡು ಕಾಲಿನ ಗಾಯ ವಾಸಿಯಾದ ನಂತರ ಮತ್ತೆ ಷೂಟಿಂಗ್ ಪ್ರಾರಂಭಿಸೋಣ ಎಂದು ಯೋಚಿಸುವಾಗ್ಗೆ ಷೂಟಿಂಗ್‌ಗೆ

ಬರಬೇಕಾಗಿದ್ದ ಆ ಮಗುವಿಗೆ ಜ್ವರ ಪ್ರಾರಂಭವಾಗಿ ಅದು ಬದುಕುವ ಸ್ಥಿತಿಯಲ್ಲೇ ಇಲ್ಲ ಎಂಬ ಆತಂಕ ಮಗುವಿನ ತಂದೆ ತಾಯಿಗೆ ಉಂಟಾದಾಗ ಭಾಗವತರಲ್ಲಿಗೆ ಬಂದು ಗೋಳಾಡಲು ಆರಂಭಿಸಿದರು. ಮಗುವನ್ನು ಆಸ್ಪತ್ರೆಯಲ್ಲಿಟ್ಟು 'ನಮ್ಮ ಚಿತ್ರದ ಕೆಲಸ ಹೇಗಾದರೂ ಆಗಲಿ ಸದ್ಯ ಆ ಮಗು ಬದುಕಿದರೆ ಸಾಕು' ಎಂದುಕೊಳ್ಳುತ್ತ ಅದಕ್ಕಾದ ಖರ್ಚು ವೆಚ್ಚಗಳನ್ನು ಭಾಗವತರೇ ಭರಿಸಿದರು. ಮಗು ಆರೋಗ್ಯ ಸ್ಥಿತಿಗೆ ಬರಲಿಕ್ಕೆ ಸುಮಾರು ಎರಡು ತಿಂಗಳೇ ಬೇಕಾಯಿತು. ಇದು ಎಂಥ ಸಂದರ್ಭ ಅಂದರೆ ಇನ್ನೊಂದು ಮಗುವನ್ನು ತಂದು ಆ ದೃಶ್ಯವನ್ನು ಪೂರ್ತಿಗೊಳಿಸೋಣ ಎಂದರೆ, ಚಿತ್ರದಲ್ಲಿ ಮಗುವಿನ ಪಾತ್ರ ಹಿಂದೆ ನಡೆದಿತ್ತಾದ್ದರಿಂದ ಬೇರೆ ಮಗುವನ್ನು ತಂದು ಚಿತ್ರದ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಈ ತೊಂದರೆಯಿಂದ ಸುಮಾರು ಎರಡು ತಿಂಗಳು ಗೋರ ಕುಂಬಾರ ಚಿತ್ರದ ಕೆಲಸವೇ ಇಲ್ಲದಂತಾಯಿತು. ಆದರೂ ಊಟ ವಸತಿಯ ಖರ್ಚು ಮಾತ್ರ ಭಾಗವತರಿಗೆ ತಪ್ಪಲೇ ಇಲ್ಲ.

ಹೀಗೆ ಕೆಲವು ತೊಂದರೆಗಳನ್ನು ಎದುರಿಸಿ ಚಿತ್ರದ ಕೆಲ ಸನ್ನಿವೇಶಗಳನ್ನು ಮುಗಿಸುತ್ತ ಚಿತ್ರದಲ್ಲಿನ ಕಡೇ ಸನ್ನಿವೇಶ ಪಾಂಡುರಂಗನ ದೇವಸ್ಥಾನದಲ್ಲಿ ನಡೆಯಬೇಕಾದ ಚಿತ್ರೀಕರಣದ ಕೆಲಸ ಮೊದಲೇ ಸಂಪೂರ್ಣವಾಗಿ ಮುಗಿದಿತ್ತು. ಆ ವೇಳೆಗಾಗಲೇ ಭಾಗವತರು ಚಿತ್ರದ ಕೆಲಸಕ್ಕಾಗಿ ಲಕ್ಷ್ಮೀಬಾಯಿಯವರನ್ನು ಗೊತ್ತುಮಾಡಿಕೊಂಡಿದ್ದ ನಾಲ್ಕು ತಿಂಗಳ ಅವಧಿ ಮುಗಿದು ಮತ್ತೆ ಹೆಚ್ಚುವರಿಯಾಗಿ ಸ್ವಲ್ಪ ಹಣವನ್ನು ಕೊಟ್ಟು ಚಿತ್ರದ ಕೆಲಸವನ್ನು ಮುಗಿಸಿಕೊಂಡಿದ್ದರು. ಆದರೆ ಕೊನೆಯಲ್ಲಿ ಪಾಂಡುರಂಗ ಮಗುವನ್ನು ಜೀವ ಸಹಿತವಾಗಿ ನಾಯಕಿಯ ಕೈಗೆ ಪ್ರತ್ಯಕ್ಷವಾಗಿ ಕೊಡುವ ಒಂದೇ ಒಂದು ಸನ್ನಿವೇಶ, ಅದೂ ಸುಮಾರು ಎರಡು ಷಾಟ್ ಬಾಕಿ ಉಳಿದಿತ್ತು. ಆದರೆ ಲಕ್ಷ್ಮೀಬಾಯಿಯವರು ಮುಂದೆ ಸಹಕರಿಸುತ್ತಾರೋ ಇಲ್ಲವೋ ಎಂದು ಭಾವಿಸಿದ ಭಾಗವತರು ಮುಂಜಾಗ್ರತೆಯಿಂದ ಮಗುವನ್ನು ನಾಯಕಿಯ ಕೈಯಲ್ಲಿ ಇಡುವ ದೃಶ್ಯವನ್ನು ದೇವಸ್ಥಾನದ ಸೆಟ್ಟು ಹಾಕಿದ್ದಾಗಲೇ ಕ್ಲೋಸಪ್‌ನಲ್ಲಿ ಒಂದೆರಡು ಷಾಟ್ ತೆಗೆದುಕೊಂಡಿದ್ದರು. ಕೊನೆಯ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಒಂದೆರಡು ಷಾಟ್ ಅನ್ನು ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತೆಂಬ ಅಭಿಪ್ರಾಯದಿಂದ ಲಕ್ಷ್ಮೀಬಾಯಿಯವರ ಯಜಮಾನರನ್ನು ಭೇಟಿ ಮಾಡಿದರು. ಆಗ 'ದೇವಸ್ಥಾನದ ಸನ್ನಿವೇಶದಲ್ಲಿ ನಾಯಕಿಯು ಪಾಂಡುರಂಗನಿಂದ ಮಗುವನ್ನು ತೆಗೆದುಕೊಳ್ಳುವ ಸನ್ನಿವೇಶದಲ್ಲಿ ಈ ಎರಡು ಕ್ಲೋಸಪ್ ಷಾಟ್‌ಗಳು ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ. ಎರಡು ಗಂಟೆಗಳ ಕಾಲ ಲಕ್ಷ್ಮೀಬಾಯಿಯವರನ್ನು ಕಳಿಸಿಕೊಡಿ' ಎಂದು ವಿನಯದಿಂದಲೇ ಭಾಗವತರು ಕೇಳಿಕೊಂಡರು. ಆಗ ಅವರ ಯಜಮಾನರು ಮೀಸೆಯನ್ನು

ತೀಡಿಕೊಂಡು 'ಭಾಗವತರೇ ಬ್ಯುಸಿನೆಸ್ ಈಸ್ ಬ್ಯುಸಿನೆಸ್, ಅದಕ್ಕೆ ಸುಮ್ಮನೆ ನಟಿಸಲು ಸಾಧ್ಯವಿಲ್ಲ, ನೀವು ಮಾತನಾಡಿದ್ದರಲ್ಲಿ ಒಂದು ತಿಂಗಳ ಸಂಭಾವನೆಯನ್ನಾದರೂ ಕೊಡುವುದಾದರೆ ಕಳಿಸುತ್ತೇನೆ' ಎಂದು ಹೇಳಿದರು. ಆಗ ಭಾಗವತರು 'ಸ್ವಾಮಿ, ನೀವು ನಮ್ಮ ನಾಡಿನ ಬಹು ದೊಡ್ಡ ಕಲಾವಿದರು, ಬಹಳ ಸಂತೋಷ, ವಿಶ್ವಾಸವಿರಲಿ ಎಂದು ಅವರಿಗೇ ನಮಸ್ಕಾರ ಹಾಕಿ ಹೊರಟು ಬಂದು, ಇದಕ್ಕೆ ಮುಂಚೆ ಜಾಗ್ರತೆಯಿಂದ ತೆಗೆದಿಟ್ಟುಕೊಂಡಿದ್ದ ಕ್ಲೋಸಪ್ ಷಾಟ್‌ಅನ್ನು ಎಡಿಟಂಗ್‌ಗೆ ಸೇರಿಸಿ ಚಿತ್ರದ ಕೆಲಸವನ್ನು ಮುಗಿಸಿಯೇಬಿಟ್ಟರು. ಆಗಿನ ಕಾಲದ ನಮ್ಮ ಒಬ್ಬ ಹಿರಿಯ ನಟರು ಭಾಗವತರಿಗೆ ಮಾಡಿದ ದೊಡ್ಡ ಸಹಾಯವಿದು ! ಆದ್ದರಿಂದ ಭಾಗವತರು ಇದನ್ನು ಮರೆಯಲಿಲ್ಲ ! ಅಂತೂ ಇಂತೂ ಪಿ. ಪುಲ್ಲಯ್ಯನವರ ನಿರ್ದೇಶನದಲ್ಲಿ ಚಿತ್ರ ಪೂರ್ತಿಯಾಯಿತು. ಇನ್ನೇನು ಚಿತ್ರ ತೆರೆಗೆ ಬರಬೇಕು ಎಂಬಷ್ಟರಲ್ಲಿ ಬೊಮ್ಮನ್ ಇರಾನಿ ಆ ಚಿತ್ರಕ್ಕೆ 'ತಡೆಯಾಜ್ಞೆ' ತರಲು ಕೋರ್ಟಿಗೆ ಹೋಗಿ 'ತಡೆಯಾಜ್ಞೆ' ಕೊಡಬೇಕೆಂದು ಕೇಳಿದಾಗ ಕೋರ್ಟಿನಲ್ಲಿ ವಾದ ವಿವಾದಗಳು ಜರುಗಿ 'ಮೂರು ಲಕ್ಷ ರೂಪಾಯಿಗಳು ವೆಚ್ಚವಾಗಿರುವಂಥ 'ಗೋರ ಕುಂಬಾರ ತೆರೆಗೆ ಬರದೇ ಹೋದರೆ ನಮಗಾಗಿರುವ ನಷ್ಟವನ್ನು ಕಟ್ಟಿ ಕೊಡುವವರು ಯಾರು ?' ಎಂದು ಭಾಗವತರ ವಕೀಲರು ವಾದಿಸಿ ಕಡೆಗೆ ರಿಸೀವರ್ ಅನ್ನು ನೇಮಿಸಿ ಚಿತ್ರ ಬಿಡುಗಡೆ ಮಾಡಬಹುದೆಂದು ಕೋರ್ಟ್ ಆದೇಶ ನೀಡಿತ್ತು. ಅದರ ಮೇರೆಗೆ ಚಿತ್ರ ಬಿಡುಗಡೆ ಮಾಡಲು ಎಲ್ಲ ಸಿದ್ಧತೆಗಳೂ ನಡೆಯುತ್ತಿದ್ದವು. ಅದೇ ಸಂದರ್ಭದಲ್ಲಿಯೇ ಮದ್ರಾಸ್‌ನ ಜೆಮಿನಿ ಸ್ಟುಡಿಯೋ ಮಾಲೀಕರಾದ ವಾಸನ್ ಎಂಬುವವರು ನಾಗಯ್ಯ ಮತ್ತು ಪುಷ್ಪವಲ್ಲಿ- ಇವರನ್ನು ನಾಯಕ ನಾಯಕಿಯರನ್ನಾಗಿ ಮಾಡಿಕೊಂಡು ಇದೇ ಗೋರ ಕುಂಬಾರ ಕಥೆಯನ್ನು 'ಚಕ್ರಧಾರಿ' ಎಂಬ ಹೆಸರಿನಲ್ಲಿ ತಮಿಳಿನಲ್ಲಿ ಚಿತ್ರ ನಿರ್ಮಿಸಿ ಅದೂ ತೆರೆಗೆ ಬರಲು ಸಿದ್ಧವಾಗಿತ್ತು. ಅಂತೂ ಭಕ್ತ ಕುಂಬಾರ, ಚಕ್ರಧಾರಿ ಈ ಎರಡೂ ಚಿತ್ರಗಳು ಏಕಕಾಲಕ್ಕೆ ಬಿಡುಗಡೆಗೆ ಸಿದ್ಧವಾಗಿದ್ದವು. ಆಗ ಭಾಗವತರು ಬೆಂಗಳೂರಿಗೆ ಬಂದು ಕೆಂಪೇಗೌಡ ರಸ್ತೆಯಲ್ಲಿರುವ ಸ್ಟೇಟ್ಸ್ ಥಿಯೇಟರಿನ ಆಗಿನ ಮಾಲಿಕರಾಗಿದ್ದ ಶ್ರೀರಂಗಪ್ಪನವರನ್ನು ಕಂಡು 'ಗೋರ ಕುಂಬಾರ' ಚಿತ್ರ ಬಿಡುಗಡೆ ಸ್ಟೇಟ್ಸ್ ಥಿಯೇಟರನ್ನು ಗೊತ್ತುಮಾಡಿ, ಚಿತ್ರದ ಬಿಡುಗಡೆಯ ದಿನಾಂಕವನ್ನು ಗೊತ್ತುಪಡಿಸಿಕೊಂಡಿದ್ದರು. ಆಗ ಒಂದು ಪ್ರಸಂಗ ಜರುಗಿತು : ಕನ್ನಡದವರೇ ಆದ ಸೂಪರ್ ಟಾಕೀಸಿನ 'ಆಗಿನ ಒಬ್ಬ ಮಾಲೀಕರು', ವಾಸನ್ ಅವರ ಬಳಿಗೆ ಹೋಗಿ 'ಚಕ್ರಧಾರಿ' ಚಿತ್ರವನ್ನು ನನಗೆ ಕೊಡಿ ಕೂಡಲೇ ನಮ್ಮ ಥಿಯೇಟರಿನಲ್ಲಿ ಪ್ರದರ್ಶಿಸುವ ಏರ್ಪಾಡು ಮಾಡುತ್ತೇನೆ' ಎಂದು ಕೇಳಿದರಂತೆ. ಅದಕ್ಕೆ ವಾಸನ್ ಅವರು 'ಈಗ ಬೇಡ, ಈಗಾಗಲೇ ಕನ್ನಡದಲ್ಲಿ 'ಭಕ್ತ ಕುಂಬಾರ' ಸಿದ್ಧವಾಗಿದ್ದು

ತೆರೆಗೆ ಬರ್ತಾ ಇದೆ. ಭಾಗವತರಿಗೆ ತಮಿಳುನಾಡಿನಲ್ಲಿ ಒಳ್ಳೇ ಹೆಸರಿದೆ. ಕನ್ನಡನಾಡಿನ ಒಳ್ಳೇ ನಟರು, ವ್ಯಕ್ತಿತ್ವದಲ್ಲಿಯೂ ತುಂಬ ಒಳ್ಳೆಯವರು. ಇಂಥ ಮನುಷ್ಯ ಆ ಬೊಮ್ಮನ್ ವಿರಾನಿಯವರನ್ನು ಪಾಟ್ನರ್ ಆಗಿ ಮಾಡಿಕೊಂಡು ಅವರು ಕೊಟ್ಟ ಕಿರುಕುಳಗಳನ್ನೆಲ್ಲಾ ಸಹಿಸಿಕೊಂಡು ಬಹಳ ಸಾಹಸದಿಂದಲೇ 'ಗೋರ ಕುಂಬಾರ' ಚಿತ್ರವನ್ನು ಮುಗಿಸಿದ್ದಾರೆ. ಅವರ ವಿಚಾರವಾಗಿ ನನ್ನಲ್ಲಿಗೂ ಮಧ್ಯಸ್ಥಿಕೆಗೆ ಬಂದಿದ್ದರು. ಆದರೂ ಬೊಮ್ಮನ್ ವಿರಾನಿಯವರು ನನ್ನ ಸಲಹೆಗೆ ಒಪ್ಪಿಕೊಳ್ಳದೆ ಕೋರ್ಟ್‌ಗೆ ಹೋಗಿದ್ದಾರೆ. ಆ ವಿಚಾರವೆಲ್ಲವೂ ನನಗೆ ತಿಳಿದಿದೆ. ಆದ್ದರಿಂದ ಈಗ ನಮ್ಮ 'ಚಕ್ರಧಾರಿ' ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡುವುದು ಬೇಡ. ತಮಿಳುಭಾಷೆಯ ಈ ನಮ್ಮ 'ಚಕ್ರಧಾರಿ'ಯನ್ನು ಯಾವಾಗ ಬೇಕಾದರೂ ಬಿಡುಗಡೆ ಮಾಡಿಕೊಳ್ಳಬಹುದು' –ಇತ್ಯಾದಿಯಾಗಿ ಅವರು ಎಷ್ಟು ಹೇಳಿದರೂ ಕೇಳದೆ 'ಆ ವಿಷಯ ನಿಮಗೇಕೆ? ನಾನು ಬದುಕುವ ಮಾರ್ಗವನ್ನು ನಾನು ನೋಡಬೇಕೋ ಇಲ್ಲವೋ' ಎಂದು ಬಹಳವಾಗಿ ಹೇಳಿ ಅಂತೂ ಅವರಿಂದ ಒಪ್ಪಿಗೆ ಪಡೆದುಕೊಂಡ ಸೂಪರ್ ಟಾಕೀಸಿನ ಆಗಿನ ಮಾಲೀಕರು ನೇರವಾಗಿ ಭಾಗವತರ ಬಳಿಗೆ ಬಂದರು: 'ಭಾಗವತರೇ ನೀವು ಈಗಾಗಲೇ ಭಕ್ತ ಕುಂಬಾರ ಚಿತ್ರವನ್ನು ಸ್ವಂತವಾಗಿ ತೆಗೆಯಲು ಪ್ರಾರಂಭಿಸಿ ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದೀರಿ. ನಿಮ್ಮ ಚಿತ್ರವನ್ನು ಈಗ ಬಿಡುಗಡೆ ಮಾಡುವುದು ಬೇಡ ಅಲ್ಲದೆ ಕೋರ್ಟ್‌ಗೆ ಬೇರೆ ಹೋಗಿದ್ದೀರಿ. ನೀವು ಕೊಟ್ಟಿರುವ ದಿನಾಂಕಕ್ಕೆ ನಿಮ್ಮ ಚಿತ್ರ ಬಿಡುಗಡೆಯಾಗುತ್ತದೋ ಇಲ್ಲವೋ, ಬಿಡುಗಡೆ ಮಾಡುವುದನ್ನು ನಿಲ್ಲಿಸಿಬಿಡಿ. ನಾನಂತೂ ಜೆಮಿನಿಯವರ 'ಚಕ್ರಧಾರಿ'ಯನ್ನು ಅದೇ ದಿನಾಂಕ ಬಿಡುಗಡೆ ಮಾಡಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದೇನೆ. ನಮ್ಮ ಅಣ್ಣನವರೂ ನಿಮಗೆ ಸ್ಟೇಟ್ಸ್ ಥಿಯೇಟರನ್ನುಕೊಡುವುದೂ ಗ್ಯಾರಂಟಿಯಿಲ್ಲ' ಎಂದು ಸ್ವಲ್ಪ ಆವೇಶದಿಂದಲೇ ಮಾತನಾಡಿದರು. ಅದೇ ಆವೇಶದಲ್ಲಿಯೇ ಭಾಗವತರು 'ಸ್ವಾಮೀ, ಮಾಲೀಕರೇ ನನಗಾಗಿ ನೀವು ಬಹಳ ಪಶ್ಚಾತಾಪ ಪಟ್ಟು ಹೇಳಿದ ಮಾತುಗಳು ನನ್ನ ಹೃದಯದಲ್ಲಿ ಒಂದು ತರಹ ವೇದನೆಯಾಗಿ ಪರಿಣಮಿಸಿವೆ. ನಿಮ್ಮ ಬುದ್ಧಿವಾದಕ್ಕೆ ಬಹಳ ವಂದನೆಗಳು. ನೀವು ಹೇಳಿದಂತೆ ಈಗಾಗಲೇ ನಾನು ಬಹಳ ತೊಂದರೆಗಳನ್ನು ಎದುರಿಸಿ ಚಿತ್ರವನ್ನು ಮುಗಿಸಿದ್ದೇನೆ. ಅದೇನಾದರೂ ಆಗಲಿ ಒಂದೇ ದಿವಸ ನಮ್ಮ ಕರ್ನಾಟಕದಲ್ಲಿ ಎರಡೂ ಚಿತ್ರಗಳು ಬಿಡುಗಡೆಯಾಗಲಿ. ತಮಿಳು 'ಚಕ್ರಧಾರಿ'ಗಿಂತಲೂ ನಮ್ಮ ಕನ್ನಡದ 'ಗೋರ ಕುಂಬಾರ' ಚಿತ್ರಕ್ಕೆ ಒಳ್ಳೇ ಹೆಸರು ಬರುತ್ತದೆಂಬುದು ನನ್ನ ಮನಸ್ಸಾಕ್ಷಿಗೆ ಖಾತ್ರಿಯಿದೆ. ಅದೇನಾದರೂ ಇರಲಿ ! ಆ ಚಿತ್ರದ ಮುಂದೆ ನಾನು ಜಯಗಳಿಸಿದೆ ಎಂದಾಗಬೇಕು ಅಥವಾ ಅದರಿಂದ ಪೂರ್ತಿಯಾಗಿ ಮುಳುಗಿಯೇ ಹೋದೆ ಎಂದು ಇತ್ಯರ್ಥವಾಗಬೇಕು, ಚಿಂತೆಯಿಲ್ಲ.

ನಿಮ್ಮ ಕೆಲಸ ನೀವು ಮಾಡಿ ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುತ್ತೇವೆ. ಇದೇ ನನ್ನ ನಿರ್ಧಾರ' ಎಂದು ಹೇಳಿದ ಕೂಡಲೆ ಆತ ಬಹಳ ಬಿರುಸಾಗಿ 'ಹಾಗೋ ನೋಡೋಣ. ನಮ್ಮ ಅಣ್ಣ ನಿಮಗೆ ಹ್ಯಾಗೆ ಸ್ಟೇಟ್ಸ್ ಥಿಯೇಟರನ್ನು ಕೊಡುತ್ತಾರೋ ಅದನ್ನೂ ನೋಡಿಕೊಳ್ಳುತ್ತೇನೆ' ಎಂದು ಹೇಳಿ ಹೊರಟೇಬಿಟ್ಟರು.

ನೇರವಾಗಿ ಬೆಂಗಳೂರಿಗೆ ಬಂದು ಅವರ ಅಣ್ಣನನ್ನು ಭೇಟಿ ಮಾಡಿ 'ಗೋರ ಕುಂಬಾರ' ಚಿತ್ರದ ವಿಚಾರ ಕೋರ್ಟಿನಲ್ಲಿದೆ. ಅವರು ಹೇಳಿರುವ ದಿನಾಂಕಕ್ಕೆ ಚಿತ್ರ ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮ ಥಿಯೇಟರನ್ನು 'ಚಕ್ರಧಾರಿ' ಚಿತ್ರ ಬಿಡುಗಡೆ ಮಾಡಲು ನನಗೆ ಕೊಡಿ' ಎಂದು ಕೇಳಿದರು. ಅದಕ್ಕೆ ಸ್ಟೇಟ್ಸ್ ಥಿಯೇಟರಿನವರು 'ನೆನ್ನೇ ದಿವಸವೇ ನೀನು ಮದ್ರಾಸಿನಲ್ಲಿ ಭಾಗವತರಲ್ಲಿಗೆ ಹೋಗಿ ಮಾತನಾಡಿದ ವಿಚಾರವನ್ನು ದೂರವಾಣಿಯ ಮೂಲಕ ಭಾಗವತರೇ ನನಗೆ ಎಲ್ಲವನ್ನೂ ಹೇಳಿದರು. ಪಾಪ, ಆ ಮನುಷ್ಯ ಕಲಾ ಪ್ರಪಂಚದಲ್ಲಿ ಅದರಲ್ಲಿಯೂ ತಮಿಳುನಾಡಿಗೆ ಹೋಗಿ ಅನೇಕ ಚಿತ್ರಗಳಲ್ಲಿ ನಟಿಸಿ ಕೀರ್ತಿ ಸಂಪಾದಿಸಿದ್ದಾರೆ. ಕನ್ನಡ ಚಿತ್ರಗಳೇ ಬರುವುದು ಅಪರೂಪವಾಗಿರುವಾಗ ಇಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿಕೊಂಡು ಧೀಮಂತಿಕೆಯಿಂದ 'ಭಕ್ತ ಕುಂಬಾರ' ಎಂಬ ಕನ್ನಡ ಚಿತ್ರವನ್ನು ನಿರ್ಮಿಸಿ ಬಿಡುಗಡೆ ಮಾಡುತ್ತಿರುವುದು ಕನ್ನಡಿಗರಾದ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಚಾರ. ಅವರನ್ನು ಅಭಿನಂದಿಸಬೇಕಾದ ವಿಚಾರ. ಹೀಗಿರುವಾಗ ನೀನು ಈ ರೀತಿಯೆಲ್ಲಾ ನಡೆದುಕೊಂಡಿದ್ದು ಮಹಾ ತಪ್ಪು. ನಾಳೆ ನಮ್ಮ ಕನ್ನಡದ ಜನ ನಮಗೆ ಛೀಮಾರಿ ಹಾಕುವುದಿಲ್ಲವೆ ? ಆ ಚಿತ್ರ ಅವರು ಹೇಳಿರುವ ದಿನಾಂಕಕ್ಕೆ ಬರುತ್ತದೋ ಇಲ್ಲವೋ ಅದು ಬೇರೆ ಪ್ರಶ್ನೆ. ನಾನಂತೂ ಅವರಿಗೆ ಮಾತು ಕೊಟ್ಟಿದ್ದೇನೆ. ಆದ್ದರಿಂದ ನಿನಗೆ ನಾನು ನಮ್ಮ ಥಿಯೇಟರನ್ನು ಚಿತ್ರ ಬಿಡುಗಡೆಗೆ ಕೊಡುವುದಿಲ್ಲ. ಈ ವಿಚಾರ ಶತಸಿದ್ಧ' –ಎಂದು ಖಡಾ ಖಂಡಿತವಾಗಿಯೇ ತನ್ನ ತಮ್ಮನಿಗೆ ಹೇಳಿಬಿಟ್ಟರು.

### ಕವಿ ಕಾಳಿದಾಸನ ಜನ್ಮ ವೃತ್ತಾಂತ ಬಲ್ಲಿರಾ

ನ್ಯಾಯಾಧೀಶರು ರಿಸೀವರನ್ನು ನೇಮಿಸಿ ಒಬ್ಬ ವಿತರಕರ ಮೂಲಕ ಚಿತ್ರ ಬಿಡುಗಡೆ ಮಾಡಬಹುದೆಂದು ಆದೇಶ ನೀಡಿದರು. ಇಷ್ಟು ಆಗಬೇಕಾದರೆ ಕೋರ್ಟಿನಲ್ಲಿ ಬಹಳ ಪ್ರಯಾಸಪಡಬೇಕಾಯಿತು. ಅಂತೂ ಒಂದೇ ದಿವಸ ಬೆಂಗಳೂರು ಹಾಗೂ ಮಿಕ್ಕ ಕೆಲವು ಪ್ರದೇಶಗಳಲ್ಲಿ ತಮಿಳಿನ 'ಚಕ್ರಧಾರಿ' ಕನ್ನಡದ 'ಗೋರ ಕುಂಬಾರ' ಎರಡೂ ಚಿತ್ರಗಳು ಬಿಡುಗಡೆಯಾದವು. ಮೊದಲ ಪ್ರದರ್ಶನದಲ್ಲಿಯೇ ಎರಡೂ ಚಿತ್ರಗಳನ್ನು ನೋಡಿ ಹೊರಬಂದ ಪ್ರೇಕ್ಷಕರು "ತಮಿಳು 'ಚಕ್ರಧಾರಿ'ಗಿಂತ ಕನ್ನಡದ 'ಗೋರ ಕುಂಬಾರ'ವೇ ಬಹಳ ಚೆನ್ನಾಗಿದೆ"

ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಇದರಿಂದ ನಿರ್ಮಾಪಕರಾದಿಯಾಗಿ ಅವರ ಬಳಗಕ್ಕೆ ತುಂಬ ಸಂತೋಷವಾಯಿತು. ಬಿಡುಗಡೆಯಾದ ಎಲ್ಲ ಸ್ಥಳಗಳಲ್ಲಿಯೂ ಚಿತ್ರ ಚೆನ್ನಾಗಿ ನಡೆದು ಹಣ ಗಳಿಸಿತಾದರೂ ರಿಸೀವರ್ ಮತ್ತು ವಿತರಕರು ಈ ಒಂದು ಅವಕಾಶವನ್ನು ಬಳಸಿಕೊಂಡು ಸಾಧ್ಯವಾದಷ್ಟು ಹಣದ ಬಗ್ಗೆ ನಿವೇದನೆ ಮಾಡಿಕೊಂಡರೂ ಒಂದು ವರ್ಷದೊಳಗಾಗಿ ಭಾಗವತರು ಚಿತ್ರನಿರ್ಮಾಣಕ್ಕೆ ಖರ್ಚು ಮಾಡಿದ್ದ ಸಾಕಷ್ಟು ಹಣ ಜಮಾ ಆಗುತ್ತಾ ಬರುತ್ತಿತ್ತು. ಆದರೆ ಕೋರ್ಟಿನ ವ್ಯವಹಾರ ಮುಗಿಯಬೇಕಾದರೆ ಐದಾರು ವರ್ಷಗಳೇ ಬೇಕಾಯಿತು. ಒಂದು ವಿಚಾರ ಹೇಳಬೇಕು : ಚಿತ್ರ ನಿರ್ಮಾಣದ ವೆಚ್ಚಕ್ಕಾಗಿ ಬೇರೆಯವರಿಂದ ಸಾಲ ತೆಗೆದುಕೊಂಡಿದ್ದ ಹಣವೂ ಹಾಗೂ ಭಾಗವತರು ಸ್ವಂತವಾಗಿ ಹಾಕಿದ್ದ ಹಣವೂ ಸೇರಿ ಸುಮಾರು ಮೂರು ಲಕ್ಷ ರೂ.ಗಳ ಮೊಬಲಗಿನ ಪತ್ರಗಳಿಗೆ ಬೊಮ್ಮನ್ ವಿರಾನಿಯವರಿಂದ ಸಹಿ ಮಾಡಿಸಿಕೊಂಡಿದ್ದರು. ಇದನ್ನು ಗಮನಿಸಿದ್ದ ನ್ಯಾಯಾಧೀಶರು ಬೊಮ್ಮನ್ ವಿರಾನಿಯವರನ್ನು "ನೀವು ಚಿತ್ರಕ್ಕಾಗಿ ವೆಚ್ಚವಾದ ಹಣಕ್ಕೆಲ್ಲ ಸಹಿ ಮಾಡಿದ್ದೀರಿ ಮತ್ತು ಪಾರ್ಟ್ನರ್ ಆಗಿ ಹಾಕಬೇಕಾಗಿದ್ದ ಹಣವನ್ನು ನೀವು ಹಾಕಿಲ್ಲ. ಇನ್ನೂ ಭಾಗವತರಿಂದಲೇ ಸುಮಾರು 15 ಸಾವಿರ ರೂ.ಗಳನ್ನು ತೆಗೆದುಕೊಂಡಿದ್ದೀರಿ, ಹೀಗಿರುವುದರಿಂದ ಇಷ್ಟೆಲ್ಲ ನಷ್ಟ ಮಾಡಿಕೊಂಡಿರುವ ಕಾರಣದಿಂದ ಭಾಗವತರು ನಿಮ್ಮ ಮೇಲೆ ಕೇಸು ನಡೆಸಿ 'ಈ ನಷ್ಟಕ್ಕೆಲ್ಲ ನೀವೇ ಭಾಗಿಗಳೆಂದೂ ನಿಮ್ಮ ಮೇಲೆ ಕೇಸು ಮಾಡಿ ಆ ನಷ್ಟವನ್ನು ಭರಿಸಲು ನೀವು ಸಿದ್ಧರಾಗಿರುತ್ತೀರಾ?' ಎಂದು ಪ್ರಶ್ನಿಸಿದರು. ಆಗ ಬೊಮ್ಮನ್ ವಿರಾನಿಯವರು 'ಸದ್ಯಕ್ಕೆ ನನ್ನ ಮಟ್ಟಿಗೆ ನನ್ನನ್ನು ಬಿಟ್ಟರೆ ಸಾಕು' ಎಂದು ಹೇಳಿ ಹೊರಟೇಬಿಟ್ಟರು. ಇದನ್ನು ಕಂಡ ನ್ಯಾಯಾಧೀಶರು ಭಾಗವತರ ವಕೀಲರನ್ನು 'ನೀವೇನು ಹೇಳುತ್ತೀರಿ' ಎಂದು ಕೇಳಿದರು. ಆಗ ವಕೀಲರು "ಭಾಗವತರೇ, ಹೋಗಲಿ ಬಿಟ್ಟುಬಿಡಿ, ಖರ್ಚು ಮಾಡಿದ ಹಣ ಹೇಗೂ ರಿಸೀವರ್‌ನಲ್ಲಿ ಇದೆ. ಅದನ್ನು ತೆಗೆದುಕೊಂಡು ಸಾಲ ಕೊಡಬೇಕಾದವರಿಗೆ ಕೊಟ್ಟು ಸುಖವಾಗಿರಿ" ಎಂದು ಬುದ್ಧಿವಾದ ಹೇಳಿದರು. ಭಾಗವತರು ವಕೀಲರ ಮಾತಿಗೆ ಗೌರವ ಕೊಟ್ಟು 'ಸರಿ' ಎಂದು ಒಪ್ಪಿಕೊಂಡರು.

ಕೋರ್ಟಿನಲ್ಲಿ ಇಷ್ಟೆಲ್ಲ ವ್ಯವಹಾರ ನಡೆದು ಮುಕ್ತಾಯವಾಗುವ ಒಂದು ತಿಂಗಳ ಮುಂಚೆಯೇ 'ಭಕ್ತ ಕುಂಬಾರ' ಚಿತ್ರದ ನೆಗೆಟಿವ್‌ಅನ್ನು ಭಾಗವತರು ಮದ್ರಾಸಿನ ಒಂದು ಲ್ಯಾಬರೆಟರಿಯಲ್ಲಿ ಸಂಗ್ರಹಿಸಿಟ್ಟಿದ್ದರು. ಇವರ ದುರಾದೃಷ್ಟವೋ ಮಾಲೀಕರ ದುರಾದೃಷ್ಟವೋ ಆ ಲ್ಯಾಬರೆಟರಿಯಲ್ಲಿ ಕರೆಂಟ್ ಸರ್ಕ್ಯುಲೇಟಾಗಿ ಭಕ್ತ ಕುಂಬಾರದ ಜೊತೆಗೆ ಹಲವಾರು ಚಿತ್ರಗಳ ನೆಗೆಟೀವ್‌ಗಳು ಭಸ್ಮವಾಗಿ ಬಿಟ್ಟಿದ್ದವಂತೆ !

ಆಗ ಆ ನೆಗೆಟಿವ್ ಏನಾದರೂ ಇದ್ದಿದ್ದರೆ ಭಾಗವತರು 'ಕುಬೇರ'ರಾಗಿ ಬಿಡುತ್ತಿದ್ದರೋ ಏನೋ ? ಲ್ಯಾಬಲೆಟರಿಯವರಿಗಂತೂ ತುಂಬಲಾರದ ನಷ್ಟವುಂಟಾಯಿತು ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ.

ಅಂತೂ ಭಾಗವತರು 'ಗೋರ ಕುಂಬಾರ' ಚಿತ್ರ ನಿರ್ಮಿಸುವ ಸಂದರ್ಭದಲ್ಲಿ ಅವರಿಗೆ ಒಂದು ಕಳೆದರೆ ಮತ್ತೊಂದು ಹಿಂಸೆ ಸಿದ್ಧವಾಗುತ್ತಿತ್ತು. ಆ ವೇಳೆಯಲ್ಲಿ ಅವರು ಅನುಭವಿಸಿರುವ ಕಷ್ಟ ನಷ್ಟಗಳು, ಮಾನಸಿಕ ಯಾತನೆ ಬರೀ ಬಾಯಿ ಮಾತಿನಲ್ಲಿ ಹೇಳಿದರೆ ಸಾಲದು. ಒಂದು ರೀತಿಯ ಯಮಯಾತನೆಗೆ ಭಾಗವತರು ಗುರಿಯಾಗಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಅವರ ಸ್ವಂತ ನಿರ್ಮಾಪಕತ್ವದ ಹಲವಾರು ಅಹಿತಕರ ಘಟನೆಗಳು ಇಲ್ಲಿಗೆ ಮುಕ್ತಾಯವಾಗಿ ಭಾಗವತರು ಚಿತ್ರ ನಿರ್ಮಾಣಕ್ಕೆ ವೆಚ್ಚ ಮಾಡಿದ್ದ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ರಿಸೀವರ್‌ನಿಂದ ಪಡೆದುಕೊಳ್ಳಬೇಕಾದರೆ ಅದಕ್ಕೆ ಮೂರು ತಿಂಗಳು ವ್ಯವಹಾರ ಮಾಡಬೇಕಾಯಿತು. ಆದರೂ ಕಥೆಗೆ ಖರ್ಚು ಮಾಡಿದ ಹಣವೂ ಬಂದಿತು. ಕನ್ನಡ ನಾಡಿನಲ್ಲಿ ಇವರು ನಿರ್ಮಿಸಿದ ಗೋರ ಕುಂಬಾರಕ್ಕೆ ಒಳ್ಳೆ ಹೆಸರೂ ಬಂದಿತು. 'ಅದೇ ನನಗೆ ದೊರೆತ ಕೋಟಿ ಲಾಭ' ಎಂದು ನೆಮ್ಮದಿಯ ನಿಟ್ಟುಸಿರುಬಿಟ್ಟರು. ಅಲ್ಲದೆ 'ಭಾಗವತರು ಬೇರೆಯವರಿಂದ ತೆಗೆದುಕೊಂಡಿದ್ದ ಸಾಲರೂಪದ ಹಣವನ್ನು ಬಡ್ಡಿ ಸಹಿತವಾಗಿ ಕೊಟ್ಟು ತೀರಿಸಿ, ಮಾನಸಿಕ ನೆಮ್ಮದಿ ಪಡೆಯಲು ಕುಟುಂಬ ಪರಿವಾರ ಸಮೇತವಾಗಿ ತಿರುಪತಿಗೆ ಹೋಗಿ 8 ದಿವಸಗಳಿದ್ದು ನಿತ್ಯವೂ ಸ್ವಾಮಿಯ ಸೇವೆ 'ಇನ್ನೊಮ್ಮೆ ಇಂಥ ಪ್ರಸಂಗ ಒದಗಿಸಬೇಡ ಸ್ವಾಮಿ' ಎಂದು ಪ್ರಾರ್ಥಿಸಿಕೊಂಡು ತಮ್ಮ ಮನೆಗೆ ಹಿಂದಿರುಗಿದರು.

ಅನಂತರ ಕೆಲವು ದಿವಸ ಭಾಗವತರು ಮದ್ರಾಸಿನಲ್ಲಿದ್ದು, ಒಪ್ಪಿಕೊಂಡಿದ್ದ ಮೂರ್‍ನಾಲ್ಕು ಚಿತ್ರಗಳ ಕೆಲಸವನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದು, ಬೇಸರವಾಗಿ ಒಂದು ವರ್ಷದವರೆಗೆ ಅಲ್ಲಿಯೇ ಇದ್ದುಬಿಟ್ಟರು. ಅನಂತರ ಕರ್ನಾಟಕ ಫಿಲಂಸ್‌ನವರಾದ ವೀರಣ್ಣನವರು ಮತ್ತು ಎ.ವಿ.ಎಂ. ಮೇಯಪ್ಪ ಚೆಟ್ಟಿಯಾರ್ ಅವರ ಭಾಗತ್ವದಲ್ಲಿ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ತೆಗೆಯುವ 'ಗುಣಸಾಗರಿ' ಎಂಬ ಚಿತ್ರಕ್ಕಾಗಿ ಭಾಗವತರು ಒಪ್ಪಂದ ಮಾಡಿಕೊಂಡು ಮದ್ರಾಸು ಸೇರಿದರು. ಈ ಎರಡೂ ಭಾಷೆಯ ಚಿತ್ರ ಮುಗಿಯುವುದರೊಳಗೆ ಮದ್ರಾಸ್‌ನ ತ್ಯಾಗರಾಜನಗರದಲ್ಲಿ ಸ್ವಂತ ಮನೆಯನ್ನು ಕಟ್ಟಿದ್ದರು. ಅಲ್ಲಿ ವಾಸಿಸುತ್ತಿರುವಾಗಲೇ ಬಸವೇಶ್ವರ ಚಿತ್ರಕ್ಕಾಗಿ ಅರಸೀಕೆರೆಯ ವಿಶ್ವನಾಥಶೆಟ್ಟರು ಬಸವೇಶ್ವರನ ಪಾತ್ರಕ್ಕಾಗಿ ಭಾಗವತರನ್ನು ಒಪ್ಪಂದ ಮಾಡಿಕೊಂಡು ಸುಮಾರು 4 ರೀಲು ಚಿತ್ರ ಮುಗಿಯುವ ವೇಳೆಗೆ ವಿಶ್ವನಾಥ ಶೆಟ್ಟರಿಗೆ ಆರ್ಥಿಕ ಮುಗ್ಗಟ್ಟು ಕಾರಣದಿಂದ ಸುಮಾರು ಒಂದು

ವರ್ಷದ ಮೇಲೆಯೇ ಚಿತ್ರದ ಕೆಲಸ ಸ್ಥಗಿತಗೊಂಡಿತು. ಈ ಮಧ್ಯೆ 'ವಳಯಾಪತಿ' ಎಂಬ ತಮಿಳು ಚಿತ್ರದಲ್ಲಿ ಪಾತ್ರವಹಿಸಲು ಭಾಗವತರು ಒಪ್ಪಂದ ಮಾಡಿಕೊಂಡರು. ಆ ಚಿತ್ರವೂ ಕೂಡ 3–4 ರೀಲಿನಷ್ಟು ಕೆಲಸ ನಡೆದು ನಿಂತೇಹೋಯಿತು. ಇದೇ ಸಂದರ್ಭದಲ್ಲಿಯೆ ಭಾಗವತರು ಸ್ವಂತವಾಗಿ 'ಮಹಾಕವಿ ಕಾಳಿದಾಸ' ಚಿತ್ರವನ್ನು ತಯಾರಿಸಬೇಕೆಂಬ ಅಭಿಪ್ರಾಯದಿಂದ ಬೆಂಗಳೂರಿಗೆ ಬಂದರು. ಅಲ್ಲಿ ಕೆಲ ದಿವಸಗಳಿದ್ದು ಚಿತ್ರದ ಕಥೆ, ಸಂಭಾಷಣೆ, ನಿರ್ದೇಶನ ಇತ್ಯಾದಿ ಕೆಲಸಗಳಿಗೆ ತಮ್ಮ ಆತ್ಮೀಯ ಮಿತ್ರರಾಗಿದ್ದ ಕು.ರಾ. ಸೀತಾರಾಮಶಾಸ್ತ್ರಿಯವರನ್ನು ನೇಮಿಸಿಕೊಂಡರು. ಆಗ ಸಿನಿಮಾ ಡಿಪ್ಲೊಮೋ ಪರೀಕ್ಷೆಯಲ್ಲಿ (ಛಾಯಾಗ್ರಹಣ) ಉತ್ತೀರ್ಣರಾಗಿದ್ದ ಪರಮೇಶ್ ಎಂಬ ಕನ್ನಡದ ಯುವಕರೊಬ್ಬರನ್ನು ಛಾಯಾಗ್ರಹಣ ಕೆಲಸಕ್ಕೆ ನೇಮಿಸಿಕೊಂಡರು. ಅಲ್ಲದೆ, ಇವತ್ತಿನ ದಿವಸ ಹಿಂದಿ ಸಿನಿಮಾ ಪ್ರಪಂಚದಲ್ಲಿ ಶ್ರೇಷ್ಠ ನಿರ್ದೇಶಕರಾಗಿ ಹೆಸರಾಗಿರುವ ರಾಮನಾಥನ್ ಎಂಬುವವರನ್ನು ಕು.ರಾ. ಸೀತಾರಾಮಶಾಸ್ತ್ರಿಯವರ ಶಿಫಾರಸ್ಸಿನ ಮೇಲೆ ಸಿನಿಮಾ ಪ್ರಪಚಂದ ಏನೇನೂ ಅನುಭವವಿಲ್ಲದ ಅವರನ್ನು ಸಹಾಯಕ ನಿರ್ದೇಶಕರನ್ನಾಗಿಯೂ ನೇಮಿಸಿಕೊಂಡರು. ಕೆಲವು ಹವ್ಯಾಸಿ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದ ಸರೋಜ ಎಂಬುವವರನ್ನು ಮುಖ್ಯ ನಾಯಕಿಯ ಪಾತ್ರಕ್ಕೆ ಗೊತ್ತು ಮಾಡಿಕೊಂಡ ಭಾಗವತರು ಆಕೆಗೆ ನಂತರ 'ಸರೋಜಾದೇವಿ' ಎಂದು ಕರೆದು ಮಹಾಕವಿ ಕಾಳಿದಾಸ ಚಿತ್ರದಲ್ಲಿ ಪ್ರಾರಂಭದಲ್ಲಿಯೇ ಬರುವ ಗುರುವಿನ ಪಾತ್ರಕ್ಕೆ ತನಗೆ ಸಂಗೀತ ಹೇಳಿಕೊಟ್ಟ ಗುರುವರ್ಯರಾದ ಸಂಬಂಧ ಮೂರ್ತಿ ಭಾಗವತರನ್ನೇ, ಭಾಗವತರು ಆಯ್ಕೆ ಮಾಡಿಕೊಂಡರು. ಅಲ್ಲದೆ, 'ಮಹಾಕವಿ ಕಾಳಿದಾಸ' ಎಲ್ಲಾ ದೃಷ್ಟಿಯಿಂದಲೂ ಅತ್ಯುತ್ತಮ ಚಿತ್ರವಾದ್ದರಿಂದ ಇದಕ್ಕೆ ಸಂಗೀತ ಸಂಯೋಜಿಸಲು ಶುದ್ಧವಾದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೇ ಅಳವಡಿಸಬೇಕೆಂಬ ಸದುದ್ದೇಶದಿಂದ ಬೇರೆಯವರನ್ನು ಸಂಗೀತ ನಿರ್ದೇಶಕರನ್ನಾಗಿ ಮಾಡದೆ ಆ ಒಂದು ಕೆಲಸವನ್ನೂ ತಾನೇ ತಿಳಿದಮಟ್ಟಿಗೆ ನಿರ್ವಹಿಸುವುದೆಂದು ಭಾಗವತರು ತೀರ್ಮಾನಿಸಿದರು. ಹಾಡುಗಳಿಗೆ ಹೆಚ್ಚಿನ ರೀತಿಯಲ್ಲಿ ಇಂಗ್ಲಿಷ್ ವಾದ್ಯಗಳನ್ನು ಉಪಯೋಗಿಸದೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಚೌಕಟ್ಟನ್ನೇ ಅನುಸರಿಸಿ, ವೀಣಾ, ವೇಣು, ಮೃದಂಗ, ಕೆಲವು ತಂತಿವಾದ್ಯಗಳು, ಕ್ಲಾರಿಯೋನೇಟ್ ಎಂಬ ಆಂಗ್ಲ ವಾದ್ಯವೊಂದನ್ನು ಮಾತ್ರ ಉಪಯೋಗಿಸಿಕೊಂಡು ಹಾಡುಗಳನ್ನೆಲ್ಲಾ ಭಾಗವತರು ಧ್ವನಿಮುದ್ರಣ ಮಾಡಿಸಿದರು. ಆಗಿನ ಸಮಯದಲ್ಲಿ ಹೆಸರಾಗಿದ್ದಂಥ ಬೇಲೂರು ರಾಘವೇಂದ್ರರಾವ್, ನರಸಿಂಹರಾಜು ಮೊದಲಾದ ಕೆಲ ನಟನಟಿಯರನ್ನು ಗೊತ್ತು ಮಾಡಿಕೊಂಡು ಚಿತ್ರ ನಿರ್ಮಾಣದ ಎಲ್ಲಾ ಏರ್ಪಾಡುಗಳನ್ನು ಮಾಡುತ್ತಿದ್ದರು. ಆಗ ಕಾಳಿದಾಸನ ಕಥೆಯ ವಿಚಾರವಾಗಿ

ಶೋಧನೆ ಜರುಗಿತು. ಆತನ ಜನನ ವೃತ್ತಾಂತದ ಬಗೆಗೆ ಸರಿಯಾದ ಮಾಹಿತಿಗಳೇ ಭಾಗವತರಿಗೆ ದೊರಕಲಿಲ್ಲ. ಅದುವರೆಗಾಗಲೇ ಬಂದಿದ್ದ ಕಾಳಿದಾಸನ ಬಗೆಗಿನ ನಾಟಕಗಳು, ಕತೆಗಳು ಭಾಗವತರಿಗೆ ಅಷ್ಟೊಂದು ನೆಮ್ಮದಿಯನ್ನು ತಂದುಕೊಡಲಿಲ್ಲ, ತಮ್ಮ ಸಹಪಾಠಿಗಳಲ್ಲಿ ಈ ಬಗೆಗೆ ಭಾಗವತರು ಬಹಳವಾಗಿ ಚರ್ಚಿಸಿದರು. ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉದ್ದಾಮ ಪಂಡಿತರೆನಿಸಿದ ಸಿ.ಕೆ. ವೆಂಕಟರಾಮಯ್ಯನವರು ನೇಮಕವಾಗಿದ್ದರು. ಅವರೂ ಸಹ ಕಾಳಿದಾಸನ ಬಗೆಗೆ ಕೃತಿ ರಚಿಸಿದ್ದರು. ಆದ್ದರಿಂದ ಭಾಗವತರು ಕು.ರಾ. ಸೀತಾರಾಮಶಾಸ್ತ್ರಿಗಳ ಜೊತೆಯಲ್ಲಿ ಅವರನ್ನು ಭೇಟಿ ಮಾಡಿ "ಈ ರೀತಿ ನಾವು ಕಾಳಿದಾಸನ ಚಿತ್ರ ತೆಗೆಯಲು ಏರ್ಪಾಡು ಮಾಡಿಕೊಂಡಿದ್ದೇವೆ. ಕಾಳಿದಾಸನ ಬಗೆಗೆ ಕೆಲವರು ಬರೆದಿರುವ ನಾಟಕ ಕೃತಿಗಳನ್ನು ಶೋಧನೆ ಮಾಡಿದೆವು. ಆದರೆ, ನಮಗೆ ಅಷ್ಟು ತೃಪ್ತಿಯಾಗಲಿಲ್ಲವಾದ ಕಾರಣ, ತಾವು ನಮ್ಮ ನಾಡಿನ ಹಿರಿಯ ಸಾಹಿತಿಗಳಾದ್ದರಿಂದಲೂ ತಾವೂ ಕೂಡ ಕಾಳಿದಾಸನ ವಿಚಾರವಾಗಿ ಪುಸ್ತಕ ಬರೆದಿರುವುದನ್ನು ತಿಳಿದು ತಮ್ಮಲ್ಲಿ ಈ ವಿಚಾರದ ಬಗೆಗೆ ಕೂಲಂಕಷವಾಗಿ ವಿಚಾರ ಮಾಡಬೇಕೆಂಬ ಅಭಿಪ್ರಾಯದಿಂದಲೂ ತಮ್ಮಲ್ಲಿಗೆ ಬಂದಿದ್ದೇವೆ" ಎಂದು ಹೇಳಿದರು. ಆ ರೀತಿ ಭಾಗವತರು ಹೇಳಿದ ಕೂಡಲೇ ಅವರು "ಆಗಲೇ ಎಲ್ಲವನ್ನೂ ಏರ್ಪಾಡು ಮಾಡಿಕೊಂಡುಬಿಟ್ಟಿದ್ದರೇನು" ಎಂದು ಕೇಳಿದರು. "ಹೌದು, ಇದಕ್ಕೆ ಬೇಕಾದ ಎಲ್ಲಾ ಸೌಕರ್ಯವನ್ನು ಮಾಡಿಕೊಂಡಿದ್ದೇವೆ. ಕಥೆಯ ವಿಚಾರವಾಗಿಯೇ ನಾವು ಬಹಳ ಗೊಂದಲಕ್ಕೀಡಾಗಿದ್ದೇವೆ" ಎಂದು ಹೇಳಿದರು ಭಾಗವತರು. ಅದಕ್ಕೆ ಸಿ.ಕೆ. ವೆಂಕಟರಾಮಯ್ಯನವರು ಇವರ ಶ್ರಮದ ಬಗೆಗೆ ಅಯ್ಯೋ ಪಾಪ ಎಂದು "ಕಾಳಿದಾಸನ ವಿಚಾರವಾಗಿ ನಾನು ಪುಸ್ತಕ ಬರೆದಿದ್ದೇನೆ. ಆದರೆ ಎಷ್ಟು ಸಂಶೋಧನೆ ಮಾಡಿದರೂ ನನಗೂ ಸಹ ಕಾಳಿದಾಸನ ಜನ್ಮವೃತ್ತಾಂತ ಸರಿಯಾಗಿ ತಿಳಿಯಲಿಲ್ಲ. ಅಂತೂ ನಾನೂ ಕಾಳಿದಾಸನ ಬಗೆಗೆ ಒಂದು ಚರಿತ್ರೆಯನ್ನು ಬರೆದಿದ್ದೇನೆ ಅಷ್ಟೆ. ಆ ವಿಚಾರವಾಗಿ ಇದರ ಮೇಲೆ ಏನೂ ಹೇಳಲಿಕ್ಕೆ ನನಗೆ ತೋರುವುದಿಲ್ಲ" ಎಂದು ಹೇಳಿ ನಕ್ಕುಬಿಟ್ಟರು. ಆಗ ಭಾಗವತರು ಮತ್ತು ಶಾಸ್ತ್ರಿಗಳು "ನೀವೇ ಈ ರೀತಿ ಹೇಳಿದಿರೆಂದಮೇಲೆ ನಮಗೆ ತೋಚಿದಂತೆ ಚಲನಚಿತ್ರಕ್ಕೆ ಸರಿಹೋಗುವ ರೀತಿಯಲ್ಲಿ ನಾವುಗಳೂ ಕೂಡ ಒಬ್ಬ ಕಾಳಿದಾಸನನ್ನು ಸೃಷ್ಟಿ ಮಾಡಬೇಕಾಗುತ್ತದೆ. ನಿಮ್ಮ ಸಂಪೂರ್ಣ ಆಶೀರ್ವಾದವಿರಲಿ" ಎಂದು ಹೇಳಿ ಹೊರಟು ಬಂದರು. ನಂತರ ಒಬ್ಬರಿಗೊಬ್ಬರು ಚರ್ಚಿಸುತ್ತ 'ಮಹಾಕವಿ ಕಾಳಿದಾಸ' ಎಂಬ ಶೀರ್ಷಿಕೆಯನ್ನೂ ಇಟ್ಟು ಕಥೆಯನ್ನು ಒಂದು ವ್ಯವಸ್ಥಿತ ರೂಪಕ್ಕೆ ತಂದು ನಿಲ್ಲಿಸಿ ಒಂದು ಶುಭದಿನ ಸಂಭಾಷಣೆ

ಬರೆಯಲು ಪ್ರಾರಂಭಿಸಿ ಮಿಕ್ಕ ಸಿದ್ಧತೆಗಳನ್ನೆಲ್ಲ ನಿಧಾನವಾಗಿ ಏರ್ಪಡಿಸಿಕೊಂಡರು. ಜೊತೆಗೆ ಈ ಚಿತ್ರಕ್ಕೆ ಹಣ ಒದಗಿಸಲು ಮತ್ತೂ ಚಿತ್ರ ಬಿಡುಗಡೆ ಮಾಡಲು ಕರ್ನಾಟಕ ಫಿಲಂಸ್‌ನವರಲ್ಲಿಯೇ ಒಪ್ಪಂದ ಮಾಡಿಕೊಂಡು ಮದ್ರಾಸಿನಲ್ಲಿನ ಚಕ್ರಪಾಣಿ ಮತ್ತು ನಾಗಯ್ಯರೆಡ್ಡಿಯವರ ಮಾಲೀಕತ್ವದ ವಾಹಿನಿ ಸ್ಟುಡಿಯೋದಲ್ಲಿ ಚಿತ್ರದ ಕೆಲಸವನ್ನೂ ಪ್ರಾರಂಭಿಸಿಬಿಟ್ಟರು. ಈ ಸಂದರ್ಭದಲ್ಲಿ ಚಿತ್ರದಲ್ಲಿ ಅವಕಾಶ ಕೊಡಿ ಎಂದು ಕೇಳುತ್ತಾ ಭಾಗವತರ ಬಳಿಗೆ ಬಂದವರು ಎಷ್ಟೋ ಮಂದಿ ! ಇವತ್ತಿನ ಚಿತ್ರಪ್ರಪಂಚದಲ್ಲಿ ಅದ್ವಿತೀಯವಾದ ಖ್ಯಾತಿ ಗಳಿಸಿರುವಂಥ 'ಕೆಲವು' ಕಲಾವಿದರುಗಳೂ ಭಾಗವತರ ಮನೆಗೆ ಬಂದು ನಿಮ್ಮ ಕಾಳಿದಾಸ ಚಿತ್ರದಲ್ಲಿ ಏನಾದರೂ ಪಾತ್ರವನ್ನು ಕೊಡಿ ಎಂದು ಪದೇ ಪದೇ ಕೇಳಿ ಅಲೆದದ್ದೂ ಉಂಟು ! ಅದೇನಾದರೂ ಆಗಿರಲಿ ಭಾಗವತರು ಶಾಸ್ತ್ರಿಗಳ ಬಗೆಗೆ ಸ್ವಂತ ಸೋದರರಿಗಿಂತಲೂ ಹೆಚ್ಚು ಪ್ರೀತಿಯನ್ನಿಟ್ಟುಕೊಂಡಿದ್ದರು. ಎಲ್ಲ ವಿಚಾರಗಳಿಗೂ ನೀವೇ ಎಂದು ನಂಬಿದ್ದಂಥವರು. ಮಹಾಕವಿ ಕಾಳಿದಾಸ ಚಿತ್ರದ ಕೆಲಸ ನಡೆಯುತ್ತಿರುವ ಬಗ್ಗೆ ಸುಮಾರು 2–3 ರೀಲ್ ಕೆಲಸ ಮುಗಿಯುವಷ್ಟರಲ್ಲಿ ಕು.ರಾ. ಸೀತಾರಾಮಶಾಸ್ತ್ರಿಗಳ ವಿಶ್ವಾಸದ ನಡವಳಿಕೆಯಲ್ಲಿ ಕೊಂಚ ಬದಲಾವಣೆ ಕಂಡುಬಂದಿತು. ಆಗ ಭಾಗವತರು ಅದೇನನ್ನೂ ತೋರ್ಪಡಿಸಿಕೊಳ್ಳದೆಯೇ ಚಿತ್ರದ ಕೆಲಸಗಳನ್ನು ಸಾಧಿಸುತ್ತ ಬಂದರು. ಮಧ್ಯೆ ಮಧ್ಯೆ ಸಂಕಲನವಾದ ಚಿತ್ರವನ್ನು ನೋಡುತ್ತಿದ್ದಾಗ ಹೊಳೆದ ಕೆಲವು ವಿಚಾರಗಳನ್ನು ಅವರಿಗೆ ಹೇಳಿದರೂ ಕೂಡ ಭಾಗವತರ ಮಾತನ್ನೂ ಗಂಭೀರವಾಗಿ ಪರಿಗಣಿಸದೆ 'ದೊಡ್ಡ ನಿರ್ದೇಶಕನಾಗಿದ್ದೇನೆ' ಎಂಬ ಭಾವನೆಯನ್ನೇ ತೋರುತ್ತ ನಡೆದುಕೊಳ್ಳುತ್ತ ಬಂದರು. ಆದರೆ ಈ ಗುಂಪಿನಲ್ಲಿ ಛಾಯಾಗ್ರಾಹಕರಾಗಿದ್ದ ಪರಮೇಶ್ ಎಂಬುವವರು ಕಸುಬಿಗೆ ಹೊಸಬರಾದರೂ ಕೆಲಸ ಮಾಡಿದ ಮೊದಲನೇ ಚಿತ್ರ ಇದಾದರೂ ತಾನು ಮಾಡಬೇಕಾಗಿದ್ದ ಕೆಲಸವನ್ನೂ ಸ್ಟುಡಿಯೋದ ತಾಂತ್ರಿಕ ವರ್ಗದವರೆಲ್ಲರೂ ಮೆಚ್ಚಿಕೊಳ್ಳುವ ರೀತಿಯಲ್ಲಿ ಚೊಕ್ಕಟವಾಗಿ ಕಾರ್ಯ ನಿರ್ವಹಿಸುತ್ತಾ ಭಾಗವತರ ವಿಷಯದಲ್ಲಿ ಬಹಳ ವಿಧೇಯವಾಗಿ ನಡೆದುಕೊಳ್ಳುತ್ತಾ ಬಂದರು. ಹಾಗೆ ನಡೆದುಕೊಳ್ಳುತ್ತ ಮಧ್ಯೆ ಮಧ್ಯೆ "ಸ್ವಾಮಿ ಭಾಗವತರೇ ನಮ್ಮ ಚಿತ್ರದಲ್ಲಿ ಕೆಲಸ ಮಾಡುತ್ತಿರುವ ಕೆಲ ಮುಖ್ಯಸ್ಥರುಗಳೇ ಒಂದು ವಿಧವಾದ ಧೋರಣೆಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ನೀವು ಇಷ್ಟು ದೊಡ್ಡ ಚಿತ್ರಕ್ಕೆ ಕೈ ಹಾಕಿದ್ದೀರಿ, ಬಹಳ ಜಾಗ್ರತೆಯಿಂದರಬೇಕು" ಎಂದು ಸೂಚಿಸುತ್ತಿದ್ದುದೂ ಉಂಟು. ಚಿತ್ರ ನಿರ್ಮಿಸಿದವರಿಗೂ ಅದನ್ನು ನೋಡಿದಾಗ ಮನಸ್ಸಿಗೆ ಸ್ವಲ್ಪ ಸಮಾಧಾನವೇ ಇತ್ತು. ಸ್ಟುಡಿಯೋದಲ್ಲಿ ನೋಡಿದವರೂ ಕೂಡ 'ಚಿತ್ರ ಚೆನ್ನಾಗಿ ಬರುತ್ತದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಷ್ಟು ನಡೆಯುತ್ತಿರುವಾಗ್ಗೆ ಭಾಗವತರಿಗೆ

ಒಂದು ಯೋಚನೆ ಹೊಳೆಯಿತು. ಅದೇನೆಂದರೆ, ರಾಜನ ದರ್ಬಾರು ಸೆಟ್ಟಿಂಗ್ ಇತ್ಯಾದಿಯನ್ನೂ ಬಹಳ ವೈಭವದಿಂದಲೇ ಹಾಕಿಸಬೇಕು ಎಂಬ ಯೋಚನೆ ಬಂದಾಗ ಆರ್ಥಿಕ ದೃಷ್ಟಿಯಲ್ಲಿ ಬಹಳ ಕಷ್ಟ ಸ್ಥಿತಿಯಲ್ಲಿದ್ದ ಕಾರಣ ಭಾಗವತರು ಒಂದು ದಿನ ಧೈರ್ಯ ಮಾಡಿಕೊಂಡು ಸ್ಟುಡಿಯೋ ಮಾಲೀಕರಾದ ಶ್ರೀಮಾನ್ ನಾಗಯ್ಯರೆಡ್ಡಿ ಅವರನ್ನು ಭೇಟಿ ಮಾಡಿದರು. 'ಸ್ವಾಮಿ ನನಗೆ ನೀವು ಸ್ವಲ್ಪ ಉದಾರವಾಗಿ ಸಹಾಯ ಮಾಡಬೇಕು' ಎಂದೂ ಭಾಗವತರು ಅವರನ್ನು ಕೇಳಿಕೊಂಡರು. ನಾಗಯ್ಯರೆಡ್ಡಿಯವರು ಬಹಳ ಸಂತೋಷದಿಂದ 'ಏನದು ವಿಚಾರ ಹೇಳಿ' ಎಂದಾಗ, "ನಾನು ಸಣ್ಣ ಕಲಾವಿದ ನಿಮ್ಮಂಥ ದೊಡ್ಡವರ ಆಶೀರ್ವಾದದಿಂದ ಈ ತಮಿಳ್ನಾಡಿನಲ್ಲಿ ಕೆಲವು ಚಿತ್ರಗಳಲ್ಲಿ ನಟಿಸಿ ದೈವಾನುಗ್ರಹದಿಂದಲೂ ಸ್ವಲ್ಪಮಟ್ಟಿಗೆ ಒಳ್ಳೆ ಹೆಸರಿದೆ. ಹೀಗಿರುವಾಗ ನಮ್ಮ ಕನ್ನಡದ ಚಿತ್ರಗಳು ಹೊರಬರುವುದೇ ಅಪರೂಪವಾಗಿರುವ ಕಾರಣದಿಂದ ನಾನು ಚರಿತ್ರಾರ್ಹವಾದ 'ಮಹಾಕವಿ ಕಾಳಿದಾಸ' ಎಂಬ ಚಿತ್ರವನ್ನು ನಿರ್ಮಿಸಲು ಪಣ ತೊಟ್ಟು ನಿಂತಿದ್ದೇನೆ. ಆರ್ಥಿಕ ವಿಷಯದಲ್ಲಿ ನನ್ನ ವಿಚಾರ ನಿಮಗೆ ತಿಳಿದೇ ಇದೆ. ನನ್ನ ಯೋಗ್ಯತೆಗೆ ಮೀರಿದ ಕೆಲಸಕ್ಕೆ ಕೈ ಹಾಕಿಬಿಟ್ಟಿದ್ದೇನೆ. ಇದನ್ನು ಬಹಳ ಚೆನ್ನಾಗಿ ನೆರವೇರಿಸಿ ಉತ್ತಮ ಕೀರ್ತಿ ಬರುವಂತಾಗಲು ನಿಮ್ಮ ನೆರವು ಬಹಳ ಮುಖ್ಯವಾಗಿ ಬೇಕಾಗುತ್ತದೆ. ಅಂದರೆ, ಮುಂದೆ ರಾಜನ ದರ್ಬಾರು ಇತ್ಯಾದಿ ಸೆಟ್ಟುಗಳನ್ನು ವೈಭವದಿಂದ ಹಾಕಿಸಲು ನನಗೆ ಶಕ್ತಿಯಿಲ್ಲ. ನಿಮ್ಮ 'ಚಂದ್ರಹಾರ' ಚಿತ್ರದ ಸೆಟ್ಟಿಂಗ್‌ನ ವಸ್ತುಗಳೆಲ್ಲವೂ ಇವೆ. ನೀವು ದಯಮಾಡಿ ಆ ಸೆಟ್ಟಿಂಗ್‌ನ ಕೆಲವು ಭಾಗಗಳನ್ನು ಉಪಯೋಗಿಸಿ ನಮಗೆ ಒಳ್ಳೇ ಸೆಟ್ಟಿಂಗ್ ಹಾಕಿಕೊಡಲು ನಿಮ್ಮ ಸೆಟ್ಟಿಂಗ್ ನಿರ್ದೇಶಕರಿಗೆ ಆದೇಶ ನೀಡಬೇಕೆಂದು ನಿಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ" ಎಂದರು ಭಾಗವತರು. ಕೂಡಲೆ ನಾಗಯ್ಯರೆಡ್ಡಿಯವರು ನಗುನಗುತ್ತ 'ಇಷ್ಟೇ ತಾನೆ' ಎಂದು ಹೇಳಿ ಒಡನೆಯೇ ಆ ನಿರ್ದೇಶಕರನ್ನು ಕರೆಸಿ "ನೋಡಿ, ಭಾಗವತರಿಗೆ ನಮ್ಮ 'ಚಂದ್ರಹಾರ' ಚಿತ್ರದ ಸೆಟ್ಟಿಂಗ್ಸ್‌ನ ಸಾಮಾನುಗಳನ್ನು ಉಪಯೋಗಿಸಿ ಅವರ ಚಿತ್ರಕ್ಕೆ ಬಹಳ ಚೆನ್ನಾಗಿರುವಂತೆ ಸೆಟ್ಟಿಂಗ್‌ಗಳನ್ನು ಹಾಕಿಕೊಡಿ" ಎಂದು ಆದೇಶ ನೀಡಿದರು. ಇಷ್ಟು ಹೇಳಿ 'ಭಾಗವತರೇ ಸಂತೋಷ ತಾನೆ' ಎಂದು ಹೇಳಿದರು. ಅದೇ ರೀತಿಯಲ್ಲಿ ಸ್ಟುಡಿಯೋ ಮಾಲೀಕರಾದಿಯಾಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬರೂ ಭಾಗವತರ 'ಮಹಾಕವಿ ಕಾಳಿದಾಸ' ಚಿತ್ರಕ್ಕೆ ಮನಃಪೂರ್ವಕವಾಗಿ ಸಹಕಾರ ನೀಡಿದರು. ಈ ಮಧ್ಯೆ ಬೆಂಗಳೂರಿನಲ್ಲಿ ಕೆಲವು ನಿರ್ಮಾಪಕರುಗಳು ಹಾಗೂ ಚಿತ್ರದ ಕಸುಬಿಗೆ ಸಂಬಂಧಿಸಿದ ಜನರೆಲ್ಲರೂ "ಹೊನ್ನಪ್ಪ ಭಾಗವತರಿಗೆ ತಮಿಳು ಚಿತ್ರದಲ್ಲಿ ಸ್ವಲ್ಪ ಮಟ್ಟಿಗೆ ಹಣ ಸಂಪಾದಿಸುತ್ತಿದ್ದೇವೆಂಬ ಧೋರಣೆಯಲ್ಲಿ

ಚರಿತ್ರಾರ್ಹವಾದ ಇಂಥ 'ಮಹಾಕವಿ ಕಾಳಿದಾಸ'ನ ಚಿತ್ರವನ್ನೂ ನಿರ್ಮಿಸಲು ಹೊರಟಿದ್ದಾರೆ. ಆ ಚಿತ್ರಕ್ಕೆ ನಿರ್ದೇಶಕರು, ಮುಖ್ಯನಾಯಕಿ ಪಾತ್ರ, ಕ್ಯಾಮರಾಮನ್ ಇತ್ಯಾದಿ ಮುಖ್ಯವಾಗಿ ಬೇಕಾಗಿರುವಂಥ ಈ ಎಲ್ಲಾ ಕೆಲಸಗಳಿಗೂ ಹೊಸಬರನ್ನೇ ನೇಮಿಸಿಕೊಂಡು ಚಿತ್ರ ನಿರ್ಮಿಸುತ್ತಿದ್ದಾರೆ. ಅದು ಯಾವ ಗತಿಯಲ್ಲಿ ಹೊರಗಡೆ ಬರುತ್ತದೋ" ಎಂದು ಅಪಹಾಸ್ಯ ಮಾಡಲಿಕ್ಕೆ ಪ್ರಾರಂಭಿಸಿದ್ದರು. ಅದಕ್ಕೆ ಸರಿಯಾಗಿ ನಾಯಕಿಯ ಪಾತ್ರಕ್ಕೆ ಗೊತ್ತಾಗಿದ್ದ ಸರೋಜ ಎಂಬುವರು ಹೊಸಬರಾದ್ದರಿಂದ ಒಂದೊಂದು ಸನ್ನಿವೇಶದಲ್ಲಿಯೂ ಪರಿಣಾಮಕಾರಿಯಾಗಿ ನಟಿಸಿ ಮಾಡಿಸಬೇಕಾದರೆ ಭಾಗವತರು ಬಹಳ ಕಷ್ಟಪಡಬೇಕಾಯಿತು. ಇದೇ ಸಂದರ್ಭದಲ್ಲಿ ಚಿತ್ರದ ನಿರ್ದೇಶಕರು "ಅದೆಷ್ಟೋ ನಾಟಕಗಳಲ್ಲಿ ಸಣ್ಣ ಪುಟ್ಟ ಪಾತ್ರ ಮಾಡುತ್ತ ಏನೂ ಅನುಭವವಿಲ್ಲದವರನ್ನು ತಂದು ನಮ್ಮ ಪ್ರಾಣ ತೆಗೆಯುತ್ತಿದ್ದಾರೆ" ಎಂದು ಹೇಳಿಕೊಂಡು ಭಾಗವತರ ವಿಷಯದಲ್ಲಿ ಪದೇ ಪದೇ ಅಸಮಾಧಾನವನ್ನು ತೋರಿಸಿದ್ದೂ ಉಂಟು. ಅಂತೂ ಹೇಗೋ ಚಿತ್ರದ ಕೆಲಸ ಸುಮಾರು 8–10 ದಿವಸಗಳಿಗೆ ಮುಗಿಯುತ್ತಿದೆಂಬಷ್ಟರಲ್ಲಿ ಛಾಯಾಗ್ರಾಹಕರಾಗಿದ್ದ ಪರಮೇಶ್ ಅವರಿಗೆ ಕಲ್ಕತ್ತ ವಾರ್ತಾ ಇಲಾಖೆಯಿಂದ ಸಂದರ್ಶನಕ್ಕೆ ಆಹ್ವಾನ ಪತ್ರ ಬಂದಿತ್ತು. ಆಗ ಪತ್ರವನ್ನು ತಂದ ಪರಮೇಶ್ ಅವರು "ನೋಡಿ ಸಾರ್ ನನಗೆ ಸಂದರ್ಶನದ ಪತ್ರ ಬಂದಿದೆ. ಕಲ್ಕತ್ತಕ್ಕೆ ಹೋಗಬೇಕಾಗುತ್ತದೆ. ಆದರೆ ನನಗೇಕೋ ಹೋಗಲು ಇಷ್ಟವೇ ಇಲ್ಲ. ಯಾಕೆಂದರೆ, ಈ ಚಿತ್ರ ನೋಡಿದವರೆಲ್ಲರೂ ನನ್ನ ಕೆಲಸ ಬಹಳ ಚೆನ್ನಾಗಿದೆ ಎಂದು ಮೆಚ್ಚಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಚಿತ್ರ ಮುಗಿದ ನಂತರ ನೋಡಿಕೊಳ್ಳೋಣ" ಎಂದು ಹೇಳಿದರು. ಆಗ ಭಾಗವತರು ಬಹಳ ಯೋಚನೆ ಮಾಡಿ "ನೋಡಿ ಪರಮೇಶ್ ಅವರೇ ಈ ಸಿನಿಮಾ ಕಸುಬು ಒಂದೇ ಸಮನೆ ನಡೆಯುತ್ತದೆಂದು ಹೇಳಲಿಕ್ಕಾಗುವುದಿಲ್ಲ. ತಾನಾಗಿ ಬಂದಿರುವ ಒಂದು ಕೆಲಸದ ಅವಕಾಶವನ್ನು ಯಾತಕ್ಕಾಗಿ ಕಳೆದುಕೊಳ್ಳುತ್ತೀರಿ ನೀವು ಸಂದರ್ಶನಕ್ಕೆ ಹೋಗಿಬನ್ನಿ" ಎಂದು ಹೇಳಿದರು. ಆಗ ಪರಮೇಶ್ "ನಾನು ಹೋದಕೂಡಲೆ ಅಲ್ಲಿ ಕೆಲಸ ಮಾಡುವಂತೆ ನನಗೆ ಆದೇಶ ನೀಡಿದರೆ ಏನು ಮಾಡುವುದು ಸಾರ್" ಎಂದು ಕೇಳಿದರು. ಆಗ ಭಾಗವತರು "ಅಂಥ ಸಂದರ್ಭ ಒದಗಿದರೆ ನಾನು ಇಲ್ಲಿ ಸ್ಟುಡಿಯೋದಲ್ಲಿರುವ ಕ್ಯಾಮರಾಮನ್ ಅನ್ನೂ ಇಟ್ಟುಕೊಂಡು ನಮ್ಮ ಚಿತ್ರದ ಕೆಲಸವನ್ನು ಮುಗಿಸಿಕೊಳ್ಳುತ್ತೇನೆ. ನೀವಂತೂ ಈ ಸಂದರ್ಭವನ್ನು ಬಿಡಬೇಡಿ ನೀವು ಹೋಗಿ ಅಲ್ಲಿ ಏನಾಯ್ತು ಎಂಬುದಕ್ಕೆ ಉತ್ತರ ಬರೆಯಿರಿ. ನಿಮಗೆ ಒಳ್ಳೆಯದಾಗಲಿ" ಎಂದು ಆಶೀರ್ವಾದ ಮಾಡಿದರು. ಪರಮೇಶ್ ಅವರು ಅಸಮಾಧಾನದಿಂದಲೇ ಭಾಗವತರಿಂದ ಆಶೀರ್ವಾದ ಪಡೆದುಕೊಂಡು ಕಲ್ಕತ್ತಕ್ಕೆ ಹೊರಟರು. ಪರಮೇಶ್

ಮೊದಲು ಹೇಳಿದಂತೆಯೆ ಕಲ್ಕತ್ತಕ್ಕೆ ಹೋದಕೂಡಲೇ ಅಲ್ಲಿಯೇ ಕೆಲಸಕ್ಕೆ ನಿಲ್ಲಬೇಕಾದ ಸಂದರ್ಭ ಒದಗಿ ಬಂತು. ಅದರ ಬಗೆಗೆ ಅವರು ಉತ್ತರವನ್ನೂ ಬರೆದರು. ಆಗ ಭಾಗವತರು ಬೇರೆ ಛಾಯಾಗ್ರಾಹಕರನ್ನು ನೇಮಿಸಿಕೊಂಡು ಚಿತ್ರದ ಕೆಲಸವನ್ನು ಮುಗಿಸಿಕೊಂಡರು. ಇವತ್ತಿನ ಸಂದರ್ಭದಲ್ಲಿ ಪರಮೇಶ್ ಅವರು ಎರಡು ವರ್ಷದ ಹಿಂದೆ ನಿವೃತ್ತಿ ಹೊಂದಿ ಹೆಂಡತಿ ಮಕ್ಕಳೊಂದಿಗೆ ಸುಖವಾಗಿದ್ದಾರೆ. ಭಾಗವತರನ್ನು ನೋಡಿದಾಗಲೆಲ್ಲ "ಆಗ ನೀವು ಆ ರೀತಿ ಹೇಳಿದ್ದು ಬಹಳ ಒಳ್ಳೆಯದಾಗಿ ಪರಿಣಮಿಸಿ ನಾನು ಮತ್ತು ನನ್ನ ಕುಟುಂಬದವರು ಸೌಖ್ಯವಾಗಿದ್ದೇವೆ ಸಾರ್" ಎಂದು ಕೃತಜ್ಞತೆಯನ್ನು ಹೇಳುವುದುಂಟು. ಅಂತೂ ಇಂತೂ ಚಿತ್ರದ ಕೆಲಸ ಮುಗಿದು ಚಿತ್ರವನ್ನು ಬಿಡುಗಡೆ ಮಾಡಲು ಕರ್ನಾಟಕದ ಥಿಯೇಟರುಗಳಿಗೆಲ್ಲಾ ದಿನಾಂಕವನ್ನು ಸಹ ಕೊಟ್ಟಿದ್ದಾಯಿತು. ಆದರೆ ಸೆನ್ಸಾರ್ ಆಗುವ ದಿವಸ ಚಿತ್ರದ ಲೆಂತ್‌ಅನ್ನೂ 19 ಸಾವಿರದ ಅಡಿಗೆ ತಂದು ನಿಲ್ಲಿಸಿದ್ದರು. ಚಿತ್ರ ನೋಡಿದರೆ ಸಂಭಾಷಣೆಗೂ ನಟರು ಬಾಯಿ ಆಡಿಸುವುದಕ್ಕೂ ಒಂದಕ್ಕೊಂದಕ್ಕೂ ಸಂಬಂಧವಿಲ್ಲದಂತಾಗುತ್ತೆ. ಚಿತ್ರ ನೋಡಿದ ಭಾಗವತರಿಗೆ ಆಶ್ಚರ್ಯವಾಯಿತು. ಧೈರ್ಯವೇ ಅಡಗಿಹೋಯಿತು. ಸೆನ್ಸಾರ್ ಮುಗಿದ ಮೇಲೆ ಭಾಗವತರು ತಡೆಯಲಾರದೆ 'ಏನ್ರಿ ಹೀಗಾಗಿದೆ' ಎಂದು ನಿರ್ದೇಶಕರನ್ನು ಕೇಳಿದರು. ಅದಕ್ಕೆ ನಿರ್ದೇಶಕರು 'ಅದು ನನ್ನ ಕೆಲಸವಲ್ಲ ಎಡಿಟಿಂಗ್ ಮಾಡಿದವರ ಕೆಲಸ' ಎಂದು ಒರಟಾಗಿಯೇ ಉತ್ತರ ಕೊಟ್ಟರಂತೆ !

ನಿರ್ದೇಶಕರ ಈ ಮಾತನ್ನು ಕೇಳಿದ ಭಾಗವತರು ತುಂಬ ವೇದನೆಗೊಳಗಾಗಿ ಸೆನ್ಸಾರ್ ಆದ ಚಿತ್ರದ ಪೆಟ್ಟಿಗೆಯನ್ನು ಸ್ಟುಡಿಯೋದಲ್ಲಿ ತಂದಿರಿಸಿ, ಸ್ಟುಡಿಯೋ ಆವರಣದಲ್ಲಿಯೇ ಇದ್ದ ಒಂದು ಮರದಡಿಯಲ್ಲಿ ಕುಳಿತುಕೊಂಡು "ಚಿತ್ರ ಈ ರೀತಿಯಾಗಿದೆ. ಬಿಡುಗಡೆಯ ಡೇಟನ್ನೂ ಸಹ ಕೊಟ್ಟಿದ್ದಾಯಿತು. ಮುಂದಿನ ಗತಿಯೇನು?" ಎಂದು ಬಹಳವಾಗಿ ಯೋಚಿಸುತ್ತ, ಒತ್ತಿ ಬಂದ ದುಃಖವನ್ನು ತಡೆಯಲಾರದೆ ಕಣ್ಣೀರು ಹಾಕುತ್ತಾ ಕುಳಿತಿದ್ದರು. ಆಗ ಶ್ರೀಮಾನ್ ನಾಗಯ್ಯರೆಡ್ಡಿಯವರ ಆಫೀಸಿನಲ್ಲೇ ಕೆಲಸ ಮಾಡುತ್ತಿದ್ದ ಗುಮಾಸ್ತರೊಬ್ಬರು ಭಾಗವತರನ್ನು ನೋಡಿ "ಏಕೆ ಇಷ್ಟು ಬೇಸರವಾಗಿ ಕುಳಿತಿದ್ದೀರಿ. ನಿಮ್ಮ ಕಾಳಿದಾಸ ಚಿತ್ರದ ಸೆನ್ಸಾರ್ ಆಯಿತಲ್ಲ" ಎಂದು ಕೇಳಿದರು. ಭಾಗವತರು ತುಂಬ ದುಃಖದಿಂದಲೇ "ಆಯಿತು ಸ್ವಾಮಿ; ಅದೇ ವಿಚಾರವಾಗಿ ಚಿಂತಿಸುತ್ತ ತುಂಬ ವೇದನೆಯಿಂದ ಕುಳಿತಿದ್ದೇನೆ" ಎಂದು ಹೇಳಿ ಮುಂದಕ್ಕೆ ಅವರ ಬಳಿಯಲ್ಲಿ ಮಾತನಾಡಲು ಮನಸ್ಸಿಲ್ಲದೆ ಸುಮ್ಮನೆ ಕುಳಿತುಬಿಟ್ಟರು. ಭಾಗವತರ ಈ ವೇದನೆ ಮತ್ತು ಮೌನವನ್ನು ಗಮನಿಸಿದ ಆ ಗುಮಾಸ್ತರು ಇದನ್ನು ನಾಗಯ್ಯರೆಡ್ಡಿಯವರ ಗಮನಕ್ಕೆ ತಂದರು. ಕೂಡಲೆ ನಾಗಯ್ಯರೆಡ್ಡಿಯವರು ಭಾಗವತರನ್ನು ತಮ್ಮ

ಆಫೀಸಿಗೆ ಕರೆಸಿಕೊಂಡು, "ಯಾಕೆ ಇಷ್ಟು ಬೇಸರವಾಗಿದ್ದೀರಿ, ಚಿತ್ರ ಸೆನ್ಸಾರ್ ಆಯಿತಂತಲ್ಲ ಎಂದು ವಿಚಾರಿಸುತ್ತಿರುವಾಗಲೇ ತನಗರಿವಿಲ್ಲದಂತೆಯೇ ದುಃಖ ಬಂದು ಭಾಗವತರಿಗೆ ಮಾತನಾಡಲಿಕ್ಕೂ ಸಾಧ್ಯವಾಗಲಿಲ್ಲ. ನಾಗಯ್ಯರೆಡ್ಡಿ ಅವರು ಸಮಾಧಾನ ಮಾಡಿ ವಿಚಾರವೇನು ಹೇಳಿ ಎಂದು ಭಾಗವತರನ್ನು ಕೇಳಿದರು. ಆಗ ಭಾಗವತರು "ಕಾಳಿದಾಸ ಚಿತ್ರವೆಲ್ಲ ನಾನ್‌ಸಿಂಕ್ ಆಗಿಬಿಟ್ಟಿದೆ ಮತ್ತು ದೃಶ್ಯಗಳೂ ಸಹ ಒಂದಕ್ಕೊಂದು ಸಂಬಂಧವಿಲ್ಲದಂತಾಗಿವೆ. ಅಲ್ಲದೆ 19 ಸಾವಿರ ಅಡಿಗಳಿಗಿಂತ ಹೆಚ್ಚು ಲೆಂತ್ ನಂದಿದೆ. ಜೊತೆಗೆ ಚಿತ್ರ ಬಿಡುಗಡೆ ಡೇಟನ್ನೂ ಸಹ ಕೊಟ್ಟುಬಿಟ್ಟಿದ್ದೇನೆ. ಈಗ ಏನು ಮಾಡುವುದೆಂದು ತೋಚದೆ ದುಃಖವಾಗುತ್ತಿದೆ" ಎಂದು ಅವರ ಸಮ್ಮುಖದಲ್ಲಿ ತಮ್ಮ ನೋವನ್ನು ತೋಡಿಕೊಂಡರು. ಆಗ ನಾಗಯ್ಯರೆಡ್ಡಿಯವರು "ಸರಿ, ನೀವು ಇದಕ್ಕಾಗಿ ಇಷ್ಟು ದುಃಖಪಡುವ ಅವಶ್ಯಕತೆಯಿಲ್ಲ. ಮನೆಗೆ ಹೋಗಿ ವಿಶ್ರಾಂತಿ ಪಡೆದು, ಸಂಜೆ ಬನ್ನಿ ಮಾತಾಡೋಣ. ಎಲ್ಲಾ ಸರಿಪಡಿಸೋಣ. ಏನೂ ಹೆದರಬೇಡಿ" ಎಂದು ಧೈರ್ಯ ಹೇಳಿ, ಒಡನೆಯೇ ಜಂಬೂ ಮತ್ತು ಕಲ್ಯಾಣ ಎಂಬ ಅವರ ಇಬ್ಬರು ಎಡಿಟರುಗಳನ್ನೂ ಕರೆಸಿ ಭಾಗವತರ ಸಮ್ಮುಖದಲ್ಲಿಯೇ "ನೋಡಿ ಭಾಗವತರ ಕಾಳಿದಾಸ ಚಿತ್ರದ ಎಡಿಟಂಗ್ ಮತ್ತು ಎಲ್ಲಾ ನಾನ್‌ಸಿಂಕ್ ಆಗಿ ವ್ಯವಸ್ಥೆಯಾಗಿದೆಯಂತೆ. ಅವರು ಚಿತ್ರ ಬಿಡುಗಡೆ ದಿನಾಂಕವನ್ನೂ ಸಹ ಕೊಟ್ಟುಬಿಟ್ಟಿದ್ದಾರೆ. ಆದ ಕಾರಣ, ಇವತ್ತು ರಾತ್ರಿ ಪೂರ್ಣ ಚಿತ್ರವನ್ನು ಥಿಯೇಟರಿನಲ್ಲಿ ಹಾಕಿ ನೋಡಿ. ಮುಂದಿನ ವಿಚಾರ ಏನು ಮಾಡಬೇಕೆಂಬುದನ್ನು ಯೋಚಿಸೋಣ" ಎಂದು ಹೇಳುತ್ತ, ಆಗಲೇ ಭಾಗವತರಿಗೆ "ನೀವು ಒಂದೇ ಸಾರಿ ರಾತ್ರಿ ಊಟ ಮುಗಿಸಿಕೊಂಡು ನಿಮ್ಮ ಶಾಸ್ತ್ರಿಯವರನ್ನೂ, ಎಡಿಟರನ್ನು ಕರೆದುಕೊಂಡು ಒಂಬತ್ತು ಗಂಟೆ ಸುಮಾರಿಗೆ ಸ್ಟುಡಿಯೋಗೆ ಬನ್ನಿ" ಎಂದು ಹೇಳಿ ಕಳಿಸಿದರು. ಅದರಂತೆಯೇ ಭಾಗವತರು ನಾಗಯ್ಯರೆಡ್ಡಿಯವರು ತಿಳಿಸಿದ ಸಮಯಕ್ಕೆ ಸರಿಯಾಗಿ ತಮ್ಮವರನ್ನೆಲ್ಲ ಕರೆದುಕೊಂಡು ಸ್ಟುಡಿಯೊ ಥಿಯೇಟರಿಗೆ ಬಂದರು. ಅದೇ ವೇಳೆಗೆ ನಾಗಯ್ಯರೆಡ್ಡಿಯವರೂ ಆಗಮಿಸಿ ರಾತ್ರಿ ಸುಮಾರು ಒಂದು ಗಂಟೆಯವರೆಗೂ ಮೂಕಿ ಕಾಳಿದಾಸದ ಪೂರ್ಣ ಚಿತ್ರವನ್ನು ನೋಡಿ ಅದರಲ್ಲಿನ ಅವ್ಯವಸ್ಥೆಗಳನ್ನು ಗಮನಿಸಿ ತುಂಬ ಬೇಸರದಿಂದಲೇ ಚಿತ್ರದ ನಿರ್ದೇಶಕರನ್ನು, ಸಹಾಯಕ ನಿರ್ದೇಶಕರನ್ನು ಎಡಿಟರನ್ನು ಕುರಿತು "ಏನ್ರಯ್ಯ ನಿಮ್ಮಗಳನ್ನೆಲ್ಲ ನಂಬಿಕೊಂಡು ಭಾಗವತರು ಚರಿತ್ರಾರ್ಹವಾದ 'ಕಾಳಿದಾಸ' ಚಿತ್ರ ತೆಗೆಯಲು ಆರಂಭಿಸುವುದರ ಮೂಲಕ ನಿಮ್ಮೆಲ್ಲರಿಗೂ ಅವಕಾಶ ಕೊಟ್ಟು ಪ್ರೋತ್ಸಾಹಿಸಿದ್ದಕ್ಕೆ ಚಿತ್ರವನ್ನು ಈ ರೀತಿ ಅವ್ಯವಸ್ಥೆ ಮಾಡಿಬಿಟ್ಟಿದ್ದೀರಲ್ಲ, ಇದೇ ಸಂದರ್ಭದಲ್ಲಿ ಭಾಗವತರು ಚಿತ್ರ ಬಿಡುಗಡೆಗೆ ಡೇಟನ್ನೂ ಸಹ ಕೊಟ್ಟುಬಿಟ್ಟಿದ್ದಾರಲ್ಲ ಅವರ ಗತಿಯೇನು?" ಎಂದು ಹೇಳುತ್ತ ಚಿತ್ರ ನೋಡುತ್ತಿರುವಾಗ

ಮಧ್ಯ ಮಧ್ಯ ಕಂಡ ತಪ್ಪುಗಳನ್ನೆಲ್ಲ ತೋರಿಸುತ್ತ "ನೋಡಿ ಇಂಥ ತಪ್ಪುಗಳನ್ನೆಲ್ಲ ತಿದ್ದಿಕೊಂಡಿದ್ದರೆ ಈ ರೀತಿ ಅವ್ಯವಸ್ಥೆ ಆಗುತ್ತಿತ್ತೆ ? ಅಂತೂ ನಿಮಗೇನಾದರೂ ತಿಳಿದುಕೊಳ್ಳಬೇಕೆಂಬ ಆಸಕ್ತಿ ಇದ್ದಿದ್ದರೆ ನಮ್ಮಲ್ಲಿರುವಂಥವರನ್ನಾದರೂ ಕೇಳಿ ಸರಿಪಡಿಸಿಕೊಳ್ಳಬಹುದಾಗಿತ್ತಲ್ಲ ಈಗ ಅವರ ಗತಿಯೇನು?" ಎಂದು ಅವರುಗಳಿಗೆ ವಿಷಾದದಿಂದಲೇ ತಿಳಿಸಿದರು. ನಂತರ ಭಾಗವತರನ್ನು ನೋಡಿ "ಭಾಗವತರೇ ಇದರ ಬಗೆಗೆ ನೀವೇನೂ ಯೋಚನೆ ಮಾಡಬೇಡಿ. ಆದರೂ ಸ್ವಲ್ಪ ಕಷ್ಟವಾಗುತ್ತದೆ. ಫಾಸಿಟಿವ್ ಫಿಲಂಗಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಅದೆಲ್ಲವನ್ನೂ ನಾನೇ ವಹಿಸಿಕೊಳ್ಳುತ್ತೇನೆ" ಎಂದು ಹೇಳಿದ ನಾಗಯ್ಯರೆಡ್ಡಿಯವರು ತಮ್ಮ ಎಡಿಟರ್‌ಗಳಿಗೆ "ನಾಳೆಯಿಂದ ನಮ್ಮ ಕೆಲಸ ಭಾಗವತರ ಕಾಳಿದಾಸ ಚಿತ್ರದ ಒಂದೊಂದು ರೀಲನ್ನು ಹೊಸದಾಗಿ ಪ್ರಿಂಟ್ ಮಾಡಿಸಿ ನಾನು ಹೇಳಿದಂತೆ ಅವ್ಯವಸ್ಥೆಗಳನ್ನೆಲ್ಲಾ ಕತ್ತರಿಸಿ ನವೀನ ಮತ್ತು ನಾನು ನೋಡಿದ ನಂತರ ಒಂದೊಂದು ರೀಲನ್ನು ನನ್ನ ಅಭಿಪ್ರಾಯದಂತೆ ಎಡಿಟ್ ಮಾಡಿದ ನಂತರ ಅದನ್ನು ನೋಡಿ ನಾನು ಹೇಳಿದ ಮೇಲೆ ಒಂದೊಂದು ರೀಲನ್ನೂ ಹೊಸದಾಗಿ ಪ್ರಿಂಟ್ ಮಾಡಬೇಕು ಎಂದು ಅವರಿಗೆ ಹೇಳಿದ್ದಲ್ಲದೆ, ಭಾಗವತರೊಂದಿಗೆ ಬಂದಿದ್ದವರಿಗೆ "ನೀವೇನೂ ಮಾಡಬೇಡಿ ಶಾಟ್ ತೆಗೆದಿರುವಂಥ ನಂಬರ್‌ಗಳನ್ನು ಹೇಳಿದರೂ ಸಾಕು ಮಿಕ್ಕಿದ್ದನ್ನು ನಮ್ಮವರು ನೋಡಿಕೊಳ್ಳುತ್ತಾರೆ" ಎಂದು ಹೇಳಿದರು. ಅದರಂತೆ ನಾಗಯ್ಯರೆಡ್ಡಿಯವರು ಪ್ರತಿ ನಿತ್ಯವೂ ರಾತ್ರಿ ಕಾಳಿದಾಸದ ಪ್ರತಿ ರೀಲನ್ನೂ ಹೊಸದಾಗಿ ಎಡಿಟ್ ಮಾಡಿ ಪ್ರಿಂಟ್ ಮಾಡಿಸಿ ಅವರ ಆದೇಶದಂತೆಯೇ ಸುಮಾರು ಹತ್ತು ದಿವಸಗಳು ಚಿತ್ರವನ್ನು ಪೂರ ಎಡಿಟ್ ಮಾಡಿಸಿ 19 ಸಾವಿರ ಅಡಿ ಇದ್ದ ಉದ್ದವನ್ನು 16 ಸಾವಿರಕ್ಕೂ ತಂದು ನಿಲ್ಲಿಸಿದರು. ಆಗ ಚಿತ್ರದಲ್ಲಿ ಒಂದೊಂದು ಸನ್ನಿವೇಶವೂ ಬಹಳ ವೇಗವಾಗಿ ಚಲಿಸಿತು. ಕಥೆಯೂ ಸಹ ಸಮಾಧಾನವಾಗಿ ಬಂದಿತು. ಸಮರ್ಥ ರೀತಿಯಲ್ಲಿ ಎಡಿಟಿಂಗ್ ನಡೆಸಿದ್ದರಿಂದ ಒಳ್ಳೆಯದಾಗಿ ಚಿತ್ರ ಸಮಾಧಾನ ತಂದುಕೊಟ್ಟಿತು. ಕೊನೆಯ ದಿವಸ ನಾಗಯ್ಯರೆಡ್ಡಿಯವರು ತಮ್ಮ ಸ್ಟುಡಿಯೋದಲ್ಲಿದ್ದ ತಾಂತ್ರಿಕ ವರ್ಗದವರನ್ನೆಲ್ಲ ಆಹ್ವಾನಿಸಿ "ಎಲ್ಲರೂ ಕಾಳಿದಾಸನ ಚಿತ್ರವನ್ನು ನೋಡಿ ಅಭಿಪ್ರಾಯಗಳನ್ನು ತಿಳಿಸಿ" ಎಂದು ಹೇಳಿ ಚಿತ್ರವನ್ನು ತೆರೆಗೆ ಬಿಟ್ಟರು. ಆ ದಿವಸ ಚಿತ್ರ ನೋಡಿದ ಎಲ್ಲರೂ ಸಂತೋಷದಿಂದಲೇ 'ಚಿತ್ರ ಬಹಳ ಚೆನ್ನಾಗಿದೆ' ಎಂದು ಹೇಳಿದರು. ತಾಂತ್ರಿಕವಾಗಿ ಹೊರಬರುತ್ತಿದ್ದಂತೆ ಭಾಗವತರಿಗೆ ಹೋಗಿದ್ದ ಜೀವ ಮತ್ತೆ ಬಂದಂತಾಯಿತು! ಆ ನಂತರ ಚಿತ್ರದ ಪ್ರತಿಗಳನ್ನು ಮಾಡಿಸಿಕೊಟ್ಟಿದ್ದ ದಿನಾಂಕಕ್ಕೂ ಸರಿಯಾಗಿ ಕಾಳಿದಾಸ ಚಿತ್ರ ಬಿಡುಗಡೆಯಾಗುವಂತೆ ಭಾಗವತರು ಏರ್ಪಾಡು

ಮಾಡಿದರು. ಚಿತ್ರ ಬಿಡುಗಡೆಯಾದ ಎಲ್ಲಾ ಪ್ರದೇಶಗಳಿಂದಲೂ ಚಿತ್ರದ ಬಗೆಗೆ ಉತ್ತಮ ಪ್ರತಿಕ್ರಿಯೆಗಳು ಬರತೊಡಗಿದವು.

**ತಂದೆ–ಮಗನಿಗೆ ಒಬ್ಬಳೇ ಪ್ರೇಯಸಿ ; ಬಾಲಣ್ಣ ಬರೆದ ಕಥೆ**

ಸಾಕಷ್ಟು ಅನುಭವವಿಲ್ಲದೆ ನಿರ್ದೇಶನ ಹಾಗೂ ಎಡಿಟಿಂಗ್ ವರ್ಗದವರಿಂದ ಚಿತ್ರದ ಕೆಲಸ ಈ ರೀತಿ ಅಚಾತುರ್ಯದಿಂದ ನಡೆದಿದ್ದರೂ ನಾಗಯ್ಯರೆಡ್ಡಿಯವರಿಂದ ಚಿತ್ರ ಸಮರ್ಪಕವಾಗಿ ಮುಗಿಯಿತು. ಇಲ್ಲಿ ಒಂದು ವಿಚಾರ. ಏನೆಂದರೆ, ಭಾಗವತರು 'ಆತ್ಮೀಯ ಮಿತ್ರರಾದ ಕು.ರಾ. ಸೀತಾರಾಮಶಾಸ್ತ್ರಿಯವರು ಕಥೆಯ ಸಂಭಾಷಣೆ ಹಾಡುಗಳು ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಶ್ಲೋಕಗಳನ್ನು ಬಹಳ ಚೆನ್ನಾಗಿ ಅಳವಡಿಸಿದ್ದಾರೆ ಎಂಬುದನ್ನು ನಾವು ಸಂತೋಷದಿಂದಲೇ ಹೇಳಬೇಕಾಗುತ್ತದೆ. ಸಾಹಿತ್ಯದ ವಿಷಯದಲ್ಲಿ ಅವರಿಗಿದ್ದ ಪ್ರತಿಭೆಯನ್ನು ನಾನೆಂದಿಗೂ ಮರೆಯಲಾರೆ' ಎಂದರು. ಈ ವಿಚಾರವನ್ನು ಇದುವರೆಗೂ ಚಿತ್ರ ನೋಡಿದವರೂ ಮುಂದೆ ನೋಡುವವರೂ ಸಹ ಆನಂದಪಟ್ಟು ಸ್ವಾಗತಿಸುತ್ತಾರೆಂಬುದರಲ್ಲಿ ಅನುಮಾನವಿಲ್ಲ.

ಕನ್ನಡ ಚಿತ್ರಗಳಿಗೆ ಕನ್ನಡಿಗರಿಂದಲೇ ಪ್ರೋತ್ಸಾಹವಿರುವ ಸಂದರ್ಭ ಅದಾಗಿತ್ತು. ಆಗ ಒಂದು ಚಿತ್ರ ಏಳೆಂಟು ವಾರ ಓಡಿದರೆ ಅದನ್ನು 'ಅದ್ಭುತ ಚಿತ್ರ' ಎಂದು ಹೇಳಿಬಿಡುತ್ತಿದ್ದರು. ಇವತ್ತಿನಂತೆ 100 ದಿವಸ. 50 ದಿವಸ ನಡೆಯಿತು ಎಂದು ಲೆಕ್ಕ ಹಾಕುವ ಗೋಜಿಗೆ ಯಾರೂ ಹೋಗುತ್ತಿರಲಿಲ್ಲ. ಅಂತೂ 'ಮಹಾಕವಿ ಕಾಳಿದಾಸ' ಚಿತ್ರ ಚೆನ್ನಾಗಿ ಓಡಿ ಉತ್ತಮ ಕೀರ್ತಿಯನ್ನು ಸಂಪಾದಿಸಿತು. ಇಷ್ಟೆಲ್ಲ ಆದ ಮೇಲೆ ಭಾಗವತರು ನಾಗಯ್ಯರೆಡ್ಡಿಯವರನ್ನು ಕಂಡು 'ನಿಮ್ಮ ದಯದಿಂದ, ನೀವು ಮಾಡಿದ ಸಹಾಯದಿಂದ ನಮ್ಮ ಚಿತ್ರಕ್ಕೆ ಒಳ್ಳೆ ಕೀರ್ತಿ ಬಂದಿತು. ಇದನ್ನು ನಾನು ಮರೆಯುವಂತಿಲ್ಲ' ಎಂದು ಹೇಳಿ 'ತಮಗೆ ನಾನು ಇನ್ನೆಷ್ಟು ಹಣ ಕೊಡಬೇಕಾಗುತ್ತದೆ, ದಯವಿಟ್ಟು ತಿಳಿಸಿ' ಎಂದು ಕೇಳಿದರು. ಆಗ ನಾಗಯ್ಯರೆಡ್ಡಿಯವರು "ಎಷ್ಟು ಹಣ ಕೊಡಬೇಕಾಗುತ್ತದೆ, ಅದೆಲ್ಲ ವಿವರಗಳನ್ನು ತೆಗೆದುಕೊಂಡು ಬನ್ನಿ" ಎಂದು ತಿಳಿಸಿದರು. ಮಾಲೀಕರ ಆದೇಶದಂತೆ ಆ ಗುಮಾಸ್ತರು ಸುಮಾರು 15 ನಿಮಿಷಗಳಲ್ಲಿಯೇ ಭಾಗವತರ ಲೆಕ್ಕ ನೋಡಿ 'ಇವರು ಕಾಲ್‌ಷೀಟ್ ಮತ್ತು ಸೆಟ್ಟಿಂಗ್ಸ್‌ನ ಬಾಬ್ತು ಎಲ್ಲವೂ ಸೇರಿ 22 ಸಾವಿರ ರೂ.ಗಳನ್ನು ನಮಗೆ ಕೊಡಬೇಕಾಗುತ್ತದೆ. ಇದಲ್ಲದೆ ಹೊಸದಾಗಿ ಎಡಿಟಿಂಗ್‌ಗಾಗಿ ಪ್ರಿಂಟ್ ಮಾಡಿಸಿದ ಪಾಸಿಟಿವ್ ಬಾಬ್ತು ಸುಮಾರು 15 ಸಾವಿರ ರೂ. ಆಗುತ್ತದೆ —ಎಂದು ಹೇಳಿದರು. ಆಗ ನಾಗಯ್ಯರೆಡ್ಡಿಯವರು ಸ್ವಲ್ಪ ಹೊತ್ತು ಹಾಗೆ ಯೋಚನೆ ಮಾಡಿ 'ಭಾಗತವರೇ ನೀವು ಬಹಳ ಕಷ್ಟಪಟ್ಟು ಈ ಚಿತ್ರವನ್ನು ತಯಾರಿಸಿ ನೀವು ಊಹಿಸಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಾಗಿಯೇ ವೆಚ್ಚವಾಗಿದೆ. ಜೊತೆಗೆ ಬಹಳ

ವೇದನೆಯನ್ನು ಅನುಭವಿಸಿದ್ದೀರಿ. ಆದ ಕಾರಣ ನಮ್ಮ ಲೆಕ್ಕದ ಪ್ರಕಾರ ಕೊಡಬೇಕಾದ ಬಾಕಿ ಹಣವನ್ನು ನೀವು ಕೊಡಬೇಕಾದ್ದಿಲ್ಲ. ಹಾಗೆಯೇ ಪಾಸಿಟಿವ್ ಫಿಲಂನ ವಿಷಯ. ಹಿಂದೆಯೇ ನಾನು ಹೇಳಿದ್ದಂತೆ ಆ ಪಾಸಿಟೀವ್‌ದ ಹಣವನ್ನು ನೀವು ಭರಿಸಬೇಕಾದ್ದಿಲ್ಲ' ಎಂದು ಹೇಳಿದ್ದಲ್ಲದೆ 'ಕಲಾದೇವತೆ ನಿಮಗೆ ಒಳ್ಳೆಯದು ಮಾಡಲಿ. ಈ ಚಿತ್ರ ಪ್ರಪಂಚದಲ್ಲಿ ಇನ್ನೂ ಹೆಚ್ಚಿನ ಕೀರ್ತಿ ನಿಮಗೆ ತರಲಿ' ಎಂದು ಆಶೀರ್ವಾದ ಮಾಡಿದರು. ಆಗ ತನಗರಿವಿಲ್ಲದಂತೆಯೇ ಭಾಗವತರ ಕಣ್ಣು ಹನಿಗೂಡಿತು.

ಭಾಗವತರು ಕೂಡಲೇ ಎದ್ದು ನಾಗಯ್ಯರೆಡ್ಡಿಯವರಿಗೆ ವರ್ಗದವರಿಂದ ಚಿತ್ರದ ಬಗೆಗೆ ಸಂತೋಷದ, ಮೆಚ್ಚುಗೆಯ ಅಭಿಪ್ರಾಯ ಸಾಷ್ಟಾಂಗ ನಮಸ್ಕಾರ ಮಾಡಿದರು. ಸಿನಿಮಾ ಪ್ರಪಂಚದಲ್ಲೂ ಮಾನವೀಯ ಹೃದಯವುಳ್ಳ ಇಂಥವರು ಇದ್ದಾರಲ್ಲಾ ಎಂದು ಭಾಗವತರು ಆಶ್ಚರ್ಯಪಟ್ಟರು. ಇಂಥ ಕಳಕಳಿಯಿರುವ ಕಾರಣದಿಂದಲೇ ನಾಗಯ್ಯರೆಡ್ಡಿಯವರು ಇವತ್ತಿನ ಚಿತ್ರಪ್ರಪಂಚದಲ್ಲಿ ಸಾವಿರಾರು ಮಂದಿಗೆ ಸಹಾಯ ಮಾಡುತ್ತ, ಕಾರ್ಮಿಕರ ಕಷ್ಟ ಸುಖಗಳನ್ನು ಅರಿತುಕೊಂಡು, ಹಿತದೃಷ್ಟಿಯನ್ನೇ ಮುಖ್ಯೋದ್ದೇಶವಾಗಿಟ್ಟುಕೊಂಡು ಒಂದು ಆಸ್ಪತ್ರೆಯನ್ನು ಸಹ ನಡೆಸುತ್ತಿರುವರಂತೆ. ಇಂಥವರ ಮಾರ್ಗದರ್ಶನವನ್ನು ಸಿನಿಮಾ ಕ್ಷೇತ್ರದಲ್ಲಿನ ಸ್ಟುಡಿಯೋ ಮತ್ತು ನಿರ್ಮಾಪಕ ಸ್ಥಾನದಲ್ಲಿರುವಂಥ ಪ್ರತಿಯೊಬ್ಬರೂ ಅನುಸರಿಸಿದರೆ ಸಿನಿಮಾ ಕ್ಷೇತ್ರವೂ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲ ಎಂಬ ಅಭಿಪ್ರಾಯ ಭಾಗವತರದು.

ಚಿತ್ರಕ್ಕೆ ಒಳ್ಳೆ ಕೀರ್ತಿ ಬಂದಿತಾದರೂ ವೆಚ್ಚ ಮಾಡಿದ ಹಣ ಬರಲು ಮೂರು ನಾಲ್ಕು ವರ್ಷಗಳೇ ಆಯಿತು. ಇಷ್ಟಾದ ನಂತರ ಬಸವೇಶ್ವರ ಆ 'ಮಹನೀಯರೇ' ಹಣ ಸಹಾಯ ಮಾಡಿ ಚಿತ್ರ ಮುಗಿಸುವುದಕ್ಕೆ ನೆರವಾಗಿ ಕೆಲಸ ಪ್ರಾರಂಭವಾಯಿತು. ಅವರೇ ಭಾಗವತರಲ್ಲಿಗೆ ಬಂದು ಈಗ ಬಸವೇಶ್ವರ ಚಿತ್ರದ ಕೆಲಸ ಮುಗಿಸಲು ನಾವುಗಳೇ ಎಲ್ಲ ಏರ್ಪಾಡು ಮಾಡಿದ್ದೇವೆ. ನೀವು ಸಹಕರಿಸಿ ಚಿತ್ರ ಜಾಗ್ರತೆ ಮುಗಿಸುವಂತೆ ಕಾರ್ಯನಿರ್ವಹಿಸಬೇಕೆಂದು, ಕೇಳಿಕೊಂಡರು. ಆಗ ಭಾಗವತರು 'ಯಾರು ಮುಗಿಸಿದರೆ ಏನು ? ಅಂತೂ ಮುಗಿದು ಸಂತೋಷದಿಂದ ಚಿತ್ರ ಹೊರ ಬಂದರೆ ನನಗೂ ಆನಂದವೇ ? ನನಗೆ ಬರಬೇಕಾದ ಹಣವನ್ನು ಮಾತ್ರ ತಾವು ಕೊಟ್ಟುಬಿಟ್ಟರೆ ನನ್ನ ಕೆಲಸ ಮುಗಿಸುವುದರಲ್ಲಿ ಅಡ್ಡಿಯಿಲ್ಲ' ಎಂದು ಹೇಳಿ ಆದಷ್ಟು ಜಾಗ್ರತೆಯೇ ಚಿತ್ರದ ಕೆಲಸ ಮುಗಿಸಿದರು. ಈ ಮಧ್ಯೆ ತಮಿಳು ಭಾಷೆಯ 'ವಳಯಾಪತಿ' ಎಂಬ ಚಿತ್ರದ ಕೆಲಸವನ್ನು ನಿಂತಿದ್ದದ್ದು ಪ್ರಾರಂಭಗೊಂಡು ಕೆಲ ದಿನಗಳು ಷೂಟಿಂಗ್ ನಡೆಯಿತಾದರೂ ಅದು ಕೊನೆಗೆ ನಿಂತೇ ಹೋಯಿತು.

ಆಗ ಮುಂದೇನು ಮಾಡಬೇಕೆಂದು ಭಾಗವತರು ಯೋಚಿಸುತ್ತಿದ್ದರು. ಆಗ ನಮ್ಮ ನಾಡಿನ ಹಿರಿಯ ಕಲಾವಿದರಾದ ಟಿ.ಎನ್. ಬಾಲಕೃಷ್ಣ ಅವರು ಭಾಗವತರ ಬಳಿಗೆ ಬಂದು 'ನನ್ನಲ್ಲಿ ಒಂದು ಕಥೆಯಿದೆ. ಅದನ್ನು ಕೇಳಿ, ನಿಮಗೆ ಒಪ್ಪಿಗೆಯಾದರೆ ಚಿತ್ರ ಮಾಡೋಣ' ಎಂದು ಹೇಳಿದರು. ಭಾಗವತರು ಮತ್ತು ಅವರ ಸ್ನೇಹಿತರಾದಿಯಾಗಿ ಕಥೆಯನ್ನು ಕೇಳಿ ಆ ಕತೆಗೆ 'ಪಂಚರತ್ನ' ಎಂಬ ಶೀರ್ಷಿಕೆಯನ್ನು ಇಟ್ಟು ಚಿತ್ರ ಮಾಡಬಹುದೆಂಬ ಒಂದು ತೀರ್ಮಾನಕ್ಕೆ ಬಂದು ಸಂಭಾಷಣೆ ಇತ್ಯಾದಿ ಬರೆಯಲು ಬಾಲಕೃಷ್ಣ ಅವರಿಗೂ, ಕೆಲವು ಹಾಡುಗಳನ್ನು ರಚಿಸಲು ನಂಜಪ್ಪ ಕವಿ ಅವರಿಗೂ, ನಿರ್ದೇಶನವನ್ನು ತಮಿಳುನಾಡಿನವರೇ ಆದ ಉತ್ತಮ ಎಡಿಟರ್ ಆಗಿದ್ದ ವೇಂಬು ಎಂಬುವವರಿಗೂ ಒಪ್ಪಿಸಿದರು. ಕಾಳಿದಾಸ ಚಿತ್ರ ನಿರ್ಮಾಣದ ಸಂದರ್ಭದಲ್ಲಿ ಸರೋಜಾ ದೇವಿಯವರನ್ನು ಒಪ್ಪಂದ ಮಾಡಿಕೊಳ್ಳುವಾಗ್ಗೆ 'ಕಾಳಿದಾಸನ ನಂತರ ನೀವು, ಮುಂದಿನ ಚಿತ್ರದಲ್ಲೂ ಪಾತ್ರ ವಹಿಸಬೇಕೆಂದು ಒಪ್ಪಂದ ಮಾಡಿದ್ದರ ಪ್ರಯುಕ್ತ ಅವರನ್ನು ಮುಖ್ಯ ನಾಯಕಿಯ ಪಾತ್ರ ವಹಿಸುವಂತೆಯೂ ಬಾಲಕೃಷ್ಣ, ನರಸಿಂಹರಾಜು ಅವರು ಉಳಿದ ಪಾತ್ರಗಳನ್ನು ನಿರ್ವಹಿಸುವಂತೆಯೂ ಏರ್ಪಾಡು ಮಾಡಿದರು.

ಈ ಚಿತ್ರವನ್ನು ಕಡಿಮೆ ವೆಚ್ಚದಲ್ಲಿ ತೆಗೆಯಬೇಕೆಂದು ತೀರ್ಮಾನಿಸಿಕೊಂಡು ಉತ್ತರ ಕರ್ನಾಟಕದ ನಾಟಕ ರಂಗದಲ್ಲಿ ಹೆಸರಾಗಿದ್ದ ಕೆಲ ನಟ ನಟಿಯರನ್ನು ಗೊತ್ತು ಮಾಡಿಕೊಂಡು ಸಂಗೀತ ನಿರ್ದೇಶನವನ್ನೂ ಸಹ ಭಾಗವತರೇ ನೆರವೇರಿಸಿ ಸುಮಾರು ನಾಲ್ಕು ತಿಂಗಳಲ್ಲಿ ಪಂಚರತ್ನ ಚಿತ್ರವನ್ನು ಮುಗಿಸಿದರು.

ಚಿತ್ರವೇನೋ ಪರಿಣಾಮಕಾರಿಯಾಗಿಯೇ ಮುಗಿಯಿತು. ಆದರೆ ಈ ಕಥೆಯಲ್ಲಿ ತಂದೆ ಮಗ ಇಬ್ಬರೂ ಒಬ್ಬರಿಗೊಬ್ಬರಿಗೆ ತಿಳಿಯದಂತೆಯೇ ಒಬ್ಬ ದಾಸಿಯ ಮನೆಗೆ ಹೋಗುತ್ತಿದ್ದದ್ದು ಪ್ರಧಾನವಾಗಿದ್ದು, ಕಡೆಯಲ್ಲಿ ಕಥಾನಾಯಕ ನಾಯಕಿಯರು ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಿವೇಶವಿದ್ದರಿಂದ ಅಂದಿನ ಕನ್ನಡ ಚಿತ್ರಗಳಲ್ಲಿ ಇಂಥ ಸನ್ನಿವೇಶಗಳು ಬಂದಿರಲಿಲ್ಲವಾದುದರಿಂದಲೇ ಏನೋ ಇದೇನು ಈ ಕಥೆಯನ್ನು ಈ ರೀತಿ ಮುಕ್ತಾಯ ಮಾಡಿದ್ದಾರೆ ಎಂದು ಜನ ಗೊಣಗುಟ್ಟಿದರು. ಈ ಕಾರಣದಿಂದ ಚಿತ್ರ ಸುಮಾರಾಗಿ ಓಡಿತು, ಅಂತೂ ಯಾವ ತೊಂದರೆಯೂ ಇಲ್ಲದಂತೆ 'ಪಂಚರತ್ನ' ಚಿತ್ರ ಬಹು ಬೇಗನೇ ಮುಗಿಯಿತೆಂದು ಹೇಳಬಹುದು.

ನಂತರ 'ಉಳವುಕ್ಕುಂ ತೊಳಿಲುಕ್ಕುಂ ವಂದನೆ ಶೈವಂ' ಎಂಬ ಚಿತ್ರವನ್ನು, ಭಾರತಿಯಾರ್‌ರವರ ಒಂದು ಹಾಡಿನ ಶೀರ್ಷಿಕೆಯಲ್ಲಿ ತಮಿಳು ಚಿತ್ರವನ್ನು

ನಿರ್ಮಿಸಲು ಭಾಗವತರು ಏರ್ಪಾಡು ಮಾಡಿ ಅದರಲ್ಲಿ ಆಗಿನ ಕಾಲಕ್ಕೆ ಹೆಸರಾಗಿದ್ದ ಆಂಧ್ರದ ನಟಿ ಕನ್ನಾಂಬ ಅವರನ್ನು ತಾಯಿಯ ಪಾತ್ರಕ್ಕೂ, ಕೇರಳದ ಪ್ರೇಮ್‌ನಜೀರ್ ಎಂಬುವರನ್ನು ನಾಯಕನ ಪಾತ್ರಕ್ಕೂ ಗೊತ್ತು ಮಾಡಿಕೊಂಡು ಮಿಕ್ಕ ಎಲ್ಲಾ ತಮಿಳು ನಟನಟಿಯರನ್ನೇ ತೆಗೆದುಕೊಂಡು, ಆಗ ತಾನೆ ಎರಡು ಚಿತ್ರಗಳಲ್ಲಿ ಹೆಸರು ಗಳಿಸಿದ್ದ ದೇವರ್ ಫಿಲಂಸ್‌ನ ತಿರುಮುಗಂ ಎಂಬುವವರನ್ನೇ ನಿರ್ದೇಶನಕ್ಕೂ ಅಯ್ಯಾಪಿಳ್ಳೆ ಎಂಬುವವರನ್ನು ಸಂಭಾಷಣೆ ಬರೆಯುವುದಕ್ಕೂ ಒಪ್ಪಿಸಿ ಚಿತ್ರದ ಕೆಲಸವನ್ನು ಸುಮಾರು ಆರು ತಿಂಗಳ ಒಳಗೆ ಮುಗಿಸಿದರು. ಭಾಗವತರು ಮಾತ್ರ ಇದರಲ್ಲಿ ಪಾತ್ರವಹಿಸಲಿಲ್ಲ. ಭಾಗವತರಿಗೆ ಯಾರೊಬ್ಬರೂ ತುಂಬು ಮನಸಿನಿಂದ ಸಹಕಾರ ನೀಡಲಿಲ್ಲವೆಂಬುದನ್ನು ವಿಷಾದದಿಂದಲೇ ಹೇಳಬೇಕಾಗುತ್ತದೆ. ಆದರೂ ಬಹಳ ಶ್ರಮದಿಂದಲೇ ಭಾಗವತರು ಚಿತ್ರದ ಕೆಲಸವನ್ನು ಮುಗಿಸಬೇಕಾಯಿತು. ಸುಮಾರು 5 ರೀಲಿನಷ್ಟು ಚಿತ್ರದ ಕೆಲಸ ನಡೆಯುತ್ತಿರುವಾಗಲೇ ಈ ಶೀರ್ಷಿಕೆಗಾಗಿಯೇ ತಮಿಳುನಾಡಿನಲ್ಲಿ ಜಿಲ್ಲಾವಾರು ಹಂಚಿಕೆದಾರರು ಬಹಳ ಪ್ರೀತಿಯಿಂದಲೇ ಬೆಲೆಗೆ ಕೇಳಿದರು. ಆದರೆ ಭಾಗವತರ ದುರಾಸೆ ಅದಕ್ಕೆ ಎಡೆಗೊಡದೆ 'ಇನ್ನು ಸ್ವಲ್ಪ ಚಿತ್ರ ಮುಗಿಯಲಿ ನೋಡೋಣ' ಎಂದು ಮಾಡಿದ ಉದಾಸೀನದಿಂದ ಈ ಚಿತ್ರ ಮುಗಿಯುವ ವೇಳೆಗೆ ತಮಿಳು ನಾಡಿನಲ್ಲಿ ಏನೋ ಒಂದು ಕ್ಷೋಭೆ ಪ್ರಾರಂಭವಾಗಿ ಚಿತ್ರ ಪ್ರಪಂಚದಲ್ಲೇ ವಾಣಿಜ್ಯ ವ್ಯವಹಾರ ಸರಿಯಿಲ್ಲದೆ ಆಗ ಅನೇಕ ತಮಿಳು ಚಿತ್ರಗಳಿಗೆ ಬಾರಿ ಹೊಡೆತವೇ ಬಿದ್ದಿತು. ಅದೇ ಸಂದರ್ಭದಲ್ಲಿಯೇ ಭಾಗವತರೂ ಸಹ ಈ ತಮಿಳು ಚಿತ್ರವನ್ನು ತೆಗೆದು ಆ ಹೊಡೆತಕ್ಕೆ ಸಿಕ್ಕಿ ತತ್ತರಿಸಿ ಹೋದರು. ಈ ಚಿತ್ರ ನಿರೀಕ್ಷೆಯಂತೆ ಯಶಸ್ವಿಯಾಗಲಿಲ್ಲ. ಆಗ ಭಾಗವತರಿಗಾದ ಬೇಸರ ಅಷ್ಟಿಷ್ಟಲ್ಲ. 'ಉಳವುಕ್ಕುಂ ತೊಳಿಲುಕ್ಕುಂ ವಂದನೆಶೈವಂ' ಎಂಬ ತಮಿಳು ಚಿತ್ರದ ಶೀರ್ಷಿಕೆಯಂತೆಯೇ ಚಿತ್ರ ಪ್ರಪಂಚದ ಸಹವಾಸವೇ ಬೇಡವೆಂದು ಮದರಾಸಿನಲ್ಲಿ ಕಟ್ಟಿದ್ದ ಮನೆಯನ್ನು ಮಾರಿ ಸಾಲ ಕೊಡುವವರಿಗೆಲ್ಲ ಕೊಟ್ಟು ಯಥಾಪ್ರಕಾರ ಬೆಂಗಳೂರಿಗೇ ಬಂದು ನೆಲೆಸಿದರು. ಇವರಿಗೆ ಆ ಸಮಯದಲ್ಲಿ ಭ್ರಮೆ ನಿರಸನವಾಗುವಂತೆಯೇ ಇತ್ತು. ಆದರೆ ಆಗ ಭಾಗವತರು ಸಂಗೀತ ಕಲೆಯ ಪ್ರಭಾವದಿಂದ, ಮಹಾ ವಾಗ್ಗೇಯಕಾರರ ಕೃತಿಗಳ ಅರ್ಥವನ್ನು ಮಾಡಿಕೊಳ್ಳುತ್ತ ಭಗವದ್ಗೀತೆಯನ್ನು ಭಕ್ತಿಯಿಂದ ಪಠಿಸುತ್ತ ಕಲೆಯಿಂದ ಬಂದ ಸಂಪತ್ತನ್ನು ಕಲೆಗೇ ಸಮರ್ಪಿಸಿದ್ದೇನೆಂಬ ಆತ್ಮವಿಶ್ವಾಸದಿಂದಲೆ ಭಾಗವತರು ಗೌರವದಿಂದಲೇ ಬದುಕಿದರು.

ಇದಾದ ಒಂದೆರಡು ವರ್ಷಗಳ ತರುವಾಯ ಶ್ರೀ ನಾರಾಯಣ ಸಿಂಗ್ ಎಂಬುವವರು 'ಕೈವಾರ ಮಹಾತ್ಮೆ' ಎಂಬ ಕನ್ನಡ ಚಿತ್ರವನ್ನು ಕಣಗಾಲ್ ಪ್ರಭಾಕರ್ ಶಾಸ್ತ್ರಿಯವರ ನೇತೃತ್ವದಲ್ಲಿ ನಿರ್ಮಿಸಲು ಏರ್ಪಾಡಾಗಿ ಭಾಗವತರನ್ನು

ಕಥಾನಾಯಕನನ್ನಾಗಿಯೂ ಉಳಿದ ಪಾತ್ರಗಳಿಗೆ ಜಯಮ್ಮ, ವೀರಣ್ಣ, ನಾಗೇಂದ್ರರಾಯರು ಇವರನ್ನೆಲ್ಲ ಗೊತ್ತು ಮಾಡಿಕೊಂಡು ಮದ್ರಾಸಿಗೆ ಹೋಗಿ ಅಲ್ಲಿ ಭಾಗವತರು ಹಾಡಿದ ನಾಲ್ಕು ಹಾಡುಗಳನ್ನು ಧ್ವನಿ ಮುದ್ರಣ ಮಾಡಿಕೊಂಡರು. ತಮ್ಮವರೇ ಆದ ಕೆಲವು ಕಲಾವಿದರನ್ನು ನೇಮಿಸಿಕೊಂಡು ಭಾಗವತರು ಹಾಡಿದ ನಾಲ್ಕು ಹಾಡುಗಳನ್ನು ಚಿತ್ರದಲ್ಲಿ ಉಪಯೋಗಿಸಿಕೊಂಡು ಚಿತ್ರ ಮುಗಿಸಿ ಹೊರತರುವಾಗ್ಗೆ ಭಾಗವತರು ಕೋರ್ಟಿನ ಮೆಟ್ಟಲು ಹತ್ತಬೇಕಾಯಿತಂತೆ. ಸುಮಾರು ಆರು ತಿಂಗಳ ಕಾಲ ಕೋರ್ಟಿನಲ್ಲಿ ಈ ಚಿತ್ರದ ಕೇಸು ನಡೆಯಿತು. ಭಾಗವತರ ಮಾನನಷ್ಟ ಮತ್ತು ಚಿತ್ರಕ್ಕೆ ಗೊತ್ತು ಮಾಡಿದ್ದ ಬಾಕಿ ಮೊಬಲಿಗೆ ತಡೆಯಾಜ್ಞೆ ದೊರಕದೆ ಅಂದರೆ, ಕೋರ್ಟು ವೆಚ್ಚದ ಸಮೇತ ಭಾಗವತರಿಗೆ ಡಿಕ್ರಿ ಕೊಟ್ಟರು. ಆದರೆ ಚಿಂತಾಮಣಿ ಕಡೆಯವರೊಬ್ಬರನ್ನು ಈ ಮೊದಲಿಗೆ ಕೋರ್ಟಿನಲ್ಲಿ ಜಾಮೀನು ಕೊಟ್ಟು ಚಿತ್ರವನ್ನು ತೆರೆಗೆ ಬಿಟ್ಟರು. ಭಾಗವತರಿಗೆ ಕೋರ್ಟಿನ ವೆಚ್ಚ ಬಂದಿತಷ್ಟೇ ಹೊರತು ಜಾಮೀನು ವ್ಯಕ್ತಿ ಯಾರೆಂಬುದೇ ಇವರಿಗೆ ಅರ್ಥವಾಗಲಿಲ್ಲ. ಇಷ್ಟೆಲ್ಲ ಆದರೂ ಭಾಗವತರು 'ನನ್ನ ಕೆಟ್ಟ ಗ್ರಹದ ಫಲ'ವೆಂದು ಭಾವಿಸಿ ಧೈರ್ಯಗುಂದದೆ ಸಮಾಧಾನ ಮಾಡಿಕೊಂಡರು. ಆಗ ಕನ್ನಡ ನಾಟಕ ಕಲಾ ನಟಸಾರ್ವಭೌಮರಾದ ವೀರಣ್ಣನವರು ಗೆಳೆಯರ ಮೂಲಕ ಹೊನ್ನಪ್ಪ ಭಾಗವತರು ಈಗ ಚಿತ್ರದ ಕೆಲಸವಿಲ್ಲದೆ ಕುಳಿತುಬಿಟ್ಟಿದ್ದಾರೆ. ಅವರಿಗಿನ್ನೂ ವಯಸ್ಸಿದೆ. ಅವರು ಸಮ್ಮತಿಸುವುದಾದರೆ ಜಯಮ್ಮ ಮತ್ತು ಭಾಗವತರಿಗಾಗಿಯೇ ತಕ್ಕಂತೆಯೇ ಕಥೆಗಳನ್ನು ಬರೆಸಿ, ಕಂಪನಿ ಮಾಡುತ್ತೇನೆ. ಅವರು ಪಾತ್ರ ವಹಿಸಲು ಯಾವುದಾದರೂ ಒಂದು ರೀತಿಯ ವ್ಯವಹಾರವನ್ನು ಗೊತ್ತು ಮಾಡಿಕೊಂಡು ಕಂಪನಿಯನ್ನು ಪ್ರಾರಂಭಿಸೋಣ. ಈಗ ನಡೆಯುತ್ತಿರುವ ನಮ್ಮ ನಾಟಕ ಕಂಪನಿಗೂ ಈಗ ಪ್ರಾರಂಭಿಸಬೇಕೆಂದಿರುವ ಕಂಪನಿಯ ವ್ಯವಹಾರಕ್ಕೂ ಸಂಬಂಧವಿಲ್ಲದಂತೆ ಏರ್ಪಾಡು ಮಾಡಿಕೊಳ್ಳೋಣ. ಈ ವಿಚಾರವನ್ನು ಭಾಗವತರಿಗೆ ನೀವುಗಳು ತಿಳಿಸಿ, ಅದಕ್ಕೆ ಅವರು ಏನು ಹೇಳುತ್ತಾರೆ ಎಂಬುದನ್ನು ನನಗೆ ತಿಳಿಸಿ ಇತ್ಯಾದಿಯಾಗಿ ಹೇಳಿ ಮಿತ್ರರನ್ನು ಭಾಗವತರ ಬಳಿಗೆ ಸಂಧಾನಕ್ಕೆ ಕಳಿಸಿದರು. ಇದರ ಬಗ್ಗೆ ಭಾಗವತರು ಬಹಳವಾಗಿ ಯೋಚಿಸಿದರು. ವೀರಣ್ಣನವರ ಕಂಪನಿಯಲ್ಲಿ ಹಿಂದೆ ಕೆಲವೇ ದಿವಸಗಳಿದ್ದು ಅವರ ವ್ಯವಹಾರದಲ್ಲಿ ಬೇಸರ ಪಟ್ಟುಕೊಂಡಿದ್ದ ಭಾಗವತರಿಗೆ ಈಗ ಅಷ್ಟೇನೂ ಸಮಾಧಾನವಾಗದೆ ಈ ವಿಚಾರ ಬೇಡಿ, 'ನನಗೆ ಈ ಕಲಾ ಪ್ರಪಂಚವೇ ಬೇಸರವಾಗಿದೆ. ನನಗೆ ಗುರು ಅನುಗ್ರಹದಿಂದ ಒದಗಿ ಬಂದಿರುವ ಸಂಗೀತದಿಂದಲೇ ಸಮಾಧಾನ ಮತ್ತು ಸಂತೋಷದಿಂದ ಮುಂದಿನ ಜೀವಮಾನ ಕಳೆಯಲು ನಿರ್ಧರಿಸಿದ್ದೇನೆ' ಎಂದು ಹೇಳಿಬಿಟ್ಟರು.

## ದಾವಣಗೆರೆಯಲ್ಲುಂಟಾದ ವೇದನೆ

ವೀರಣ್ಣನವರು ಮಿತ್ರರನ್ನು ಎಡೆಬಿಡದೆ "ನನ್ನ ವಿಚಾರದಲ್ಲಿ ಭಾಗವತರಿಗೇಕೆ ಇಷ್ಟು ಬೇಸರ, ಹಿಂದೆಯೇನೋ ನಡೆದದ್ದು ನಡೆದುಹೋಯಿತು. ಈಗಿನ ವಿಚಾರದಲ್ಲಿ ನಾನೇ ಹೇಳುತ್ತಿದ್ದೆನಲ್ಲ; ಅವರೇನೂ ಬಂಡವಾಳ ಹಾಕಬೇಕಾಗಿಲ್ಲ. ಜಯಮ್ಮ ಮತ್ತು ಭಾಗವತರಿಗಿನ್ನೂ ವಯಸ್ಸಿದೆ. ಅವರು ಪಾತ್ರವಹಿಸುವುದಕ್ಕೆ ಮಾತ್ರ ಯಾವ ರೀತಿಯಲ್ಲಿ ವ್ಯವಹಾರ ಮಾಡಬೇಕೋ ಮಾಡಿಕೊಂಡು ಉಭಯತ್ರರೂ ನಡೆದುಕೊಳ್ಳೋಣ. ನಾನು ಬಹಳ ಹೇಳಿದೆನೆಂದು ಹೇಳಿ ಅವರನ್ನೂ ಕರೆದುಕೊಂಡು ಬನ್ನಿ ಅಥವಾ ನಾನೇ ಬೇಕಾದರೂ ಅವರಲ್ಲಿಗೆ ಬರುತ್ತೇನೆ ಸಮಕ್ಷಮ ಮಾತನಾಡೋಣ" ಎಂದು ಹೇಳಿ ಕಳಿಸಿದರು. ಆಗ ಭಾಗವತರ ಮಿತ್ರರು ಅವರನ್ನೂ ಬಿಡದೆ ಬಹಳವಾಗಿ ಸಮಾಧಾನ ಹೇಳಿ, ಉಭಯತ್ರರೂ ಸಮಕ್ಷಮ ಮಾತನಾಡಲು ಒಂದುಗೂಡಿಸಿದರು. ಆಗ ಸುಮಾರು ಎರಡು ಗಂಟೆಯ ಕಾಲವೇ ಈ ವ್ಯವಹಾರದ ಬಗೆಗೆ ಮಾತುಕತೆ ಜರುಗಿತು. ಆದರೂ ಒಬ್ಬರಿಗೊಬ್ಬರಿಗೆ ಅಭಿಪ್ರಾಯಗಳು ಸಮಂಜಸವೆನಿಸಲಿಲ್ಲ. ಕೊನೆಯಲ್ಲಿ ಭಾಗವತರು "ಸ್ವಾಮಿ, ಯಜಮಾನರೇ ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ, ನಾನು ನಾಟಕ ಕಂಪನಿಯನ್ನು ಸ್ಥಾಪಿಸಬೇಕೆಂದು ಈಶ್ವರನ ಪ್ರೇರಣೆಯಿದ್ದದ್ದೇ ಆದರೆ, ನಾನೇ ಅದಕ್ಕೆ ಪ್ರಯತ್ನಪಡುತ್ತೇನೆ ವಿನಃ ನಿಮ್ಮ ಜೊತೆಯಲ್ಲಿ ಸೇರಿ ಈ ಕಂಪನಿ ವ್ಯವಹಾರಕ್ಕೆ ಅಂಟಿಕೊಳ್ಳಲು ಕಾಯ ವಾಚಾ ಮನಸಾ ನನಗೆ ಒಪ್ಪಿಗೆಯಾಗುತ್ತಿಲ್ಲ. ದಯವಿಟ್ಟು ಕ್ಷಮಿಸಿ" ಎಂದು ಹೇಳಿಬಿಟ್ಟರು. ಆಗ ವೀರಣ್ಣನವರು "ಯಾಕೋ ಏನೋ ನನ್ನ ವಿಚಾರದಲ್ಲಿ ನಿಮಗೆ ಬಹಳ ಬೇಸರವಾದಂತಿದೆ. ಹೋಗಲಿ ಬಿಡಿ ನಿಮ್ಮಿಷ್ಟ" ಎಂದು ಹೇಳಿಬಿಟ್ಟರು.

ಇಷ್ಟಾದ ಮೇಲೆ ಸಂಧಾನ ಮಾಡಿ ಭಾಗವತರ ಮಿತ್ರರು "ಸರಿ, ವೀರಣ್ಣನವರಿಗೆ ಹಾಗೆ ಹೇಳಿಬಿಟ್ಟೆವು. ಈಗ ನಾವೇ ಒಂದು ನಾಟಕ ಕಂಪನಿಯನ್ನು ಯಾಕೆ ಸ್ಥಾಪಿಸಬಾರದು" ಎಂದು ಮಾತಿಗೆ ಆರಂಭಿಸಿದರು. ಅದಕ್ಕೆ ಭಾಗವತರು "ನೀವು ಹೇಳುವುದೇನೋ ಸರಿ ಆದರೆ ಕಂಪನಿಯನ್ನು ಪ್ರಾರಂಭಿಸಲು ಸುಮ್ಮನೆ ಆಗುತ್ತದೆಯೇ? ಆರ್ಥಿಕ ದೃಷ್ಟಿಯಿಂದ ಈಗ ನನ್ನಿಂದ ಏನೂ ಸಾಧ್ಯವಾಗುವುದಿಲ್ಲ" ಎಂದರು. ಆ ರೀತಿ ಹೇಳಿದ ಮೇಲೆ "ಆ ವಿಚಾರ ನಿಮಗೇಕೆ? ನಾವುಗಳು ಸೇರಿದಂತೆ ಇದಕ್ಕೆ ಬೇಕಾಗುವ ಬಂಡವಾಳವನ್ನು ಏರ್ಪಾಡು ಮಾಡಲು ಯಾರನ್ನಾದರೂ ಆಶ್ರಯಿಸೋಣ" ಎಂದರು ಮಿತ್ರರು. ಇಷ್ಟೆಲ್ಲ ಚರ್ಚೆಯಾದ ನಂತರ ಇವರುಗಳಿಗೆ ಚಿರಪರಿಚಿತರಾದ ಶ್ರೀಮಂತರೊಬ್ಬರನ್ನು ಕಂಡು, ಅವರ ಕೃಪೆಯಿಂದ ಶುಭ ದಿವಸದಲ್ಲಿ ರಂಗಸಜ್ಜಿಕೆಗೆ ಬೇಕಾದ ಸಲಕರಣೆಗಳನ್ನೆಲ್ಲ

ಮಾಡಿಕೊಂಡು 'ಶ್ರೀ ಉಮಾ ಮಹೇಶ್ವರಿ ಸಂಗೀತ ನಾಟಕ ಮಂಡಲಿ' ಎಂಬ ಹೆಸರಿನಿಂದ ನಾಟಕ ಕಂಪನಿಯನ್ನು ಪ್ರಾರಂಭಿಸಿಯೇ ಬಿಟ್ಟರು. ಸುಮಾರು ಮೂರ್ನಾಲ್ಕು ತಿಂಗಳೊಳಗೆ ಎಲ್ಲ ಏರ್ಪಾಡುಗಳನ್ನು ಮಾಡಿಕೊಂಡು ಕಂಪನಿಯ ಭಾಗಸ್ಥರುಗಳಾಗಿ ಅದಕ್ಕೆ ಅಗತ್ಯವಾದ ಒಪ್ಪಂದ ಪತ್ರಗಳನ್ನು ಮಾಡಿಕೊಳ್ಳಲೇ ಇಲ್ಲ. ಪೂಜ್ಯರಾದ ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ 'ಶ್ರೀನಿವಾಸ ಕಲ್ಯಾಣ' ಎಂಬ ನಾಟಕವನ್ನು ಬರೆಸಿ ಅದರ ಹೊದ್ದಿಕೆ (ರಿಹರ್ಸಲ್) ಯನ್ನೂ ಪೂರೈಸಿಕೊಂಡು ಶುಭದಿನದಲ್ಲಿ ನಾಟಕ ವನ್ನೂ ಸಹ ಕಂಪನಿಯಲ್ಲಿ ಪ್ರಾರಂಭಿಸಿಯೇಬಿಟ್ಟರು. ಬೆಂಗಳೂರಿನಲ್ಲಿ ಸುಮಾರು ಎರಡು ತಿಂಗಳು ಕ್ಯಾಂಪು ಜರುಗಿತಾದರೂ ಭಾಗಸ್ಥರ ಒಪ್ಪಂದದ ವ್ಯವಹಾರ ಭಾಗಸ್ಥರಿಗೂ ಭಾಗವತರಿಗೂ ಏನೇನೂ ನಡೆಯಲಿಲ್ಲ. ಇಲ್ಲಿಂದ ಮುಂದಿನ ಕ್ಯಾಂಪು ಮಂಡ್ಯದಲ್ಲಿ ಮಾಡಬೇಕೆಂದು ಭಾಗವತರೂ ಸೇರಿದಂತೆ ಅವರುಗಳೆಲ್ಲಾ ಮಂಡ್ಯಕ್ಕೆ ಹೋಗಿ ಥಿಯೇಟರನ್ನು ಗೊತ್ತು ಮಾಡಿಕೊಂಡು ನಾಟಕ ಪ್ರಾರಂಭಿಸುವ ದಿನಾಂಕವನ್ನೂ ಸಹ ನಿಗದಿಗೊಳಿಸಿದ್ದಾಯಿತು. ಆದರೆ ಈ ಮಧ್ಯೆ ಬೆಂಗಳೂರಿನಲ್ಲಿ ನಾಟಕ ನಡೆಯುತ್ತಿರುವಾಗ್ಗೆ ನಾಟಕ ಕಂಟ್ರಾಕ್ಟ್ ಮಾಡಿಕೊಳ್ಳುವ ಸಲುವಾಗಿ ದಾವಣಗೆರೆಯಿಂದ ಬೆಂಗಳೂರಿಗೆ ಒಬ್ಬ ವ್ಯಕ್ತಿ ಬಂದು ಇವರುಗಳ ನಾಟಕವನ್ನು ನೋಡಿ "ನಾಟಕ ಬಹಳ ಚೆನ್ನಾಗಿದೆ. ದಾವಣಗೆರೆಯಲ್ಲಿ ಮೂವತ್ತು ನಾಟಕಗಳನ್ನು ಕಂಟ್ರಾಕ್ಟ್ ಮಾಡಿಕೊಡಿ" ಎಂದು ಬಹಳ ಉತ್ಸಾಹದಿಂದಲೇ ಕೇಳಿಕೊಂಡ. ಆದರೆ ಭಾಗಸ್ಥರು ಈ ವಿಚಾರವಾಗಿ ಭಾಗವತರ ಬಳಿ ಪ್ರಸ್ತಾಪಿಸದೆ ದಾವಣಗೆರೆ ವ್ಯಕ್ತಿಗೆ ನಾಟಕಗಳನ್ನು ಕಂಟ್ರಾಕ್ಟ್ ಕೊಡಲು ಒಪ್ಪಿಕೊಂಡ ವಿಷಯ ಹೇಗೋ ಭಾಗವತರ ಕಿವಿಗೆ ಬಿತ್ತು. ಆಗ ಭಾಗವತರು "ದಾವಣಗೆರೆ ಕ್ಯಾಂಪು ಬೇಡ, ಕಾರಣವೇನೆಂದರೆ ನಮ್ಮ ನಾಟಕ ಶ್ರೀನಿವಾಸ ಕಲ್ಯಾಣ. ಇದು ನಾಮದ ಕತೆ. ದಾವಣಗೆರೆಯಲ್ಲಿ ಇರುವ ಮುಕ್ಕಾಲು ಪ್ರಜೆಗಳೆಲ್ಲ ಹಣೆಗೆ ವಿಭೂತಿ ಧರಿಸುವ ಶಿವನ ಭಕ್ತರು. ಈಗ ನಾವು ಮಂಡ್ಯದಲ್ಲಿ ಥಿಯೇಟರನ್ನು ಗೊತ್ತು ಮಾಡಿಕೊಂಡು ನಾಟಕ ಪ್ರಾರಂಭ ಮಾಡುವ ದಿನಾಂಕವನ್ನೂ ಸಹ ಕೊಟ್ಟು ಬಂದಿದ್ದೇವೆ. ಇದನ್ನು ಬದಲಾಯಿಸುವುದು ನನಗೆ ಅಷ್ಟು ತೃಪ್ತಿಕರವಾಗಿ ಕಾಣುವುದಿಲ್ಲ. ಒಂದು ವೇಳೆ ಇದೇ ಸರಿಯೆಂದು ನೀವು ಮುಂದುವರಿಯುವುದಾದರೆ, ಮೊದಲನೇ ಕ್ಯಾಂಪಿನಲ್ಲಿಯೇ ನಾವು ನಷ್ಟಕ್ಕೆ ಗುರಿಯಾಗುವುದರಲ್ಲಿ ಸಂದೇಹವೇ ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಆದರೂ ಆ ಕಂಟ್ರಾಕ್ಟುದಾರನು ಮತ್ತು ಮಿತ್ರರು ಒಟ್ಟಾಗಿ ಭಾಗವತರನ್ನು ಮರೆತು "ಕಂಟ್ರಾಕ್ಟುದಾರರು ಭಾಗವತರ ಕೊರವಂಜಿಯ ಪಾತ್ರ ಒಂದೇ ಸಾಕು ಹಣ ವಸೂಲಿಗೆ ಎಂದು ಅವರೇ ಅಷ್ಟು ಧೈರ್ಯ ಹೇಳುವಾಗ ನಾನೇಕೆ ಈ ಅವಕಾಶವನ್ನು ಬಿಡಬೇಕು" ಎಂದು ತೀರ್ಮಾನಿಸಿ

ಮುಂದಿನ ಕ್ಯಾಂಪು ದಾವಣಗೆರೆಯಲ್ಲೇ ಮಾಡುವುದೆಂದು ನಿರ್ಧರಿಸಿಬಿಟ್ಟರು. ಈ ತೀರ್ಮಾನದಿಂದ ಭಾಗವತರಿಗೆ ಸಮಾಧಾನವಿಲ್ಲದಿದ್ದರೂ "ಸರಿ, ಹಾಗಿದ್ದ ಮೇಲೆ ನಿಮ್ಮ ಇಷ್ಟ. ಒಂದು ವಿಷಯ ಹೇಳಬೇಕಾದರೆ, ಹೇಳಿಬಿಡುತ್ತೇನೆ: ಇಲ್ಲಿ ಕಂಪನಿ ಪ್ರಾರಂಭವಾಗಿ ಎರಡು ತಿಂಗಳ ಮೇಲಾದರೂ ನಮ್ಮಗಳ ಕಂಪನಿಯ ವ್ಯವಹಾರದ ಒಪ್ಪಂದವೇ ಆಗಲಿಲ್ಲ. ಅದನ್ನು ಕೇಳಿದಾಗ ಯಾವ್ಯಾವುದೋ ಕಾರಣಗಳನ್ನು ಹೇಳಿ ಸುಮ್ಮನಾಗುತ್ತೀರಿ ನಾವು ಒಂದೇ ಮನೆಯ ಸಹೋದರ ರಂತಿದ್ದು ನಾನು ಬೇಡವೆಂದರೂ ಬಲವಂತದಿಂದ ಈ ವ್ಯವಹಾರ ಪ್ರಾರಂಭ ವಾಯಿತು. ಈಗ ನಮಗೆ ಆರ್ಥಿಕ ಸಹಾಯ ಮಾಡಿದವರಿಗೆ ನಾಳೆ ಹಿಂದಿರುಗಿ ಕೊಡಬೇಕೋ ಇಲ್ಲವೋ? ಈಗಲೇ ನಾನು ಚಿತ್ರಪ್ರಪಂಚದಲ್ಲಿ ಹೇಳತೀರದ ನಷ್ಟ ಪಟ್ಟುಕೊಂಡು ಜನರಲ್ಲಿ ಅಪಹಾಸ್ಯಕ್ಕೆ ಗುರಿಯಾಗಿ ಇರುವಾಗ ನೀವು ಈ ರೀತಿ ನಡೆದುಕೊಂಡದ್ದು ಸರಿಯಲ್ಲ. ಇದು ನಮ್ಮ ಆತ್ಮೀಯವಾದ ಸ್ನೇಹಕ್ಕೆ ಧಕ್ಕೆ ಬರುತ್ತದೆ. ನಮ್ಮಗಳ ಒಪ್ಪಂದದ ಪತ್ರ ವಗೈರೆ ನೀವು ಮಾಡದೇ ಹೋದರೆ ನಾನು ದಾವಣಗೆರೆ ಕ್ಯಾಂಪಿಗೆ ಬರುವುದೇ ಇಲ್ಲ" ಎಂದು ಖಂಡಿತವಾಗಿ ಹೇಳಿಬಿಟ್ಟರು. ಭಾಗವತರ ಈ ಮಾತಿನಿಂದ ಅವರುಗಳಿಗೆ ಸ್ವಲ್ಪ ಅಸಮಾಧಾನ ವುಂಟಾಗಿ ಏನೋ ಒಂದು ರೀತಿಯಲ್ಲಿ ಒಪ್ಪಂದವನ್ನು ಮುಗಿಸಿದರು. ಅವರೆಲ್ಲ ಬೆಂಗಳೂರಿನಲ್ಲಿ ಕ್ಯಾಂಪು ಮುಗಿಸಿಕೊಂಡು ದಾವಣಗೆರೆಗೆ ಹೋದ ನಂತರ ನಾಟಕ ಪ್ರಾರಂಭವಾಗುವ ಹಿಂದಿನ ದಿವಸ ಭಾಗವತರು ಅಲ್ಲಿಗೆ ಹೋದರು. ಭಾಗವತರು ಹಿಂದೆಯೇ ಹೇಳಿದ್ದಂತೆಯೆ ನಾಟಕ ಪ್ರಾರಂಭವಾದ ದಿವಸ ಹಣ ವಸೂಲಿ ಅಷ್ಟು ತೃಪ್ತಿಕರವಾಗಿ ಆಗಲಿಲ್ಲ. ಎರಡನೇ ದಿವಸ ಮೊದಲನೇ ದಿವಸಕ್ಕಿಂತಲೂ ಕಡಿಮೆಯಾಯಿತು. ಮಾರನೇ ದಿವಸ ಶಿವರಾತ್ರಿ ಹಬ್ಬ. ಈ ಎರಡೂ ದಿವಸ ನಡೆದ ವಸೂಲನ್ನು ನೋಡಿ ಕಂಟ್ರಾಕ್ಟ್‌ದಾರನು "ಹ್ಯಾಗಾದರೂ ಮಾಡಿ ಈ ಕಂಟ್ರಾಕ್ಟ್‌ನಿಂದ ಬಿಡುಗಡೆಯಾಗಬೇಕು" ಎಂದು ಯೋಚಿಸಿ ಶಿವರಾತ್ರಿ ಹಬ್ಬದ ಸಂಜೆಯೇ ನಾಟಕ ಆರಂಭವಾಗುವ ನಾಲ್ಕು ಗಂಟೆಗಳ ಮುಂಚೆಯೇ "ನೀವು ಹೇಳಿದಂತೆ ನಟ ನಟಿಯರನ್ನು ಕರೆತರಲಿಲ್ಲ. ಭಾಗವತರು ಒಬ್ಬರಿದ್ದರೆ ಸಾಕೆ, ಅದಕ್ಕೇ ಹಣ ವಸೂಲಾಗಲಿಲ್ಲ ನೀವು ಹ್ಯಾಗಾದರೂ ಮಾಡಿಕೊಳ್ಳಿ ನನ್ನ ಕಂಟ್ರಾಕ್ಟ್‌ಅನ್ನೂ ಕ್ಯಾನ್ಸಲ್ ಮಾಡಿಕೊಳ್ಳಿ" ಎಂದು ತಕರಾರು ಪ್ರಾರಂಭಿಸಿದ. ಆಗ ನಾಟಕ ರಂಗದಲ್ಲಿ ಬಹಳ ಅನುಭವ ಹೊಂದಿದ್ದ ಭಾಗಸ್ಥರಲ್ಲಿ ಒಬ್ಬರಾಗಿದ್ದ ಕಂಟ್ರಾಕ್ಟ್‌ದಾರನ ಬಳಿ ಕಂಟ್ರಾಕ್ಟ್ ಮಾಡಿಕೊಂಡಿದ್ದರೂ ಕಂಟ್ರಾಕ್ಟ್‌ದಾರರು ಈ ರೀತಿ ಒಬ್ಬರಿಗೊಬ್ಬರು ಕೂಗಾಡುತ್ತಿರುವಾಗ್ಗೆ ಭಾಗವತರು ಇದನ್ನು ನೋಡಿಯೂ ನೋಡದವರಂತೆ ಸುಮ್ಮನಿದ್ದುಬಿಟ್ಟರು ! ಆಗ ಇವರ ಮಿತ್ರರು "ಇದೇನು ಕಂಟ್ರಾಕ್ಟ್‌ದಾರರು ಹೀಗೆ ತಕರಾರು ಮಾಡುತ್ತಿರುವಾಗ ನೀವು ಎಲ್ಲವನ್ನೂ

ಕೇಳಿಯೂ ಕೇಳದವರಂತೆಯೇ ಇದ್ದೀರಲ್ಲ. ಈಗ ಏನು ಮಾಡುವುದು" ಎಂದು ಭಾಗವತರನ್ನೇ ಸಲಹೆ ಕೇಳಬೇಕಾಗಿ ಬಂತು. ಅದಕ್ಕೆ ಭಾಗವತರು "ಹಿಂದೆ ಈ ಕ್ಯಾಂಪು ಬೇಡವೆಂದು ಹೇಳಿದ ವಿಚಾರ ಈಗ ನಿಮಗೆ ನೆನಪಿಗೆ ಬರುತ್ತಿದೆಯೇ. ಮಾಡಿಕೊಂಡದ್ದಕ್ಕೆ ಈಗ ಅನುಭವಿಸಲೇಬೇಕು. ಮಂಡ್ಯದಲ್ಲಿ ನಾವು ಕ್ಯಾಂಪು ಮಾಡಿದ್ದರೆ ನಮಗೆ ಇಂಥ ಕಷ್ಟಗಳು ಬರುತ್ತಿರಲಿಲ್ಲ" ಎಂದು ಹೇಳಿದರು. ಜೊತೆಗೆ ಕಂಟ್ರಾಕ್ಟ್‌ದಾರ ಈ ರೀತಿ ಹೇಳಿದರು: "ದಾವಣಗೆರೆ ಕ್ಯಾಂಪು ಬೇಡ ಇಲ್ಲಿರುವವರೆಲ್ಲರೂ ಶಿವಭಕ್ತರು, ನಮ್ಮ ನಾಟಕವನ್ನು ಅಲ್ಲಿ ಇಷ್ಟಪಡುವುದಿಲ್ಲ. ಅಲ್ಲಿಗೆ ಬೇಡವೆಂದು ನಾನು ಹೇಳಿದಾಗ 'ನಿಮ್ಮ ಕೊರವಂಜಿ ಪಾತ್ರ ಒಂದೇ ಸಾಕು' ಎಂದು ಹೇಳಿ ನೀವು, ನಮ್ಮ ಮಿತ್ರರೆಲ್ಲರೂ ಸೇರಿ ಮಾತಾಡಿಕೊಂಡು ನನ್ನ ಗಮನಕ್ಕೆ ಬಾರದಂತೆಯೇ ನೀವು ಮುಂಗಡವಾಗಿ ಹಣದ ಚೆಕ್ಕನ್ನು ನನ್ನ ಮಿತ್ರರ ಹೆಸರಿಗೆ ಕಳಿಸಿದ್ದೀರಲ್ಲವೇ. ಈಗ ನಮ್ಮನ್ನು, ನೂರಾರು ಮಂದಿ ಇರುವ ಇಷ್ಟು ದೊಡ್ಡ ಕಂಪನಿಯನ್ನು ಇಲ್ಲಿಗೆ ತಂದು ಮೂರು ದಿವಸದಲ್ಲಿಯೇ ಈ ರೀತಿ ನೀವು ಹೇಳುವುದು ನ್ಯಾಯವೆ. ಇದರ ಫಲಾಫಲವನ್ನು ನೀವು ಅನುಭವಿಸಬೇಕಾಗಿ ಬರಬಹುದು ಎಂದು ಬಹಳ ದುಃಖದಿಂದಲೇ ಹೇಳಿದರು. 'ಓಹೋ ಇದೆಲ್ಲ ನನಗೂ ಗೊತ್ತಿದೆ' ಎಂದು ಕೂಗುತ್ತಲೇ ಕಂಟ್ರಾಕ್ಟ್‌ದಾರರು ಹೊರಟೇಬಿಟ್ಟರು. ಆಗ ಸಂಜೆ ಸುಮಾರು ಆರು ಗಂಟೆಯ ಸಮಯ. ಇವರೆಲ್ಲರೂ ದಿಕ್ಕು ತೋಚದವರಂತೆ ಕುಳಿತಿದ್ದರು. ಕಲಾವಿದರೆಲ್ಲರೂ ವೇದನೆಯಿಂದಲೇ ಒಬ್ಬರಿಗೊಬ್ಬರು ಪಿಸು ಪಿಸು ಮಾತನಾಡುತ್ತಿದ್ದರು. ಆಗ ಈ ಕಂಟ್ರಾಕ್ಟ್‌ದಾರನ ಥಿಯೇಟರಿನ ಭಾಗಸ್ಥರು ಬಂದು "ನಮ್ಮ ಥಿಯೇಟರಿನ ಭಾಗಸ್ಥನಾದ ಶರಬಣ್ಣ ನವರು ನಿಮ್ಮಲ್ಲಿ ನಡೆದುಕೊಂಡಿರುವ ರೀತಿ ನನಗೆ ಇಷ್ಟವಾಗಲಿಲ್ಲ. ನೀವು ನಾಟಕ ಮಾಡುತ್ತಿರುವ ಥಿಯೇಟರಿನ ವಿಷಯವಾಗಿ ನನಗೂ ಆತನಿಗೂ ಬಹಳ ವ್ಯವಹಾರಗಳಿವೆ. ಆದರೆ, ನಿಮ್ಮ ಇಷ್ಟು ದೊಡ್ಡ ಕಂಪನಿಯನ್ನು ಇಲ್ಲಿಗೆ ಕರೆದು ತಂದು ಈ ರೀತಿ ನಡೆದುಕೊಂಡದ್ದು ನ್ಯಾಯವಲ್ಲ. ನಮ್ಮ ವ್ಯವಹಾರವೇನೇ ಇರಲಿ ನಿಮ್ಮಗಳಿಗೆ ನಾನು ಬೆಂಬಲವಾಗಿರುತ್ತೇನೆ. ಈ ದಿವಸ ನೀವು ನಾಟಕ ನಿಲ್ಲಿಸಬೇಡಿ, ನಾಟಕ ಆಡಿ, ಅದೆಷ್ಟೇ ಹಣ ವಸೂಲಾದರೂ ಚಿಂತೆಯಿಲ್ಲ" ಎಂದು ಹೇಳಿದರು. ಜೊತೆಗೆ ಅಲ್ಲಿಯ ಪೊಲೀಸ್ ಇನ್‌ಸ್ಪೆಕ್ಟರ್, ಸ್ನೇಹಿತರೊಬ್ಬ ವಕೀಲರು, ಇನ್ನೂ ಕೆಲವು ದೊಡ್ಡವರು ಇವರುಗಳ ಬಗೆಗೆ ಕನಿಕರ ತೋರಿ "ನೀವು ಈ ದಿವಸ ನಾಟಕ ನಡೆಸಿ, ನಾಳೆ ಬೆಳಗ್ಗೆ ಎಲ್ಲವನ್ನು ತೀರ್ಮಾನಿಸೋಣ" ಎಂದು ಧೈರ್ಯ ತುಂಬಿದರು. ಅದರಿಂದಾಗಿ ಆ ದಿವಸ ನಾಟಕ ಪ್ರದರ್ಶನ ನಡೆಯಿತು.

ಎರಡನೇ ದಿವಸ ಆ ಕಂಟ್ರಾಕ್ಟ್‌ದಾರರನ್ನು ಕರೆಸಿ ಹಿರಿಯ ವ್ಯಕ್ತಿಗಳೆಲ್ಲ ಸೇರಿ "ನೀವು ಈ ರೀತಿ ನಡೆದುಕೊಂಡದ್ದು ಸರಿಯಲ್ಲ, ಈಗ ನೀವು ಮಾಡಿಕೊಂಡಿರುವ 30 ನಾಟಕಗಳ ಒಪ್ಪಂದದಲ್ಲಿ 20 ನಾಟಕಗಳಿಗೆ ಅವರಿಗೆ ಸೇರಬೇಕಾದ ಹಣವನ್ನು ಕೊಟ್ಟು ಅದರಿಂದಾಗುವ ನಷ್ಟವನ್ನು ನೀವೇ ಅನುಭವಿಸಬೇಕು" ಎಂದು ತೀರ್ಮಾನ ಮಾಡಿದರು. ಅದಕ್ಕೆ ಅವರು ಒಪ್ಪಿಕೊಂಡರು. ಅದರಂತೆಯೇ ನಾಟಕಗಳು ಜರುಗುತ್ತಿರುವಾಗ್ಗೆ ಭಾಗವತರ ಜೊತೆಯಲ್ಲೇ ಇದ್ದ ಕಂಪನಿಯ ಭಾಗಸ್ಥರು 'ಹೀಗೆಲ್ಲಾ ಆಯಿತಲ್ಲಾ' ಎಂದು ಬೇಸರಪಟ್ಟುಕೊಂಡು ಹೇಗಾದರೂ ಮಾಡಿ ಇದರಿಂದ ನಾನು ತಪ್ಪಿಸಿಕೊಳ್ಳುವುದೇ ಮೇಲೆಂದು ತೀರ್ಮಾನಿಸಿದರು. ಆಗ ಚಿತ್ರದುರ್ಗದಲ್ಲಿ ಹೆಸರಾಂತ ಒಂದು ನಾಟಕ ಮಂಡಲಿಯ ಕ್ಯಾಂಪು ಜರುಗುತ್ತಿತ್ತು, ಭಾಗವತರಿಗೆ ತಿಳಿಸದೆಯೇ ಅಲ್ಲಿಗೆ ಹೋಗಿ ಅವರುಗಳಲ್ಲಿ "ನಾವು ಕಂಪನಿಯನ್ನು ಮಾರಿಬಿಡುತ್ತಿದ್ದೇವೆ. ನಿಮಗೆ ಇಷ್ಟವಿದ್ದರೆ ಅದರ ಸಲಕರಣೆಗಳನ್ನೆಲ್ಲ ತೆಗೆದುಕೊಳ್ಳಬಹುದು" ಎಂದು ಮಾತನಾಡಿ ಬಂದುಬಿಟ್ಟರು. ಅವರು ನಾಟಕ ಮಂಡಲಿಗೆ ಹೋಗಿ ಬಂದ ಈ ವಿಷಯ ಭಾಗವತರು ತನಗೆ ಯಾವ ವಿಷಯವನ್ನೂ ತಿಳಿಸದೆಯೇ ಈ ರೀತಿ ಮಾಡಿರುವುದನ್ನು ತಿಳಿದು ತುಂಬಾ ವೇದನೆಗೊಳಗಾದರು. ಕೆಲವು ಆಪ್ತಮಿತ್ರರಲ್ಲಿ ಈ ವಿಷಯವನ್ನು ಹೇಳಿಕೊಂಡರು. ಆಗ ಅವರು "ಕಂಟ್ರಾಕ್ಟ್‌ದಾರನ 20 ನಾಟಕಗಳು ಮುಗಿದ ನಂತರ ನೀವು ಇಲ್ಲಿಂದ ಬೆಂಗಳೂರಿಗೆ ಹೊರಟುಬಿಡಿ. ಅದ್ಯಾರು ಬಂದು ಈ ಕಂಪನಿಯನ್ನು ಮಾರುತ್ತಾರೋ ನಾವು ನೋಡಿಕೊಳ್ಳುತ್ತೇವೆ" ಎಂದು ಹೇಳಿದರು. ಈ ರೀತಿ ಹೇಳಿದವರಲ್ಲಿ ಶ್ರೀಮಂತರೊಬ್ಬರು ಭಾಗವತರಿಗೆ ಬಂಧುಗಳಾಗಬೇಕು. ಅವರು "ನೀವು ಈ ಕಂಪನಿ ವ್ಯವಹಾರವನ್ನೆಲ್ಲಾ ಮುಗಿಸಿಕೊಳ್ಳುವವರೆಗೂ ಒಂದು ತಿಂಗಳಾದರೂ ಸರಿ. ಕಂಪನಿಯ ಕಲಾವಿದರೆಲ್ಲರಿಗೂ ನಾನು ಊಟ ಹಾಕುತ್ತೇನೆ" ಎಂದು ಧೈರ್ಯ ತುಂಬಿದರು. ಅದಕ್ಕಾಗಿ ಆ ಮಹನೀಯರನ್ನು ಆ ಮೂಲಕ ಭಾಗವತರು ಬಹಳವಾಗಿ ಸ್ಮರಿಸಿಕೊಂಡರು. ಅದರಂತೆಯೇ ಭಾಗವತರು 20 ನಾಟಕಗಳನ್ನು ಮುಗಿಸಿ ಬೆಂಗಳೂರಿಗೆ ಹೊರಟು ಬಂದರು. ಬಂದನಂತರ ಭಾಗಸ್ಥರಾದ ಮಿತ್ರರು ಭಾಗವತರ ಬಳಿಗೆ ಬಂದು "ಏನು ಎಲ್ಲ ಹೀಗಾಯಿತು; ಈ ಕಷ್ಟ ಯಾರಿಗೂ ಬೇಡ ಕಂಪನಿ ಸಾಮಾನುಗಳನ್ನು ಮಾರಿಬಿಟ್ಟು ಕೊಡಬೇಕಾದವರಿಗೆಲ್ಲಾ ಕೊಟ್ಟು ತೀರ್ಮಾನ ಮಾಡಿಕೊಳ್ಳೋಣ" ಎಂದು ಒಂದಿಬ್ಬರು ಪಂಚಾಯಿತಿದಾರರನ್ನು ಕರೆದುಕೊಂಡು ಭಾಗವತರ ಮನೆಗೆ ಬಂದು ಮಾತಿಗೆ ಆರಂಭಿಸಿದರು.

ಆಗ ಭಾಗವತರು "ನಾನು ಮೊದಲೇ ಈ ವ್ಯವಹಾರ ಬೇಡವೆಂದು ಎಷ್ಟು ಹೇಳಿದರೂ ಕೇಳದೆ ನನ್ನನ್ನು ಒಪ್ಪಿಸಿ, ತುಂಬ ಕೀಳಾಗಿ ನನ್ನನ್ನು ಕಂಡಿರುವುದಲ್ಲದೆ ನನ್ನ ಸಲಹೆಗಳನ್ನು ಕೊಂಚವಾದರೂ ತೆಗೆದುಕೊಳ್ಳದೇ ಈ ಒಂದು ಪರಿಸ್ಥಿತಿಗೆ ಗುರಿ ಮಾಡಿ ಜನರ ಮುಂದೆ ಅಪಹಾಸ್ಯಕ್ಕೊಳಗಾದೆವು. ಈಗೇನು ಮಾಡಬೇಕೆಂಬುದೇ ನನಗೂ ಅರ್ಥವಾಗುತ್ತಿಲ್ಲ" ಎಂದು ಹೇಳಿದಾಗ ಅವರ ಜೊತೆಯಲ್ಲಿ ಬಂದಿದ್ದ ಒಬ್ಬ ಮಿತ್ರರು "ಈ ಕಂಪನಿಯನ್ನು ಬೇರೆಯವರಿಗೆ ಮಾರುವುದು ಬೇಡ ನಿಮಗೆ ಬೇಕಾದರೆ ಆರ್ಥಿಕವಾಗಿ ನಾವು ಸ್ವಲ್ಪ ಸಹಾಯ ಮಾಡುತ್ತೇವೆ. ನೀವೇ ಕಂಪನಿಯನ್ನು ವಹಿಸಿಕೊಂಡು ನಡೆಸಿ, ನಾವು ನೀವು ದಾವಣಗೆರೆಗೆ ಹೋಗಿ ವ್ಯವಹಾರವನ್ನೆಲ್ಲಾ ತೀರ್ಮಾನ ಮಾಡಿಕೊಳ್ಳೋಣ" ಎಂದು ಹೇಳಿದರು. ಅದರಂತೆಯೇ ಎರಡು ದಿನ ಕಳೆದು ಎಲ್ಲರೂ ದಾವಣಗೆರೆಗೆ ಪ್ರಯಾಣ ಬೆಳೆಸಿದರು.

ಅಲ್ಲಿ ನಂಬಲರ್ಹವಾದ ಮಿತ್ರರು ಜೊತೆಯಲ್ಲಿ ಉಭಯತ್ರರಾದ ಭಾಗಸ್ಥರನ್ನು ಕಂಪನಿಯ ವ್ಯವಹಾರವಾಗಿ ಮಾತನಾಡಿದರು. ಆ ತೀರ್ಮಾನದಂತೆ "ಭಾಗವತರೇ ಕಂಪನಿಯನ್ನು ವಹಿಸಿಕೊಂಡು ನಡೆಸುತ್ತ, ಈಗ ನಡೆದಿರುವ ನಷ್ಟಕ್ಕೆ ಭಾಗವತರು ಹೊಣೆಯಾಗುವುದು ಬೇಡ. ಯಾಕೆಂದರೆ, ಅವರು ಈ ಎರಡು ಕ್ಯಾಂಪಿನಲ್ಲಿಯೂ ಪಾತ್ರ ವಹಿಸಿದ್ದಕ್ಕೆ ಕಂಪನಿಯಿಂದ ಯಾವ ಸಂಭಾವನೆಯನ್ನು ತೆಗೆದುಕೊಂಡಿಲ್ಲ. ಆ ಮೂಲಕದ ನಷ್ಟವನ್ನು ಇವರು ಅನುಭವಿಸಿದ್ದಾರೆ. ಆದಕಾರಣ ಈಗ ನಾವು ತೀರ್ಮಾನ ಮಾಡತಕ್ಕಂಥ ಒಂದು ಮೊಬಲಗನ್ನು ಭಾಗವತರು ಮುಂದೆ ಕಂಪನಿ ನಡೆಸುತ್ತ ಕೆಲವು ಕ್ಯಾಂಪುಗಳಲ್ಲಿ ಭಾಗಸ್ಥರಾದ ಅವರ ಮಿತ್ರರಿಗೆ ಕೊಡಬಹುದೆಂದು ತೀರ್ಮಾನಿಸಿ ಕಂಪನಿಯನ್ನು ಭಾಗವತರ ತಲೆಗೆ ಕಟ್ಟಿದರು. ಆದರೆ ಈ ಜವಾಬ್ದಾರಿ ಭಾಗವತರಿಗೆ ಅಷ್ಟು ಸಮಾಧಾನಕರವೆನಿಸದಿದ್ದರೂ ಜನರ ಮುಂದೆ ಮತ್ತೆ ಅಪಹಾಸ್ಯಕ್ಕೆ ಗುರಿಯಾಗುತ್ತೇನಲ್ಲ ಎಂಬ ದೃಷ್ಟಿಯಿಂದ ಈಶ್ವರನ ಚಿತ್ತ ಹೇಗಿದೆಯೋ ಹಾಗಾಗಲಿ ಎಂದು ದೃಢ ಸಂಕಲ್ಪ ಮಾಡಿ ಒಪ್ಪಿಕೊಂಡರು. ನಂತರ ಕವಿಗಳು, ಸಾಹಿತಿಗಳು, ಸೃಜನಶೀಲ ಸಾಹಿತಿಗಳೂ ಆದಂಥ ಮಹದೇವ ಬಣಕಾರರಿಂದ 'ಮಕ್ಕಳ ಫಲ'ವೆಂಬ ಸಾಮಾಜಿಕ ನಾಟಕವನ್ನು ಪಡೆದು ಮೂರು ವಾರದಲ್ಲಿ ಅದನ್ನು ಅಭ್ಯಾಸ ಮಾಡಿಕೊಂಡು ಬೆಂಗಳೂರಿನಲ್ಲಿನ ತಮ್ಮ ಕೆಲವು ಆತ್ಮೀಯ ಮಿತ್ರರಿಂದ ಸ್ವಲ್ಪಮಟ್ಟಿನ ಆರ್ಥಿಕ ಸಹಾಯ ಪಡೆದ ಭಾಗವತರು ಬೆಂಗಳೂರಿನ ತಮ್ಮ ಬಂಧುಗಳು ಮತ್ತು ಕೆಲ ಮಿತ್ರರುಗಳನ್ನು ದಾವಣಗೆರೆಗೆ ಬರಮಾಡಿಕೊಂಡು 'ಮಕ್ಕಳ ಫಲ'ವೆಂಬ ಸಾಮಾಜಿಕ

ನಾಟಕವನ್ನು ಪ್ರಾರಂಭಿಸಿದರು. ನಾಟಕವೇನೋ ಚೆನ್ನಾಗಿದೆ ಎಂಬ ಅಭಿಪ್ರಾಯ ಬಂತು. ಆದರೆ ನಾಟಕ ರಚಿಸಿದವರ ಮೇಲಿನ ಅಲ್ಲಿಯ ಕೆಲವರ ವೈಯಕ್ತಿಕ ದ್ವೇಷದಿಂದಾಗಿ ನಾಟಕಕ್ಕೆ ಅಪಪ್ರಚಾರ ಮಾಡತೊಡಗಿದರು. ಆ ಊರಿನ ಇಂಥ ರಾಜಕೀಯದಿಂದಾಗಿ ಭಾಗವತರ ನಾಟಕ ಪ್ರದರ್ಶನಕ್ಕೆ ತೊಂದರೆ ಉಂಟಾಯಿತು. ಆಗ ಭಾಗವತರಿಗೆ ತುಂಬ ವ್ಯಥೆಯಾಗಿ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾದರು. ಅವರು ಈ ಸ್ಥಿತಿಯನ್ನು ನೋಡಿ 'ಮಕ್ಕಳ ಫಲ' ನಾಟಕ ಕೊಟ್ಟು ಸಹಕರಿಸಿದ್ದ ಮಹದೇವ ಬಣಕಾರರು ಮತ್ತು ಥಿಯೇಟರಿನ ಭಾಗಸ್ಥರಾದ ತಿಪ್ಪಯ್ಯನವರು ಕಂಪನಿಯ ವಿಷಯದಲ್ಲಿ "ನಾವು ಮಾಡಿದ ಏರ್ಪಾಡೂ ಸಹ ಹೀಗಾಯಿತಲ್ಲ ಇದು ಭಾಗವತರ ಕೆಟ್ಟ ಗ್ರಹದ ಫಲ"ವೆಂದು ಅವರುಗಳೇ ಬಹಳ ಪಶ್ಚಾತ್ತಾಪಪಟ್ಟು ಮುಂದೇನು ಮಾಡುವುದೆಂದು ಯೋಚಿಸುವಾಗ ಭಾಗವತರಿಗೆ ಒಂದು ವಿಚಾರ ನೆನಪಿಗೆ ಬಂತು. ಅದೇನೆಂದರೆ, ಚಿತ್ರದುರ್ಗಕ್ಕೆ ಸಮೀಪವಿರುವ ಜಗಳೂರಿನಲ್ಲಿ ಆ ಊರಿನ ಕಲಾವಿದರೇ ನಾಟಕಗಳನ್ನಾಡಲು ಒಂದು ಥಿಯೇಟರನ್ನು ನಿರ್ಮಿಸಿ ಅದರಲ್ಲಿ ನಾಟಕಗಳನ್ನು ಪ್ರದರ್ಶಿಸಿದ್ದರು. ಆ ಥಿಯೇಟರ್ ಹಾಗೇ ಇದ್ದರೆ ಅದನ್ನೇ ಸ್ವಲ್ಪ ತಮ್ಮ ರಂಗಮಂಟಪಕ್ಕೆ ಮಾರ್ಪಾಡು ಮಾಡಿಕೊಂಡು ಅಲ್ಲಿ ನಾಟಕಗಳನ್ನು ಆಡಬಹುದೆಂದು ಭಾವಿಸಿದರು. ಪ್ರದರ್ಶಿಸುವ ನಾಟಕ ತಿರುಪತಿ ವೆಂಕಟರಮಣ ಸ್ವಾಮಿಯ ಕಥೆಯಾದ್ದರಿಂದ ಅಲ್ಲಿಯ ಹಾಗೂ ಸುತ್ತಮುತ್ತಿನವರು ರೆಡ್ಡಿ ಮತಸ್ಥರಾದ್ದರಿಂದ ಈ ನಾಟಕ ಅಲ್ಲಿ ಜನಗಳಿಗೆ ಪ್ರಿಯವಾಗಬಹುದೆಂದು ತೀರ್ಮಾನಿಸಿ ಅಂದೇ ಭಾಗವತರು ಮೇಲ್ಕಂಡ ಮಿತ್ರರೊಂದಿಗೆ ಜಗಳೂರಿಗೆ ಹೊರಟರು. ಅಲ್ಲಿಯ ಕೆಲವು ಶ್ರೀಮಂತರನ್ನ, ಕಲಾವಿದರನ್ನ ಭೇಟಿ ಮಾಡಿ ತಾವು ಬಂದ ಉದ್ದೇಶವನ್ನು ತಿಳಿಸಿದರು. ಅದಕ್ಕೆ ಅವರುಗಳು "ಇವರ ನಾಟಕವೇನೋ 'ಶ್ರೀನಿವಾಸ ಕಲ್ಯಾಣ' ಜನರಿಗೆ ಹಿಡಿಸಬಹುದು. ಆದರೆ ಇದು ಬಹಳ ಚಿಕ್ಕ ಊರು, ನಾವೇನೋ ನಮ್ಮ ಖುಷಿಗಾಗಿ ನಾಟಕವಾಡಿಕೊಳ್ಳಲು ಕೇವಲ ಹುಲ್ಲಿನಿಂದ ಥಿಯೇಟರ್ ರಚಿಸಿದ್ದೇವೆ. ಇವರ ರಂಗಮಂಟಪ ಸಾಮಾನು ಗಳು ಬಹಳವಿದೆ ಅದಕ್ಕೆ ವಿಶಾಲವಾದ ರಂಗಮಂಟಪವೇ ಬೇಕು. ಇಷ್ಟು ದೊಡ್ಡ ಕಂಪನಿ ಇಲ್ಲಿ ನಾಟಕವಾಡುವುದೆಂದರೆ ಆರ್ಥಿಕ ದೃಷ್ಟಿಯಿಂದ ಸ್ವಲ್ಪ ಕಷ್ಟವೇ ಆಗಬಹುದು. ಅಂತೂ ಸದ್ಯಕ್ಕೆ ನೀವು ದಾವಣಗೆರೆಯನ್ನು ಬಿಟ್ಟು ಬೇರೆ ಕ್ಯಾಂಪು ಮಾಡಬೇಕಾಗಿದೆ' ಎಂಬ ವಿಚಾರ ನೋಡಿದಾಗ ನಿಮಗೆ ನಾವುಗಳು ನಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡಲು ಸಿದ್ಧರಾಗಿದ್ದು ಈಗ ಇರುವ ಥಿಯೇಟರಿನ ಹಿಂಭಾಗದಲ್ಲಿ ಹೇಗೂ ಖಾಲಿ ಜಮೀನಿದೆ. ಅಲ್ಲಿ ನಿಮ್ಮ ರಂಗಮಂಟಪವನ್ನು ಹ್ಯಾಗಾದರೂ ಮಾಡಿ ನಿರ್ಮಿಸಿಕೊಡುತ್ತೇವೆ. ಇಷ್ಟರ ಮೇಲೆ ದೈವಚಿತ್ತ. ಧೈರ್ಯವಾಗಿ ಬನ್ನಿ" ಎಂದು ಹೇಳಿದ ಒಂದು ವಾರದಲ್ಲಿ ಅದೇ ರೀತಿ

ಅಲ್ಲಿ ಏರ್ಪಾಡು ಮಾಡಿದರು. ಭಾಗವತರು ಜಗಳೂರಿನಲ್ಲಿ ನಾಟಕವನ್ನು ಪ್ರಾರಂಭಿಸಿದರು. ಶ್ರೀನಿವಾಸನ ಅನುಗ್ರಹದಿಂದ ಮೊದಲ ದಿವಸವೇ ಇವರು ನಿರೀಕ್ಷಿಸಿದಕ್ಕಿಂತಲೂ ಹೆಚ್ಚಾಗಿಯೇ ಹಣ ವಸೂಲಾಗಿ ನಾಟಕಕ್ಕೆ ಒಳ್ಳೆ ಕೀರ್ತಿ ಬಂದು ದಿನೇದಿನೇ ಪ್ರೇಕ್ಷಕರ ಪ್ರೋತ್ಸಾಹ ಹೆಚ್ಚಾಗುತ್ತಿತ್ತು. ಸುಮಾರು ಮೂವತ್ತು ನಾಟಕಗಳು ಚೆನ್ನಾಗಿಯೇ ನಡೆದವು. ಅದಕ್ಕಾಗಿ ಜಗಳೂರಲ್ಲಿ ತಮಗೆ ಸಹಾಯ ಮಾಡಿದ ಮಿತ್ರರನ್ನು ಕೆಲವು ಶ್ರೀಮಂತರನ್ನು, ಕಲಾವಿದರನ್ನು ಭಾಗವತರು ಬಹಳವಾಗಿ ಸ್ಮರಿಸುತ್ತಾರೆ.

ಚಿತ್ರದುರ್ಗದಲ್ಲಿ ಹಿರಣ್ಣಯ್ಯ ಮಿತ್ರಮಂಡಲಿಯವರ ಥಿಯೇಟರ್ ಸಿದ್ಧವಾಗಿದ್ದ ಕಾರಣ ಜಗಳೂರಿನಲ್ಲಿ ಕ್ಯಾಂಪು ಮುಗಿಸಿಕೊಂಡು ಮತ್ತೆ ಚಿತ್ರದುರ್ಗಕ್ಕೆ ಬದಲಾಯಿಸಿದರು. ಅಲ್ಲಿ 'ಶ್ರೀನಿವಾಸ ಕಲ್ಯಾಣ' ನಾಟಕದ 25 ಪ್ರಯೋಗಗಳು ಯಶಸ್ವಿಯಾಗಿ ಜರುಗಿದವು. ಹೆಚ್ಚಿನ ರೀತಿಯಲ್ಲಿ ಜನರ ಪ್ರೋತ್ಸಾಹವೂ ದೊರಕಿತು. ಆದರೆ ಥಿಯೇಟರಿನ ಮಾಲೀಕರಲ್ಲಿ ಒಬ್ಬರು ತಮ್ಮ ಥಿಯೇಟರಿನ ಕಾಲುಭಾಗ ಜಂಕ್‌ಷೀಟ್‌ಗಳನ್ನು ತೆಗೆದು ಟಾರ್ಪಾಲು ಹಾಕಿಸಿದ್ದರು. ಭಾಗವತರ ಗ್ರಹಚಾರಕ್ಕೆ ಸರಿಯಾಗಿ ಅಂದೇ ಮಳೆ ಪ್ರಾರಂಭವಾಯಿತು. ಇದಾದ ನಂತರ ವಸೂಲಿ ಹಣ ಕಡಿಮೆಯಾಗಿ ಮೇಲ್ಕಂಡ ಮಹನೀಯರ ಥಿಯೇಟರ್ ಹಿರಿಯೂರಿನಲ್ಲಿ ಖಾಲಿಯಾಗಿದ್ದ ಪ್ರಯುಕ್ತ ಅಲ್ಲಿ ಕ್ಯಾಂಪು ಮಾಡಿದರು. ಅಲ್ಲಿಯೂ 'ಶ್ರೀನಿವಾಸ ಕಲ್ಯಾಣ'ದ 50 ಪ್ರಯೋಗಗಳು ಚೆನ್ನಾಗಿಯೇ ನಡೆದವು. ಅಂತೂ ಎರಡು ತಿಂಗಳು ಕ್ಯಾಂಪು ಮುಗಿಯುವುದರೊಳಗಾಗಿ ಹಿರಿಯೂರಿನ ಶ್ರೀ ವಿದ್ಯಾಗಣಪತಿ ಸಂಘದವರ ಅನುಮತಿಯಂತೆ ಸಂಘದ ಜೆಂಕ್‌ಷೀಟ್‌ಗಳನ್ನು ಪಡೆದುಕೊಂಡು ಹೊಸದುರ್ಗದಲ್ಲಿ ಸ್ವಂತವಾಗಿಯೇ ಥಿಯೇಟರ್ ಕಟ್ಟಿಸಿಕೊಂಡು ಅಲ್ಲಿ ಕ್ಯಾಂಪು ಮುಗಿಸುವ ಸಂದರ್ಭದಲ್ಲಿ ಹಿರಿಯೂರಿನ ಥಿಯೇಟರ್ ಮಾಲೀಕರು ಅಲ್ಲಿಗೆ ಬಂದಿದ್ದಾಗ ಭಾಗವತರು "ಈಗ ನಿಮಗೆ ಥಿಯೇಟರ್ ಬಾಡಿಗೆ ಕೊಡಬೇಕಾದ್ದನ್ನು ಹೊಸದುರ್ಗದ ಕ್ಯಾಂಪು ಮಾಡಿ ಒಂದು ವಾರದೊಳಗಾಗಿ ಕಳಿಸುತ್ತೇನೆ" ಎಂದು ಹೇಳಿದರು. 'ಹಾಗೇ ಮಾಡಿ' ಎಂದು ಸಂತೋಷದಿಂದ ಒಪ್ಪಿಕೊಂಡು ಹೋದ ಅವರು ಕ್ಯಾಂಪು ಮುಗಿಸುವ ಕಡೆಯ ನಾಟಕದ ದಿವಸ ಚಿತ್ರದುರ್ಗದ ತನ್ನ ಮಿತ್ರರಿಗೆ ಬೆಂಗಳೂರಿನಿಂದ ದೂರವಾಣಿಯ ಮೂಲಕ "ಹಿರಿಯೂರಿನಲ್ಲಿ ಕಡೆಯ ನಾಟಕದ ದಿವಸ ನೀವುಗಳು ಹೋಗಿ ನಮಗೆ ಬರಬೇಕಾದ ಬಾಡಿಗೆ ಅವರಿಂದ ವಸೂಲಿ ಮಾಡಿ, ಹಾಗೇ ಅವರು ಕೊಡದಿದ್ದರೆ ಅವರ ಕಂಪನಿಯ ಸಾಮಾನುಗಳನ್ನು ಹಿಡಿದುಬಿಡಿ" ಎಂದು ಹೇಳಿ ಕಳಿಸಿದರು. ಅದರಂತೆಯೇ ಚಿತ್ರದುರ್ಗದಿಂದ ಬಂದ ನಾಲ್ವರು ಮೇಲ್ಕಂಡ ವಿಚಾರವನ್ನು ಭಾಗವತರಿಗೆ ತಿಳಿಸಿದರು. ಕಕ್ಕಾಬಿಕ್ಕಿಯಾದ ಭಾಗವತರು ಹಿರಿಯೂರಿನ ಕೆಲ ಸ್ನೇಹಿತರಿಗೆ ಈ

ವಿಚಾರ ತಿಳಿಸಿದರು. ಜೊತೆಗೆ ಪೊಲೀಸ್ ಸ್ಟೇಷನ್ನಿನ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಎಲ್ಲರೂ ಸೇರಿ ಭಾಗವತರ ವಿಷಯವಾಗಿ ತುಂಬ ಕನಿಕರಪಟ್ಟು ಚಿತ್ರದುರ್ಗದಿಂದ ಬಂದಿದ್ದ ವ್ಯಕ್ತಿಗಳಿಗೆಲ್ಲ ಛೀಮಾರಿ ಹಾಕಿ ಕಳಿಸಿ ಅಲ್ಲಿಂದ ಹೊಸದುರ್ಗಕ್ಕೆ ಹೊರಡಲು ಸಹಾಯ ಮಾಡಿದರು.

ಹೊಸದುರ್ಗಕ್ಕೆ ಬಂದು ನಾಟಕ ಪ್ರಾರಂಭಿಸಿದಂದಿನಿಂದ ಸುಮಾರು ಎರಡು ತಿಂಗಳು ಬಹಳ ಚೆನ್ನಾಗಿ ಹಣ ವಸೂಲಾಗಿ ಒಳ್ಳೆ ಕೀರ್ತಿಯೂ ಬಂತು. ಎರಡು ವಾರದಲ್ಲಿಯೇ ಹಿರಿಯೂರಿನಲ್ಲಿ ಭಾಗವತರಿಗೆ ಕೆಡಕು ಬಯಸಿದ್ದ ಥಿಯೇಟರಿನ ಮಾಲೀಕನಿಗೆ ಕೊಡಬೇಕಾಗಿದ್ದ ಪೂರ್ತಿ ಬಾಕಿಯನ್ನು ಕಳಿಸಿಕೊಟ್ಟು ಹೊಸದುರ್ಗದಲ್ಲಿ ಕ್ಯಾಂಪು ಮುಗಿಸಿಕೊಂಡು ಹಾಸನ ಜಾತ್ರೆಯಲ್ಲಿ ಸ್ವಂತವಾಗಿ ಥಿಯೇಟರ್ ಹಾಕಿಸಿ ಒಂದು ತಿಂಗಳು ಮಾತ್ರ ಕ್ಯಾಂಪು ಮಾಡಿ ಅಲ್ಲಿಂದ ಎಡತೊರೆ ಜಾತ್ರೆಗೆ, ನಂತರ ಹುಣಸೂರು, ಚಾಮರಾಜನಗರ ಅನಂತರ ಕೊಳ್ಳೇಗಾಲದಲ್ಲಿ ಮೂರು ತಿಂಗಳು ಬಹಳ ಚೆನ್ನಾಗಿ ಕ್ಯಾಂಪು ನಡೆಯಿತು. ಕೊಳ್ಳೇಗಾಲದಲ್ಲಿ ಕ್ಯಾಂಪು ಮುಗಿಯುವ ಸಂದರ್ಭದಲ್ಲಿ ಮರೆಯಲಾಗದ ಒಂದು ಪ್ರಸಂಗ ಜರುಗಿತು. ಏನೆಂದರೆ, ಬೆಂಗಳೂರಿನಲ್ಲಿ ವೀರಣ್ಣನವರಿಗೆ ಸೇರಿದ ಗುಬ್ಬಿ ಥಿಯೇಟರಿನಲ್ಲಿ ನಾಟಕವಾಡಿದ ಬಾಡಿಗೆ ಬಾಬ್ತು ಸುಮಾರು 2000 ರೂಪಾಯಿಗಳನ್ನು ಭಾಗವತರು ತಮ್ಮ ಕಂಪನಿಯಿಂದ ಕೊಡಬೇಕಾದ ಬಾಕಿಯನ್ನು ಭಾಗವತರು ಕಂಪನಿ ವಹಿಸಿಕೊಂಡ ಮೇಲೆ, ಕೊಡಬೇಕಾಗಿದ್ದ ಕೆಲವು ಮೊಬಲಗನ್ನು ತಾವೇ ವಹಿಸಿಕೊಂಡಿದ್ದ ಕಾರಣ ಸುಮಾರು 4 ತಿಂಗಳುಗಳಲ್ಲಿಯೇ ವೀರಣ್ಣನವರಿಗೆ ಕೊಡಬೇಕಾಗಿದ್ದ ಬಾಕಿ ಹಣವನ್ನು ಒಂದು ಸಾವಿರ ರೂಪಾಯಿ ನಗದಾಗಿಯೂ ಒಂದು ಸಾವಿರ ರೂಪಾಯಿಗಳನ್ನು ಚೆಕ್ಕಿನ ಮೂಲಕವೂ ಕೊಟ್ಟು ತೀರಿಸಿದ್ದರು. ಆದರೆ, ಇವರಿಗೆ ರಸೀದಿಗಳನ್ನು ಕಳಿಸುತ್ತೇವೆಂದು ಹೇಳಿದ್ದ ಮಹನೀಯರು ಆರು ತಿಂಗಳಾದರೂ ಕಳಿಸಿರಲಿಲ್ಲ. ಆಗ ಭಾಗವತರು ಬಹಳ ಒತ್ತಡ ಮಾಡಿ "ನಾನು ಕೊಟ್ಟ ಹಣಕ್ಕೆ ರಸೀದಿಗಳನ್ನು ನೀವು ಕಳಿಸಿಲ್ಲ. ವ್ಯವಹಾರದಲ್ಲಿ ಇದು ಅಷ್ಟು ಸಮಂಜಸವಾಗುವುದಿಲ್ಲ. ಇನ್ನೂ ನೀವು ಹೀಗೆ ನಿಧಾನ ಮಾಡಿದರೆ ನಾನೇ ಎದುರಿಗೆ ಬಂದು ರಸೀದಿಗಳನ್ನು ಪಡೆಯಬೇಕಾಗುತ್ತದೆಯೋ ಏನೊ. ಅಂತಹ ಸಂದರ್ಭ ಒದಗದಂತೆ ಮಾಡಿ. ಈ ಪತ್ರ ಕಂಡ ತಕ್ಷಣ ಕಳಿಸುತ್ತೀರೆಂದು ನಂಬಿರುತ್ತೇನೆ" ಎಂದು ಪತ್ರ ಬರೆದು ಎರಡು ವಾರದೊಳಗಾಗಿ ಮಾಲೀಕರ ಮಗನಿಂದ ರಸೀದಿಗಳು ಭಾಗವತರಿಗೆ ಅವರ ಭಾವನವರ ಮೂಲಕ ಬಂದವು. ಈ ರಸೀದಿಗಳು ಹಾಗೂ "ಇಡೀ ಬಾಕಿಯ ಹಣ ನೀವಿನ್ನು ಇದುವರೆಗೂ ಕೊಟ್ಟಿಲ್ಲ. ಒಂದು ವಾರದೊಳಗಾಗಿ ಕಳಿಸದಿದ್ದರೆ ನಾವು ನಿಮ್ಮ ಮೇಲೆ ದಾವೆ ಹಾಕಬೇಕಾಗುತ್ತದೆ" ಎಂದು

ವೀರಣ್ಣನವರು ಲಾಯರ್ ಮೂಲಕ ನೋಟೀಸ್ ಕೊಟ್ಟಿದ್ದೂ ಕೂಡ ಅದೇ ದಿನ ತಲುಪಿದವು !

ಕೊಳ್ಳೇಗಾಲದಿಂದ ಮಂಡ್ಯಕ್ಕೆ ಬಂದು ಕ್ಯಾಂಪು ಮಾಡಿ ಎರಡನೇ ದಿವಸವೇ ಮಂಡ್ಯದಲ್ಲಿ ಕಲಾವಿದರಲ್ಲಿ ಬಹಳ ಪ್ರೇಮವುಳ್ಳ ಅನಂತ ಶಂಕರಪ್ಪನವರೆಂಬ ಪ್ರಸಿದ್ಧ ವಕೀಲರಿಗೆ ಭಾಗವತರು ಈ ನೋಟೀಸು ಮತ್ತು ರಸೀದಿಗಳನ್ನು ತೋರಿಸಿದರು. ಆಗ ವಕೀಲರು "ವೀರಣ್ಣನವರು ಇಷ್ಟು ದೊಡ್ಡ ವ್ಯಕ್ತಿಯಾಗಿ ನಿಮ್ಮ ವಿಷಯದಲ್ಲಿ ಈ ರೀತಿ ನಡೆದುಕೊಂಡಿರುವುದು ಬಹಳ ಆಶ್ಚರ್ಯಕರವಾದ ವಿಷಯ. ಸರಿ, ಇದಕ್ಕೆ ನಾನು ಉತ್ತರವಾಗಿ ನೋಟೀಸು ಕೊಡುತ್ತೇನೆ. ಈ ಬಗ್ಗೆ ಚಿಂತೆಯನ್ನು ಬಿಟ್ಟು ನಿಮ್ಮ ಕೆಲಸ ನೋಡಿ" ಎಂದು ಹೇಳಿ ಸುಮಾರು 3–4 ಪೇಜು ನೋಟೀಸನ್ನು ವೀರಣ್ಣನವರಿಗೆ ಕಳಿಸಿದರು. ಅದು ತಲುಪಿದ ನಂತರ ಬೆಂಗಳೂರಿನಲ್ಲಿ ಭಾಗವತರು ತಮ್ಮ ಭಾವನವರನ್ನು ಸಂಧಿಸಿದಾಗ ಅದೇ ವೀರಣ್ಣನವರು "ಭಾಗವತರು ಮಂಡ್ಯದಿಂದ ನನಗೆ ನೋಟೀಸ್ ಕಳಿಸಿದ್ದಾರೆ, ಅದನ್ನು ನೋಡಿ ಬಹಳ ಪಶ್ಚಾತ್ತಾಪವಾಯಿತು. ನಮ್ಮ ಹುಡುಗ ರಸೀದಿಗಳನ್ನು ಕಳಿಸಿದ್ದು ನನಗೆ ಅವನು ಹೇಳಲಿಲ್ಲ. ಆದ ಕಾರಣ ನಾನು ಮರೆತೋ ಏನೋ ಲಾಯರ್ ನೋಟೀಸ್ ಕೊಟ್ಟುಬಿಟ್ಟೆ. ಇದು ಅಚಾತುರ್ಯವಾಗಿ ನಡೆದಿದೆ. ಭಾಗವತರಿಗೆ ಏನೂ ತಿಳಿದುಕೊಳ್ಳಬೇಡಿ ಎಂದು ಸಮಾಧಾನ ಹೇಳಿ" ಎಂದು ಹೇಳಿ ಕಳಿಸಿದ್ದರು. ಇದೇ ರೀತಿ ಹೊಸದುರ್ಗದಿಂದ ಹಿರಿಯೂರಿನ ಥಿಯೇಟರ್ ಮಾಲೀಕನಿಗೆ ಕಳಿಸಿದ್ದ ಬಾಕಿ ಹಣಕ್ಕೂ ಅವರೂ ಸಹ ರಸೀದಿ ಕಳಿಸದೆಯೇ ಭಾಗವತರು ಚಾಮರಾಜನಗರದಲ್ಲಿ ಕ್ಯಾಂಪು ಮಾಡಿದ್ದಾಗ ಚಿತ್ರದುರ್ಗದ ಒಬ್ಬ ಲಾಯರ್ ಮೂಲಕ ಅವರೂ ಇದೇ ರೀತಿ ನೋಟೀಸ್ ಕಳಿಸಿದ್ದರಂತೆ. ಅದಕ್ಕೂ ಚೆನ್ನಾಗಿ ಛೀಮಾರಿ ಹಾಕಿ, ಬದಲು ನೋಟೀಸ್ ಕಳಿಸಿದ ನಂತರ ಅವರೂ ಸುಮ್ಮನಾದರು. ಈ ವಿಚಾರಗಳನ್ನು ಯಾತಕ್ಕಾಗಿ ಹೇಳಬೇಕಾಗಿ ಬಂತೆಂದರೆ, ಆ ಕಾಲದಲ್ಲಿ ಅಂದರೆ ಸುಮಾರು 25 ವರ್ಷಗಳ ಹಿಂದೆ ನಾಟಕ ಕಂಪನಿಗಳ ಮಾಲೀಕರುಗಳು ಬೇರೆ ನಾಟಕ ಕಂಪನಿಗಳು ಅಭಿವೃದ್ಧಿಗೆ ಬರುವುದನ್ನು ಸಹಿಸದೆ ಈ ರೀತಿಯಗಿ ಕೆಟ್ಟ ಭಾವನೆಯಿಂದ ವರ್ತಿಸಿದರೂ ಇವುಗಳನ್ನೆಲ್ಲ ಭಾಗವತರು ಎದುರಿಸುತ್ತ ನಾಟಕ ಕಂಪನಿಯಲ್ಲಿ ದಿನನಿತ್ಯ ಬರುತ್ತಿದ್ದ ಗಂಡಾಂತರಗಳನ್ನೆಲ್ಲ ಸಹಿಸಿಕೊಂಡು ಕಂಪನಿಯನ್ನು ನಡೆಸುತ್ತಿದ್ದರು ಎಂಬುದಕ್ಕಾಗಿ ಈ ವಿಚಾರ ಹೇಳಬೇಕಾಯಿತು. ಈ ವೇಳೆಗಾಗಲೇ ದಾವಣಗೆರೆಯಲ್ಲಿ ಕಂಪನಿಯನ್ನು ವಹಿಸಿಕೊಂಡಿದ್ದ ಭಾಗವತರು ತಾವು ಒಪ್ಪಿಕೊಂಡಿದ್ದ ವ್ಯವಹಾರದ ಮೊಬಲಗನ್ನು ತಮ್ಮ ಭಾಗಸ್ಥರಾದ ಮಿತ್ರರಿಗೂ ಕೊಟ್ಟು ತೀರಿಸಿದ್ದಾಗಿತ್ತು. ಮಂಡ್ಯದಲ್ಲಿ ನಾಟಕ ಪ್ರಾರಂಭವಾದಂದಿನಿಂದ 'ಶ್ರೀನಿವಾಸ

ಕಲ್ಯಾಣ'ದ ಸುಮಾರು 80 ಪ್ರಯೋಗಗಳು ಜರುಗಿತು. ನಂತರ 'ಬ್ರೋಕರ್ ಭೀಷ್ಮಾಚಾರಿ' ಎಂಬ ನಾಟಕವನ್ನು ಬದಲಾಯಿಸಲು ಜಾಹಿರಾತನ್ನು ಮಾಡಿ. ನಾಟಕ ಪ್ರಾರಂಭಿಸುವ ಹಿಂದಿನ ದಿವಸ ಮುಖ್ಯವಾಗಿ ಆ ನಾಟಕದಲ್ಲಿ ಜನರಿಗೆ ಮನರಂಜನೆಯಾಗುವಂಥ ಸಹ ಪಾತ್ರಧಾರಿಗಳು ಸುಮಾರು 5 ಜನ ನಟ ನಟಿಯರನ್ನು, ಹಾರ್ಮೋನಿಯಂ ನುಡಿಸುವವರನ್ನು ಭಾಗವತರಿಗೆ ತಿಳಿಯದಂತೆ 'ಕೆಲವರು' ಮೈಸೂರಿಗೆ ಹಾರಿಸಿಕೊಂಡು ಹೋಗಿಬಿಟ್ಟರು! ಇದರ ಅಭಿಪ್ರಾಯವೇನೆಂದರೆ, ಹೇಗಾದರೂ ಮಾಡಿ ಭಾಗವತರ ಕಂಪನಿಯನ್ನು ಮುಳುಗಿಸಬೇಕು ಎಂಬ ಮುಖ್ಯ ಉದ್ದೇಶದಿಂದ ಇವರಲ್ಲಿ 100 ರೂ. ಸಂಬಳ ಒಬ್ಬನಿಗಿದ್ದರೆ '250 ರೂ. ಕೊಡುತ್ತೇನೆ ಬನ್ನಿ' ಎಂದು ಬೇರೆ ಕಂಪನಿಯವರು ಕರೆದುಕೊಂಡು ಹೋಗುವುದೇ ಆಗಿನ ಪದ್ಧತಿಯಾಗಿತ್ತು. ಈ ಕಾರಣದಿಂದ ಬ್ರೋಕರ್ ಭೀಷ್ಮಾಚಾರಿ ಎಂಬ ನಾಟಕವನ್ನು ಪ್ರದರ್ಶಿಸಲು ಸಾಧ್ಯವಾಗಲಿಲ್ಲ. ಆದರೂ ಈ ವಿಚಾರವನ್ನು ಭಾಗವತರು ಬಹಿರಂಗಗೊಳಿಸದೆ ಜನರೆಲ್ಲರೂ ಬಂದು ಸೇರಿದ್ದಾಗ ತಮ್ಮ ಅಭಿಮಾನಿಗಳು ಕೆಲವು ದೊಡ್ಡ ಮನುಷ್ಯರನ್ನೂ ಒಳಗೆ ಕರೆದು "ಸ್ವಾಮಿ ಸಂದರ್ಭ ಈ ರೀತಿ ಆಗಿದೆ. ಈಗ ನಾನು ಬ್ರೋಕರ್ ಭೀಷ್ಮಾಚಾರಿ ನಾಟಕ ಆಡಲು ಸಾಧ್ಯವಾಗುವುದಿಲ್ಲ. ಈಗ ನಾನು ನಾಟಕ ಆರಂಭಕ್ಕೆ ಮೊದಲು ಅಚಾತುರ್ಯದಿಂದ ಭೀಷ್ಮಾಚಾರಿ ನಾಟಕವನ್ನೂ ಆಡಲು ಸಾಧ್ಯವಾಗುವುದಿಲ್ಲ. ಶ್ರೋತೃ ಮಹನೀಯರುಗಳು ಕ್ಷಮಿಸುವುದಾದರೆ ಶ್ರೀನಿವಾಸ ಕಲ್ಯಾಣವನ್ನೇ ಪ್ರಾರಂಭಿಸುತ್ತೇವೆ. ಬಹಳ ವಿನಯದಿಂದ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಮುಂದೆ ಕುಳಿತಿರುವ ತಾವುಗಳೆಲ್ಲ ಆಗಬಹುದು ಎಂದು ನಮಗೆ ಪ್ರೋತ್ಸಾಹ ಕೊಟ್ಟರೆ ನಿಮ್ಮ ದಾಕ್ಷಿಣ್ಯಕ್ಕಾದರೂ ಉಳಿದವರು ಸುಮ್ಮನೆ ಕುಳಿತಿರುತ್ತಾರೆ" ಎಂದು ಹೇಳಿ ಭಾಗವತರು ನಾಟಕದೊಳಗೆ ಮತ್ತೊಂದು ನಾಟಕವನ್ನು ಆಡಿ ಅದರಂತೆಯೇ ಅವರು ರಂಗಮಂಟಪದ ಮೇಲೆ ಬಂದು ಕೇಳಿಕೊಂಡರು.

ಭಾಗವತರ ಆತ್ಮೀಯರಾದ ಆ ದೊಡ್ಡ ಮನುಷ್ಯರೆಲ್ಲ 'ಆಗಬಹುದು' 'ಆಗಬಹುದು' ಎಂದು ಕರತಾಡನ ಮಾಡಿದರು. ಅವರೊಂದಿಗೆ ಉಳಿದವರೂ ಸೇರಿ ಕರತಾಡನ ಮಾಡಿಯೇಬಿಟ್ಟರು. ಅದರಂತೆ ಭಾಗವತರು 'ಶ್ರೀನಿವಾಸ ಕಲ್ಯಾಣ' ನಾಟಕವನ್ನು ಪ್ರದರ್ಶಿಸಿದರು. ಪರದೆ ಎಳೆಯುತ್ತಿದ್ದವರಿಂದಲೂ ಆ ದಿನ ಪಾತ್ರ ಮಾಡಿಸಬೇಕಾಯಿತಂತೆ. ಇಂಥ ಸಂದರ್ಭಗಳು ನಾಟಕ ಕಂಪನಿಯಲ್ಲಿ ಒದಗುವುದು ಸಹಜವೇ ಆಗಿರುತ್ತದೆ. ಆದರೆ, ಇಲ್ಲಿ ಒಂದು ವಿಶೇಷವೇನೆಂದರೆ ಭಾಗವತರ ಕಂಪನಿಯನ್ನು ಮುಳುಗಿಸುವುದಕ್ಕಾಗಿ ಕಂಪನಿಯಲ್ಲಿದ್ದ ಕೆಲವರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಅಲ್ಲಿ ಹೊಸದಾಗಿ ನಾಟಕ

ಕಂಪನಿಯೊಂದನ್ನು ಆರಂಭಿಸಿ ಅದು ಎರಡು ವಾರ ಕೂಡ ನಡೆಯದೆ ಆ ಕಂಪನಿಯೇ ಮುಳುಗಿ ಹೋಗಿ ಭಾಗವತರ ಕಂಪನಿಯಿಂದ ಹೋಗಿದ್ದ ನಟನಟಿ ಶ್ರೇಷ್ಠರಾದಿಯಾಗಿ ಸರ್ವರೂ 'ತ್ರಾಹಿ ತ್ರಾಹಿ' ಎಂದು ತಿರುಗಿ ಮತ್ತೆ ಭಾಗವತರ ಕಂಪನಿಗೇ ಸೇರಿಕೊಂಡರು.

ಮಂಡ್ಯ ಕ್ಯಾಂಪು ಮುಗಿದ ನಂತರ ಭಾಗವತರು ಕುಣಿಗಲ್‌ನಲ್ಲಿ ಕ್ಯಾಂಪು ಮಾಡಿದರು. ಅಲ್ಲಿ ಶ್ರೀನಿವಾಸಕಲ್ಯಾಣದ ಸುಮಾರು 50 ಪ್ರಯೋಗಗಳು ನಡೆಯಿತು. ನಂತರ ಬ್ರೋಕರ್ ಭೀಷ್ಮಾಚಾರಿ ನಾಟಕವನ್ನೂ ಪ್ರದರ್ಶಿಸಲು ಜಾಹೀರಾತನ್ನು ಮಾಡಿದರು. ಆ ನಾಟಕ ಪ್ರಾರಂಭವಾಗುವ ದಿನ ಮಂಡ್ಯದಲ್ಲಿ ಭಾಗವತರಿಗೆ ತೊಂದರೆಯುಂಟು ಮಾಡಿದ ಮಹನೀಯರುಗಳೇ ಇಲ್ಲಿಯೂ ತೊಂದರೆಯುಂಟು ಮಾಡಲು ಪ್ರಯತ್ನಿಸಿದರು. ಅದೇನೆಂದರೆ, ಕುಣಿಗಲ್‌ನಲ್ಲಿ ವೈಶ್ಯ ಮತಸ್ಥರ ಸಂಖ್ಯೆ ಸುಮಾರಾಗಿದೆ. ಅವರುಗಳಿಗೆ "ಬ್ರೋಕರ್ ಭೀಷ್ಮಾಚಾರಿ ನಾಟಕದಲ್ಲಿ ವೈಶ್ಯರಾದ ನಿಮ್ಮನ್ನು ಬಹಳ ಹೀಯಾಳಿಸಿ ಮಾತನಾಡುವ ಒಬ್ಬ ಶೆಟ್ಟಿ ಪಾತ್ರದಲ್ಲಿ ನಿಮ್ಮ ಮತಕ್ಕೆ ಬಹಳ ಅವಮಾನವಾಗುವ ರೀತಿಯಲ್ಲಿ ನಟಿಸುತ್ತಾನೆ. ಈ ನಾಟಕ ಮಾಡಲು ಅವಕಾಶ ಕೊಡಬೇಡಿ" ಎಂದು ಕೆಲ ವೈಶ್ಯ ತರುಣರಿಗೆ ದುರ್ಬೋಧನೆ ಮಾಡಿ ಹೋಗಿದ್ದರು. ಆ ವೇಳೆಗಾಗಲೇ ಕುಣಿಗಲ್‌ನ ವಿಶಾಲವಾದ ಒಂದು ಕಟ್ಟಡದಲ್ಲಿ ಭಾಗವತರು ಸಂಸಾರ ಸಮೇತ ಇದ್ದರು. ಅಲ್ಲಿ ದೊಡ್ಡ ಕೈಸಾಲೆ. ಸಂಜೆಯಾದರೆ ಊರಿನ ಮತ್ತು ಪರಸ್ಥಳದಿಂದ ಬಂದವರು ಕೈಸಾಲೆಯ ಸುತ್ತ ಕುಳಿತು ಮಾತನಾಡುವುದು ಸಹಜ. ಭಾಗವತರು ಅಲ್ಲಿ ಕುಳಿತು ಯಾರೊಡನೆಯೋ ಮಾತನಾಡುತ್ತಿದ್ದರು. ರಾತ್ರಿ ಸುಮಾರು ಏಳು ಗಂಟೆಯ ಸಮಯದಲ್ಲಿ ಕೆಲಸ ವೈಶ್ಯ ತರುಣರು ಭಾಗವತರ ಬಳಿಗೆ ಬಂದು "ಏನ್ರಿ ಭಾಗವತರೇ ಇವತ್ತು ನೀವು ಆಡುವ ನಾಟಕದಲ್ಲಿ ನಮ್ಮ ವೈಶ್ಯ ಮತವನ್ನು ಬಹಳ ಹೀಯಾಳಿಸುವ ಸಂದರ್ಭಗಳಿವೆ ಎಂದು ನಾಟಕ ನೋಡಿದವರಿಂದ ಕೇಳಿದೆವು. ಆದಕಾರಣ ನೀವು ಈ ದಿವಸ ಈ ನಾಟಕವನ್ನು ಪ್ರದರ್ಶಿಸಬಾರದು. ಹಾಗೇನಾದರೂ ಪ್ರದರ್ಶಿಸುವುದೇ ಆದರೆ ಥಿಯೇಟರಿಗೆ ಬೆಂಕಿ ಹಚ್ಚುತ್ತೇವೆ" ಎಂದು ಬಹಳ ಕ್ರೂರವಾಗಿಯೇ ಬೆದರಿಕೆಯ ಮಾತುಗಳನ್ನಾಡಿದರು. ಆಗ ಭಾಗವತರು ಅವರಿಗೆ "ಯಾರು ಈ ರೀತಿ ನಿಮಗೆ ಹೇಳಿದರೋ ಅದೆಲ್ಲ ಸುಳ್ಳು. ನೀವು ಇನ್ನೂ ಚಿಕ್ಕ ವಯಸ್ಸಿನ ತರುಣರು. ಈ ರೀತಿ ಆತುರಪಟ್ಟು ಮಾತನಾಡುವುದು ಸರಿಯಲ್ಲ. ನಿಮಗೆ ನಿಮ್ಮ ಹಿರಿಯರುಗಳು ಇದ್ದಾರಲ್ಲವೆ ಅವರಲ್ಲಿ ಕೆಲ ಮುಖ್ಯಸ್ಥರನ್ನು ಕರೆದುಕೊಂಡು ಬನ್ನಿ ನೀವು ಟಿಕೆಟ್ ತೆಗೆದುಕೊಳ್ಳದೆ ಪುಕ್ಕಟೆಯಾಗಿ ಮುಂದಿನ ಸೀಟುಗಳಲ್ಲೇ ಕುಳಿತು ನಾಟಕವನ್ನು ನೋಡಿರಿ ಅದರಲ್ಲೇನಾದರೂ ನಿಮ್ಮ ಜಾತಿಗೆ ವಿರೋಧವಾದ ಸನ್ನಿವೇಶಗಳಿದ್ದರೆ ಹೇಳಿ, ತಿದ್ದಿಕೊಳ್ಳುತ್ತೇನೆ" ಎಂದು ಆದಷ್ಟು

ಶಾಂತಿಯಿಂದಲೇ ಹೇಳಿದರು. ಆಗ ಅದರಲ್ಲಿ ಒಬ್ಬಾತ "ಈ ಮಾತುಗಳೆಲ್ಲ ನಮಗೆ ಬೇಡಾರಿ. ಈ ದಿವಸ ಈ ನಾಟಕವನ್ನು ಆಡಬಾರದು" ಎಂದು ಆರ್ಭಟಿಸುತ್ತಲೇ ಮಾತನಾಡಿದ. ಇದನ್ನು ಕೇಳುತ್ತಿದ್ದ ಅಲ್ಲೇ ಪಕ್ಕದ ಗ್ರಾಮದ ಒಬ್ಬ ಗೌಡರು ಈ ನಾಟಕವನ್ನು ನೋಡುವುದಕ್ಕಾಗಿಯೇ ಬಂದಿದ್ದ ಅವರಿಗೆ ಈ ಮಾತುಗಳು ಕೋಪವನ್ನುಂಟುಮಾಡಿದವು. ಆರ್ಭಟದಿಂದ ಮಾತನಾಡಿದವನ ಕುತ್ತಿಗೆ ಪಟ್ಟಿ ಹಿಡಿದು ಎಳೆದುಕೊಂಡು ಕೆನ್ನೆಗಳಿಗೆ ಹೊಡೆದು "ಅಯೋಗ್ಯ, ಭಾಗವತರು ಇಷ್ಟು ಶಾಂತಿಯಿಂದಲೇ ಸಮಾಧಾನ ಮಾಡುತ್ತಿದ್ದಾರೆ. ಅದನ್ನು ಕೇಳದೆ ಇಷ್ಟು ಅಹಂಕಾರದಿಂದ ಅವರನ್ನು ಎದುರಿಸುತ್ತಿದ್ದೀರಿ ನಿಮ್ಮ ಕಡೆ ಎಷ್ಟು ಜನರನ್ನು ಕರೆದುಕೊಂಡು ಬರುತ್ತೀರೋ ಬನ್ನಿ ನಾನೊಬ್ಬನೇ ಸಾಕು. ನಾನು ಈ ನಾಟಕ ನೋಡುವುದಕ್ಕಾಗಿಯೇ ಬಹಳ ದೂರದಿಂದ ಬಂದಿದ್ದೇನೆ" ಭಾಗವತರೇ ನಾಟಕ ನಿಲ್ಲಿಸಬೇಡಿ, ಆಡಿ ಎಂದು ಹೇಳಿದ. ಅವಮಾನಗೊಂಡ ಹುಡುಗರೆಲ್ಲ ತಮ್ಮ ದಾರಿ ಹಿಡಿದರು. ನಾಟಕ ಆರಂಭಿಸುವ ವೇಳೆಗೆ ಸರಿಯಾಗಿ ಆ ಊರಿನ ಗಣ್ಯ ವ್ಯಕ್ತಿಯೊಬ್ಬರು ಈವರೆಗೆ ಜರುಗಿದ ಘಟನೆಯನ್ನು ಕೇಳಿ ಆತುರದಿಂದ ಬಂದು ಭಾಗವತರಿಂದಲೂ ನಡೆದ ಸಂಗತಿಯನ್ನು ಕೇಳಿ ತಿಳಿದುಕೊಂಡು "ನೀವು ನಾಟಕ ಪ್ರಾರಂಭಿಸಿ ನಾನೂ ಬರುತ್ತೇನೆ" ಎಂದು ಹೇಳಿ ಊರಿನ ಬಜಾರಿಗೆ ಹೋಗಿ "ಏನ್ರಯ್ಯಾ ಯಾರೋ ಹುಡುಗರೆಲ್ಲ ಸೇರಿ ಈ ನಾಟಕ ಆಡಬೇಡಿ, ಆಡಿದರೆ ಥಿಯೇಟರಿಗೆ ಬೆಂಕಿ ಹಚ್ಚುತ್ತೇವೆಂದು ಹೇಳಿದರಂತೆ. ಆ ರೀತಿ ಏನಾದರೂ ಮಾಡಿದರೆ ಮುಂದಿನ ಪರಿಣಾಮವನ್ನು ನೀವು ಎದುರಿಸಬೇಕಾಗುತ್ತದೆ" ಎಂದು ಅವರು ಕೂಗಾಡಿದ ಕೂಡಲೆ ಕೆಲವು ದೊಡ್ಡ ಮನುಷ್ಯರು "ಯಾರೋ ಕೆಲವು ಹುಡುಗರು ತಿಳಿಯದೆ ಮಾಡಿದ ತಪ್ಪಿಗೆ ನೀನು ಇಷ್ಟು ಉದ್ರೇಕದಿಂದ ಮಾತನಾಡುತ್ತಿದ್ದೀಯಾ, ಬೇಡ, ನಾವುಗಳೆಲ್ಲ ಬಂದು ನಾಟಕ ನೋಡುತ್ತೇವೆ. ಹುಡುಗರು ಮಾಡಿದ ತಪ್ಪನ್ನು ಕ್ಷಮಿಸು" ಎಂದು ಅವರೆಲ್ಲ ಸಮಾಧಾನ ಹೇಳಿ ಕೆಲವು ಮುಖ್ಯಸ್ಥರುಗಳು ಬಂದು ಕೊನೆಯವರೆಗೂ ನಾಟಕವನ್ನು ನೋಡಿ "ಇದರಲ್ಲಿ ಏನೇನೂ ತಪ್ಪಿಲ್ಲ, ಸಂತೋಷವಾಗಿ ನಾಟಕವನ್ನು ಪ್ರತಿದಿನವೂ ಪ್ರದರ್ಶಿಸಬಹುದು" ಎಂದು ಹೇಳಿದರು. ಅಲ್ಲದೆ, ಅವರಲ್ಲಿನ ಯಜಮಾನರೊಬ್ಬರು ರಂಗಸ್ಥಳದ ಮೇಲಕ್ಕೆ ಬಂದು ಭಾಗವತರ ಕೊರಳಿಗೆ ಹೂವಿನಹಾರವನ್ನು ಹಾಕಿ ಕೈಕುಲುಕಿ ಹೋದರು. ಈ ಸಂದರ್ಭದಲ್ಲಿ ಸಹಾಯ ಮಾಡಿದ ಗ್ರಾಮದ ಒಬ್ಬ ಗೌಡರನ್ನೂ ಊರಿನ ಮುಖ್ಯಸ್ಥರಾದ ನರಸಿಂಹಯ್ಯನವರನ್ನೂ ಭಾಗವತರು ಮನಃಪೂರ್ವಕವಾಗಿ ಸ್ಮರಿಸಿಕೊಳ್ಳುವುದುಂಟು.

## ತುಂಗಭದ್ರಾ ನದಿಗೆ ತಿಮ್ಮಪ್ಪನ ವಿಗ್ರಹ

ಈ ರೀತಿಯಾಗಿ ಭಾಗವತರು ತುಂಬ ಕಷ್ಟಪಟ್ಟು ಕುಣಿಗಲ್ ಕ್ಯಾಂಪು ಮುಗಿಸಿಕೊಂಡು ತಿಪಟೂರಿನಲ್ಲಿ ಕ್ಯಾಂಪು ಮಾಡುವುದಕ್ಕಾಗಿ ಮೊದಲೇ ಹೋಗಿ ಅಲ್ಲಿ ನಾಟಕ ಪ್ರೇಮಿಯಾದ ಒಬ್ಬ ದೊಡ್ಡ ವ್ಯಾಪಾರಸ್ಥರನ್ನು ಹಿಡಿದು "ನಾವು ಇಲ್ಲಿ ಕ್ಯಾಂಪು ಮಾಡಬೇಕೆಂದು ಇದ್ದೇವೆ. ಖಾಲಿ ಇರುವ ನಿಮ್ಮ ಜಮೀನಿನಲ್ಲಿ ಥಿಯೇಟರ್ ಹಾಕಿಸಿಕೊಡಿ. ಅದೇನು ಬಾಡಿಗೆಯಾಗುತ್ತದೋ ಕೊಟ್ಟು ಬಿಡುತ್ತೇವೆ"ಂದು ಮಾತನಾಡಿ ಮುಂಗಡವಾಗಿ ಸ್ವಲ್ಪ ಹಣವನ್ನು ಕೊಟ್ಟು ಬಂದ ಒಂದು ವಾರದೊಳಗಾಗಿ ಥಿಯೇಟರ್ ಹಾಕಿಸಿ ಸಿದ್ಧ ಮಾಡುವಾಗ್ಗೆ ಮಂಡ್ಯ, ಕುಣಿಗಲ್‌ನಲ್ಲಿ ಭಾಗವತರಿಗೆ ತೊಂದರೆ ಕೊಟ್ಟ ಮಹನೀಯರುಗಳೇ ತಿಪಟೂರಿಗೂ ಹೋಗಿ ಭಾಗವತರಿಗಾಗಿ ಸಿದ್ಧ ಮಾಡಿದ್ದ ಥಿಯೇಟರ್ ಮಾಲೀಕರನ್ನು ನೋಡಿ "ಥಿಯೇಟರ್ ಅವರಿಗೆ ಕೊಡಬೇಡಿ, ಅವರ ನಾಟಕ ಇಲ್ಲಿ ಚೆನ್ನಾಗಿ ನಡೆಯುವುದಿಲ್ಲ. ಈ ಊರಿನಲ್ಲಿ ಶಿವಭಕ್ತರೇ ಜಾಸ್ತಿಯಿರುವ ಕಾರಣ, ಅದೂ 'ಶ್ರೀನಿವಾಸ ಕಲ್ಯಾಣ' ನಾಟಕ ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲ. ಥಿಯೇಟರ್ ನಮಗೆ ಕೊಡಿ, ನಾವು ಇಲ್ಲಿ ಕ್ಯಾಂಪು ಮಾಡುತ್ತೇವೆ" ಎಂದು ಅವರಿಗೆ ಬಹಳ ದುರ್ಬೋಧನೆ ಮಾಡಲು ಪ್ರಯತ್ನಿಸಿದರು. ಆದರೂ ಆ ಮಾಲೀಕರು "ಅದೇನೇ ಇರಲಿ, ಭಾಗವತರಿಗೆ ನಾನು ಮಾತು ಕೊಟ್ಟಿದ್ದೇನೆ. ಅವರಿಂದ ಮುಂಗಡವಾಗಿ ಹಣ ಪಡೆದು ಅವರಿಗಾಗಿಯೇ ಸಿದ್ಧಪಡಿಸಿರುವ ಥಿಯೇಟರನ್ನು ನಿಮ್ಮಗಳಿಗೆ ಕೊಟ್ಟರೆ ಈ ಊರಿನಲ್ಲಿ ಜನರು ನನಗೆ ಛೀಮಾರಿ ಹಾಕುವುದಲ್ಲದೆ ಭಾಗವತರು ಒಬ್ಬ ದೊಡ್ಡ ಕಲಾವಿದರು, ಅವರಿಗೆ ಈ ರೀತಿ ನಿಮ್ಮ ಮಾತು ಕೇಳಿ ದ್ರೋಹ ಮಾಡಿದರೆ ಈಶ್ವರ ಮೆಚ್ಚುವುದಿಲ್ಲ. ಅವರಿಗೆ ನೋವನ್ನುಂಟುಮಾಡಲು ಯಾವ ಕಾರಣದಿಂದಲೂ ನಾನು ಒಪ್ಪುವುದಿಲ್ಲ" ಎಂದು ಹೇಳಿಬಿಟ್ಟರು.

ಕುಣಿಗಲ್ ಕ್ಯಾಂಪು ಮುಗಿಸಿಕೊಂಡು ತಿಪಟೂರಿನಲ್ಲಿ ನಾಟಕ ಆರಂಭಿಸುವ ದಿವಸಕ್ಕೆ ನಾಟಕದಲ್ಲಿ ಮುಖ್ಯ ನಾಯಕಿಯ ಪಾತ್ರಧಾರಿ ಲಕ್ಷ್ಮಿಯ ಪಾತ್ರವನ್ನು ವಹಿಸುವ ಪಾತ್ರಧಾರಿಯನ್ನೇ ಆ ಊರಿಗೆ ಬರದಂತೆ ಮಾಡಿಬಿಟ್ಟಿದ್ದರು. ನಾಟಕದ ಮೊದಲ ದಿವಸವೇ ಈ ರೀತಿ ಕೇಡುಂಟು ಮಾಡಿದರಲ್ಲ, ಏನು ಮಾಡುವುದು ಎಂದು ಭಾಗವತರು ಯೋಚಿಸುತ್ತ ಕುಳಿತಿದ್ದರು. ರಾತ್ರಿ 7 ಗಂಟೆ ಸುಮಾರಿನಲ್ಲಿ ಕಂಪನಿಯಲ್ಲಿದ್ದ ಹೆಣ್ಣುಮಕ್ಕಳನ್ನೆಲ್ಲ "ನೀವ್ಯಾರಾದರೂ ಲಕ್ಷ್ಮಿ ಪಾತ್ರವನ್ನು ವಹಿಸುತ್ತೀರಾ" ಎಂದು ಕೇಳುತ್ತ ಭ್ರಮೆ ಹಿಡಿದವರಂತೆ ಭಾಗವತರು ಕುಳಿತಿರುವಾಗ್ಗೆ ನರ್ತನ ಮಾಡುವ ಒಬ್ಬ ನಟಿ "ಅಪ್ಪಾಜಿ ನಾನು ಮಾಡುತ್ತೇನೆ, ನೀವೇನು ಯೋಚಿಸಬೇಡಿ, ನನಗೆ ಲಕ್ಷ್ಮಿ ಪಾತ್ರದ ಮಾತುಗಳು, ಹಾಡುಗಳು ಎಲ್ಲ ಬರುತ್ತೆ,

ನೀವು ಧೈರ್ಯವಾಗಿ ನನಗೆ ಆ ಪಾತ್ರ ಮಾಡಲು ಈ ದಿನ ಅವಕಾಶ ಕೊಡಿ ಮಾಡುತ್ತೇನೆ" ಎಂದು ಧೈರ್ಯ ಹೇಳಿದಳು. ಆಗ ವಿಧಿಯಿಲ್ಲದೆ ಭಾಗವತರು ಹಾಗೇ ಮಾಡೆಂದು ಆಕೆಯಿಂದಲೇ ಆ ದಿವಸ ಲಕ್ಷ್ಮಿ ಪಾತ್ರ ಮಾಡಿಸಿದರು. ನಾಟಕವೇನೋ ನಡೆಯಿತು. ಹಣವೂ ಸಹ ಸಮರ್ಪಕವಾಗಿಯೇ ವಸೂಲಾಯಿತು. ಆದರೆ ಮುಂದಿನ "ನಾಟಕವೇನೋ ಬಹಳ ಚೆನ್ನಾಗಿದೆ. ಆದರೆ ಮುಖ್ಯವಾದ ನಾಯಕಿ ನಟಿ ಅಷ್ಟು ಸರಿಯಾಗಿಲ್ಲ. ಮಿಕ್ಕ ಎಲ್ಲಾ ಪಾತ್ರಗಳು ಸಮರ್ಪಕವಾಗಿವೆ" ಎಂಬ ಅಭಿಪ್ರಾಯ ಹೊರಬಿತ್ತು. 5 ನಾಟಕಗಳು ನಡೆದ ನಂತರ ಲಕ್ಷ್ಮಿ ಪಾತ್ರ ಮಾಡುತ್ತಿದ್ದ ನಟಿಯು ತಾನಾಗಿಯೇ ಬಂದು ಗೋಳಾಡುತ್ತ ಭಾಗವತರ ಕಾಲುಗಳನ್ನು ಹಿಡಿದು "ಅಪ್ಪಾಜಿ ನನ್ನನ್ನು ಕ್ಷಮಿಸಿರಿ. ಯಾರ್ಯಾರದೋ ಮಾತುಗಳನ್ನು ಕೇಳಿ ನಿಮಗೆ ದ್ರೋಹ ಮಾಡಿದೆ. ಇಲ್ಲಿ ನಾಟಕ ಪ್ರಾರಂಭವಾಗುವ ದಿವಸ ನಾನು ಇಲ್ಲಿಗೆ ಬಾರದೇ ಇರುವುದಕ್ಕೆ ಏನೇನು ಆತಂಕಗಳು ಮಾಡಬೇಕೋ ಅವುಗಳನ್ನೆಲ್ಲಾ ಮಾಡಿ ಕೆಲವರು ನನ್ನನ್ನು ಮರುಳು ಮಾಡಿ ನಿಮಗೆ ದ್ರೋಹ ಬಗೆಯುವಂತೆ ಮಾಡಿದರು. ಇನ್ನೆಂದಿಗೂ ನಾನು ಈ ರೀತಿ ಮಾಡುವುದಿಲ್ಲ. ನನ್ನನ್ನು ಕ್ಷಮಿಸಿಬಿಡಿ" ಎಂದು ಗೋಳಾಡಿದಳು. ಆಗ ಭಾಗವತರೇ ತಮಗೆ ತಾವೇ ಸಮಾಧಾನ ಮಾಡಿಕೊಂಡು ಅಂದು ಆ ನಟಿಯಿಂದಲೇ ಲಕ್ಷ್ಮಿ ಪಾತ್ರವನ್ನು ಮಾಡಿಸಿದರಾದರೂ ಮೊದಲನೇ ನಾಟಕದಲ್ಲಿ ಅಭಿಪ್ರಾಯಭೇದ ಬಂದದ್ದರಿಂದ ಆ ಕ್ಯಾಂಪಿನಲ್ಲಿ ಸುಮಾರು 20 ನಾಟಕಗಳನ್ನು ಮಾತ್ರ 'ಶ್ರೀನಿವಾಸ ಕಲ್ಯಾಣ' ಅಭಿನಯಿಸಿ ಬೇರೆ ನಾಟಕಗಳನ್ನು ನಡೆಸಲು ಏರ್ಪಾಡು ಮಾಡಿದರು. ಆದರೆ, ಭಾಗವತರ ವಿಷಯದಲ್ಲಿ ಕ್ರೋಧ ಬೆಳೆಸುತ್ತಿದ್ದ ಆ ದುಷ್ಟ ಜನರೆಲ್ಲ ಇಷ್ಟಕ್ಕೂ ಸುಮ್ಮನಾಗದೆ ಭಾಗವತರಿಗೆ ಮಾಟ ಮಂತ್ರವನ್ನೇ ಮಾಡಿಸಿ ರಕ್ತ ಭೇದಿ ಆಗುವಂತೆ ಮಾಡಿ ಬುದ್ಧಿಯೇ ಮಂಕಾಗಿ, ರಂಗಸ್ಥಳದ ಮೇಲೆ ಹೋದರೆ ಏನೂ ತೋರದಂತಾಗಿ ಮಾತುಗಳು ಜ್ಞಾಪಕಕ್ಕೆ ಬರಲಿಲ್ಲವಂತೆ. ಹಾಡಲೂ ಸಾಧ್ಯವಾಗುತ್ತಿರಲಿಲ್ಲವಂತೆ. ಇಷ್ಟಾದ ನಂತರ ಮನೆಯಲ್ಲಿ ಬಹಳ ದುಃಖದಿಂದ ಭಾಗವತರ ಪತ್ನಿ ಶ್ರೀಮತಿ ಶಾರದಮ್ಮನವರು "ಇದೇನೋ ನನಗೆ ಬಹಳ ಅನುಮಾನವಾಗುತ್ತಿದೆ. ಕಡೆಗೆ ಈ ಕೆಟ್ಟ ಜನರು ನಿಮ್ಮನ್ನೇ ನಾಟಕ ಕಲೆಗೆ ಬಲಿಕೊಡಲು ಕೆಟ್ಟ ಸಾಧನೆಗಳನ್ನು ಮಾಡುತ್ತಿದ್ದಾರೆ ಎಂದು ನನಗೆ ಅನುಮಾನವಾಗಿದೆ. ಈ ನಾಟಕ ಕಂಪನಿಯ ಸಹವಾಸ ಸಾಕು. ಈ ಕಂಪನಿಯನ್ನು ಪ್ರಾರಂಭಿಸುವಾಗಲೇ ಈ ಕಸುಬಿಗೆ ನೀವು ಮನಸ್ಸು ಮಾಡಬೇಡಿ ಎಂದು ನಾನು ಹೇಳಿದ್ದೆ. ಹಿಂದೆ ಗುಬ್ಬಿ ಕಂಪನಿಯಲ್ಲಿದ್ದಾಗಲೇ ಆದ ಅನುಭವಗಳನ್ನೆಲ್ಲ ನಿಮಗೆ ಹೇಳಿ, ಅದು ಬೇಡವೆಂದು ಕೇಳಿಕೊಂಡೆ. ನೀವು ನನ್ನ ಮಾತು ಕೇಳಲಿಲ್ಲ. ಈಗ ನೋಡಿದರೆ ನಿಮ್ಮ ಆರೋಗ್ಯಕ್ಕೇ ಕೆಡುಕನ್ನುಂಟು ಮಾಡುತ್ತಿರುವ

ಈ ದುಷ್ಟ ಶಕ್ತಿಗಳಿಂದ ನನಗೆ ಬಹಳ ದುಃಖವಾಗುತ್ತಿದೆ. ಇವತ್ತೇ ಈ ಕಂಪನಿಯನ್ನು ಹರಾಜು ಹಾಕಿ ಹೊರಟುಬಿಡೋಣ. ಅದರಿಂದ ಎಷ್ಟೇ ಕಷ್ಟಗಳು ಬಂದರೂ ಸರಿಯೇ, ಇನ್ನು ಈ ಕಂಪನಿಯನ್ನು ಮುಂದುವರಿಸುವುದು ಬೇಡ" ಎಂದು ಬಹಳವಾಗಿ ಗೋಳಾಡಲು ಪ್ರಾರಂಭಿಸಿದರು. ಅದೇ ಸಮಯದಲ್ಲಿಯೇ ಜವಹರಲಾಲ್ ನೆಹರೂರವರು ದಿವಂಗತರಾಗಿದ್ದರು. ಆ ದಿವಸವೇ ತಿಪಟೂರಿನ ಕ್ಯಾಂಪಿನಲ್ಲಿ ಕಂಪನಿಯು ಬಹಳ ಅವ್ಯವಸ್ಥೆಯಾಗಿ ನಡೆಯುತ್ತಿತ್ತು, ಹಾಗೇ ಭಾಗವತರ ಆರೋಗ್ಯವೂ ಸಹ ಸರಿಯಿಲ್ಲವೆಂದು ತಿಳಿದು ಬೆಂಗಳೂರಿನ ಕೆಲವು ಮಿತ್ರರು ತಿಪಟೂರಿಗೆ ಬಂದರು. ಆಗ ವಿಚಾರವನ್ನೆಲ್ಲ ತಿಳಿದು "ನಿಮಗೆ ಕೆಟ್ಟವರ್‍ಯಾರೋ ತೊಂದರೆ ಮಾಡಿದ್ದಾರೆ. ನೀವು ಈ ವಿಚಾರವನ್ನು ನಂಬದಿದ್ದರೂ ನಮ್ಮಗಳಿಗೆ ಅದರಲ್ಲಿ ನಂಬಿಕೆಯಿದೆ. ಅರಸೀಕೆರೆಯ ಹತ್ತಿರ ಒಂದು ಗ್ರಾಮದಲ್ಲಿ ಇದನ್ನೆಲ್ಲ ನಿವಾರಣೆ ಮಾಡುವಂಥ ಒಬ್ಬ ಶಕ್ತಿವಂತ ಮಾಂತ್ರಿಕರು ಇದ್ದಾರೆ. ಹೇಗೂ ನೆಹರೂ ಅವರು ದಿವಂಗತರಾದ ಕಾರಣ ಈ ದಿವಸ ನಾಟಕ ನಿಲ್ಲಿಸಿದ್ದೀರಿ. ನಾಳೆಯೂ ಒಂದು ದಿವಸ ನಾಟಕ ನಿಲ್ಲಿಸಿಬಿಡಿ. ನಾವು ಇಂದೇ ಹೋಗಿ ಅವರನ್ನು ಕರೆದುಕೊಂಡು ಬರುತ್ತೇವೆ"ಂದು ಹೇಳಿ ಬಂದ ಭಾಗವತರ ಮಿತ್ರರು ಊಟವನ್ನೂ ಸಹ ಮಾಡದೆ ಕಾರಿನಲ್ಲಿ ಹೊರಟು ಅಂದು ರಾತ್ರಿಯೇ ಅವರನ್ನು ಕರೆದುಕೊಂಡು ಬಂದೇಬಿಟ್ಟರು. ಎರಡನೇ ದಿವಸ ಥಿಯೇಟರಿನಲ್ಲಿ ಯಾರೂ ಇರಕೂಡದೆಂದು ಕಟ್ಟಾಜ್ಞೆ ಮಾಡಿ ಭಾಗವತರು ಇದ್ದ ಮನೆಯಲ್ಲಿಯೇ ಅವರ ಪದ್ಧತಿಯಂತೆ ರಾತ್ರಿ 11 ಗಂಟೆ ಸುಮಾರಿನಲ್ಲಿ ಕಳಸವನ್ನಿಟ್ಟು ನಿಷ್ಠೆಯಿಂದ ಪೂಜೆ ಮಾಡಿದ ಮೇಲೆ ಆ ವ್ಯಕ್ತಿಯ ಮೇಲೆ ಯಾವುದೋ ಒಂದು ಶಕ್ತಿ ಅವಾಹನೆಯಾಗಿ ಒಂದು ಬಟ್ಟಲಿನಲ್ಲಿ ಅಕ್ಷತೆಯನ್ನಿಟ್ಟುಕೊಂಡು ಅಕ್ಷತೆಯನ್ನು ಎರುಚತ್ತ ಮನೆಯಿಂದ ಹೊರಟು ತಿಪಟೂರಿನ ಕೆರೆಯ ಅಂಗಳದಲ್ಲಿ ಮುಖ್ಯರಸ್ತೆಯ ಪಕ್ಕದಲ್ಲೇ ಇರುವ ಈಶ್ವರ ದೇವಾಲಯವೋ ಅಥವಾ ಗದ್ದುಗೆಯ ಮಠವೋ ತಿಳಿಯದು. ಆ ದ್ವಾರ ಬಾಗಿಲಿನ ಮೇಲೆ ದೊಡ್ಡ ಬಸವಣ್ಣನನ್ನು ನಿರ್ಮಿಸಿದ್ದಾರೆ. ಆ ದ್ವಾರದ ಪಕ್ಕದಲ್ಲಿಯೇ ಒಂದು ಬಿಲ್ವಪತ್ರೆಯ ಮರವಿದೆ. ಅದರ ಬುಡದವರೆಗೂ ಬಂದು ಆವಾಹನೆಯಾಗಿದ್ದ ಆ ಶಕ್ತಿಯು ಅಕ್ಷತೆಯನ್ನು ಆ ಬುಡಕ್ಕೆ ಎರಚಿ ಹಳ್ಳ ತೋಡುವಂತೆ ಕೈಯಿಂದ ಸೂಚನೆ ಮಾಡಿತು. ಆಗ ಭಾಗವತರ ಮಿತ್ರರೊಬ್ಬರು ಸಿದ್ಧವಾಗಿ ತಂದಿದ್ದ ಚಿಕ್ಕದೊಂದು ಗಡಾರಿಯಿಂದ ಹಳ್ಳ ತೋಡಿದರು. ಸುಮಾರು ಅರ್ಧ ಅಡಿ ಆಳದಲ್ಲಿ ಒಂದು ಮಣ್ಣಿನ ಕುಡಿಕೆಯಲ್ಲಿ ಒಂದು ನಿಂಬೆಹಣ್ಣು, ಯಂತ್ರ, ಒಂದು ವಿಧವಾದ ಮುಳ್ಳು, ಸ್ಪ್ರಿಂಗ್‌ನ ರೀತಿಯಲ್ಲಿ ಸುಮಾರು 4 ಅಂಗುಲ ಉದ್ದವಿರುವ ಒಂದು ವಿಧದ ಬಳ್ಳಿ–ಇಷ್ಟನ್ನು ಆ ಕುಡಿಕೆಯಲ್ಲಿ ಅಡಗಿಸಿಟ್ಟಿದ್ದರು. ಅದನ್ನು ತೆಗೆದುಕೊಂಡು ಅಲ್ಲಿಂದ ಮತ್ತೆ ಅಕ್ಷತೆಯನ್ನು ಎರಚುತ್ತ

ಥಿಯೇಟರ್‌ಗೆ ಬಂದರು. ಅಲ್ಲಿ ಎರಡನೇ ದರ್ಜೆಯ ಪ್ರೇಕ್ಷಕರು ನೆಲದ ಮೇಲೆ ಕುಳಿತುಕೊಳ್ಳುವ ಎತ್ತರವಾದ ಸ್ಥಳದಿಂದ ಇಳಿಜಾರಿಗೆ ಬರುವ ಸ್ಥಳಕ್ಕೆ ಬಂದು ಮೇಲಿನಿಂದ ನಿಂಬೆಹಣ್ಣನ್ನು ಆ ಶಕ್ತಿ ಇಳಿಬಿಟ್ಟಿತು. ಇಳಿಜಾರಿನಿಂದ ಮಧ್ಯಸ್ಥಳದಲ್ಲಿ ನಿಂಬೆಹಣ್ಣು ನಿಂತುಬಿಟ್ಟಿತು. ಆಗ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಯಿತು. ಆಗ ಆ ಶಕ್ತಿ ಕೈಸನ್ನೆ ಮಾಡಿ ಇಲ್ಲಿ ಹಳ್ಳ ತೋಡುವಂತೆ ಹೇಳಿದಂತೆಯೇ ಗಡಾರಿಯಿಂದ ಹಳ್ಳ ತೆಗೆದರು. ಅದೇ ರೀತಿಯಿಂದ ಒಂದು ಕುಡಿಕೆಯಲ್ಲಿ ಸಾಮಗ್ರಿಗಳೆಲ್ಲ ಇದ್ದವು; ಅದನ್ನು ತೆಗೆದುಕೊಂಡು ಅಲ್ಲಿಂದ ಮತ್ತೆ ಅಕ್ಷತೆ ಎರಚಿಕೊಂಡು ನಾಟಕ ನಡೆಯುವ ರಂಗಸ್ಥಳಕ್ಕೆ ಬಂದು ರಂಗಸ್ಥಳದ ಮಧ್ಯದಲ್ಲಿ ಅಕ್ಷತೆಯನ್ನು ಹಾಕಿ ಅಲ್ಲಿಯೂ ಕೂಡ ಹಳ್ಳ ತೆಗೆಯುವಂತೆ ಕೈಸನ್ನೆ ಮಾಡಿತು. ಅಲ್ಲಿಯೂ ಇದೇ ರೀತಿಯಾಗಿ ಒಂದು ಕುಡಿಕೆಯಲ್ಲಿ ಇದ್ದ ವಸ್ತುಗಳಿಗಿಂತಲೂ ಒಂದು ಯಂತ್ರದ ರೀತಿಯಲ್ಲಿದ್ದ ಅದಕ್ಕೆ ಕೂದಲುಗಳನ್ನೆಲ್ಲ ಸುತ್ತಿ ಇಟ್ಟಿದ್ದರು. ಅದನ್ನು ತೆಗೆದುಕೊಂಡು ಅಂದು ರಾತ್ರಿಯೇ ತಿಪಟೂರಿನಿಂದ ಕಾರಿನಲ್ಲಿ ಎಲ್ಲರೂ ಹೊರಟು ಹರಿಹರದಲ್ಲಿ ದೇವಸ್ಥಾನದ ಹಿಂಭಾಗದಲ್ಲಿ ಹರಿಯುತ್ತಿರುವ ನದಿಯ ದಂಡೆಗೆ ಬಂದು ಅವನ್ನೆಲ್ಲ ಸುಟ್ಟು ಹಾಕಿ ಆ ನದಿಯಲ್ಲೇ ಸ್ನಾನ ಮಾಡಿ ಅಲ್ಲಿಂದ ಮರುದಿನ ಬೆಳಗ್ಗೆ ತಿಪಟೂರಿಗೆ ಬಂದು ಸೇರಿದರು. ಅಂದು ನಡೆಯಬೇಕಾಗಿದ್ದ ನಾಟಕ 'ದಾನ ಶೂರ ಕರ್ಣ', ಮಿತ್ರರೆಲ್ಲರೂ 'ನೀವೇ ಈ ದಿವಸ ಪಾತ್ರ ಮಾಡಿ' ಎಂದು ಭಾಗವತರಿಗೆ ಹೇಳಿ ಧೈರ್ಯ ತುಂಬಿದರು. ಅದುವರೆಗೂ ಸುಮಾರು ನಾಲ್ಕು ಕ್ಯಾಂಪಿನಲ್ಲಿ ಮಾತ್ರ ಭಾಗವತರು ಕರ್ಣನ ಪಾತ್ರವನ್ನು ವಹಿಸಿದ್ದರು. ಅಂದು ಮಿತ್ರರೆಲ್ಲರೂ ಧೈರ್ಯ ಕೊಟ್ಟಂತೆಯೇ ಭಾಗವತರೂ ಸಹ ಈಶ್ವರನ ಇಚ್ಛೆಯಿದ್ದಂತಾಗಲಿ ಎಂದು ಧೈರ್ಯ ಮಾಡಿ ಪಾತ್ರವಹಿಸಿಯೇ ಬಿಟ್ಟರು. ನಾಟಕವೂ ಯಶಸ್ವಿಯಾಗಿಯೇ ಜರುಗಿತು. ಭಾಗವತರ ಆರೋಗ್ಯ ಸ್ಥಿತಿಯಲ್ಲಿ ಯಾವ ತೊಂದರೆಯೂ ಆಗಲಿಲ್ಲ. ಇದಕ್ಕೆ ಮೊದಲು ಭಾಗವತರು ಈ ಮಾಟ ಮಂತ್ರವೆಂದರೆ ಅಷ್ಟು ನಂಬುತ್ತಿರಲಿಲ್ಲ. ಅಂದಿನಿಂದ ಅಸಹಾಯಕ ಜನರು ಕೆಡಕು ಬಯಸುವ ಈ ದುಷ್ಟ ಕಾರ್ಯವನ್ನು ನಿಜವೆಂದೇ ಭಾವಿಸಿದರು! ಮುಂದೆ ಭಾಗವತರಿಗೆ ಯಾವ ತೊಂದರೆಯೂ ಆಗಲಿಲ್ಲ.

ಹೀಗೆ ಬೇರೆ ಬೇರೆ ನಾಟಕಗಳನ್ನು ಪ್ರದರ್ಶಿಸುತ್ತಾ ಒಂದು ತಿಂಗಳಲ್ಲಿಯೇ ಮಳೆಯೂ ಪ್ರಾರಂಭವಾಗಿ ಕ್ಯಾಂಪು ಮುಗಿಸಿ ನಂತರ ಭದ್ರಾವತಿಯಲ್ಲಿ ಕ್ಯಾಂಪು ಮಾಡಿದರು. ವಿಪರೀತವಾದ ಮಳೆಯಿಂದ ಬಹಳ ನಷ್ಟಕ್ಕೆ ಗುರಿಯಾಗಿ ಅಲ್ಲಿ ಒಂದು ತಿಂಗಳು ಕಾಲ ಕಳೆದು ಶಿವಮೊಗ್ಗದಲ್ಲಿ ಥಿಯೇಟರ್ ಸ್ವಂತವಾಗಿ ಹಾಕಿಸಬೇಕಾದರೆ ಒಂದು ವಾರವಾಗುತ್ತದೆ, ಆದರೂ ಆರ್ಥಿಕ ದೃಷ್ಟಿಯಿಂದಲೂ ಕಷ್ಟವಾಗಿದ್ದ ಕಾರಣದಿಂದ ಶಿವಮೊಗ್ಗ ಟೌನ್‌ಹಾಲಿನಲ್ಲಿ ನಾಟಕವಾಡಬಹುದು

ಚೆನ್ನಾಗಿದೆ ಎಂದು ಹೇಳಿದ ಕೆಲವರ ಮಾತುಗಳಿಗೆ ಮರುಳಾದ ಭಾಗವತರು ಒಡನೆಯೇ ಕ್ಯಾಂಪು ಬದಲಾಯಿಸಿ ಶಿವಮೊಗ್ಗ ಟೌನ್‌ಹಾಲಿನಲ್ಲಿ ನಾಲ್ಕು ದಿನಗಳೊಳಗಾಗಿಯೇ ಎಲ್ಲ ಏರ್ಪಾಡುಗಳನ್ನು ಮಾಡಿಕೊಂಡು 'ಶ್ರೀನಿವಾಸ ಕಲ್ಯಾಣ' ನಾಟಕವನ್ನು ಪ್ರಾರಂಭಿಸಿದರು. ಆದರೆ ಆ ಹಾಲಿನಲ್ಲಿ ಪ್ರತಿಧ್ವನಿ ಇದ್ದ ಕಾರಣ ನಾಟಕ ಜನರಿಗೆ ರಂಜಿಸಲಿಲ್ಲ. ಅಂದರೆ, ನಾಟಕವೇನೋ ಸೊಗಸಾಗಿದೆ, ಪ್ರತಿಯೊಬ್ಬ ನಟ ನಟಿಯರೂ ಸಮರ್ಪಕವಾಗಿದ್ದಾರೆ, ಸಂಗೀತ, ಸಾಹಿತ್ಯವೆಲ್ಲವೂ ಬಹಳ ಚೆನ್ನಾಗಿದೆ. ಆದರೆ ಹಾಲಿನಲ್ಲಿ ಪ್ರತಿಧ್ವನಿ ಇರುವ ಕಾರಣ ಸರಿಯಾಗಿ ಸಂಗೀತ, ಸಾಹಿತ್ಯ ಅರ್ಥವಾಗಿದೆ ರಂಜಿಸುವುದಿಲ್ಲವೆಂಬ ಅಭಿಪ್ರಾಯ ಪ್ರೇಕ್ಷಕರದ್ದಾಯಿತು. ಆಗ ಭಾಗವತರಿಗೆ ತುಂಬ ಬೇಸರವಾಗಿ "ಇನ್ನು ಈ ನಾಟಕ ಕಂಪನಿಯ ಸಹವಾಸ ಸಾಕು. ಈ ಕಷ್ಟಗಳು ನನ್ನಿಂದ ಅನುಭವಿಸಲು ಸಾಧ್ಯವಾಗುವುದಿಲ್ಲ"ವೆಂದು ಭಾವಿಸಿ ಕಂಪನಿಯನ್ನು ನಿಲ್ಲಿಸಿಬಿಡುವುದೆಂದು ತೀರ್ಮಾನಿಸಿದರು. ಆದರೆ ಅಲ್ಲಿಂದ ಸಾಗರದ ಕೆಲವು ಕಲಾವಿದ ಮಿತ್ರರು ಭಾಗವತರನ್ನು ಭೇಟಿ ಮಾಡಿ 'ನೀವು ಸಾಗರದಲ್ಲಿ ಕ್ಯಾಂಪು ಮಾಡಿ,' ಈ ನಾಟಕ ಅಲ್ಲಿ ಚೆನ್ನಾಗಿಯೇ ನಡೆಯುತ್ತದೆ. ನಿಮಗೆ ಒಳ್ಳೆ ಹೆಸರಿದೆ. ನಿಮ್ಮಲ್ಲಿರುವ ಥಿಯೇಟರಿನ ಕೆಲವು ಮರಮುಟ್ಟುಗಳನ್ನು ಕಳಿಸಿಕೊಡಿ, ಮಿಕ್ಕದ್ದನ್ನು ನಾವುಗಳೇ ಏರ್ಪಾಡು ಮಾಡಿ ಥಿಯೇಟರ್ ಹಾಕಿಸಕೊಡುತ್ತೇವೆ. ಒಂದು ವೇಳೆ ನಿಮ್ಮಲ್ಲಿರುವ ನಟನಟಿಯರೇನಾದರೂ ತೊಂದರೆ ಕೊಟ್ಟರೆ ನಾವೆಲ್ಲರೂ ಸಹಕರಿಸುತ್ತೇವೆ. ನಮ್ಮಲ್ಲಿ ಉತ್ತಮ ನಟನಟಿಯರಿದ್ದಾರೆ" ಇತ್ಯಾದಿಯಾಗಿ ಭರವಸೆಯನ್ನಿತ್ತರು. ಆಗ ಭಾಗವತರು ಬಹಳ ಯೋಚಿಸಿ 'ಸರಿ, ಇದೂ ಒಂದು ಕ್ಯಾಂಪು ನೋಡಿಯೇಬಿಡೋಣ' ಎಂದು ತೀರ್ಮಾನ ಮಾಡಿದ ಮೂರು ದಿವಸದ ನಂತರ ಸಾಮಾನುಗಳನ್ನು ಲಾರಿಯಲ್ಲಿ ಸಾಗರಕ್ಕೆ ಕಳಿಸಲು ಏರ್ಪಾಡು ಮಾಡಿದರು. ಆದರೆ ಕೆಲವು ಮುಖ್ಯ ನಟರು "ಎರಡು ತಿಂಗಳಿಂದ ನಮಗೆ ಸರಿಯಾಗಿ ಸಂಬಳ ಕೊಡಲಿಲ್ಲ, ನಮ್ಮ ಲೆಕ್ಕ ತೀರಿಸಿ. ನಾವು ಹೊರಟುಹೋಗುತ್ತೇವೆ" ಎಂದು ನಾನಾ ವಿಧವಾಗಿ ಭಾಗವತರಿಗೆ ತೊಂದರೆ ಕೊಟ್ಟರು. ಆ ನೋವನ್ನು ಸಹಿಸಲಾರದೆ 'ಈ ಕರ್ಮ ನನಗೆ ಬೇಡ'ವೆಂದು ತೀರ್ಮಾನಿಸಿದ ಅವರು ಲಾರಿಗೆ ಹಾಕುತ್ತಿದ್ದ ಸಾಮಾನುಗಳನ್ನೆಲ್ಲ ಇಳಿಸುವಂತೆ ಹೇಳಿದರು. ಅಲ್ಲದೆ, ಅದೇ ದಿನದ ರಾತ್ರಿಯೇ ಸುಮಾರು 10 ಅಡಿ ಎತ್ತರವಿದ್ದ ಶ್ರೀ ವೆಂಕಟೇಶ್ವರ ಸ್ವಾಮಿಯ ಮೌಲ್ಡಿನ ವಿಗ್ರಹವನ್ನು ಪೂಜಿಸಿ ತುಂಗಭದ್ರ ನದಿಯಲ್ಲಿ ತೇಲಿಬಿಟ್ಟರು. ಕಂಪನಿಯವರೆಲ್ಲ "ಇದೇನು ಸ್ವಾಮಿ ಹೀಗೆ ಮಾಡಿದಿರಿ ಎಂದು ಕೇಳಿದರು. ಅದಕ್ಕೆ ಭಾಗವತರು ಮುಂದೆ ತನಗೆ ಕ್ಯಾಂಪು ಮಾಡುವ ಯೋಚನೆಯಿಲ್ಲ, 'ಆ ಸ್ವಾಮಿಯನ್ನು ಮೂಲೆಯಲ್ಲಿ ಬಿಸಾಡುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ, ಆದ್ದರಿಂದ

ಈ ರೀತಿ ಮಾಡಿದೆ ಎಂದು ಹೇಳಿ 'ಇನ್ನು ಮೂರು ದಿವಸದೊಳಗಾಗಿ ನಿಮ್ಮೆಲ್ಲ ಲೆಕ್ಕ ಚುಕ್ತ ಮಾಡಿ ಕಳಿಸಿಬಿಡುತ್ತೇನೆ' ಎಂದು ಹೇಳಿ ಆ ರಾತ್ರಿ ಮಲಗಿದರು. ಬೆಳಗ್ಗೆ ಈ ವಿಚಾರವನ್ನು ತಿಳಿದ ಅಲ್ಲಿಯ ಕೆಲ ದೊಡ್ಡ ಮನುಷ್ಯರು, ಕಲಾಭಿಮಾನಿಗಳು ಭಾಗವತರ ಬಳಿಗೆ ಬಂದು 'ಮುಂದೇನು ಮಾಡುತ್ತೀರಿ' ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಭಾಗವತರು "ನಮ್ಮ ಅಣ್ಣನವರಿಗೆ ಈ ದಿವಸ ದೂರವಾಣಿಯ ಮೂಲಕ 4000 ರೂಗಳನ್ನು ತೆಗೆದುಕೊಂಡು ಒಡನೆಯೇ ಹೊರಟು ಬನ್ನಿ ಕಂಪನಿ ನಿಲ್ಲಿಸಿಬಿಡುತ್ತೇನೆ" ಎಂದು ಹೇಳಿ ಅದರಂತೆಯೇ ತರಿಸಿ ಕಲಾವಿದರ ಹಾಗೂ ಕಂಪನಿಯ ಎಲ್ಲಾ ವರ್ಗದವರ ಲೆಕ್ಕ ಚುಕ್ತ ಮಾಡಿ ಕಳಿಸಿ "ನೀವುಗಳೇನಾದರೂ ಇಲ್ಲಿ ಮಾಡಿಕೊಟ್ಟರೆ ಕಂಪನಿಯ ಸಾಮಾನುಗಳನ್ನೆಲ್ಲ ನಿಮ್ಮ ಸುಪರ್ದಿನಲ್ಲಿಟ್ಟು ಬೆಂಗಳೂರಿಗೆ ಹೋಗಿ ಶಾಂತವಾಗಿರಲು ಪ್ರಯತ್ನ ಪಡುತ್ತೇನೆ. ನಂತರ ಮುಂದಿನ ಯೋಚನೆ" ಎಂದು ಭಾಗವತರು ಹೇಳಿದರು. ಈ ವೇದನೆಯನ್ನರಿತ ಅವರುಗಳು "ಹಾಗೇನೂ ನೀವು ನಿಮ್ಮ ಅಣ್ಣನವರಿಗೆ ತಿಳಿಸುವುದು ಬೇಡ ಇನ್ನೂ ಒಂದು ವಾರ ವಸೂಲಾದಷ್ಟೇ ಸಾಕು. ನಾಟಕಗಳನ್ನು ಆಡುತ್ತಿರಿ ಅಷ್ಟರೊಳಗೆ ನಾವು ಒಂದು ವಿಧವಾದ ಏರ್ಪಾಡು ಮಾಡುತ್ತೇವೆ. ನೀವು ನಾಲ್ಕು ಜನ ಒಳ್ಳೆ ಪಕ್ಕವಾದ್ಯದವರನ್ನು ಬರಮಾಡಿಕೊಂಡು ಒಂದು ಸಂಗೀತ ಕಚೇರಿ ನಡೆಸಿಕೊಡಿ. ಇಲ್ಲಿ ಶಾಸ್ತ್ರೀಯ ಸಂಗೀತಾಭಿಮಾನಿಗಳು ಇದ್ದಾರೆ. ನಾವು ಟಿಕೆಟ್‌ಗಳನ್ನು ಮಾರಿ ನಿಮಗೆ ಈಗ ಬೇಕಾಗಿರುವ ಮೊತ್ತವನ್ನು ಸುಮಾರಾಗಿ ವಸೂಲ್ ಮಾಡಿಕೊಡುತ್ತೇವೆ" ಎಂದು ಹೇಳಿ ಕಂಪನಿಯ ಜನರೆಲ್ಲರಿಗೂ 'ಇನ್ನೂ ಒಂದು ವಾರವಿದ್ದು ನಾಟಕಗಳನ್ನು ಆಡಿ. ನಿಮಗೆ ಬರಬೇಕಾದ ಸಂಬಳದ ಬಾಬ್ತು ಹಣ ಪೂರ್ತಿಯಾಗಿ ತೆಗೆದುಕೊಂಡು ಹೋಗಿ' ಎಂದು ಅವರೇ ಎಲ್ಲರಿಗೂ ಸಮಾಧಾನ ಹೇಳಿ ಅದರಂತೆಯೇ ಒಂದು ದಿನಾಂಕವನ್ನು ನಿಶ್ಚಯಿಸಿ ಸಂಗೀತ ಕಚೇರಿಯನ್ನು ಏರ್ಪಡಿಸಿ ಸುಮಾರು 5000 ರೂಗಳನ್ನು ಟಿಕೆಟ್ ಮೂಲಕ ವಸೂಲ್ ಮಾಡಿ ಸಂಗೀತ ಕಚೇರಿ ನಡೆದ ಮರುದಿನ ಕಂಪನಿಯ ಎಲ್ಲರನ್ನೂ ಕರೆದು ಅವರುಗಳೇ ಬಾಕಿ ಚುಕ್ತ ಮಾಡಿ ಕಳಿಸಿಕೊಟ್ಟರು. ಈ ಮಹತ್ತರವಾದ ಏರ್ಪಾಡಿಗೆ ಕಾರಣರಾದ ಶಿವಮೊಗ್ಗದ ಶ್ರೀಮಾನ್ ಮಹೇಶ್ವರಪ್ಪನವರ ಮಿತ್ರ ಬಳಗದವರನ್ನು ಭಾಗವತರು ಮನಃ ಪೂರ್ವಕವಾಗಿ ಸ್ಮರಿಸುವುದುಂಟು.

ನಂತರದ ಮೂರು ದಿವಸಗಳಲ್ಲಿ ಒಬ್ಬೊಬ್ಬರ ಮನೆಯಲ್ಲಿಯೂ ಭಾಗವತರ ಕುಟುಂಬಕ್ಕೆ ವಿಶ್ವಾಸಪೂರ್ವಕವಾಗಿ ಔತಣಗಳನ್ನು ಏರ್ಪಡಿಸಿ ಸಂತೋಷವಾಗಿ ಅಲ್ಲಿಂದ ಬೀಳ್ಕೊಟ್ಟರು. ಕಾರಿನಲ್ಲಿ ಹೊರಟು ಬೆಂಗಳೂರು ಸೇರಿದರು, ಆಗ ಭಾಗವತರ ಅಣ್ಣನವರಾದಿಯಾಗಿ ಎಲ್ಲರೂ "ಸದ್ಯ ಇದೇನೋ ಒಂದು ಕೆಟ್ಟ

ಗ್ರಹದ ಫಲದಿಂದ ಈ ನಾಟಕ ಕಂಪನಿಯ ಮೂಲಕ ಕಷ್ಟಪಟ್ಟಿದ್ದನ್ನು ಶ್ರೀನಿವಾಸನೇ ಪರಿಹಾರ ಮಾಡಿ ನಿಮ್ಮನ್ನೆಲ್ಲ ಮನೆಗೆ ಕರೆತಂದುಬಿಟ್ಟನಲ್ಲ'' ಎಂದು ಆನಂದಾಬ್ಧಿಯಲ್ಲಿ ಮುಳುಗಿದರು.

**ಸೇವೆಗೆ ಸಂದ ಸನ್ಮಾನಗಳು, ಬಿರುದುಗಳು.....**

ಕೆಲವು ದಿವಸಗಳು ಕಳೆದ ನಂತರ ನಾಟಕ ಕಲಾವಿದರಾದ ಶ್ರೀಕಂಠಮೂರ್ತಿ ಅವರು ತಮ್ಮ ಗೆಳೆಯರನ್ನು ಕರೆದುಕೊಂಡು ಬಂದು "ನೀವು ಕಂಪನಿಯನ್ನು ನಿಲ್ಲಿಸಿಬಿಟ್ಟಿದ್ದೀರಿ. ನಿಮ್ಮ ಕಂಪನಿಯ ಸಾಮಾನುಗಳನ್ನೆಲ್ಲ ನನಗೆ ಕೊಟ್ಟು ಸಹಕರಿಸಿ, ನನಗೂ ಸಹ ಬಹಳ ದಿವಸಗಳಿಂದ ನಾಟಕ ಕಂಪನಿ ಮಾಡಬೇಕೆಂದು ಆಸೆಯಿತ್ತು. ಈ ನಿಮ್ಮ ಸ್ನೇಹಿತರಾದ ಕೃಷ್ಣಪ್ಪನವರು ನನಗೂ ಸ್ನೇಹಿತರು. ಇವರಿಂದಲೇ ಈ ವಿಷಯ ತಿಳಿಯಿತು. ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಬಂದಿದ್ದೇನೆ. ಕೃಪೆ ಮಾಡಿ ಸಾಮಾನುಗಳನ್ನು ಕೊಟ್ಟು ಮುಂದುವರಿಯಲು ಅವಕಾಶ ಕೊಡಿ" ಎಂದು ಕೇಳಿಕೊಂಡರು. ಭಾಗವತರಿಗೆ ಗೆಳೆಯರಿಂದಲೂ ಒತ್ತಾಯ ಬಂದ ಮೇಲೆ ಅದಕ್ಕೊಂದು ಮೊಬಲಗನ್ನು ಮಾತನಾಡಿಕೊಂಡ ನಂತರ "ಒಂದೆರಡು ಕ್ಯಾಂಪಿನಲ್ಲಿ ನೀವೇ ಬಂದು ಶ್ರೀನಿವಾಸನ ಪಾತ್ರ ವಹಿಸಿ ನಿಮ್ಮ ಕಂಪನಿಯಲ್ಲಿದ್ದ ನಟನಟಿಯರನ್ನೆಲ್ಲ ಗೊತ್ತು ಮಾಡಿಕೊಂಡು ಅತಿ ಶೀಘ್ರದಲ್ಲಿಯೇ ನಂಜನಗೂಡಿನಲ್ಲಿ ಕಂಪನಿಯನ್ನು ಪ್ರಾರಂಭಿಸಿಬಿಡೋಣ" ಎಂದು ಹೇಳಿದರು. ಅಲ್ಲದೆ "ನೀವು ಪಾತ್ರ ವಹಿಸುವುದಕ್ಕೆ ಸಂಭಾವನೆಯಾಗಿ ನಾನು ಕೊಡುವುದು ಬೇಡ. ಪ್ರತಿನಿತ್ಯ ನಾಟಕಕ್ಕೆ ವಸೂಲಾಗುವ ಹಣದಲ್ಲಿ ಮೂರನೇ ಒಂದು ಭಾಗ ನಿಮಗೆ ಕೊಡುತ್ತೇನೆಂದು'' ಹೇಳಿ ಅದರಂತೆಯೇ ಎರಡು ತಿಂಗಳ ನಂತರ ನಂಜನಗೂಡಿನಲ್ಲಿ ನಾಟಕ ಪ್ರಾರಂಭವಾಯಿತು. ಆದರೆ ಒಂದು ವಾರ ಮಾತ್ರ ಆತನು ಹೇಳಿದಂತೆ ಹಣ ವಸೂಲಾಗಿದ್ದರಲ್ಲಿ ಮೂರನೇ ಒಂದು ಭಾಗವನ್ನು ಕೊಟ್ಟು ಅನಂತರ ವಸೂಲಾದ ಹಣದ ಲೆಕ್ಕವನ್ನು ಭಾಗವತರಿಗೆ ಹೇಳಿದರು. ಅಲ್ಲಿ ಸುಮಾರು ಒಂದೂವರೆ ತಿಂಗಳು ಮಾತ್ರ ನಡೆಯುವಾಗ್ಗೆ ಅವರಿಗೂ ಇವರಿಗೂ ಮನಸ್ತಾಪವುಂಟಾಗಿ ಮುಂದಿನ ಕ್ಯಾಂಪಿಗೆ ಬರುವುದಿಲ್ಲವೆಂದು ಹೇಳಿಬಿಟ್ಟರು. ಇಂಥ ಕಹಿ ಪ್ರಸಂಗಗಳಿಂದಾಗಿ ಭಾಗವತರು ಪಾತ್ರವಹಿಸುವುದನ್ನು ಬಿಟ್ಟರು. ನಂತರ ಕಂಪನಿಯ ಜವಾಬ್ದಾರಿಯನ್ನು ಶ್ರೀಕಂಠಮೂರ್ತಿಯವರ ಮಗ ಹೊರಬೇಕಾಯಿತು. ಈತನ ಕೋರಿಕೆಯಂತೆಯೂ ಎರಡು ಮೂರು ಕ್ಯಾಂಪುಗಳಲ್ಲಿ ಭಾಗವತರು ಪಾತ್ರವಹಿಸಿದ್ದಲ್ಲದೆ, ಮಾರ್ಗದರ್ಶನವನ್ನೂ ಮಾಡಿದರು. ಆತನಿಗೂ ಕಂಪನಿಯನ್ನು ನಡೆಸಲು ಸಾಧ್ಯವಾಗದೆ ಎಲ್ಲಿಗೋ ಹೊರಟುಹೋದನಂತೆ ! ಇದು ಭಾಗವತರ ನಾಟಕ ಕಂಪನಿಯ ಕತೆ !

ಇಷ್ಟಾದ ನಂತರ ಭಾಗವತರು ತಮ್ಮ ಗುರುಗಳಿಂದ ಸಂಬಂಧ ಮೂರ್ತಿ ಭಾಗವತರಿಗಾಗಿ ಸ್ವಂತ ಮನೆಯಲ್ಲಿಯೇ 'ನಾದಬ್ರಹ್ಮ ಸಂಗೀತ ವಿದ್ಯಾಲಯ' ಎಂಬ ಒಂದು ಪಾಠಶಾಲೆಯನ್ನೂ ಪ್ರಾರಂಭಿಸಿ ಅವರ ಜೊತೆಯಲ್ಲಿ ಭಾಗವತರೂ ಸೇರಿಕೊಂಡು ಸುಮಾರು ಮೂರು ವರ್ಷಗಳ ಕಾಲ ಸಂಗೀತಪಾಠ ಹೇಳಿಕೊಡುತ್ತಿದ್ದರು. ನಂತರ ಗುರುಗಳು ಸ್ವರ್ಗಸ್ಥರಾದ ಕಾರಣದಿಂದ ಬೇಸರಗೊಂಡ ಭಾಗವತರು ಆ ಶಾಲೆಯನ್ನು ನಿಲ್ಲಿಸಿ ಯಥಾ ಪ್ರಕಾರ ಸಂಗೀತ ಕಛೇರಿಗಳನ್ನು ಮುಂದುವರೆಸುತ್ತ ಬಂದರು. ಅದೇ ಸಂದರ್ಭದಲ್ಲಿ ಫಿಲಂ ಕಾರ್ಪೊರೇಷನ್ನಿನಲ್ಲಿ ಮ್ಯಾನೇಜಿಂಗ್ ಡೈರೆಕ್ಟರಾಗಿ ಬಂದಿದ್ದ ಕೆಂಪರಾಜ ಅರಸುರವರು ಭಾಗವತರಿಗೆ ಕನ್ನಡ ಚಿತ್ರ ತಯಾರಿಸಲು ಸಲಹೆ ನೀಡಿದರು. ಆಗ ಭಾಗವತರು "ಚಿತ್ರ ತಯಾರಿಸಲು ಈಗ ನನ್ನಲ್ಲಿ ಹಣವೆಲ್ಲಿದೆ ? ಎಲ್ಲ ಕಳೆದುಕೊಂಡು ಕುಳಿತಿದ್ದೇನೆ" ಎಂದಾಗ "ನೀವೇತಕ್ಕಾಗಿ ಹಣದ ಚಿಂತೆ ಮಾಡುತ್ತಿದ್ದೀರಿ, ಎಲ್ಲವೂ ಈ ಸಂಸ್ಥೆಯಿಂದಲೇ ಏರ್ಪಾಡಾಗುತ್ತದೆ, ನೀವು ಜವಾಬ್ದಾರಿಕೆ ವಹಿಸಿಕೊಂಡು ಒಳ್ಳೆ ಚಿತ್ರ ತಯಾರು ಮಾಡಿಕೊಡಬೇಕು, ಅಷ್ಟೆ" ಎಂದರು ಅರಸುರವರು. ಅದರಂತೆಯೇ ಭಾಗವತರು ಸದಸ್ಯತ್ವದ ಹಣ ಕಟ್ಟಿ (250 ರೂ) ಎಂ.ಕೆ. ಇಂದಿರಾ ಅವರ 'ಸದಾನಂದ' ಎಂಬ ಹೆಸರಿನ ಕಥೆಯನ್ನು ತೆಗೆದುಕೊಂಡು ಹೋಗಿ ಅರಸುರವರಿಗೆ ಕೊಟ್ಟರು. ಅವರೂ ಸಹ ಆ ಕಥೆಗೆ ಸಮ್ಮತಿ ನೀಡಿದರು. ಇದರಂತೆಯೇ ಇನ್ನು ಮೂರು ಜನ ಪ್ರೊಡ್ಯೂಸರುಗಳು ಮುಂದೆ ಬಂದರು. ಒಟ್ಟು ನಾಲ್ಕು ಚಿತ್ರಗಳನ್ನು ಪ್ರಾರಂಭಿಸಿ ಸರಿಯಾದ ವಿತರಣೆಯಿಂದ ಕಾರ್ಯಗಳು ಸಾಗದೆ, ಎಲ್ಲವೂ ಅವರು ಹೇಳಿದಂತೆಯೇ ವಿಧಿಯಿಲ್ಲದೆ ಚಿತ್ರವನ್ನೂ ನಿರ್ಮಿಸಬೇಕಾಗಿ ಬಂತು. ಹೀಗೆ ನಾಲ್ಕು ಚಿತ್ರಗಳು ಮುಗಿಯುತ್ತ ಬರುವ ಸಮಯಕ್ಕೆ ಕೆಂಪರಾಜ ಅರಸುರವರು ಆ ಸಂಸ್ಥೆಯಿಂದ ಹೊರಬರಬೇಕಾದ ಸಂದರ್ಭ ಒದಗಿ ಬಂದದ್ದರಿಂದ ಚಿತ್ರಗಳ ರೀರೆಕಾರ್ಡಿಂಗ್ ಕೆಲಸ ಮುಗಿಸಿ ಹೊರತರಬೇಕಾದರೆ ಬೇರೊಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಆ ಸಂಸ್ಥೆಗೆ ಬಂದ ಕಾರಣ ಅವರಿಗೂ ಚಿತ್ರದ ಕಸುಬಿಗೂ ಸಂಬಂಧವಿರದೆ ಅವರನ್ನು ಅನುಸರಿಸಿ ಪಟ್ಟಪಾಡು ಹೇಳತೀರದು! ಅಂತೂ ಚಿತ್ರಗಳು ಹೊರಬಂದವು. ಅಷ್ಟೇನೂ ಪರಿಣಾಮಕಾರಿ ಎನಿಸಲಿಲ್ಲ. ತಾನಾಗಿ ಒದಗಿಬಂದ ಈ ಒಂದು ಅವಕಾಶವೂ ಕೂಡ ಮನಸ್ಸಿಗೆ ತೃಪ್ತಿಯಾಗಿ ನಡೆಯದೆ ತುಂಬ ಬೇಸರವುಂಟಾಗಿ 'ಸಂಗೀತವೇ ನನ್ನ ದೈವವೆಂದು' ಭಾವಿಸಿಕೊಂಡು ಭಾಗವತರು ಸಂಗೀತ ಕಛೇರಿಗಳನ್ನು ನಡೆಸುತ್ತ, ಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಇದುವರೆಗೂ ಸುಮಾರು ಮುನ್ನೂರು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ನೂರಾಒಂದು ಕನ್ನಡದ ಕೃತಿಗಳನ್ನು 'ಓಂಕಾರನಾದಸುಧಾ' ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಹೊರತಂದರು.

ಡಾ. ಹಂಪ. ನಾಗರಾಜಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಈ ಪುಸ್ತಕ ಪರಿಷತ್ತಿನ ವತಿಯಿಂದ ಹೊರಬಂದಿತು. 'ಓಂಕಾರನಾದ ಸುಧಾ' ಕೃತಿಯು ಭಾಗವತರ ಸಂಗೀತ ಜ್ಞಾನ ಪ್ರತಿಭೆಗೆ ಹಿಡಿದ ಕನ್ನಡಿ. ಸಂಗೀತ ಶಾಸ್ತ್ರದಲ್ಲಿ ವಾಗ್ಗೇಯಕಾರರ ಸ್ಥಾನ ಪಡೆಯಲು ಇದರಿಂದ ಅವರಿಗೆ ಅವಕಾಶವಾಗಿ ಗಾಯಕ ಶಿಖಾಮಣಿ, ನಾದಮಹರ್ಷಿ, ಗಾನಕಲಾಭೂಷಣ, ನಾಟ್ಯಾಚಾರ್ಯ, ಗಾನಾಭಿನಯ ಚಂದ್ರ, ಕಲಾಭಿನವ, ಸಂಗೀತರತ್ನ, ಸಂಗೀತ ನಾಟಕ ಅಭಿನಯ ಕಲಾ ಪ್ರಪೂರ್ಣ, ನಟವರ ಗಾನಗಂಧರ್ವ–ಇವು ಅವರಿಗೆ ಬಂದ ಬಿರುದುಗಳಲ್ಲಿ ಕೆಲವು. 'ಓಂಕಾರನಾದ ಸುಧಾ' ಇವೆಲ್ಲವನ್ನೂ ಮೀರಿಸಿದ ಸ್ಥಾನವನ್ನು ಅವರಿಗೆ ಗಳಿಸಿಕೊಡುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ. ಪದ್ಮವಿಭೂಷಣ ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ಈ ಪುಸ್ತಕವನ್ನು ಕುರಿತು ಹೀಗೆ ಹೇಳಿದ್ದಾರೆ : "ಕೃತಿಗಳ ಸಾಹಿತ್ಯ ಸರಳವಾಗಿದೆ ಮತ್ತು ರಂಜಕವಾದ ಸಂಗೀತಕ್ಕೆ ಅಳವಡಿಸಲ್ಪಟ್ಟಿದೆ. ಓಂಕಾರ, ದೇವರಂಜಿ, ಹಿತಪ್ರಿಯ, ಸ್ತೋತ್ರಪ್ರಿಯ, ರತ್ನಕಾಂತಿ ಮತ್ತು ಕದರಮು ಮುಂತಾದ ಬಳಕೆಯಲ್ಲಿರುವ ರಾಗಗಳ ರಚನೆಗಳು ಸಂಗೀತ ಪ್ರಪಂಚಕ್ಕೆ ಭಾಗವತರ ಕೊಡುಗೆ ಎಂದು ಹೇಳಬಹುದು. ಬಿ.ವಿ.ಕೆ. ಶಾಸ್ತ್ರಿಯವರು, "ಭಾಗವತರ ಕನ್ನಡ ಕೃತಿಗಳು ಕರ್ನಾಟಕ ಸಂಗೀತದ ಪ್ರಯೋಗ ಭಾಗಕ್ಕೆ ಒಳ್ಳೆಯ ಕೊಡುಗೆಯಾಗಿದೆ" ಎಂದರೆ, ಪ್ರೊ|| ಎಸ್.ಕೆ. ರಾಮಚಂದ್ರರಾಯರು "ಭಾಗವತರು ವಾಗ್ಗೇಯಕಾರರೂ ಹೌದೆಂದು ಸಾಧಿಸಲು ಈ ಗ್ರಂಥ ಸಾಕ್ಷಿಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಸಂಗೀತ, ರಂಗಭೂಮಿ ಮತ್ತು ಚಲನಚಿತ್ರರಂಗದಲ್ಲಿನ ಭಾಗವತರ ಸೇವೆ ಮತ್ತು ಸಾಧನೆಯನ್ನು ಹೇಳುತ್ತಾ ಹೋದರೆ ಅಂತ್ಯವಿಲ್ಲ. ಕಲಾರಂಗದಲ್ಲಿ ತೋರಿಸಿರುವ ಸಾಧನೆಗಳನ್ನು ಕಂಡ ಜನ, ಸಂಘ ಸಂಸ್ಥೆಗಳು ಭಾಗವತರಿಗೆ ಗೌರವ ಸಲ್ಲಿಸಿ ಪ್ರಶಸ್ತಿ ನೀಡಿ ಸನ್ಮಾನಿಸಿವೆ. 1956ರಲ್ಲಿ ತಯಾರಾದ ಕನ್ನಡ ಚಿತ್ರಗಳಲ್ಲಿಯ ನಟನೆಗೆ 'ಉತ್ತಮನಟ'ರೆಂದು ಮದ್ರಾಸು ಸಿನಿಮಾ ಅಭಿಮಾನಿಗಳ ಸಂಘದವರು ಆಯ್ಕೆ ಮಾಡಿದರು. 1960ರಲ್ಲಿ ಆಂಧ್ರಪ್ರದೇಶದ ಶ್ರೀಶೈಲ ಮಠದ ಜಗದ್ಗುರು ವಾಗೀಶ ಪಂಡಿತಾರಾಧ್ಯ ಅವರು ಶ್ರೀ ಶೈಲದಲ್ಲಿ ಸನ್ಮಾನಿಸಿ 'ನಟಾಚಾರ್ಯ' ಎಂಬ ಬಿರುದನ್ನು ನೀಡಿರುವರು. 1962ರಲ್ಲಿ ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯ ಸೇವಾಶ್ರಮದ ರಾಘವೇಂದ್ರ ಸ್ವಾಮೀಜಿಯವರು ಸನ್ಮಾನಿಸಿ ಬಂಗಾರದ ಪದಕದೊಂದಿಗೆ 'ಗಾನಾಭಿನಯಚಂದ್ರ' ಎಂಬ ಬಿರುದನ್ನು ನೀಡಿರುವರು. ಇವರ ಸೇವೆಯನ್ನು ಮೆಚ್ಚಿ ಬೆಂಗಳೂರಿನ ಕನ್ನಡಾಭಿಮಾನಿಗಳು 1974ರಲ್ಲಿ ಬಂಗಾರದ ತೋಡವನ್ನು ತೊಡಿಸಿ ಗೌರವಿಸಿದರು. 1976ರಲ್ಲಿ ಶೃಂಗೇರಿ ಮಠದ ಅಭಿನವ ವಿದ್ಯಾತೀರ್ಥ ಜಗದ್ಗುರುಗಳು ಬಂಗಾರದ ಪದಕದೊಂದಿಗೆ 'ಗಾಯಕ ಶಿಖಾಮಣಿ' ಎಂಬ ಬಿರುದನ್ನೂ ನೀಡಿದ್ದಾರೆ. ಅದೇ ವರ್ಷದಲ್ಲಿ ಕರ್ನಾಟಕ ಗಾನಕಲಾ

ಪರಿಷತ್ತಿನ ಆರನೆಯ ಸಂಗೀತಗಾರರ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ 'ಗಾನಕಲಾಭೂಷಣ' ಎಂಬ ಬಿರುದಿನೊಂದಿಗೆ ಬಂಗಾರದ ಪದಕ ನೀಡಿ ಗೌರವಿಸಿರುವರು. 1978ರಲ್ಲಿ ಮೈಸೂರು ಸಂಸ್ಥಾನದ ವಿದ್ವಾಂಸರುಗಳು ಸನ್ಮಾನಿಸಿ 'ಗಾನಕಲಾಗಂಧರ್ವ' ಎಂಬ ಬಿರುದನ್ನು ನೀಡಿರುವರು. ಇವಲ್ಲದೆ, ಭಾಗವತರು ಕರ್ನಾಟಕ ಫಿಲಂ ಅಡ್ವೈಸರಿ ಬೋರ್ಡಿನ ಸದಸ್ಯರಾಗಿದ್ದಾರೆ. 1939ರಿಂದಲೂ ಆಕಾಶವಾಣಿಯಲ್ಲಿ ಕರ್ನಾಟಕ ಸಂಗೀತದ ಕಛೇರಿ ಮಾಡುತ್ತ ಬಂದಿದ್ದಾರೆ. ಜೊತೆಗೆ ಅದೇ ಕೇಂದ್ರದಲ್ಲಿ 'ಎ' ಗ್ರೇಡಿನ ಸುಗಮ ಸಂಗೀತದ ಕಮಿಟಿಯಲ್ಲಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುವರು. ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯವರು ನಡೆಸಿದ ಸಂಗೀತ ಪರೀಕ್ಷೆಯ ಮಂಡಳಿಯ ಚೇರ್ಮನ್ನರಾಗಿಯೂ ಸೇವೆ ಸಲ್ಲಿಸಿರುವರು. ಅಲ್ಲದೆ ಕರ್ನಾಟಕ ಸರಕಾರದವರು ನಾಟಕ ಕಲಾವಿದರಿಗೆ ಕೊಡುತ್ತಿರುವ ಮಾಸಾಶನ ಕಮಿಟಿಯ ಆಯ್ಕೆದಾರ ಸಮಿತಿಯಲ್ಲಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತ ಬಂದಿದ್ದಾರೆ. ಇವರ 'ಮಹಾಕವಿ ಕಾಳಿದಾಸ' ಮತ್ತು 'ಜಗಜ್ಯೋತಿ ಬಸವೇಶ್ವರ' ಕ್ರಮವಾಗಿ 1955 ಹಾಗೂ 1959ರಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದ ಚಿತ್ರಗಳು. ಕನ್ನಡ ಚಲನಚಿತ್ರರಂಗದಲ್ಲಿನ ಸಕ್ರಿಯವಾಗಿ ಭಾಗವಹಿಸಿದ್ದಾಗ ಎಷ್ಟೋ ಜನ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಿದ್ದಾರೆ. ಬಿ. ಸರೋಜಾದೇವಿ, ಪಂಡರಿಬಾಯಿ ಮೊದಲಾದ ಉತ್ತಮ ಕಲಾವಿದೆಯರನ್ನೂ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿಗೆ ಕಾರಣರಾದವರು. ಕೆ.ಆರ್. ಸೀತಾರಾಮಶಾಸ್ತ್ರಿ ಅವರನ್ನು ಕನ್ನಡಿಗರಿಗೆ ನಿರ್ದೇಶಕರನ್ನಾಗಿ ಪರಿಚಯಿಸಿದರು. ಛಾಯಾಗ್ರಾಹಕ ಎ.ಎನ್. ಪರಮೇಶ್ವರ್ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಹೀಗೆ ಹೇಳುತ್ತ ಹೋದರೆ ಪಟ್ಟಿ ಬೆಳೆಯುತ್ತ ಹೋಗಬಹುದು. ಗತಕಾಲದ ಕಲಾ ಕ್ಷೇತ್ರದ ಸಾಧನೆಗಳನ್ನು ಭಾಗವತರು ಹೇಳುತ್ತಿದ್ದರೆ ಅಂದಿನ ಕಲಾವಿದರ ಜೀವನ ಶ್ರದ್ಧೆ, ಸಾಹಸ, ಮೌಲ್ಯಗಳು–ಇವೆಲ್ಲ ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಭಾಗವತರ ಬಗೆಗೆ ಬರೆದ ಈವರೆಗಿನ 'ಜೀವನ ಸಾಧನೆ' ಅವರ ಬದುಕಿನ ಮತ್ತು ಅವರ ಸಮಾಜದ ಕಲಾ ಸಂಸ್ಕೃತಿಯನ್ನು ವಿವರಿಸುವ ಸುಂದರ ಭಾಗವೆಂದೇ ಭಾವಿಸಿರುವೆ. ಅವರ ಬದುಕಿನ ಏರಿಳಿತಗಳನ್ನು ಹೇಳುವಾಗ ಅವರ ಮುಖದಲ್ಲಿ ಸಂತೋಷದ ಹೊಳಪನ್ನು ಕಂಡಿದ್ದೇವೆ. ಅನೇಕ ಸಂದರ್ಭದಲ್ಲಿ ಬಲಿಷ್ಠರ ಕಪಿಮುಷ್ಠಿಯಲ್ಲಿ ಸಿಲುಕಿ ನರಳಿದ ಅನುಭವವನ್ನು ವಿವರಿಸುವಾಗ ಸುರಿಯುವ ಕಣ್ಣೀರನ್ನೂ ಕಂಡಿದ್ದೇನೆ. ಇಂಥ ಅನುಭವ ಅವರನ್ನು ಸಂದರ್ಶಿಸುವಾಗಲೆಲ್ಲ ಆಗಿದೆ. ಇಂಥ ಪ್ರತಿಭಾನ್ವಿತ, ಪ್ರಾಮಾಣಿಕ, ಶ್ರದ್ಧಾವಂತ ಹಾಡುಗಾರರಾಗಿಯೂ ಹಲವಾರು ಕಾರ್ಯಕ್ರಮಗಳನ್ನೂ ನೀಡುತ್ತ ಬಂದ ಕಲಾವಿದ

ಭಾಗತರನ್ನು 1975ರಲ್ಲಿ ಸಂಗೀತ, ನೃತ್ಯ ಅಕಾಡೆಮಿ ಭಾಗವತರಿಗೆ ಶ್ರೇಷ್ಠ ಗಾಯಕರೆಂದು ಪರಿಗಣಿಸಿ ಕರ್ನಾಟಕ ಕಲಾತಿಲಕ ಎನ್ನುವ ಉನ್ನತ ಪ್ರಶಸ್ತಿ ನೀಡಿ ಗೌರವಿಸಿತು. ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ಬಂತು.

1990ರಲ್ಲಿ ಭಾರತ ಸರ್ಕಾರವು ರಂಗ ಸಂಗೀತದಲ್ಲಿ ವಿಶೇಷ ಅಧ್ಯಯನ ನಡೆಸಲು ಸೀನಿಯರ್ ಫೆಲೋಷಿಪ್ ಕೊಟ್ಟು ಸನ್ಮಾನಿಸಿತು. ಹಾಗೂ 1991 ಏಪ್ರಿಲ್ 15ರಂದು ದಿಲ್ಲಿಯಲ್ಲಿ ಆಗಿನ ರಾಷ್ಟ್ರಪತಿಗಳಾಗಿದ್ದ ಆರ್. ವೆಂಕಟರಾಮನ್ ಅವರಿಂದ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದರು. ಹಾಗೂ 'ರಂಗ ಸಂಗೀತ' ಕ್ಷೇತ್ರ ರಾಷ್ಟ್ರ ಪ್ರಶಸ್ತಿಯನ್ನು ಆ ವರ್ಷದಲ್ಲೇ ಪಡೆದರು.

1991ರಲ್ಲಿ ಹೊನ್ನಪ್ಪ ಭಾಗವತರು ಗಾನಕಲಾ ಭೂಷಣ ಸಿ. ಹೊನ್ನಪ್ಪ ಭಾಗವತರ್ ಟ್ರಸ್ಟ್‌ನ್ನು ಸ್ಥಾಪಿಸಿ ಹೆಸರಾಂತ ಹಿರಿಯ ಕಲಾವಿದರಿಗೆ ಗೌರವ ಪ್ರಶಸ್ತಿ ನೀಡಿರುತ್ತಾರೆ.

ಹೊನ್ನಪ್ಪ ಭಾಗವತರು ದಿನಾಂಕ 2–10–1992ರಂದು ತಮ್ಮ ಭೌತಿಕ ಶರೀರವನ್ನು ತ್ಯಜಿಸಿ ಶ್ರೀರಾಮನ ಪಾದ ಸೇರಿದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಎಸ್. ಬಂಗಾರಪ್ಪನವರು ಭಾಗವತರ ಕಲಾ ಪ್ರತಿಭೆಯನ್ನು ಗುರುತಿಸಿ ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ ಭಾಗವತರ ಅಂತ್ಯಸಂಸ್ಕಾರ ಏರ್ಪಡಿಸಿ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಶ್ರದ್ಧಾಂಜಲಿ ಸಮರ್ಪಿಸಿದರು.

ಕನ್ನಡ ಭಾಷೆ, ಕನ್ನಡಿಗರ ಸಂಸ್ಕೃತಿ ಬಗ್ಗೆ ಅಪಾರ ಗೌರವ ಹೊಂದಿದ್ದು, ಸಮಾಜದ ಉತ್ತಮ ಅಭಿರುಚಿಯ ಬೆಳವಣಿಗೆಗೆ ಪ್ರಾಮಾಣಿಕ ಕಲಾತಪಸ್ವಿಯಾಗಿ, ಕಲಾಪ್ರೇಮಿಗಳ ಅಪಾರ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರರಾಗಿದ್ದವರು. ಚಲನಚಿತ್ರರಂಗದಲ್ಲಿ ಸಾಕಷ್ಟು ನೊಂದು, ಬೆಂದು ಸೇವೆ ಸಲ್ಲಿಸಿ, ಅಜರಾಮರ ರಾಗಿದ್ದಾರೆ ಹೊನ್ನಪ್ಪ ಭಾಗವತರು. ಇವರು ಕಲಾರಂಗಕ್ಕೆ ಸಲ್ಲಿಸಿದ ಸೇವೆ ಅವಿಸ್ಮರಣೀಯುವಾಗಿ ಉಳಿಯಲು ದೈವಬಲ, ಹಿರಿಯ ಕಲಾವಿದರ ಪುಣ್ಯಾಶೀರ್ವಾದ, ಶ್ರೀರಕ್ಷೆ ಒದಗಿ ಬಂದಿರುವುದಕ್ಕೆ ಆ ತಾಯಿ ಕನ್ನಡ ಕಲಾದೇವತೆ ಶ್ರೀ ಶಾರದಾಮಾತೆಯಲ್ಲಿ ನಮ್ಮ ವಿನಯಪೂರ್ವಕ ನಮನಗಳು.

○

# ಹೊನ್ನಪ್ಪ ಭಾಗವತರ್ ಎಂಬ ಕಲಾ ಗಾರುಡಿಗ

ರಂಗಭೂಮಿ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ಹೊನ್ನಪ್ಪ ಭಾಗವತರ್ ಏರಿದ ಎತ್ತರ ಅಭೂತಪೂರ್ವವಾದದ್ದು. ದಿಗ್ಗಜನೊಬ್ಬ ಸವೆಸಿದ ಸಾಧನೆಯ ದಾರಿಯ ಹೊರಳು ನೋಟ ಕೇಳಿದ ಒಳ್ಳೆಯ ಸಂಗೀತದ ಮೆಲುಕಿನಂತಿದೆ.

ರಂಗಕಲೆ, ವಿವಿಧ ವಾದ್ಯ ವಾದನ ಹಾಗೂ ಶಾಸ್ತ್ರೀಯ ಸಂಗೀತ ಗಾಯನದಲ್ಲಿ ನೈಪುಣ್ಯ – ಇವೆಲ್ಲವನ್ನೂ ಸಾಧಿಸಿದ ಅಪೂರ್ವ ಕಲಾವಿದ ಸಿ. ಹೊನ್ನಪ್ಪ ಭಾಗವತರ್ ಅವರು ಬೇಸಾಯ ಹಾಗೂ ನೇಕಾರಿಕೆಯನ್ನು ಅವಲಂಬಿಸಿದ್ದ ಕುಟುಂಬದಲ್ಲಿ ಜನಿಸಿದರು. ಹೊನ್ನಪ್ಪನ ಬಾಲ್ಯದ ಬದುಕು ಹಸನಾಗಿರಲಿಲ್ಲ. ಬಡತನವನ್ನು ಕಟ್ಟಿಕೊಂಡು ಹುಟ್ಟಿದ ಚೌಡಸಂದ್ರದ ಹೊನ್ನಪ್ಪ ಶಾಲೆಗೆ ಹೋಗಿ ಕಲಿತಿದ್ದು ಅಲ್ಪ ಸ್ವಲ್ಪ.

ಕುಟುಂಬದಲ್ಲಾದ ಏರುಪೇರುಗಳಿಂದಾಗಿ ಚೌಡಸಂದ್ರ ತೊರೆದು ತಾಯಿಯ ತವರು ಊರಾದ ಮೋಟಗಾನಹಳ್ಳಿಗೆ ಬರಬೇಕಾದಾಗ ಹೊನ್ನಪ್ಪನನ್ನು ಸೆಳೆದಿದ್ದು ಅಲ್ಲಿಯ ಭಜನಾ ಮಂದಿರ.

ಪ್ರತಿನಿತ್ಯ ಭಜನಾ ಮಂದಿರದಲ್ಲಿ ಹಾಜರಾಗಿ ಪದಗಳನ್ನು ಕಲಿತು ಹಾಡುವಲ್ಲಿ ಆಸಕ್ತಿ ತೋರಿದ ಹೊನ್ನಪ್ಪನ ಸಂಗೀತ ಪ್ರೇಮ ಇಲ್ಲಿಂದ ಶುರು. ಭಜನೆ, ಸಂಗೀತ, ನಾಟಕ ಎಂದು ಓಡಾಡುತ್ತಿದ್ದ ಮಗನ ಬಗ್ಗೆ ತಾಯಿಗೆ ಚಿಂತೆ. ಇತ್ತ ಓದು ಕಲಿಯದ ಹೊನ್ನಪ್ಪನಿಗೆ ಕುಟುಂಬ ನಿರ್ವಹಣೆಗಾಗಿ ಕೃಷಿ, ನೇಯ್ಗೆಗೆ ನೆರವಾಗುವಂತೆ ತಾಯಿ ತಾಕೀತು ಮಾಡಿದರಾದರೂ ಅದನ್ನು ಮಗ ಸರಿಯಾಗಿ ಪಾಲಿಸುತ್ತಿರಲಿಲ್ಲ. ಅವನ ದೃಷ್ಟಿಯೆಲ್ಲಾ ಸಂಗೀತದ ಕಡೆಗೆ ಇತ್ತು.

ಹೊನ್ನಪ್ಪನ ಪ್ರತಿಭೆಯ ಅನಾವರಣಕ್ಕೆ ಭಜನಾ ಮಂದಿರವೇ ವೇದಿಕೆಯಾಗಿತ್ತು. ಆದರೆ ಇವನ ಶ್ರದ್ಧೆಗೆ ನೀರೆರೆಯುವವರು ಅಪರೂಪ. ಇವನ ಆಸಕ್ತಿ ಕಂಡ ಶಾಮಣ್ಣ ಎಂಬುವವರು ಬೆಂಬಲವಾಗಿ ನಿಂತರು. ಭಜನಾ ಮಂದಿರದಲ್ಲಿಯೇ ಹೊನ್ನಪ್ಪನಿಗೆ, ಸಂಗೀತದೊಂದಿಗೆ ಓದು ಬರಹ ಕಲಿಸುವುದಕ್ಕೆ ಮುಂದಾದರು. ಆದರೆ ಹೊನ್ನಪ್ಪನ ತಾಯಿಗೆ ಹಳ್ಳಿಯಲ್ಲಿ ಜೀವನ ಸಾಗಿಸಲು ಕಷ್ಟವಾದ್ದರಿಂದ ಕುಟುಂಬದೊಡನೆ ಬೆಂಗಳೂರಿಗೆ ವಲಸೆ ಬಂದರು.

ತಾಯಿ ಕಲ್ಲಮ್ಮ, ಹೊನ್ನಪ್ಪ ಹಾಗೂ ಅವನ ಸಹೋದರ ಎಲ್ಲರೂ ನೇಯ್ಗೆ ಕಾಯಕದಲ್ಲಿ ನಿರತರಾದ ನಂತರ ಜೀವನದ ಬಂಡಿ ನಡೆಯತೊಡಗಿತು. ಹೊನ್ನಪ್ಪನ ಸಂಗೀತಾಸಕ್ತಿ ಕಡಿಮೆಯಾಗಲಿಲ್ಲ. ಬೆಳಗ್ಗೆ ದುಡಿಮೆ, ಸಂಜೆ ಭಜನಾ ಮಂದಿರದಲ್ಲಿ ದೇವರ ನಾಮಗಳ ಗಾಯನ ಎರಡನ್ನೂ ಅವರು ಹೊಂದಿಸಿಕೊಂಡರು.

ಹೊನ್ನಪ್ಪನ ಚುರುಕುತನ, ಕಲಿಯುವ ಆಸಕ್ತಿ, ನೆನಪಿನ ಶಕ್ತಿ, ಆಕರ್ಷಕ ವ್ಯಕ್ತಿತ್ವ, ಉತ್ತಮ ಶಾರೀರ ಹೆಸರಾಂತ ವಿದ್ವಾಂಸ ಸಂಬಂಧಮೂರ್ತಿ ಭಾಗವತರ್ ಅವರಿಗೆ ಇಷ್ಟವಾಗಿ ಅವರು ಹೊನ್ನಪ್ಪನನ್ನು ತಮ್ಮಲ್ಲಿಟ್ಟುಕೊಂಡು ಶಿಕ್ಷಣ ನೀಡತೊಡಗಿದರು.

ಕ್ರಮಬದ್ಧ ಸಂಗೀತ ಶಿಕ್ಷಣ ಪಡೆಯುತ್ತಿದ್ದ ಹೊನ್ನಪ್ಪ ಗಾಯನದ ಜೊತೆಗೆ ತಬಲ, ಹಾರ್ಮೋನಿಯಂ ವಾದ್ಯಗಳನ್ನು ಕಲಿಯಲು ಆರಂಭಿಸಿದರು. ಸಂಬಂಧಮೂರ್ತಿಗಳು ತಮ್ಮ ಗುರುಗಳಾದ ಪಾರ್ಥಸಾರಥಿ ಅವರಲ್ಲಿಯೂ ಶಿಷ್ಯನಿಗೆ ಸಂಗೀತ ಕಲಿಯಲು ಅವಕಾಶ ಕಲ್ಪಿಸಿಕೊಟ್ಟರು.

ಸಂಗೀತ ಕ್ಷೇತ್ರದಲ್ಲಿ ಪೂರ್ಣವಾಗಿ ತೊಡಗಿಕೊಂಡು ಸ್ವತಂತ್ರವಾಗಿ ಕಛೇರಿಗಳನ್ನು ನೀಡುತ್ತ 'ಭಾಗವತರ್' ಎನ್ನಿಸಿಕೊಂಡ ಹೊನ್ನಪ್ಪನಿಗೆ ರಂಗಭೂಮಿಯ ಒಡನಾಟ ನೀಡಿದ್ದೂ ಕೂಡ ಸಂಗೀತವೇ. ಬೆಂಗಳೂರಿನಲ್ಲಿ ನಡೆದ ಸಂಗೀತ ಕಛೇರಿಯೊಂದರಲ್ಲಿ ಗುಬ್ಬಿ ವೀರಣ್ಣನವರಿಗೆ ಹೊನ್ನಪ್ಪನ ಶರೀರ–ಶಾರೀರ ಇಷ್ಟವಾಯಿತು. ಅವರಿಂದ ಹೊನ್ನಪ್ಪನಿಗೆ ಆಹ್ವಾನ ಹೋಯಿತು.

ಸ್ವಲ್ಪ ಸಮಯದಲ್ಲಿ ಗುಬ್ಬಿ ಕಂಪನಿಗೆ ಹೊನ್ನಪ್ಪನ ಪ್ರವೇಶವಾಗಿ ರಂಗಮಂಚ ಹತ್ತಿದರು. ಆ ಕಾಲಕ್ಕೆ ಗುಬ್ಬಿ ಕಂಪನಿ ಘಟಾನುಘಟಿಗಳ ತಾಣ. ಎಂ.ಎನ್. ಗಂಗಾಧರರಾವ್, ಗುರುಮೂರ್ತಪ್ಪ, ಗುಬ್ಬಿ ವೀರಣ್ಣ, ಬಿ. ಜಯಮ್ಮ ಹೀಗೆ ಹಲವು ಖ್ಯಾತನಾಮರಿದ್ದ ಗುಬ್ಬಿ ಕಂಪನಿ ನಾಟಕಗಳಲ್ಲಿ ಹೊನ್ನಪ್ಪನ ಬಣ್ಣದ ಬದುಕು ಅರಳಿತು.

ಬಹುಬೇಗ ನಾಟಕ ರಂಗಕ್ಕೆ ಒಗ್ಗಿಕೊಂಡ ಹೊನ್ನಪ್ಪ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಪ್ರೇಕ್ಷಕರ ಗಮನ ಸೆಳೆದರು. ಕುರುಕ್ಷೇತ್ರ, ಸುಭದ್ರಾ ಕಲ್ಯಾಣ ನಾಟಕಗಳಂತೂ ಹೊನ್ನಪ್ಪನಿಗೆ ಅಪಾರ ಹೆಸರು ತಂದು ಕೊಟ್ಟವು.

ಎತ್ತರದ ನಿಲುವು, ಸ್ಫುಟವಾದ ಭಾಷೆ, ಸುಶ್ರಾವ್ಯ ಹಾಡುಗಾರಿಕೆ ಎಲ್ಲವೂ ಹೊನ್ನಪ್ಪನಿಗೆ ಒಲಿದಿತ್ತು. ಹೀಗಾಗಿ ಕುರುಕ್ಷೇತ್ರ ನಾಟಕದಲ್ಲಿ ನಾರದನಾಗಿ, ಸುಭದ್ರಾ ಕಲ್ಯಾಣದ ಸನ್ಯಾಸಿ ವೇಷಧಾರಿ ಅರ್ಜುನನಾಗಿ ಹೊನ್ನಪ್ಪ ನೋಡುಗರ ಮನ ಗೆದ್ದರು.

ಗಾಯನ, ರಂಗಭೂಮಿಯಲ್ಲಿ ಸೈ ಅನ್ನಿಸಿಕೊಂಡಿದ್ದ ಹೊನ್ನಪ್ಪ ಚಿತ್ರರಂಗದಲ್ಲೂ ಕಾಲಿಟ್ಟು ಛಾಪು ಮೂಡಿಸಿದರು. ಗುಬ್ಬಿ ಕಂಪನಿ ತಯಾರಿಸಿದ 'ಸುಭದ್ರಾ' ಕನ್ನಡ ಚಿತ್ರದಲ್ಲಿ ಅರ್ಜುನನ ಪಾತ್ರವಹಿಸಿದ ಅವರು ನಂತರ ತಮ್ಮದೇ ಆದ ಸಂಸ್ಥೆಯಿಂದ ಗೋರಕುಂಬಾರ, ಜಗಜ್ಯೋತಿ ಬಸವೇಶ್ವರ, ಮಹಾಕವಿ ಕಾಳಿದಾಸ ಮೊದಲಾದ ಸ್ಮರಣೀಯ ಚಿತ್ರಗಳನ್ನು ನಿರ್ಮಿಸಿ ಕುಂಬಾರ, ಬಸವಣ್ಣ, ಕಾಳಿದಾಸನಾಗಿ ಅಮೋಘ ಅಭಿನಯವನ್ನಿತ್ತರು.

ಹೊನ್ನಪ್ಪ ಭಾಗವತರ್ ಅವರು "ಶ್ರೀ ಉಮಾ ಮಹೇಶ್ವರ ಕರ್ನಾಟಕ ಸಂಗೀತ ನಾಟಕ ಮಂಡಲಿ"ಯನ್ನು ಹುಟ್ಟು ಹಾಕಿ ಕರ್ನಾಟಕದಾದ್ಯಂತ ಕ್ಯಾಂಪ್ ಮಾಡಿ ತಮಿಳು ಚಿತ್ರಗಳಲ್ಲೂ ನಟಿಸಿದ್ದರು.

ಕೇಂದ್ರ ಸಂಗೀತ ನಾಟಕ ಅಕಾಡೆಮಿ, ರಾಜ್ಯ ಸರ್ಕಾರ ನಾಟಕ ಅಕಾಡೆಮಿಗಳಿಂದ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಹೊನ್ನಪ್ಪ ವಿದ್ವಾನ್ ಅರುಣಾಚಲಪ್ಪನವರಲ್ಲಿ ಶಾಸ್ತ್ರೀಯವಾಗಿ ಹಾರ್ಮೋನಿಯಂ ಅಭ್ಯಾಸ ಕೂಡ ಮಾಡಿದ್ದರು.

ನೈಜ ಬಹುಮುಖ ಪ್ರತಿಭೆಯ ಹೊನ್ನಪ್ಪ ಕನ್ನಡ ನಾಡಿನ ಸಾಂಸ್ಕೃತಿಕ ನಕ್ಷೆಯಲ್ಲಿ ಮುಖ್ಯಸ್ಥಾನ ಪಡೆದುಕೊಂಡ ಅಪ್ಪಟ ಗ್ರಾಮೀಣ ಪ್ರತಿಭೆ.

# ಹೊನ್ನಪ್ಪ ಭಾಗವತರ್ ಕಲಾಜೀವನಕ್ಕೆ ಓನಾಮ ಹಾಡಿದ ಬೆಂಗಳೂರು

ಡಾ. ರಾಜ್‌ಕುಮಾರ್ ಅವರೊಂದಿಗೆ ನಟಿಸಿದ ಜಗಜ್ಯೋತಿ ಬಸವೇಶ್ವರ ಚಿತ್ರದಲ್ಲಿ ಬಸವಣ್ಣನಾಗಿ ಅಭಿನಯಿಸಿದ್ದ ಚಿತ್ರಗಳ ಶ್ರೇಷ್ಠಯು ಬೆಂಗಳೂರಿನಲ್ಲಿ ಜನಪ್ರಿಯವಾಯಿತಷ್ಟೇ ಅಲ್ಲದೆ ರಾಷ್ಟ್ರಪ್ರಶಸ್ತಿಯನ್ನು ಗಳಿಸಿಕೊಂಡಿತು.

ಕನ್ನಡ ಚಿತ್ರರಂಗವನ್ನು ಬೆಳಗಿದ ಮಹಾನ್ ಹಿರಿಯ ತಾರೆಯರಲ್ಲಿ ಹೊನ್ನಪ್ಪ ಭಾಗವತರ್ ಪ್ರಮುಖರಾದವರು. ಬೆಂಗಳೂರಿನಿಂದ ಕಲಾ ಪ್ರಪಂಚದ ಹೊಸ್ತಿಲನ್ನು ಮೆಟ್ಟಿದವರು. ಮಹಾಕವಿ ಕಾಳಿದಾಸ, ಗುಣಸಾಗರಿ, ಪಂಚರತ್ನ, ಬಸವೇಶ್ವರ, ಭಕ್ತ ಕುಂಬಾರ ಇತ್ಯಾದಿ ಚಿತ್ರಗಳ ಅಮೋಘ ಅಭಿನಯವನ್ನು ಮರೆಯಲು ಸಾಧ್ಯವೇ ಇಲ್ಲ. ಸ್ವಯಂ ಗಾಯಕರೂ ಆಗಿದ್ದ ಭಾಗವತರ್ ತಮ್ಮೆಲ್ಲಾ ಚಿತ್ರಗಳಲ್ಲಿ ತಾವೇ ಹಾಡಿದ್ದರು. ಅವರ ಕಲಾ ಜೀವನಕ್ಕೆ ಹಾಡಿದ ಬೆಂಗಳೂರಿನ ನೆನಪುಗಳು ಬಹಳ ಕುತೂಹಲಕರವೂ ಆಗಿವೆ.

14-1-1915 ರಂದು ನೆಲಮಂಗಲ ತಾಲೂಕಿನ ಚೌಡಸಂದ್ರದಲ್ಲಿ ಜನಿಸಿದ ಹೊನ್ನಪ್ಪ ಬಡತನದ ಬೇಗೆಯಲ್ಲಿ ಬಾಲ್ಯವನ್ನು ಕಳೆದರು. ಹತ್ತನೇ ವಯಸ್ಸಿನಲ್ಲಿಯೇ ತನ್ನ ಸಹೋದರನೊಂದಿಗೆ ಬೆಂಗಳೂರಿನ ಕಬ್ಬನ್‌ಪೇಟೆಯಲ್ಲಿನ ಶ್ರೀಮಂತರೊಬ್ಬರ ಮನೆಯಲ್ಲಿ ರೇಷ್ಮೆ ಜವಳಿ ಕಾಯಕ ಮಾಡಿ ತಿಂಗಳಿಗೆ ಎರಡು ರೂ. ಸಂಬಳ ಪಡೆದು ಜೀವನ ಸಾಗಿಸಬೇಕಾದ ಕಷ್ಟದ ಸ್ಥಿತಿಯಲ್ಲಿದ್ದಾಗ ನಗರದ ಆಂಜನೇಯ ದೇವಾಲಯದಲ್ಲಿ ರಾತ್ರಿವೇಳೆ ಪಾಠ ಮಾಡುತ್ತಿದ್ದ ಉಪಾಧ್ಯಾಯರಿಗೆ ತಿಂಗಳಿಗೆ ನಾಲ್ಕಾಣೆ ಫೀಸು ಕೊಟ್ಟು ವಿದ್ಯಾಭ್ಯಾಸ ಮಾಡಿದ ಛಲವಂತಿಕೆ ಇವರದು. ಹೀಗೆ ಅಲ್ಪಸ್ವಲ್ಪ ವಿದ್ಯೆ ಕಲಿತ ಹೊನ್ನಪ್ಪ ನಿಜವಾಗಿ ಕಲಿತದ್ದು ದೇವಾಲಯದಲ್ಲಿ ಹಾಡುತ್ತಿದ್ದ ಭಕ್ತಿಗೀತೆಗಳು, ಭಾವಗೀತೆಗಳು ಬಾಲಕ ಹೊನ್ನಪ್ಪನಿಗೆ ಬಹುಬೇಗ ದಾಸರ ಗೀತೆಗಳು ಕಂಠಸ್ಥವಾಗಿ ಹೋದವು. ಆತನ ಕಂಠವಾದರೊ ಗಂಧರ್ವಾಂಶದಿಂದ ಕೂಡಿತ್ತು. ಕಾಮನಹಬ್ಬ, ಬಾಬಯ್ಯನ ಹಬ್ಬಗಳಲ್ಲಿ ಹುಲಿವೇಷ, ಭಜನಾ ಮಂದಿರಗಳಲ್ಲಿ ವಾದ್ಯಗಳೊಂದಿಗೆ ಕೀರ್ತನೆಗಳು, ಭಜನೆಗಳಲ್ಲಿ ಭಾಗವಹಿಸುತ್ತಿದ್ದ ಬಾಲಕನ ಚುರುಕುತನ ಕಂಡವರು ಹೊನ್ನಪ್ಪನನ್ನು ವಿಶೇಷವಾದ

ಪ್ರೀತ್ಯಾದರಗಳಿಂದ ಗೌರವಿಸಿದರು. ತನ್ನ ಹುಟ್ಟೂರಿನಲ್ಲಿಯೂ ಇದೇ ಸಂಭ್ರಮದ ಪ್ರತಿಕ್ರಿಯೆಗಳ ಪ್ರೋತ್ಸಾಹ ದೊರೆತಾಗ ಹೊನ್ನಪ್ಪನಿಗೆ ಬೆಂಗಳೂರಿನಲ್ಲಿಯೇ ಉಳಿದು ಮತ್ತಷ್ಟು ಕಲಿತು ನನ್ನ ಹೆತ್ತ ತಾಯಿಯನ್ನು ಸಂತುಷ್ಟಗೊಳಿಸಬೇಕೆಂಬ ಹಂಬಲ ಗಟ್ಟಿಯಾಯಿತು.

1928ರಲ್ಲಿ ಮಹಾರಾಜರ ಜ್ಯೂಬಿಲಿ ಉತ್ಸವ ಬೆಂಗಳೂರಿನಲ್ಲಿ ಜರುಗಿದಾಗ ಗೆಳೆಯರೊಂದಿಗೆ ಸೇರಿ ಹಳ್ಳಿಯಿಂದ ಬೆಂಗಳೂರಿಗೆ ನಡೆದೇ ಬಂದ ಹೊನ್ನಪ್ಪ ಖಾಯಂ ಆಗಿ ಬೆಂಗಳೂರಿನಲ್ಲಿಯೇ ಉಳಿದುಕೊಳ್ಳುವಂತಾಯಿತು. ವೃತ್ತಿ ಕೈಮಗ್ಗದ ಕೆಲಸ. ಹದಿನೆಂಟು ರೂಪಾಯಿ ಕೂಲಿ. ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ ದೊರೆಯುತ್ತಿದ್ದ ಕಾಲವದು. ಮುಂದಿನ ಸಾಧನೆಗಾಗಿ ಹೊನ್ನಪ್ಪ ಶಾಸ್ತ್ರೀಯ ಸಂಗೀತ ಅಭ್ಯಾಸಕ್ಕಾಗಿ ಹಾತೊರೆಯುತ್ತಿದ್ದಾಗ ಒಮ್ಮೆ ಬೆಂಗಳೂರಿನ ಸಂಬಂಧಿಕರ ಮದುವೆ ಮನೆಯಲ್ಲಿ ಅವಕಾಶ ಹುಡುಕಿಕೊಂಡು ಬಂದಿತು. ಅಲ್ಲಿಗೆ ಹಿರಿಯ ಗಾಯನಕಾರರಾದ ಚೆನ್ನೈ ಮೂಲದ ಸಂಬಂಧಮೂರ್ತಿ ಎಂಬುವವರು ಬಂದಿದ್ದಾಗ ಹೊನ್ನಪ್ಪನನ್ನು ಹಾಡಲು ಉತ್ತೇಜಿಸಿದ್ದರಿಂದ ಅವರ ಗಾಯನ ಪ್ರತಿಭೆ ಅಲ್ಲಿ ಸಶಕ್ತವಾಗಿ ಪ್ರಕಟವಾಯಿತು. ಹಿರಿಯರಿಂದ ಹಾರೈಕೆಯೂ ದೊರೆಯಿತು. ಮುಂದೆ ಖ್ಯಾತ ಕೊಳಲು ವಾದಕ ಮಹಾಲಿಂಗಂ ಅವರ ಕಾರ್ಯಕ್ರಮ ನೀಡಿದ ನಗರದ ವೇದಿಕೆಯಲ್ಲಿ ಹೊನ್ನಪ್ಪರಿಗೆ ಅವಕಾಶ ದೊರೆತದ್ದು, ಬೆಂಗಳೂರಿನ ಸಂಗೀತಪ್ರಿಯರಿಗೆ ಹೊನ್ನಪ್ಪನ ಗಾಯನ ಸಾಮರ್ಥ್ಯದ ಪರಿಚಯವಾಗುವಂತಾಯಿತು. ಹಾರ್ಮೋನಿಯಂ ವಾದಕ ಅರುಣಾಚಲಪ್ಪನವರ ಆಶೀರ್ವಾದವೂ ಲಭಿಸಿತು. ಹಾಡಲು ಶುರುಮಾಡಿದ ಎರಡೇ ವರ್ಷದಲ್ಲಿ ಕಛೇರಿ ನೀಡಲು ಆರಂಭಿಸಿದ ಹೊನ್ನಪ್ಪ ಅವರ ಕೀರ್ತಿ ಬೆಂಗಳೂರಿನ ಮನೆಮಾತಾಯಿತು.

ಒಮ್ಮೆ ಬೆಂಗಳೂರಿನಲ್ಲಿ ಜರುಗಿದ ತ್ಯಾಗರಾಜ ಉತ್ಸವ ಸಮಾರಂಭದಲ್ಲಿ ಹೊನ್ನಪ್ಪನ ಸಂಗೀತ ಕಛೇರಿ ಏರ್ಪಾಡಾಗಿತ್ತು. ಕಾರ್ಯಕ್ರಮಕ್ಕೆ ಅಂದಿನ ದಿವಾನರಾಗಿದ್ದ ಮಿರ್ಜಾ ಸಾಹೇಬರು ಬಂದಿದ್ದರು. ಅವರು ಯಾವುದೇ ಕಾರ್ಯಕ್ರಮಗಳಲ್ಲಿ ಹೆಚ್ಚು ಹೊತ್ತು ಕುಳಿತುಕೊಳ್ಳುವವರಲ್ಲ. ಆದರೆ ಅಂದು ಹೊನ್ನಪ್ಪನಸಂಗೀತ ಕಛೇರಿಯನ್ನು ಪೂರ್ಣವಾಗಿ ಕೇಳಿ ಆನಂದದಿಂದ ನಮ್ಮ ಬೆಂಗಳೂರಿನ ಕಲಾವಿದರೇ ಎಂದು ಅಚ್ಚರಿಪಟ್ಟರು. ದಿವಾನರಿಂದ ಶಹಬಾಸ್‌ಗಿರಿ ಪಡೆದ ಬೆಂಗಳೂರಿನ ಈ ಗಾಯನ ಪ್ರತಿಭೆ ಮುಂದೆ ನಾಡಿನಲ್ಲಲ್ಲದೆ ಹೊರರಾಜ್ಯಗಳಲ್ಲಿ ಹೆಸರುಗಳಿಸುವಂತಾಯಿತು. ಹೀಗೆ ಸಾಗಿದ ಹೊನ್ನಪ್ಪನ

ಸಂಗೀತ ಕಛೇರಿಯ ಜನಪ್ರಿಯತೆ ಪ್ರಚುರಪಟ್ಟಾಗ 'ಬೆಂಗಳೂರಿನ ಹೊನ್ನಪ್ಪ ಭಾಗವತರ್' ಎಂಬ ಪಟ್ಟ ಸುಭದ್ರವಾಯಿತು.

ಬೆಂಗಳೂರು ಹೊನ್ನಪ್ಪ ಭಾಗವತರ್ ಆಗಿಯೇ ಅವರು ಚಲನಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರ ಮೊದಲ ಚಿತ್ರ 'ಅಂಬಿಕಾಪತಿ' ಎಂಬ ತಮಿಳು ಚಿತ್ರವಾಗಿದ್ದು ಅವಕಾಶಗಳು ಅರಸಿ ಬರಲಾರಂಭಿಸಿದವು.

ಬೆಂಗಳೂರಿನ ಎಂಪೈರ್ ಫೋಟೋ ಸ್ಟುಡಿಯೋದ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಹೊನ್ನಪ್ಪ ಭಾಗವತರ ಸಂಗೀತ ಕಛೇರಿ ಏರ್ಪಾಟಾಗಿತ್ತು. ರಂಗದಿಗ್ಗಜ ಗುಬ್ಬಿವೀರಣ್ಣನವರು ಆಹ್ವಾನಿತರಾಗಿದ್ದರು. ಹೊನ್ನಪ್ಪ ಭಾಗವತರ ಸಂಗೀತವನ್ನು ಆಲಿಸಿದ ವೀರಣ್ಣನವರು, ಸೊಗಸಾದ ಶಾರೀರ ಮತ್ತು ರಾಜಠೀವಿಯ ಅಂಗ ಸೌಷ್ಠವವನ್ನು ಕಂಡು ತಮ್ಮ ಗುಬ್ಬಿ ಕಂಪನಿಗೆ ಆಹ್ವಾನ ನೀಡಿದರು. ಮೊದಲಿಗೆ ತಮ್ಮ ಸಂಗೀತ ಸಾಧನೆಯಲ್ಲಿ ಲೀನರಾದ ಹೊನ್ನಪ್ಪನು ವೀರಣ್ಣನವರ ಆಹ್ವಾನವನ್ನು ಒಪ್ಪಲಿಲ್ಲವಾದರೂ ಅವರ ಯಾವುದೇ ಕಲಿಕೆಯ ಸ್ವಾತಂತ್ರಕ್ಕೆ ಧಕ್ಕೆ ಬಾರದು ಎಂದಾಗ ಹೊನ್ನಪ್ಪ ಭಾಗವತರು ಸಂತೋಷದಿಂದಲೇ ಒಪ್ಪಿ ಗುಬ್ಬಿ ಕಂಪನಿಯ ಕಲಾವಿದರಾಗಿ ಸೇರ್ಪಡೆಯಾದರು. ಹೀಗೆ ಹೊನ್ನಪ್ಪಭಾಗವತರ್ ಗುಬ್ಬಿ ಕಂಪನಿಯನ್ನು ಬೆಂಗಳೂರಿನಲ್ಲಿಯೇ ಸೇರಿಕೊಂಡಿದ್ದು ವಿಶೇಷ. ಮುಂದೆ ವೀರಣ್ಣನವರು ನಿರ್ಮಿಸಿದ 'ಸುಭದ್ರ' ಪೌರಾಣಿಕ ಚಿತ್ರದಲ್ಲಿಯೂ ಹೊನ್ನಪ್ಪನವರು ಅರ್ಜುನನ ಪಾತ್ರಕ್ಕೆ ಆಯ್ಕೆಯಾದರು. ಆದರೆ ಕಾರಣಾಂತರದಿಂದ ಆ ಪಾತ್ರಕ್ಕೆ ಬೇರೊಬ್ಬ ನಟನನ್ನು ಗೊತ್ತುಪಡಿಸಿದ ವಿಷಯ ಬೆಂಗಳೂರಿನ ತಮ್ಮ ಕಛೇರಿಯಲ್ಲಿ ತಿಳಿದಾಗ ಹೊನ್ನಪ್ಪಭಾಗವತರ್ ಅದನ್ನು ತಣ್ಣಗೆ ಸ್ವೀಕರಿಸಿದರು. ಬೆಂಗಳೂರಿನಲ್ಲಿದ್ದುಕೊಂಡೇ ಕಂಪನಿ ಚಟುವಟಿಕೆ ಹಾಗೂ ತಮಿಳು ಚಿತ್ರಗಳಲ್ಲಿ ನಿರತರಾಗಿದ್ದರು. ಕೊನೆಗೆ ಅರ್ಜುನನ ಪಾತ್ರ ಮರಳಿ ಹೊನ್ನಪ್ಪಭಾಗವತರನ್ನೇ ಹುಡುಕಿಕೊಂಡು ಬಂದಿತು. ಮತ್ತೆ ಹೇಗೆ ಒಪ್ಪಿಸುವುದೆಂಬ ಸಂದಿಗ್ಧದಲ್ಲಿ ವೀರಣ್ಣನವರು ಸಿಲುಕಿದಾಗ, ಖುದ್ದು ಹೊನ್ನಪ್ಪ ಭಾಗವತ್‌ರೇ ದೊಡ್ಡತನ ಮೆರೆದು ಬೆಂಗಳೂರಿನ ಶಿವಾನಂದ ಥಿಯೇಟರ್‌ನಲ್ಲಿ, ಬೇಜಾರಿನಲ್ಲಿದ್ದ ವೀರಣ್ಣನವರನ್ನು ವಿನಯದಿಂದಲೇ ಪಾತ್ರವನ್ನು ಒಪ್ಪಿರುವುದಾಗಿ ಹೇಳಿದರು. ಅಂದಿನ ಕಲಾವಿದರು ಯಾವುದೇ ಸಣ್ಣಪುಟ್ಟ ವಿಷಯಗಳನ್ನು ಮನಸ್ತಾಪದವರೆಗೂ ಮುಂದುವರೆಸುತ್ತಿರಲಿಲ್ಲ ಎನ್ನಲು ಈ ಘಟನೆಯೇ ಒಂದು ಉದಾಹರಣೆ. ಮುಂದೆ ವೀರಣ್ಣನವರ ನಿರ್ಮಾಣದಲ್ಲಿಯೇ ಹೇಮರೆಡ್ಡಿ ಮಲ್ಲಮ್ಮ ಮತ್ತು ಗುಣಸಾಗರಿ ಚಿತ್ರಗಳಲ್ಲಿಯೂ ಹೊನ್ನಪ್ಪ ಭಾಗವತರ್ ಅಭಿನಯಿಸಿ ಚಿತ್ರಗಳು ಬೆಂಗಳೂರಿನಲ್ಲಿ ಯಶಸ್ವಿ ಪ್ರದರ್ಶನ ಕಂಡವು.

1946 ರಲ್ಲಿ ಹೊನ್ನಪ್ಪ ಭಾಗವತರ್ ಸ್ವತಂತ್ರವಾಗಿ ನಿರ್ಮಿಸಿದ ಭಕ್ತ ಕುಂಬಾರ ಚಿತ್ರದಲ್ಲಿ ಸ್ವಯಂ ನಾಯಕ ಆಗಿದ್ದು. ಚಿತ್ರ ಬಿಡುಗಡೆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಚಿತ್ರಮಂದಿರಕ್ಕಾಗಿ ಬಹಳಷ್ಟು ಶ್ರಮ ಪಡಬೇಕಾಯಿತು. ಇದೇ ಸಮಯದಲ್ಲಿ ನಗರದಲ್ಲಿ ಅದೇ ಕಥೆ ಆಧರಿಸಿದ ತಮಿಳು ಚಿತ್ರ 'ಚಕ್ರಧಾರಿ' ಬಿಡುಗಡೆಗೆ ಸಿದ್ಧವಾಯಿತು. ಅದರಲ್ಲಿ ನಾಗಯ್ಯ ನಾಯಕರಾಗಿದ್ದರು. ಆದರೆ ಬೆಂಗಳೂರಿನ ಪ್ರೇಕ್ಷಕರು ಕನ್ನಡದ ಕುಂಬಾರನನ್ನು ಗೆಲ್ಲಿಸಿದರು. ಈ ಕಾರಣಕ್ಕಾಗಿ ಹೊನ್ನಪ್ಪ ಭಾಗವತರ್ ಬೆಂಗಳೂರಿನ ಪ್ರೇಕ್ಷಕರನ್ನು  ಸದಾ ಸ್ಮರಿಸುತ್ತಿದ್ದರು. ಡಾ. ರಾಜ್‌ಕುಮಾರ್ ಅವರೊಂದಿಗೆ ನಟಿಸಿದ ಜಗಜ್ಯೋತಿ ಬಸವೇಶ್ವರ ಚಿತ್ರದಲ್ಲಿ ಬಸವಣ್ಣನಾಗಿ ಅಭಿನಯಿಸಿ ಚಿತ್ರವೂ ಬೆಂಗಳೂರಿನಲ್ಲಿ ಜನಪ್ರಿಯವಾಯಿತಷ್ಟೇ ಅಲ್ಲದೆ ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿಕೊಂಡಿತು. ಹೀಗೆ ಅವರ ಸಂಗೀತ, ರಂಗಭೂಮಿ ಮತ್ತು ಚಲನಚಿತ್ರ ಬದುಕು ಬೆಂಗಳೂರಿನಿಂದ ಅರಳಿ ಬಿರಿಯುತ್ತಲೇ ಹೋಯಿತು.

ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ನೆರವಿನಿಂದ ಕಾದಂಬರಿಗಾರ್ತಿ ಎಂ.ಕೆ. ಇಂದಿರಾ ಅವರ ಕಾದಂಬರಿ ಆಧಾರಿತ 'ಸದಾನಂದ' ಚಿತ್ರ ನಿರ್ಮಿಸಿದ್ದ ಆ ಚಿತ್ರದಲ್ಲಿ ಇವರ ಹಿರಿಯ ಪುತ್ರ ಕುಮಾರ ಭಾಗವತರ್ ಮುಖ್ಯ ಪಾತ್ರವಹಿಸಿದ್ದರು. ಬಳಿಕ ಅವರು ಚಿತ್ರರಂಗಕ್ಕೆ ವಿದಾಯ ಹೇಳಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ನೂರಾರು ಸಂಗೀತ ಕೀರ್ತನೆಗಳನ್ನು 'ಓಂಕಾರನಾದ ಸುಧಾ' ಶೀರ್ಷಿಕೆಯ ಮಹತ್ವದ ಕೃತಿಯೊಂದನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿತು. ಕಸಾಪನ ಅಧ್ಯಕ್ಷರಾಗಿದ್ದ ಡಾ. ಹಂ.ಪ.ನಾಗರಾಜಯ್ಯ ಅವರು ಈ ಕೃತಿ ಹೊರತರಲು ವಿಶೇಷ ಆಸಕ್ತಿ ವಹಿಸಿದ್ದರು. ಹೊನ್ನಪ್ಪ ಭಾಗವತರಿಗೆ ವಾಗ್ಗೇಯಕಾರರೆಂಬ ಗೌರವ ಪ್ರಾಪ್ತವಾಯಿತು. ಕೃತಿಯನ್ನು ಓದಿದ ಸಂಗೀತ ಕ್ಷೇತ್ರದ ಹಿರಿಯ ಸಾಧಕ ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ಬೆಂಗಳೂರಿನ ಸಮಾರಂಭವೊಂದರಲ್ಲಿ ಭಾಗವತರನ್ನು ಅಭಿನಂದಿಸುತ್ತಾ, ಕೃತಿಯ ಸಂಗೀತ ಪ್ರಪಂಚಕ್ಕೆ ಭಾಗವತರು ನೀಡಿದ ವಿಶೇಷ ಕೊಡುಗೆಯಾಗಿದೆ ಎಂದು ಶ್ಲಾಘಿಸಿದರು.

ಬೆಂಗಳೂರಿನಲ್ಲಿ 1969 ರಲ್ಲಿ ಆರಂಭಗೊಂಡ ಗಾನಕಲಾ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾಗಿದ್ದ ಹೊನ್ನಪ್ಪ ಭಾಗವತರ್ ಕಿರಿಯ ಸಾಧನಾಕಾಂಕ್ಷಿಗಳಿಗೆ ಮಾದರಿಯಾಗಿದ್ದರು. ಅವರಿಗೆ ಸಂದ ಬಿರುದು, ಸನ್ಮಾನಗಳಿಗೆ ಲೆಕ್ಕವೇ ಇಲ್ಲ. 1974 ರಲ್ಲಿ ಬೆಂಗಳೂರಿನಲ್ಲಿ ಅವರ ಅಭಿಮಾನಿ ವರ್ಗದವರೆಲ್ಲಾ ಸೇರಿ ಅವರಿಗೆ ಬಂಗಾರದ ಕಡಗ ತೊಡಿಸಿ ಅದ್ದೂರಿಯಾಗಿ ಸನ್ಮಾನಿಸಿದರು. 1976ರಲ್ಲಿ ಬೆಂಗಳೂರಿನ ಕರ್ನಾಟಕ ಗಾನಕಲಾ ಪರಿಷತ್ತಿನ ಆರನೆಯ ಸಂಗೀತಗಾರರ ಸಮ್ಮೇಳನದಲ್ಲಿ ಹೊನ್ನಪ್ಪ ಭಾಗವತರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಕರ್ನಾಟಕ

ಶಾಸ್ತ್ರೀಯ ಸಂಗೀತದಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿ 'ಗಾನಕಲಾಭೂಷಣ' ಬಿರುದಿನೊಂದಿಗೆ ಬಂಗಾರದ ಪದಕ ನೀಡಿ ಗೌರವಿಸಲಾಯಿತು.

ತುಂಬು ಕಲಾ ಜೀವನ ನಡೆಸಿದ ಹೊನ್ನಪ್ಪ ಭಾಗವತರ್ ಅವರು ತನ್ನ ಕೊನೆಯ ದಿನಗಳಲ್ಲಿ ಅನಾರೋಗ್ಯದಿಂದ ಬಳಲಿದರು. 1992ರಲ್ಲಿ ತಾವೇ ಸ್ಥಾಪಿಸಿದ ಹೊನ್ನಪ್ಪ ಭಾಗವತರ್ ಟ್ರಸ್ಟ್ ವತಿಯಿಂದ ಸಾಂಸ್ಕೃತಿಕ ಸೇವೆಯನ್ನು ಬೆಂಗಳೂರಿನ ಮೂಲಕ ನೀಡಬೇಕೆಂಬ ಮಹದಾಸೆ ಅವರಲ್ಲಿತ್ತು. ಆದರೆ ಅದೇ ವರ್ಷದಲ್ಲಿ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು.

ಹಿರಿಯ ಕಲಾವಿದನ ಗೌರವಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆ ಅವರು ವಾಸಿಸುತ್ತಿದ್ದ ಚಾಮರಾಜಪೇಟೆಯಲ್ಲಿನ ರಸ್ತೆಯೊಂದಕ್ಕೆ ಹೊನ್ನಪ್ಪ ಭಾಗವತರ್ ರಸ್ತೆ ಎಂದು ನಾಮಕರಣ ಮಾಡಿತು. ಅಲ್ಲದೆ ಹೊನ್ನಪ್ಪ ಭಾಗವತರ ಜೀವನ, ಸಾಧನೆಗಳ ಕಿರು ಪರಿಚಯ ವಿದ್ಯಾರ್ಥಿಗಳಿಗೆ ಆಗಬೇಕೆಂಬ ಉದ್ದೇಶದಿಂದ ಶಿಕ್ಷಣ ಇಲಾಖೆಯು ಮಾಧ್ಯಮಿಕ ತರಗತಿಗೆ ಶ್ರೀಯುತ ಬನಶಂಕರಯ್ಯ (ಬೆಂಗಳೂರು ನ್ಯಾಷನಲ್ ಹೈಸ್ಕೂಲ್ ಮುಖ್ಯ ಪ್ರಾಧ್ಯಾಪಕರು) ವತಿಯಿಂದ ಪಠ್ಯವನ್ನಾಗಿಸಿದೆ. ಬೆಂಗಳೂರಿನ ಒಂದು ಕಾರ್ಯಕ್ರಮದಲ್ಲಿ ಡಾ. ರಾಜ್‌ಕುಮಾರ್ ಅವರು ಹೊನ್ನಪ್ಪ ಭಾಗವತರ ಸಾಧನೆಯನ್ನು ನೆನೆಯುತ್ತಾ 'ಸೂರ್ಯನನ್ನು ಕಂಡು ಯಾರಾದರೂ ಸೂರ್ಯನ ಪರಿಚಯ ಮಾಡಿಕೊಡಲಾದೀತೆ, ಹಾಗೆಯೇ ಹೊನ್ನಪ್ಪನವರೂ ಸಹಿತ ಸೂರ್ಯ ಸದೃಶ ಸಾಧನಾ ಪುರುಷರು' ಎಂದು ಉದ್ಗರಿಸಿದ್ದರು. ಹೊನ್ನಪ್ಪ ಭಾಗವತರ ಹೆಸರಿನ ಟ್ರಸ್ಟ್ ಮೂಲಕ ಅವರ ಕುಟುಂಬ ವರ್ಗ ನಿರಂತರ ಸಂಗೀತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

○

# ಹೊನ್ನಪ್ಪ ಭಾಗವತರ ವಿಶೇಷ ಸಂದರ್ಶನ

ಸಂಗೀತ, ನಾಟಕ, ಸಿನಿಮಾ ಮತ್ತು ಹರಿಕಥೆಗಳಿಂದ ತನ್ನ ಕಾಲದ ನಟರಲ್ಲೇ ಅತ್ಯಂತ ಮನ್ಮಥ ಸದೃಶ ಸುಂದರ ಪುರುಷರಾಗಿದ್ದ ಹೊನ್ನಪ್ಪ ಭಾಗವತರು ಕನ್ನಡ–ತಮಿಳು–ತೆಲುಗು ರಸಿಕರಿಗೆ ದಂತಕತೆಯಾಗಿದ್ದರು. ಅವರ ಹಾಡು, ಅಭಿನಯಗಳನ್ನು ಪ್ರೇಕ್ಷಕರು, ಶ್ರೋತೃಗಳು ಈಗಲೂ ಸ್ಮರಿಸಿಕೊಳ್ಳುತ್ತಿದ್ದಾರೆ. ತಮ್ಮ ಕಾಲದ ಅನುಭಗಳೊಂದಿಗೆ ಇಂದಿನ ಬದಲಾವಣೆಗಳನ್ನು ಇಲ್ಲಿ ಚರ್ಚಿಸಿರುವ ಭಾಗವತರು ಸ್ವಾರಸ್ಯಕರವಾದ ಇತಿಹಾಸದ ಪುಟಗಳನ್ನೆ ತೆರೆದಿಟ್ಟಿದ್ದಾರೆ.

---

1937ರ ಸಮಯ. ಸೇಲಂನಲ್ಲಿ ತ್ಯಾಗರಾಜ ಸಂಗೀತೋತ್ಸವ. ತರುಣ ಹೊನ್ನಪ್ಪ ಅಲ್ಲಿಗೆ ಹಾಡಲು ಹೋದರು. ಎಲ್ಲರ ಮನ ಗೆದ್ದು ಸಂಗೀತಕ್ಕೆ ಮಾರುಹೋದವರಲ್ಲಿ ಕೆಲವು ಯುವ ಚಿತ್ರ ನಿರ್ಮಾಪಕರೂ ಇದ್ದು ಸಹಜವಾಗಿಯೇ ಚಿತ್ರವೊಂದರಲ್ಲಿ ಅಭಿನಯಿಸಲು ಆಹ್ವಾನ. ಆಗಿನ ಖ್ಯಾತ ನಾಯಕ ಎಂ.ಕೆ. ತ್ಯಾಗರಾಜ ಭಾಗವತರ್ ಜೊತೆ **'ಅಂಬಿಕಾಪತಿ'** ತಮಿಳು ಚಿತ್ರದಲ್ಲಿ ನಾಯಕನ ಮಿತ್ರನ ಪಾತ್ರ. ಕಲ್ಕತ್ತದಲ್ಲಿ ಚಿತ್ರೀಕರಣ ಸಂದರ್ಭದಲ್ಲಿ ಹೊನ್ನಪ್ಪ ಭಾಗವತರ ಪ್ರತಿಭೆಯೇ ಇತರರ ಅಸೂಯೆಗೆ ಕಾರಣವಾಗಿ ಅವರಿಗೆ ನೀಡಿದ್ದ ಪಾತ್ರದ ಮಹತ್ವ ಕುಗ್ಗಿಸುವ ಪ್ರಯತ್ನದಿಂದ ಬೇಸತ್ತ ಭಾಗವತರು ಕೋಣೆಯಲ್ಲಿ ಕಣ್ಣೀರಿಡುತ್ತಾ ಶ್ರೀರಾಮದೇವರ ಚಿತ್ರದೆದುರು ಕೈಗೊಂಡ ಪ್ರತಿಜ್ಞೆ : "ಇದೇ ತ್ಯಾಗರಾಜ ಭಾಗವತರು ಇಂದು ತಮಿಳು ನಾಡಿನಲ್ಲಿ ಚಿತ್ರರಂಗದಲ್ಲಿ ಯಾವ ಖ್ಯಾತಿ ಪಡೆದಿದ್ದಾರೋ, ಅದೇ ಖ್ಯಾತಿಯನ್ನು ನಾನು ಪಡೆದೇ ಪಡೆಯುತ್ತೇನೆ. ಇದು ಖಚಿತ!"

–ಹೊನ್ನಪ್ಪ ಭಾಗವತರು ಪ್ರತಿಜ್ಞೆಯಂತೆ ಚಿತ್ರರಂಗ ಪ್ರವೇಶಿಸಿದ್ದು ಹೀಗೆ. ಆಗಲೇ ಸಫಲಗೊಳಿಸಿದ್ದು ಭಾಗವತರ ಹೆಗ್ಗಳಿಕೆ. ತ್ಯಾಗರಾಜ ಭಾಗವತರು ಕಾರಾಗೃಹಕ್ಕೆ ಹೋದಾಗ ನಿಂತುಹೋದ ಕೆಲವು ಚಿತ್ರಗಳ ನಾಯಕನ ಪಾತ್ರಕ್ಕೆ ಹೊನ್ನಪ್ಪ ಭಾಗವತರ ಹೆಸರನ್ನೇ ಶಿಫಾರಸು ಮಾಡಿದ್ದು 'ಅಂಬಿಕಾಪತಿ'

ಚಿತ್ರೀಕರಣದ ಸಮಯದಲ್ಲಿ ಹೊನ್ನಪ್ಪ ಭಾಗವತರ ಬಗ್ಗೆ ಅಸೂಯೆಯ ಕಿಡಿ ಕಾರಿದ್ದ ತ್ಯಾಗರಾಜ ಭಾಗವತರೇ ಎಂಬುದು ಕುತೂಹಲದ ಸಂಗತಿ!

ಚಿತ್ರರಂಗದಲ್ಲಿ ಹೀಗೆ ಅಸೂಯೆಯೇ ಪ್ರೋತ್ಸಾಹವಾಗಿ ಪರಿವರ್ತನೆಗೊಂಡ ಘಟನೆಗಳು ಅಪರೂಪ. ಆದರೆ ಹೊನ್ನಪ್ಪ ಭಾಗವತರು ಚಿತ್ರರಂಗ ದಲ್ಲಿದ್ದಾಗಿನ ಕಾಲದ ಅನೇಕ ಘಟನೆಗಳು ಇಂದಿಗೂ ಊಹೆಗೆ ನಿಲುಕದಂಥವು. "ಆಗ ಭಾಷಾ ದುರಭಿಮಾನ ಇರಲಿಲ್ಲ. ವೃತ್ತಿಗೆ ಒಂದು ನಿಷ್ಠೆ ಇತ್ತು" ಎನ್ನುವ ಹೊನ್ನಪ್ಪ ಭಾಗವತರಿಗೆ **'ಮಹಾಕವಿ ಕಾಳಿದಾಸ'** ಚಿತ್ರ ತಯಾರಿಸಿದಾಗ ಆದ ಅನುಭವ ಇಂಥದೇ.

**'ಕಾಳಿದಾಸ'** ಚಿತ್ರ ತಯಾರಿಕೆಯಲ್ಲಿ ಸಾಕಷ್ಟು ಹಣ ಕಳೆದುಕೊಂಡಿದ್ದ ಹೊನ್ನಪ್ಪ ಭಾಗವತರಿಗೆ ಭಾರಿ ಸೆಟ್‌ಗಳನ್ನು ಹಾಕಿ ಚಿತ್ರ ತಯಾರಿಸುವ ಆಸೆ. ಆದರೆ ಕೈಯಲ್ಲಿ ಕಾಸಿಲ್ಲ. ಕೊನೆಗೆ ಖ್ಯಾತ ತೆಲುಗು ಚಿತ್ರ ನಿರ್ಮಾಪಕ ಬಿ. ನಾಗೀರೆಡ್ಡಿ ಅವರನ್ನು ಕಂಡು ತಮ್ಮ ಕಷ್ಟವನ್ನು ತೋಡಿಕೊಂಡರು. "ಅಷ್ಟೇತಾನೇ, ಅದಕ್ಯಾಕೆ ಅಷ್ಟು ಯೋಚಿಸುತ್ತೀ" –ಎಂದ ನಾಗೀರೆಡ್ಡಿ, ತಮ್ಮ 'ಚಂದ್ರಹಾರ' ಚಿತ್ರದ ಸೆಟ್ಟನ್ನು ಉಚಿತವಾಗಿ ಬಳಸಿಕೊಳ್ಳಲು ಪೂರ್ಣ ಅನುಮತಿ ನೀಡಿದರು.

**'ಕಾಳಿದಾಸ'** ಸಿದ್ಧವಾಯಿತು. ಅದರ ಬಿಡುಗಡೆ ದಿನವೂ ನಿಗಧಿಯಾಯಿತು. ಭಾಗವತರು ಅಂತಿಮವಾಗಿ ಆ ಚಿತ್ರವನ್ನು ಸ್ಟುಡಿಯೋದಲ್ಲಿ ನೋಡಿದಾಗ ಅವರ ಎದೆ ಧಸಕ್ಕೆಂದಿತು. 'ನಾನ್–ಸಿಂಕ್' ಸಮಸ್ಯೆಯಿಂದಾಗಿ ಇಡೀ ಚಿತ್ರ ಹಾಳಾಗಿ ಹೋಗಿತ್ತು. ಚಿತ್ರದ ನಟವರ್ಗದಿಂದ ಹಿಡಿದು ತಾಂತ್ರಿಕವರ್ಗದವರೆಗೆ ಎಲ್ಲರೂ ಹೊಸಬರೇ, ತಾಂತ್ರಿಕ ವರ್ಗದವರು ಒಬ್ಬರ ಮೇಲೊಬ್ಬರು ತಪ್ಪು ಹೊರಿಸಿ ಕೈ ಚೆಲ್ಲಿಬಿಟ್ಟರು. ಭಾಗವತರು ದಿಕ್ಕೆಟ್ಟು ಕುಳಿತಿದ್ದಾಗ ಮತ್ತೆ ನಾಗೀರೆಡ್ಡಿ ಅವರು ಸಹಾಯಹಸ್ತ ಚಾಚಿ ಚಿತ್ರವನ್ನೊಮ್ಮೆ ನೋಡಿ, ತಮ್ಮ ಸ್ಟುಡಿಯೋದಲ್ಲಿದ್ದ ಎಡಿಟರ್‌ಗಳನ್ನು ಕರೆದು ಫಿಲ್ಮ್‌ಗೆ ಸೂಕ್ತ ಪರಿಷ್ಕರಣೆ ಮಾಡಿಸಿ ತಮ್ಮದೇ ವೆಚ್ಚದಲ್ಲಿ ಹೊಸ ಪಾಸಿಟಿವ್‌ಗಳನ್ನೂ ಮಾಡಿಸಿಕೊಟ್ಟರು!

"ಆ ಕಾಲ ಹಾಗಿತ್ತು. ಉದ್ಯಮದಲ್ಲಿ ಒಬ್ಬ ಕಷ್ಟ ಪಡುತ್ತಿದ್ದಾನೆ ಎಂದರೆ ಇನ್ನೊಬ್ಬ ಅವನ ನೆರವಿಗೆ ಬರುತ್ತಿದ್ದ. ಇಂದು? ಒಬ್ಬ ಮುಳುಗುವುದನ್ನೇ ಇನ್ನೊಬ್ಬ ಕಾಯುತ್ತಿರುತ್ತಾನೆ!" ಎನ್ನುತ್ತಾರೆ ಹೊನ್ನಪ್ಪ ಭಾಗವತರು.

ಹೌದು. ಆಗಿನ ಚಿತ್ರೋದ್ಯಮದ ಸ್ವರೂಪವೇ ಬೇರೆ 'ಅಂಬಿಕಾಪತಿ' ಒಂದು ರೀತಿಯಲ್ಲಿ ಮಲ್ಟಿಸ್ಟಾರ್. ತ್ಯಾಗರಾಜ ಭಾಗವತರು ಜೀವನದಲ್ಲಿ ದೊರೆಯಂತೆ ವೈಭವದ ಜೀವನ ನಡೆಸಿದ ನಟ ಖ್ಯಾತ ಸಂಗೀತಗಾರ ಪಾಪನಾಶನ್ ಶಿವನ್ ಅವರೇ ಸಂಗೀತ ನಿರ್ದೇಶಕರು. ಅಮೆರಿಕದ ಡಂಕನ್ ಈ ಚಿತ್ರದ ನಿರ್ದೇಶಕರು. ಪ್ರಖ್ಯಾತ ಸಾಹಿತಿ ಇಳಂಗೋವನ್ ಅವರ ಚಿತ್ರಸಾಹಿತ್ಯ. ಇಷ್ಟಾದರೂ ಇಡೀ ಚಿತ್ರದ ವೆಚ್ಚ (ಪ್ರಚಾರದ ಖರ್ಚೂ ಸೇರಿ) ಒಂದೂಕಾಲು ಲಕ್ಷ. ಆಗ ಕಲ್ಕತ್ತದಲ್ಲಿ ಸ್ಟುಡಿಯೋ ಬಾಡಿಗೆ ದಿನಕ್ಕೆ 125 ರೂಪಾಯಿ.

ಹಾಡುಗಳಿಗೆ ಆಗ ಅಗ್ರಸ್ಥಾನ. ಒಂದು ಚಿತ್ರದಲ್ಲಿ 25–30ರಿಂದ 60 ಹಾಡುಗಳೂ ಇರುತ್ತಿದ್ದುದುಂಟು. ಹಿನ್ನೆಲೆ ಗಾಯಕರ ಸಂಪ್ರದಾಯ ಇರಲಿಲ್ಲವಾದ್ದರಿಂದ ನಟರೇ ಸ್ವತಃ ಹಾಡಬೇಕಿತ್ತು. ಕ್ಯಾಮರಾ ಕಣ್ಣಿಗೆ ಬೀಳದಷ್ಟು ದೂರದಲ್ಲಿ ಪಕ್ಕವಾದ್ಯಗಳು. 7–8 ಅಡಿ ಎತ್ತರದ ಸ್ಟೂಲಿನ ಮೇಲೊಬ್ಬ ಹುಡುಗ ಕುಳಿತು ಉದ್ದನೆಯ ಗಳಕ್ಕೆ ಮೈಕ್ರೋಫೋನ್ ಕಟ್ಟಿ ಅದನ್ನು ನಟರ ತಲೆ ಬಳಿ ಹಿಡಿದಿರುತ್ತಿದ್ದು ಎತ್ತಹೋದರೆ ಅತ್ತ ಅದನ್ನು ತಳ್ಳುತ್ತಿದ್ದ. ಸಂಗೀತ ಅಲ್ಲೇ ರೆಕಾರ್ಡ್ ಆಗಿಬಿಡುತ್ತಿತ್ತು. ಆಗ ಚಿತ್ರಗಳು 4–5ವಾರ ಓಡಿದರೆ ಹಿಟ್! ಅಂಥ ಹಲವು ತಮಿಳು 'ಹಿಟ್'ಗಳಲ್ಲಿ ಹೊನ್ನಪ್ಪ ಭಾಗವತರು ಖ್ಯಾತರಾದರು.

**ಮಾತೃಭಾಷೆ ಕನ್ನಡ ಚಿತ್ರಕ್ಕೆ ಬಂದಾಗ....**

ಹೊನ್ನಪ್ಪ ಭಾಗವತರು ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ್ದು ಗುಬ್ಬಿ ವೀರಣ್ಣನವರ ಆಹ್ವಾನದ ಮೇರೆಗೆ. 'ಸುಭದ್ರಾ' ಚಿತ್ರದಲ್ಲಿ ಅರ್ಜುನನ ಪಾತ್ರಕ್ಕೆಂದುದ್ದು ಚೆನ್ನೈನಲ್ಲಿ 'ಕೃಷ್ಣಕುಮಾರ್' ತಮಿಳು ಚಿತ್ರದಲ್ಲಿ ಅಭಿನಯಿಸುತ್ತಿದ್ದ ಹೊನ್ನಪ್ಪ ಭಾಗವತರು ಆಹ್ವಾನದಂತೆ ಬೆಂಗಳೂರಿಗೆ ಬಂದಾಗ ಆ ಪಾತ್ರಕ್ಕೆ ಸಂಗೀತಗಾರ – ಬಿ. ದೇವೇಂದ್ರಪ್ಪನವರ ಆಯ್ಕೆ ಆಗಿ ನಂತರ ಚರ್ಚೆ, ವಿವಾದ, ಸಂಧಾನಗಳು ನಡೆದು ದೇವೇಂದ್ರಪ್ಪನವರಿಗೆ ನಾರದನ ಪಾತ್ರ ನೀಡಿ, ಅರ್ಜುನನ ಪಾತ್ರಕ್ಕೆ ಹೊನ್ನಪ್ಪ ಭಾಗವತರನ್ನೇ ಉಳಿಸಿಕೊಳ್ಳಲಾಯಿತು.

**'ಗೋರಾ ಕುಂಬಾರ' 'ಜಗಜ್ಯೋತಿ ಬಸವೇಶ್ವರ', 'ಹೇಮರೆಡ್ಡಿ ಮಲ್ಲಮ್ಮ', 'ಕಾಳಿದಾಸ'** ಮೊದಲಾದವು ಹೊನ್ನಪ್ಪ ಭಾಗವತರ ಪ್ರಮುಖ ಕನ್ನಡ ಚಿತ್ರಗಳು. ಸುಮಾರು 25 ತಮಿಳು ಚಿತ್ರಗಳಲ್ಲೂ ಭಾಗವತರು ನಟಿಸಿ 'ಇನ್ನೇನು ಚಿತ್ರರಂಗದಿಂದ ನಿವೃತ್ತಿಯೇ ಆದೆ' ಎಂದುಕೊಳ್ಳುತ್ತಿದ್ದ ಹೊನ್ನಪ್ಪ ಭಾಗವತರು

**'ಸದಾನಂದ'** ಚಿತ್ರಕ್ಕೆ ಕೆಲವು ಕಾರಣಗಳಿಂದ ಕೈಹಾಕಬೇಕಾಯಿತು. ಆದರೆ ಅಲ್ಲಿನ ವ್ಯವಸ್ಥೆ ಅವರ "ಕೈಯನ್ನು ಕಟ್ಟಿಹಾಕಿತ್ತು". ಎಲ್ಲವನ್ನೂ ಯಾರೋ ಹೇಳಿದಹಾಗೆ ಕೇಳಿಕೊಂಡು ನಿರ್ವಹಿಸುವ ಪರತಂತ್ರ ಪರಿಸ್ಥಿತಿಯಿಂದ ಹೊನ್ನಪ್ಪ ಭಾಗವತರಿಗೆ ಮನಸ್ಸು ಕಹಿಯಾಗಿತ್ತು.

"ಈ ಜನರ ಸಹವಾಸವೇ ಇಲ್ಲದೆ ಹಾಯಾಗಿದ್ದೀನಿ" –ಎಂದು ಹಳೆಯ ಕಹಿ–ಸಿಹಿ ನೆನಪು ಗಳನ್ನು ಮೆಲುಕುಹಾಕುತ್ತಾ ಕುಳಿತ ಭಾಗವತರನ್ನು ಈಗಿನ ಚಿತ್ರರಂಗದ ಜನರ ಬಗ್ಗೆ ಪ್ರಶ್ನಿಸಿದಾಗ ಅವರ ಮುಖ ಮತ್ತೆ ಗಂಟಿಕ್ಕಿತು.

"ಆಗ ಕಸುಬಿನಲ್ಲಿ ಇದ್ದ ಗೌರವ, ಹೃದಯವೈಶಾಲ್ಯ" ಭಯ–ಭಕ್ತಿ, ಶ್ರದ್ಧೆ –ಇದಾವುದೂ ಈಗ ಇಲ್ಲ. ಒಬ್ಬರನ್ನು ಕಂಡರೆ ಒಬ್ಬರಿಗೆ ಈರ್ಷೆ. ಒಬ್ಬೊಬ್ಬರದು ಒಂದೊಂದು ಗುಂಪು. ನಟ ನಟಿಯರಿಗೆ ಸ್ಟಾರ್ ಆಗಿಬಿಟ್ಟರೆ ನೀತಿ–ನಿಯಮ ಯಾವುದಕ್ಕೂ ತಲೆಬಾಗಬೇಕಿಲ್ಲ ಎಂಬ ಭಾವನೆ ಬಂದುಬಿಟ್ಟಿದೆ..."

"ಕಲಾವಿದರ ವೈಯಕ್ತಿಕ ಜೀವನದ ನೀತಿ–ಅನೀತಿಯ ಪ್ರಶ್ನೆ ನಾಟಕದ ಕಂಪನಿಗಳಲ್ಲೂ ಇತ್ತಲ್ಲವೇ?"

"ಇತ್ತು. ಈ ಲೈನ್‌ನಲ್ಲಿ ತುಂಬ ಸಹಜ ಎನ್ನುವಷ್ಟರ ಮಟ್ಟಿಗೆ ಇದೆ. ಇದು ನಾಟಕದಿಂದಲೇ ಬಂದಿದ್ದು. ಕಂಪನಿ ನಡೆಸಬೇಕಾದರೆ 2–3 ಹೆಂಡತಿಯರು ಇರಲೇಬೇಕು ಎನ್ನುವಂತಿತ್ತು ಆಗ. ಈಗ ಈ ಸಿನಿಮಾ ನಟರು ಅದೇ ದಾರಿಯಲ್ಲಿ ನಡೆದಿದ್ದಾರೆ. ಯಾರನ್ನೋ ಮದುವೆ ಆಗೋದು, ಮತ್ತೆ ಬಿಡೋದು, ಮತ್ತೆ ಆಗೋದು.. ಇದಕ್ಕೆ ಔಚಿತ್ಯ ಎನ್ನುವುದೇ ಇಲ್ಲ."

"ಚಿತ್ರರಂಗದಲ್ಲಿ ವ್ಯಕ್ತಿಪೂಜೆ ಬಗ್ಗೆ ಏನು ಹೇಳ್ತೀರಿ?" "ವ್ಯಕ್ತಿಪೂಜೆ ಪರಿಣಾಮ ಕೆಲವೊಮ್ಮೆ ಒಳ್ಳೇದು ಕೆಟ್ಟದ್ದೂ ಆಗಬಹುದು. ಇಂದು ವೈಭವದಿಂದಿರಬಹುದು. ಅದು ಅವರ ಯೋಗ ಅಷ್ಟೆ. ಚಿತ್ರರಂಗ ಇಂಥ ಅನೇಕ ಮಂದಿಯನ್ನು ನೋಡಿದೆ. ಓಹೋಹೋ ಅಂತ ಬಂದು, ಆಗ ಅವನು ಆಡಿದ್ದೇ ಆಟ. ದಿಢೀರನೆ ಬೀಳೋದು. ಇಂದು ಅಡ್ರೆಸ್ ಇಲ್ಲ!..."

"ನೀವು ಸಾಕಷ್ಟು ಜನರಿಗೆ ಚಿತ್ರರಂಗದಲ್ಲಿ ಪ್ರವೇಶಾವಕಾಶ ಕಲ್ಪಿಸಿಕೊಟ್ಟಿದ್ದೀರಿ. ಇಂದು ಅವರು ಹೇಗಿದ್ದಾರೆ. ನಿಮ್ಮ ಬಗ್ಗೆ ಯಾವ ರೀತಿ ನಡೆದುಕೊಳ್ಳುತ್ತಾರೆ?"

"ಕೆಲವರ ಬಗ್ಗೆ ತುಂಬ ಹೆಮ್ಮೆ ಆಗುತ್ತೆ. 'ಕಾಳಿದಾಸ' ಚಿತ್ರ ತೆಗೆದಾಗ, ಆಗಲೇ ಹೇಳಿದಹಾಗೆ ಎಲ್ಲರೂ ಹೊಸಬರೇ. ಬಿ. ಸರೋಜಾದೇವಿ ಅವರ ಮೊದಲ ಚಿತ್ರ ಅದು. ರಾ–ಶಿ ಸೋದರರಲ್ಲಿ ಒಬ್ಬರಾದ ರಾಮನಾಥ್ ಆಗಿನ್ನು ಉದಯೋನ್ಮುಖ ನಿರ್ದೇಶಕರಾಗಿದ್ದು ಚಿತ್ರಕ್ಕೆ ಅವರು ಸಹನಿರ್ದೇಶಕರಾಗಿದ್ದರು.

ಪರಮೇಶ್ ಎಂಬ ತುಂಬಾ ಪ್ರತಿಭಾನ್ವಿತ ಕ್ಯಾಮರಾಮನ್ ರವರಿಗೆ ಮೊದಲಚಿತ್ರ, ಚಿತ್ರ ಮುಗಿಯುವ ವೇಳೆಗೆ ಆತನಿಗೆ ಕಲ್ಕತ್ತದಿಂದ ವಾರ್ತಾ ಇಲಾಖೆಯ ಸಂದರ್ಶನದ ಕರೆ ಬಂದಿತು. ಇಂದು ಆತ ತುಂಬಾ ಹೆಸರು ಪಡೆದ ಅಧಿಕಾರಿ ಆಗಿದ್ದಾರೆ. ಇಂದಿಗೂ ನನ್ನನ್ನು ನೆನಸಿಕೊಳ್ಳುತ್ತಾರೆ... ಕೆಲವರಲ್ಲಿ ಕೃತಜ್ಞತೆ ಕಮ್ಮಿ. ಮುಂದೆ ಬಂದರೆ ಹಿಂದಿನದೆಲ್ಲಾ ಮರೆತುಬಿಡ್ತಾರೆ...

ಈ ಚಿತ್ರರಂಗವೇ ಒಂದು ಜೂಜು ಇದ್ದಂತೆ–ಎನ್ನುತ್ತಾರೆ ಹೊನ್ನಪ್ಪ ಭಾಗವತರು. "ಇದರ ಮುಂದೆ ಯಾವ ಜೂಜೂ ಇಲ್ಲ. ಯಾವ ಚಿತ್ರ ಓಡುತ್ತೆ, ಯಾವುದು ಬೀಳುತ್ತೆ ಹೇಳೋದಿಕ್ಕೇ ಆಗೋಲ್ಲ. ಕನ್ನಡ ನಾಡಿನಲ್ಲಂತೂ ಜನ ಎಲ್ಲಾ ಭಾಷೆಯ ಚಿತ್ರಗಳನ್ನೂ ನೋಡ್ತಾರೆ. ಅವರು ಯಾವುದನ್ನು ಮೆಚ್ಚುತ್ತಾರೆ, ಯಾವುದನ್ನು ಮೆಚ್ಚೋಲ್ಲ ಅನ್ನೋದೇ ಗೊತ್ತಾಗೋಲ್ಲ. ಇವರ ಅಭಿರುಚಿಯೇ ಅರ್ಥವಾಗೋಲ್ಲ" –ಇದು ಭಾಗವತರ ವಿಶ್ಲೇಷಣೆ.

ಕೇವಲ ಮೂರು–ನಾಲ್ಕು ಮೂಕಿ ಚಿತ್ರಗಳು, 'ಸಾವಿತ್ರಿ' ಎಂಬ ಒಂದು ಟಾಕಿ ಚಿತ್ರವನ್ನು ಮಾತ್ರ ನೋಡಿದ್ದ ಹೊನ್ನಪ್ಪ ಭಾಗವತರು ಅಭಿನಯ ಪ್ರತಿಭೆ ತೋರಿಸುವ ದೃಷ್ಟಿಯಿಂದ ರಂಗಭೂಮಿಯ ಮುಂದೆ ಚಿತ್ರರಂಗ ನಿಲ್ಲದು ಎನ್ನುತ್ತಾರೆ ಹೊನ್ನಪ್ಪ ಭಾಗವತರು. "ಸಿನಿಮಾ ಸತ್ತ ಕಲೆ" ಎನ್ನುವ ಅವರು "ರಂಗಭೂಮಿಯಲ್ಲಿ ಧೀರತ್ವ ಬೇಕು. ಚಿತ್ರರಂಗದಲ್ಲಿ ಅದೃಷ್ಟ ಸಾಕು" ಎನ್ನುತ್ತಾರೆ. ಈ ನಾಟಕ ಪ್ರೇಮಿ ಹೊನ್ನಪ್ಪ ಭಾಗವತರ ರಂಗಾನುಭವ ಎಂಥದು?

**ರಂಗಭೂಮಿಯಲ್ಲಿ**

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಕಾಡೆಮಿಯ ನಾಟಕೋತ್ಸವದ. **'ಕೃಷ್ಣತುಲಾಭಾರ'** ಎಂಬ ತೆಲುಗು ನಾಟಕದಲ್ಲಿ ಎಪ್ಪತ್ತು ವರ್ಷದ ಹಿರಿಯ ಖ್ಯಾತ ತೆಲುಗು ನಟ ರಘುರಾಮಯ್ಯ ಮತ್ತಿತರರನ್ನು ಕಾಣುವ ಸದವಕಾಶ. ಹೊನ್ನಪ್ಪ ಭಾಗವತರು ಪತ್ನೀ ಸಮೇತರಾಗಿ ಕಲಾಕ್ಷೇತ್ರಕ್ಕೆ ನಾಟಕ ನೋಡಲೆಂದು ಹೋಗಿದ್ದ ಸಂದರ್ಭದಲ್ಲಿ ಬಾಗಿಲ ಬಳಿಯೇ ನಿಂತಿದ್ದ ಕೆಲವರು ಹೊನ್ನಪ್ಪ

ಭಾಗವತರನ್ನು ಕಂಡಕೂಡಲೇ ಧಾವಿಸಿ ಬಂದು "ನಿಮಗಾಗಿ ಕಾರು ಕಳುಹಿಸುವ ಏರ್ಪಾಟು ಮಾಡಿದ್ದೆವು. ತತ್‌ಕ್ಷಣ ಗ್ರೀನ್ ರೂಮ್‌ಗೆ ಹೋಗಿ" ಎಂದರು. ತಬ್ಬಿಬ್ಬಾದ ಹೊನ್ನಪ್ಪ ಭಾಗವತರು ಗ್ರೀನ್ ರೂಮ್‌ಗೆ ಹೋದಾಗ ವಿಷಯ ತಿಳಿದ ಹಾಗೂ ಸಂಭಾಷಣೆಯ ಕಿಂಚಿತ್ತೂ ಅರಿವಿಲ್ಲದೆ ಇದ್ದು ದಿಢೀರನೆ ರಂಗಪ್ರವೇಶ ಮಾಡಬೇಕಾದ ಪ್ರಸಂಗ. ಹೊನ್ನಪ್ಪ ಭಾಗವತರು ಹಿಂಜರಿಯದೇ ಸೂಕ್ಷ್ಮವಾಗಿ ಕಥೆ ತಿಳಿದುಕೊಂಡು ನಾರದನ ವೇಷ ಧರಿಸಿ ರಂಗದ ಮೇಲೆ ಬಂದು ನಟಿಸಿದ ನಂತರ ನಾಟಕ ನಡೆದೇಹೋಯಿತು.

ನಾಟಕ ಮುಗಿದಾಗ, ರಘುರಾಮಯ್ಯನವರು ಹೊನ್ನಪ್ಪ ಭಾಗವತರ ಬಳಿಬಂದು, "ಭಗವಂತ ನಿನಗೆ ಎಂಥ ಧೈರ್ಯ ಕೊಟ್ಟಿದ್ದಾನಪ್ಪ! ನನಗೆ ಲಕ್ಷ ರೂಪಾಯಿ ಕೊಟ್ಟರು ಕನ್ನಡದಲ್ಲಿ ನಾಟಕ ಆಡಲಾರೆ!" ಎಂದು ಉದ್ಗರಿಸಿದರು.

ರಘುರಾಮಯ್ಯನವರ ಹೇಳಿಕೆಯು ಹೊನ್ನಪ್ಪ ಭಾಗವತರಿಗೆ ಎಷ್ಟು ಚೆನ್ನಾಗಿ ಹೊಂದುತ್ತದೋ, ಎರಡನೇ ಉದ್ಗಾರ ಕನ್ನಡ ರಂಗಭೂಮಿಗೆ ಅಷ್ಟೇ ಚೆನ್ನಾಗಿ ಅನ್ವಯವಾಗುತ್ತದೆ. ಸಂಗೀತ–ನಾಟಕ–ಸಿನಿಮಾ ಈ ಮೂರೂ ಕ್ಷೇತ್ರಗಳಲ್ಲಿ ದುಡಿದು, ಸಂಗೀತದ ಸೆಳೆತ, ನಾಟಕದ ರಾಜಕಾರಣ ಸಿನಿಮಾದ ತಾತ್ಕಾಲಿಕ ಮೆರೆತವನ್ನು ಅನುಭವಿಸಿರುವ ಹೊನ್ನಪ್ಪ ಭಾಗವತರು ತಮ್ಮ ಮೂಲಭೂತ ಆಸಕ್ತಿಯಾದ ಸಂಗೀತವನ್ನೇ ಪ್ರಧಾನ ಕ್ಷೇತ್ರವನ್ನಾಗಿ ಉಳಿಸಿಕೊಂಡಿದ್ದರು. ವೃತ್ತಿರಂಗಭೂಮಿಯು ಕ್ಷೇತ್ರವನ್ನು ಹೇಗೆ ನಿರ್ನಾಮ ಮಾಡಿತು ಎಂಬುದನ್ನು ನಿಸ್ಸಂಕೋಚದಿಂದ ವಿಶ್ಲೇಷಿಸುವ ಅವರು, ಸಮಕಾಲೀನ ರಂಗಭೂಮಿ ಸಿನಿಮಾ ಕ್ಷೇತ್ರಗಳ ಬಗ್ಗೆ ಮಾತನಾಡುವಾಗ ಮಾತ್ರ "ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಜನರ ಅಭಿರುಚಿ ಬದಲಾದಾಗ ಕಲೆಯೂ ಬದಲಾಗುತ್ತದೆ" –ಎಂದು ತೇಲಿಸಿಬಿಡುತ್ತಾರೆ. ಈ ನಿರ್ಲಿಪ್ತ ಹೇಳಿಕೆಯ ಹಿಂದೆ ಏನೋ ಅಸಮಾಧಾನದ ಛಾಯೆಯೂ ಕಾಣುತ್ತದೆ.

"ವೃತ್ತಿರಂಗಭೂಮಿ ಒಂದು ಕಾಲಕ್ಕೆ ಜನ ಸಾಮಾನ್ಯರ ಪ್ರಧಾನ ಮನರಂಜನೆಯ ಕ್ಷೇತ್ರವಾಗಿತ್ತು. ರಂಗಭೂಮಿ ನಟರಾಗಿ, ಕಂಪನಿಯೊಂದು ಕಟ್ಟಿ ಅದರ ಮಾಲೀಕರೂ ಆಗಿದ್ದ ನಿಮಗೆ ಈ ವೃತ್ತಿರಂಗಭೂಮಿಯ ಅವನತಿಗೆ ಕಾರಣ ಏನಿರಬಹುದು ಎನಿಸುತ್ತದೆ?" –ಎಂದು ಪ್ರಶ್ನಿಸಿದಾಗ, "ಕನ್ನಡಿಗರಲ್ಲಿ ನಮ್ಮ ಕಲೆ ಬೆಳೆಯಬೇಕು ಎಂಬ ಆಸಕ್ತಿ ಇಲ್ಲ" –ಎಂಬಂಥ ಸರ್ವಸಮ್ಮತ ಹೇಳಿಕೆಯಿಂದ ಆರಂಭಿಸಿದ ಹೊನ್ನಪ್ಪ ಭಾಗವತರು ಆ ಬಗ್ಗೆ ನಡೆಸಿದ ವಿಶ್ಲೇಷಣೆ ಕ್ರಮೇಣ ಕುತೂಹಲಕಾರಿಯಾಯಿತು.

"ವೃತ್ತಿರಂಗಭೂಮಿಯಲ್ಲಿ ಚೆನ್ನಾಗಿದ್ದಾಗಲೇ ಅಲ್ಲಿ ಗುಂಪುಗಾರಿಕೆಯೂ ಶುರುವಾಗಿತ್ತು. ಒಂದು ಕಂಪನಿ ಬೆಳೆಯುತ್ತಿರುವ ಏಳಿಗೆಯ ಕಂಪನಿಯನ್ನು ಹೇಗಾದರೂ ಮಾಡಿ ಒಡೆಯುವ ಸನ್ನಾಹ. ಈ ಪರಿಸ್ಥಿತಿಯಲ್ಲಿ ಅದು ಉಳಿಯುವುದಾದರೂ ಹೇಗೆ ಸಾಧ್ಯ?"

"ಸಂಸ್ಥೆಯನ್ನು ಒಡೆಯುವ ಸನ್ನಾಹ ಎಂದಿರಿ. ಉದಾಹರಣೆ ಕೊಡುವಿರಾ?

"ಕೊಡಬಲ್ಲೆ. ಆದರೆ ಹೆಸರುಗಳು ಬೇಡ. ಒಂದು ಕಂಪನಿಯಲ್ಲಿ ಹೊಸ ನಾಟಕ ಹೌಸ್‌ಫುಲ್ ಆಗುತ್ತಿದ್ದನ್ನು ಅದನ್ನು ಕಂಡ ಇನ್ನೊಂದು ಕಂಪನಿಯ, ಮಾಲೀಕ ಈ ನಾಟಕದ ಪ್ರಧಾನ ಪಾತ್ರಧಾರಿಗಳಿಗೆ ಹೆಚ್ಚಿನ ವೇತನದ ಆಸೆ ತೋರಿಸಿ ಕರೆದೊಯ್ದು ಕಂಪನಿ ಸೇರುವ ಆಸೆಯಿಂದ ಆ ತರುಣ ಕಲಾವಿದನಿಗೆ ಅಲ್ಲಿ 200 ರೂ! ಇಲ್ಲಿ 80 ರೂ. ವೇತನ  ಆದರೆ ಅಲ್ಲಿಗೆ ಹೋದ ಮೇಲೆ ಆದದ್ದೇ ಬೇರೆ. ಆ ನಟನಿಗೆ ಅಲ್ಲಿ ರಾಜನ ಪಾತ್ರ ಮಾಡಿರಬಹುದು. ಇಲ್ಲಿ ಸ್ವಲ್ಪ ತಯಾರಿ ಬೇಕು, ಎಂದು ಹೇಳಿ ಕೈಗೆ ದೊಣ್ಣೆ ಕೊಟ್ಟು ಭಟನನ್ನಾಗಿ ಮಾಡಿ ನಿಲ್ಲಿಸಿ ಒಂದೆರಡು ತಿಂಗಳಾದ ಮೇಲೆ, 'ಈ ಕೆಲಸಕ್ಕೂ ನೀನು ನಾಲಾಯಖ್' ಎಂದು ಸಂಬಳವನ್ನು 50 ರೂಪಾಯಿಗೆ ಇಳಿಸಿದರು! ಹೀಗೆ ಏಳಿಗೆ ಕಂಪನಿಯನ್ನು ಮುಳುಗಿಸಿ, ಅರಳುವ ಪ್ರತಿಭೆಯನ್ನು ಚಿವುಟಿದ ಘಟನೆಗಳು ಒಂದಲ್ಲ, ಹಲವಾರು."

"ನಮ್ಮ ವೃತ್ತಿರಂಗಭೂಮಿಯ ಅವನತಿಗೆ ಇದೊಂದೇ ಕಾರಣವೇ?"

"ಇದು ಪ್ರಮುಖ ಕಾರಣ. ಆಮೇಲೆ ನಾಟಕದಿಂದ ಸಿನಿಮಾಕ್ಕೆ ಪ್ರತಿಭಾ ಪಲಾಯನ ಇದ್ದೇ ಇದೆ."

"ಬೇರೆ ಕಡೆ –ಎಂದರೆ ತೆಲುಗು, ತಮಿಳು –ರಂಗ ಭೂಮಿಗಳಲ್ಲಿ ಇಂಥ ಬೆಳವಣಿಗೆ ಕಂಡುಬಂದಿಲ್ಲವೇ?"

"ಕಂಪನಿ ಒಡೆಯುವ ಕೆಲಸ ಅಲ್ಲಿ ನಡೆದಿಲ್ಲ. ಅಲ್ಲಿ ಒಂದು ರೀತಿಯ ಒಗ್ಗಟ್ಟಿದೆ. ಅಸೂಯೆ ಇಲ್ಲ. ಅದಕ್ಕೇ ಇಂದಿಗೂ ವೃತ್ತಿರಂಗಭೂಮಿ ಅಲ್ಲಿ ಅಳಿದಿಲ್ಲ."

ಹಿಂದೆ ನಾಟಕ ಎಂದರೆ ಊರಿನ ಜನರೆಲ್ಲಾ ಬರುತ್ತಿದ್ದರು. ನಾಟಕ ಅಂಥ ಕೇಂದ್ರಗಾಮಿ ಶಕ್ತಿಯಾಗಿತ್ತು. ಈ ಶಕ್ತಿಯನ್ನು ಕುಂದಿಸುವ ಕೆಲಸ ಸಿನಿಮಾದಿಂದ ಸಾಕಷ್ಟು ಆಗಿದ್ದರೂ ಇಂದಿಗೂ ಕೆಲವು ವರ್ಗಗಳಲ್ಲಾದರೂ

ನಾಟಕದ ಹುಚ್ಚು ಕಳೆದಿಲ್ಲ. ಉತ್ತರ ಕರ್ನಾಟಕದ ಕಡೆ ಇಂದಿಗೂ ವೃತ್ತಿರಂಗಭೂಮಿ ಪೂರ್ತಿ ಅಳಿದಿಲ್ಲ. ಆ ಆಸಕ್ತಿಯನ್ನು ಮತ್ತೆ ಕೆರಳಿಸಿ, ವೃತ್ತಿರಂಗ ಭೂಮಿಯ ಪುನರುಜ್ಜೀವನ ಸಾಧ್ಯವಿಲ್ಲವೇ? –ಎಂಬ ಪ್ರಶ್ನೆಗೆ ಹೊನ್ನಪ್ಪ ಭಾಗವತರು ತಲೆ ಅಲ್ಲಾಡಿಸುತ್ತಾರೆ. ಕ್ಷಣಕಾಲ ಯೋಚಿಸಿ "ಕಷ್ಟ" ಎಂದು ಕೊನೆಗೆ –

"ಸಾಧ್ಯವಾಗಬಹುದೋ ಏನೋ! ಆದರೆ ತುಂಬ ಕಷ್ಟ. ಜನರು ಮೊದಲು ಈ ವಿಷಯದಲ್ಲಿ ಆಸಕ್ತಿ ತೋರಿಸಬೇಕು. ಕಾಲಕ್ಕೆ ತಕ್ಕಂತೆ, ಹೊಸ ಅಭಿರುಚಿಗೆ ಅನುಗುಣವಾಗಿ ನಾಟಕಗಳೂ ಬದಲಾಗಬೇಕು...

"ಇಂದಿನ ನಾಟಕಗಳ ಬಗ್ಗೆ –ಎಂದರೆ, ಹವ್ಯಾಸಿ ನಾಟಕಗಳ ಬಗ್ಗೆ ಏನನ್ನುತ್ತೀರಿ. ಅವೂ ಚೆನ್ನಾಗಿಯೇ ನಡೆಯುತ್ತಿವೆ ಎನ್ನಿಸುವುದಿಲ್ಲವೇ?"

"ಇಂದಿನ ನಾಟಕಗಳು ಕೆಲವು ನಿರ್ದಿಷ್ಟ ಗುಂಪುಗಳಿಂದ ಹುಟ್ಟಿದ ಅಭಿರುಚಿಯನ್ನು ತೋರಿಸುತ್ತವೆ. ಆ ಅಭಿರುಚಿಯುಳ್ಳ ಜನ ಮಾತ್ರ ಅಲ್ಲಿ ಸೇರುತ್ತಾರೆ. ನೋಡಿ ಆನಂದಿಸುತ್ತಾರೆ. ಏನೋ... ಕಾಲ ಬದಲಾಗಿದೆ..."

ಶಾಸ್ತ್ರೀಯ ಸಂಗೀತದ್ದು ಅದೇ ಕಥೆ ಎನ್ನುತ್ತಾರೆ ಹೊನ್ನಪ್ಪ ಭಾಗವತರು. ಬಣ್ಣ ಹಚ್ಚಿಕೊಂಡು ರಂಗಭೂಮಿ ಪ್ರವೇಶಿಸುವುದಕ್ಕೂ ತೆರೆಯ ಮೇಲೆ ಕಾಣಿಸಿಕೊಳ್ಳುವುದಕ್ಕೆ ಮೊದಲು ಹೊನ್ನಪ್ಪ ಭಾಗವತರಿಗೆ ಇದ್ದ ಆಸಕ್ತಿ ಸಂಗೀತ ಮಾತ್ರ, ಅದಕ್ಕಾಗಿ ಅವರು ಬಾಲ್ಯದಲ್ಲೇ ಮೋಟಗಾನಹಳ್ಳಿಯಿಂದ ಬೆಂಗಳೂರಿಗೆ ಬಂದು ಸಂಬಂಧಮೂರ್ತಿ ಭಾಗವತರ ಬಳಿ ಸಂಗೀತ ಕಲಿತರು. ಅವರ ಗುರು ಪಾರ್ಥಸಾರಥಿ ಭಾಗವತರು ಹರಿಕಥೆ ಮಾಡುತ್ತಿದ್ದಾಗ ಅವರಿಗೆ ಹಿನ್ನೆಲೆ ಗಾಯಕರಾದರು. ಹೀಗೆ ಸಂಗೀತದಿಂದ ಹರಿಕಥೆ, ಹರಿಕಥೆಯಿಂದ ನಾಟಕ, ಮುಂದೆ ಸಿನಿಮಾ –ಹೀಗೆ ಅವರ ಜೀವನ ಸಾಗಿ ಎಲ್ಲ ಪಥ ಪರಿವರ್ತನೆಗೂ ಸಂಗೀತವೇ ಕಾರಣ ಎಂಬುದು ಗಮನಾರ್ಹ. ತಾವು ಮೂಲತಃ ಸಂಗೀತ ಗಾರನಾಗಿದ್ದರಿಂದಲೇ ಈ ಬೇರೆ ಕ್ಷೇತ್ರಗಳಲ್ಲೂ ಪ್ರವೇಶಿಸಲು ಅವಕಾಶ ಸಿಕ್ಕಿತು ಎಂಬುದು ಹೊನ್ನಪ್ಪ ಭಾಗವತರ ಅನಿಸಿಕೆ.

"ಆದರೆ ಇಂದು ಶಾಸ್ತ್ರೀಯ ಸಂಗೀತದಲ್ಲಿ ಯಾರಿಗೂ ಆಸಕ್ತಿಯಿಲ್ಲ. ನನ್ನ ಮಗನನ್ನೇ ನೋಡಿ, ಪಿಟೀಲು ಕಲಿತ, ಸಾಧಿಸಲಿಲ್ಲ. ನಮ್ಮ ಕಾಲದಲ್ಲಿ ನಾವು ಕಲೆಯ ಸಾಧನೆಗಾಗಿ ಶ್ರಮಿಸಿದ ರೀತಿಯೇ ಬೇರೆ. ಈಗ ಅಂಥ ಶ್ರಮ ನಮ್ಮ ಹುಡುಗರಿಗೆ ಬೇಕಿಲ್ಲ."

"ಹೋಗಲಿ, ಸರಕಾರದ ಪ್ರೋತ್ಸಾಹದ ಬಗ್ಗೆ ಏನು ಹೇಳುತ್ತೀರಿ?"

"ಪರವಾಗಿಲ್ಲ. ಸರಕಾರ ಖಂಡಿತಾ ಕಲಾವಿದರಿಗೆ ಸಹಾಯ ಮಾಡುತ್ತಿದೆ. ಅದಕ್ಕೆಲ್ಲ ಮುಖ್ಯ ಕಾರಣ ದೇವರಾಜ ಅರಸರ ಸರಕಾರ. ಎಲ್ಲೋ ಇದ್ದ ನಮ್ಮನ್ನು ಗುರುತಿಸಿ ಪ್ರೋತ್ಸಾಹಿಸಿದರು. ಹಿಂದೆ ರಾಜಾಶ್ರಯ ಇತ್ತು. ಈಗ ಸರಕಾರದ ಆಶ್ರಯ ಸಿಗುತ್ತಿದೆ."

ಈಗ ಒಂದು ರೀತಿಯಲ್ಲಿ ನಿರ್ಲಿಪ್ತ, ಸಂತೃಪ್ತ ಜೀವನ ನಡೆಸುತ್ತಿರುವ ಭಾಗವತರಿಗೆ ಹಳೆಯ ನೆನಪುಗಳನ್ನು ಕಾಡುವಂಥ ಪ್ರಸಂಗಗಳು ಬರುವುದೂ ಉಂಟು. ನಾಟಕಕಾರ ಪರ್ವತವಾಣಿಯವರು ಈಚೆಗೆ "ಹೊನ್ನಪ್ಪ ಭಾಗವತರೇ ನಾವು ಶಾಕುಂತಲ ನಾಟಕ ಆಡೋಣ. ನಿಮ್ಮನ್ನ ದುಷ್ಯಂತನ ಪಾತ್ರದಲ್ಲಿ ನೋಡಬೇಕೂಂತ ಆಸೆ" ಎಂದರಂತೆ.

"ಈಗ ನಾಟಕ ಆಡಿದರೆ ಯಾರು ನೋಡ್ತಾರೆ, ನನಗೂ ವಯಸ್ಸಾಗಿಬಿಡ್ತು" ಎಂದರಂತೆ ಹೊನ್ನಪ್ಪ ಭಾಗವತರು. ಪರ್ವತವಾಣಿಯವರು ಹಿಡಿದ ಪಟ್ಟು ಬಿಡದೆ, "ಯಾಕೆ? ನಾವೆಲ್ಲಾ ಇಲ್ಲವೆ ನಾಟಕ ನೋಡೋದಕ್ಕೆ. ಖಂಡಿತ ಆಡಲೇಬೇಕು" ಎಂದು ಒತ್ತಾಯಿಸಿದರಂತೆ.

ವೃತ್ತಿರಂಗಭೂಮಿ ಈಗ ನೆನಪಿನಂಗಳದಲ್ಲಿ ಮಾತ್ರ ಜೀವಂತವಾಗಿ ಉಳಿಯುವ ಹಂತದಲ್ಲಿದೆ. ಅದಕ್ಕಾಗಿ ಶ್ರಮಿಸಿದ ಹೊನ್ನಪ್ಪ ಭಾಗವತರಂಥವರೂ "ಬದಲಾದ ಕಾಲ, ಅಭಿರುಚಿ"ಯಿಂದಾಗಿ ನಿರ್ಲಿಪ್ತರಾಗಿರಬೇಕಾಗಿದೆ. ತಮ್ಮ ಮೊದಲ ಪ್ರೇಮವಾದ ಶಾಸ್ತ್ರೀಯ ಸಂಗೀತ ಮಾತ್ರ ಇಂಥ ಪ್ರಭಾವಕ್ಕೆ ಮಣಿಯದಿರುವುದರಿಂದ ಭಾಗವತರ ಆಸಕ್ತಿ ಈಗ ಆ ಕ್ಷೇತ್ರಕ್ಕೆ ಮಿಸಲು.

* * *

'ಅಂಬಿಕಾಪತಿ' ಚಿತ್ರದಲ್ಲಿ ಪಾತ್ರ ವಹಿಸುವ ಬಗ್ಗೆ ಒಪ್ಪಂದಕ್ಕೆ ಸಹಿ ಹಾಕಲು ಹೊನ್ನಪ್ಪ ಭಾಗವತರು ಸೇಲಂಗೆ ಬಂದ್ದಾಗ ಅಲ್ಲಿ ಒಪ್ಪಂದವಾದ ಮೇಲೆ ಆ ಚಿತ್ರದ ನಾಯಕ ಪಾತ್ರಧಾರಿಯಾಗಿದ್ದ ಖ್ಯಾತ ಸಂಗೀತಗಾರ –ನಟ ಎಂ.ಕೆ. ತ್ಯಾಗರಾಜ ಭಾಗವತರ ನಾಟಕದ ಕಂಪನಿಯ ಸದಸ್ಯರ ಜೊತೆ ಬೋಜನಕ್ಕೆ ಆಹ್ವಾನ ಬಂದಿತು.

ಆ ಸಮಯದಲ್ಲಿ ಹೊನ್ನಪ್ಪ ಭಾಗವತರನ್ನು ಚಿತ್ರ ನಿರ್ಮಾಪಕರು ತ್ಯಾಗರಾಜ ಭಾಗವತರಿಗೆ ಪರಿಚಯ ಮಾಡಿಸಿ, "ನಮ್ಮ ಚಿತ್ರದ ಎರಡನೇ ಪ್ರಧಾನ ಪಾತ್ರಕ್ಕಾಗಿ ಇವರನ್ನು ಬೆಂಗಳೂರಿನಿಂದ ಕರೆಸಿದ್ದೇವೆ. ಸೊಗಸಾಗಿ ಹಾಡುತ್ತಾರೆ" –ಎಂದರು. ಹೊನ್ನಪ್ಪ ಭಾಗವತರು ವಿನಯದಿಂದ "ನಮಸ್ಕಾರ" –ಎಂದರು. ತ್ಯಾಗರಾಜ ಭಾಗವತರು ಪ್ರತಿಯಾಗಿ ವಂದಿಸಲಿಲ್ಲ. ಉದಾಸೀನದಿಂದ "ಸರಿ, ಸರಿ" ಎಂದು ತಮ್ಮ ಮಿತ್ರರ ಜೊತೆ ಮಾತನಾಡತೊಡಗಿದರು.

ಹೊನ್ನಪ್ಪ ಭಾಗವತರಿಗೆ ಈ ಮುಖಭಂಗ ತಡೆಯಲಾಗದೆ ಅಸಮಾಧಾನದಿಂದ ಒಪ್ಪಂದ ರದ್ದು ಮಾಡಿ, ಬೆಂಗಳೂರಿಗೆ ಹೊರಟೇಬಿಡಲೂ ಯೋಚಿಸಿದರು. ಆದರೆ ಚಿತ್ರ ನಿರ್ಮಾಪಕರು ಸಮಾಧಾನ ಮಾಡಿ, "ತಲೆಗೆ ಹಚ್ಚಿಕೊಂಡು ಕೊರಗಬೇಡಿ" –ಎಂದರು.

ಆದರೂ ಕದಡಿದ ಮನಸ್ಸು ಶಾಂತವಾಗಿರಲಿಲ್ಲ. ಇದು ಸಾಲದು ಎಂಬಂತೆ ಚಿತ್ರ ನಿರ್ಮಾಪಕರು ಒಂದು ಹಾಡು ಹೇಳುವಂತೆ ಹೊನ್ನಪ್ಪ ಭಾಗವತರಿಗೆ ಒತ್ತಾಯ ಮಾಡತೊಡಗಿದರು. ಅವರ ಬಲವಂತಕ್ಕೆ ಮಣಿದು ಇವರು ಹಾಡಲೇ ಬೇಕಾಯಿತು.

ಹೊನ್ನಪ್ಪ ಭಾಗವತರು ಹಾಡಲು ಆರಂಭಿಸುವ ವೇಳೆಗೆ ತ್ಯಾಗರಾಜ ಭಾಗವತರು ಹೊರ ಹೋಗಿದ್ದು, ಇವರ ಕಛೇರಿ ಮುಗಿದ ಮೇಲೆ ಹಿಂತಿರುಗಿದ ಅವರು ಹೊರಗಿನ ಕೊಠಡಿಯಲ್ಲೇ ಕುಳಿತರು. ಅವರಿಗೆ ತಮ್ಮ ಮಿತ್ರರಿಂದ ಹೊನ್ನಪ್ಪ ಭಾಗವತರು ಹಾಡಿದ್ದು ತಿಳಿಯಿತು. ಆ ಬಗ್ಗೆ ಸಾಕಷ್ಟು ಪ್ರಶಂಸೆಯೂ ಅವರ ಕಿವಿಗೆ ಬಿತ್ತು.

ಆ ವೇಳೆಗೆ ಹೊನ್ನಪ್ಪ ಭಾಗವತರು ಅಲ್ಲಿಗೆ ಬಂದರು. ತ್ಯಾಗರಾಜ ಭಾಗವತರು ಎದ್ದು ನಿಂತು ತಮಿಳಿನಲ್ಲಿ "ನಮಸ್ಕಾರ, ಮಧ್ಯಾಹ್ನ ನಾನು ಯಾವುದೊ ಮೂಡ್‌ನಲ್ಲಿದ್ದೆ. ನೀವು ಅದನ್ನು ತಪ್ಪಾಗಿ ತಿಳಿಯಬಾರದು. ದಯವಿಟ್ಟು ಕ್ಷಮಿಸಿ" ಎಂದರು. "ನೀವು ಚೆನ್ನಾಗಿ ಹಾಡುತ್ತೀರಂತೆ. ನಿಮ್ಮ ಸಂಗೀತ ನಾನು ಕೇಳಬೇಡವೇ, ದಯವಿಟ್ಟು ಹಾಡಿ" ಎಂದರು.

ತ್ಯಾಗರಾಜ ಭಾಗವತರ ಹಿಂದಿನ ವರ್ತನೆಯಿಂದ ಅಸಮಾಧಾನಗೊಂಡಿದ್ದ ಹೊನ್ನಪ್ಪ ಭಾಗವತರಿಗೆ ಈ ಮಾತುಗಳು ಆಶ್ಚರ್ಯ ಉಂಟುಮಾಡಿದವು. ಅವರ ನಿಜವಾದ ಕಲಾಪ್ರೇಮ ಇವರನ್ನು ಮೂಕರನ್ನಾಗಿ ಮಾಡಿತು. "ಸ್ವಾಮಿ,

ನೀವೆಲ್ಲಿ, ನಾನೆಲ್ಲಿ, ನಿಮ್ಮ ಮುಂದೆ ಹಾಡಿ, ನಿಮ್ಮ ಮೆಚ್ಚುಗೆ ಗಳಿಸುವ ಶಕ್ತಿ ನನಗೆ ನಿಜಕ್ಕೂ ಇಲ್ಲ" ಎಂದರು ವಿನಯದಿಂದ.

ಆದರೆ ತ್ಯಾಗರಾಜ ಭಾಗವತರು ಹಠಬಿಡದೆ ಹಾಗೂ ಅವರ ಮಿತ್ರರ ಒತ್ತಾಯವೂ ಹೆಚ್ಚಿದಾಗ ಹೊನ್ನಪ್ಪ ಭಾಗವತರು ಹಾಡಲೇಬೇಕಾಯಿತು.

ಹಾಡು ಮುಗಿಯುವ ವೇಳೆಗೆ ತ್ಯಾಗರಾಜ ಭಾಗವತರು ಪೂರ್ಣ ಪರವಶರಾಗಿದ್ದರು. ಹೊನ್ನಪ್ಪ ಭಾಗವತರನ್ನು ಮುಕ್ತಕಂಠದಿಂದ ಪ್ರಶಂಸಿಸಿ, "ನಿಮಗೆ ನಿಜಕ್ಕೂ ಒಳ್ಳೆಯ ಸಂಗೀತ ಜ್ಞಾನವಿದೆ" ಎಂದರು.

ಕೆಟ್ಟ ಗಳಿಗೆಯಿಂದಾಗಿ ಕದಡಿದ ಮನಸ್ಸನ್ನು ಹಸನುಗೊಳಿಸುವ ಶಕ್ತಿ ಸಂಗೀತಕ್ಕೆ ಇರುವುದು ಮಾತ್ರವಲ್ಲ, ಅದು ಮಾನವೀಯ ಸಂಬಂಧ ಸುದಾರಕವೂ ಹೌದು ಎಂಬುದನ್ನು ಈ ಘಟನೆ ಸ್ಪಷ್ಟಗೊಳಿಸಿತ್ತು.

**ಸಂಗೀತ ಮತ್ತು ದೆವ್ವ!**

ಗಾಯಕರಿಗೂ ಬಾಡಿಗೆ ಮನೆ ಮಾಲೀಕರಿಗೂ ಇರುವ ನಂಟು ಎಂಥದ್ದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ನೆಂಟಸ್ತಿಕೆಯ ಅನುಭವ ಹೊನ್ನಪ್ಪ ಭಾಗವತರಿಗೂ ಇತ್ತು.

ಹಾರ್ಮೋನಿಯಂ ಅರುಣಾಚಲಪ್ಪನವರ ಬಳಿ ಸಂಗೀತ ಕಲಿಯುತ್ತಿದಾಗ ಹೊನ್ನಪ್ಪ ಭಾಗವತರು ಅವರು ಇದ್ದ ಬಾಡಿಗೆ ರೂಮಿನ ಮಾಲೀಕ ರೂಮನ್ನು ಖಾಲಿ ಮಾಡಲು ಒತ್ತಾಯ ಮಾಡತೊಡಗಿದಾಗ ಬೇರೆ ರೂಮಿಗಾಗಿ ಹುಡುಕತೊಡಗಿದರು.

ಅವರಿದ್ದ ರೂಮಿನ ಬಳಿಯೇ ಬಹುದಿನಗಳಿಂದ ಒಂದು ದೊಡ್ಡ ಖಾಲಿಯಾಗಿದ್ದ ಮನೆ. ಹೊನ್ನಪ್ಪ ಭಾಗವತರು ಮತ್ತು ಅವರ ಜೊತೆ ಇದ್ದ ಸಂಗೀತ ವಿದ್ಯಾರ್ಥಿಗಳು ವಿಚಾರಿಸಿದಾಗ " ಅದು ದೆವ್ವದ ಮನೆ" –ಎಂಬ ಉತ್ತರ ಬಂತು. "ಆ ದೆವ್ವ ನಮ್ಮನ್ನೇನು ಮಾಡೀತು!" ಎಂದು ಆ ಮನೆಗೆ ಬಂದೇಬಿಟ್ಟರು.

ಹೊರಗೆ ಎಷ್ಟೇ ಧೈರ್ಯ ತೋರಿದರು ಒಳಗೆ ಪುಕಪುಕ. ಇನ್ನೂ ಕೆಲವು ಮಿತ್ರನ್ನು ಆಹ್ವಾನಿಸಿದರು, ರಾತ್ರಿ ಮಲಗಲು. ದೆವ್ವದ ವಿಷಯ ಮಾತ್ರ ಅವರಿಗೆ ತಿಳಿಸಲಿಲ್ಲ. ರಾತ್ರಿ ಒಂದೂವರೆ ಗಂಟೆ ಸಂಗೀತ ಅಭ್ಯಾಸ ನಡೆಯುತ್ತಿತ್ತು.

ಒಂದು ರಾತ್ರಿ ಮೂರುವರೆ ಗಂಟೆಗೆ ಇವರ ಮಿತ್ರನೊಬ್ಬ ಕಿಟಾರನೆ ಕಿರುಚಿದ. ಎಲ್ಲರ ಎದೆ ಧಸಕ್ಕೆಂದಿತು. ಆಂಜನೇಯನ ಪ್ರಾರ್ಥನೆ ಮಾಡುತ್ತಾ ಕೆಲವರು ಅವನ ಬಳಿ ಸಾರಿದರು. ಅವನ ಬಾಯಲ್ಲಿ ನೊರೆ ಬರುತ್ತಿತ್ತು. ತಲೆಗೆ ನೀರು ತಟ್ಟಿದಾಗ ಎದ್ದು ಕುಳಿತು, "ಪ್ರತೀ ಅಮಾವಾಸ್ಯೆ, ಹುಣ್ಣಿಮೆಗೆ ನನಗೆ ಹೀಗಾಗುತ್ತೆ" ಅಂದ!

ಆ ಮನೆಗೆ ಹಾರ್ಮೋನಿಯಂ ಅರುಣಾಚಲಪ್ಪನವರು ಬಂದು ರಾತ್ರಿ 2–3ರ ವರೆಗೆ ಸಂಗೀತ ಹೇಳಿಕೊಡುತ್ತಿದ್ದರು. ದೆವ್ವ ಕೊನೆಗೂ ಇವರಿಗೆ ದರ್ಶನವೀಯಲಿಲ್ಲ. ಸಂಗೀತಕ್ಕೆ ಮನೆ ಮಾಲೀಕನನ್ನು ಮರುಳು ಮಾಡುವ ಮೋಡಿ ಇಲ್ಲದಿದ್ದರು ಭೂತೋಚ್ಚಾಟನೆಯ ಶಕ್ತಿ ಉಂಟೋ ಏನೋ!

**ಭಾಗವತರ ಕನ್ನಡ ಚಿತ್ರಗಳು**

| ಚಿತ್ರ | ವರ್ಷ | ದಿಗ್ದರ್ಶನ | ಸಹನಟಿ |
|---|---|---|---|
| 1. ಸುಭದ್ರಾ | 1941 | ಸಿ.ಪುಲ್ಲಯ್ಯ | ಬಿ.ಜಯಮ್ಮ |
| 2. ಹೇಮರೆಡ್ಡಿ ಮಲ್ಲಮ್ಮ | 1945 | ಎಸ್. ಸೌಂದರ್ಯರಾಜನ್ | ಬಿ.ಜಯಮ್ಮ |
| 3. ಗೋರ ಕುಂಬಾರ | 1949 | ಬೊಮನ್ ಡಿ ಇರಾನಿ | ಲಕ್ಷ್ಮೀಬಾಯಿ |
| 4. ಗುಣಸಾಗರಿ | 1953 | ಎಚ್.ಎಲ್.ಎನ್. ಸಿಂಹ | ಪಂಡರಿಬಾಯಿ |
| 5. ಮಹಾಕವಿ ಕಾಳಿದಾಸ | 1955 | ಕು.ರಾ. ಸೀತಾರಾಮ ಶಾಸ್ತ್ರಿ | ಬಿ.ಸರೋಜಾದೇವಿ |
| 6. ಪಂಚರತ್ನ | 1956 | ಕೆ.ಸಿ. ವೇಂಬು | ಬಿ.ಸರೋಜಾದೇವಿ |
| 7. ಜಗಜ್ಯೋತಿ ಬಸವೇಶ್ವರ | 1959 | ಟಿ.ವಿ. ಸಿಂಗ್ ಠಾಕೂರ್ | ಬಿ.ಸರೋಜಾದೇವಿ |
| 8. ಸದಾನಂದ | 1979 | ಅನಂತ ಜಿ.ಹೀರೇಗೌಡ | ಜಯಶ್ರೀ |

# ಜೀವನದ ಸವಿನೆನಪಿನ ಮಧುರ ಕ್ಷಣಗಳು



ಹೊನ್ನಪ್ಪ ಭಾಗವತರ್ ಹಾಗೂ ಧರ್ಮಪತ್ನಿ ಶ್ರೀಮತಿ ಶಾರದಮ್ಮನವರು




ಹೊನ್ನಪ್ಪ ಭಾಗವತರ್ ಶಾಸ್ತ್ರೀಯ ಸಂಗೀತ ಕಚೇರಿ




ಹೊನ್ನಪ್ಪ ಭಾಗವತರ್ ಅವರ ಸಂಗೀತದ ವಿವಿಧ ಭಾವ ಭಂಗಿಗಳು






ಚಲನಚಿತ್ರ : ಸುಭದ್ರ –1941







ಚಲನಚಿತ್ರ : ಗೋರ ಕುಂಬಾರ – 1949





ಚಲನಚಿತ್ರ : ಗೋರ ಕುಂಬಾರ – 1949





ಚಲನಚಿತ್ರ : ಗೋರ ಕುಂಬಾರ – 1949





ಚಲನಚಿತ್ರ : ಗುಣಸಾಗರಿ –1953



ಮಹಾಕವಿ

# ಕಾಳಿದಾಸ

(ಕನ್ನಡ)

1955





ಚಲನಚಿತ್ರ : ಮಹಾಕವಿ ಕಾಳಿದಾಸ – 1955






ಚಲನಚಿತ್ರ : ಮಹಾಕವಿ ಕಾಳಿದಾಸ – 1955



ಚಲನಚಿತ್ರ : ಜಗಜ್ಯೋತಿ ಬಸವೇಶ್ವರ – 1956



ಚಲನಚಿತ್ರ : ಪಂಚರತ್ನ – 1956



ಚಲನಚಿತ್ರ : ಪಂಚರತ್ನ – 1956






ಚಲನಚಿತ್ರ : ಪಂಚರತ್ನ – 1956





ಚಲನಚಿತ್ರ : ಪಂಚರತ್ನ – 1956






ಚಲನಚಿತ್ರ : ಸದಾನಂದ – 1979





ನಾಟಕ : ಶ್ರೀನಿವಾಸ ಕಲ್ಯಾಣ



ನಾಟಕ : ಪುರಂದರ ದಾಸರು




ಹೊನ್ನಪ್ಪ ಭಾಗವತರ್ ಅವರ ಸಂಗೀತ ಕಚೇರಿ
ಗುರುಗಳೊಂದಿಗೆ



ನಾಟಕ : ಸುಭದ್ರ




ಚಲನಚಿತ್ರ : ವಾಲ್ಮೀಕಿ (ತಮಿಳು )



ಮದರಾಸಿನ (ಚೆನ್ನೈ) ಕಾರ್ಯಕ್ರಮದಲ್ಲಿ
ಮುಖ್ಯಮಂತ್ರಿ ಎಂ.ಜಿ.ಆರ್. ಅವರೊಂದಿಗೆ



ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಗಳಾಗಿ




ಹೊನ್ನಪ್ಪ ಭಾಗವತರ್ ಟ್ರಸ್ಟ್‌ನ ಉದ್ಘಾಟನೆ ಮತ್ತು
ಮೊದಲನೆಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ




ಹೊನ್ನಪ್ಪ ಭಾಗವತರ್ ಅವರ 101 ಕನ್ನಡ ಸ್ವಂತ ಕೃತಿಗಳ ರಚನೆ
'ಓಂಕಾರನಾದ ಸುಧಾ' ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಬಿಡುಗಡೆ





ಹೊನ್ನಪ್ಪ ಭಾಗವತರ್



ಚಲನಚಿತ್ರ : ಗೋರ ಕುಂಬಾರ ಚಿತ್ರೀಕರಣ ಸಂದರ್ಭ



ಹೊನ್ನಪ್ಪ ಭಾಗವತರ್ ಅವರ ಕುಟುಂಬ ವರ್ಗ ಮತ್ತು ಜನ್ಮಶತಮಾನೋತ್ಸವ ಸಮಿತಿ